Sri C. J. MUCKANNAPPA (Sira).—I do not know what will happen at the end of the second day. The Minister may not be in a position to reply.

Mr. SPEAKER.—Originally only one day was proposed. Now it is proposed to give 2 days. Let us see how the debate goes on.

Sri C. J. MUCKANNAPPA.—At the last moment many members may rise to speak and that will embarass the Chair also. So I think it would be better not to be too rigid about this and to make it a little flexible. If many members are anxious to speak then 2 or 3 hours more may be given.

Mr. SPEAKER.—May I take it that 1st and 2nd April could be provisionally allotted? I should feel that 2 days would be more than sufficient, but any way we shall see at the end of the 2nd day.

For transacting Government business there will have to be some motion under rule 28.

Sri S. NIJALINGAPPA.—The necessary adjustment may kindly be made in the programme of business of the House.

Mr. SPEAKER.—The non-official days will be utilized for this purpose and the House will be given 2 days extra later.

Sri S. SIVAPPA (Sravanabelagola).—The 2 days extra for non-official business may be given afterwards.

BUDGET ESTIMATES FOR 1963-64—DEMANDS FOR GRANTS

Demand No. 4—Taxes on Vehicles.

(Debate continued)

Sri R. M. PATIL (Minister for Home).—On the recommendation of the Governor of Mysore, I beg to move: "That a sum not exceeding Rs. 16,63,000 be granted to the Government to defray the charges which will come in course of payment during the financial year for period ending 31st day of March 1964 in respect of 'Taxes on vehicles'."

Mr. SPEAKER.—Motion moved:

> "That a sum not exceeding Rs. 16,63,000 be granted to Government to defray the charges which will come in course of payment during the financial year for the period ending 31st day of March 1964 in respect of 'Taxes on Vehicles'."

In addition to this demand, demands Nos 14, 15, 16, 26, 27, 34, 35, 36, 37, 39, 40, 41, 41A, 52, 53 and 54 are before the House.

It will be wise to fix a time-limit for speeches, today being the last day. I am very happy that members have fully co-operated with me and so there will be no guillotine. I will definitely close the debate two hours before and I think two hours will be sufficient for the Government reply. So we will close the debate at 5-00 P.M. and the reply will begin at 5-00 P.M. and the Demands will be put to vote at 7-00 P.M.

Sri S. SIVAPPA.—10 minutes will be enough.

Sri G. V. GOWDA (Palya).—There are 17 demands and I think the time limit should be atleast 15 minutes.

Mr. SPEAKER.—Today being the last day I want everybody to be fully pleased and I think 10 minutes will be enough. If a few speeches are interesting I will give a little more time.

†Sri S. RAJAGOPAL (Kolar Gold Fields).—Sir, I have given a number of cut motions on Labour, Employment and Social organisations. The time is short at my disposal, and I would therefore request the Hon'ble Minister to give replies on all the subjects contained in the cut motions that I have sent.

The Department of Labour is the most important department, as it gives employments to millions. The labour in turn produces the commodities for consumption at home and export also and helps in the national defence to throw out the enemy at our doors. While this department has made some achievements and progress, it has still failed unfortunately. While I am tackling this important problem of implementation of minimum wages as well as implementation of the evaluation advisory committee's report and other things, it is very sad to say that this department is not in a position to improve its work. Take the cash nut industry in Mangalore, for example. In spite of repeated representations, this industry has not been declared as a non-seasonal factory.

Mr. SPEAKER.—Has the Hon'ble Member looked in to the matter ? There is not enough of nuts to work.

Sri S. RAJAGOPAL.—Taking this as an advantage, the workers have been deprived of work.

Mr. SPEAKER.—But for the intervention of the Hon'ble Chief Minister, who got for them 25 per cent extra, the workers should not have had any wages even.

Sri S. RAJAGOPAL.—In Bijapur District, in regard to the municipal workers, conciliation has been held up, and it has not been settled for the last so many months. The Government in the Labour Department is not in a position to solve the problem, as a result of which the workers have been deprived of their rights. I request Government to look into the matter and arrange to settle the same early.

The Employment and Evaluation Advisory Committee have recently given a representation to the Mysore State Planters' Association. But the majority union of workers is the Karnataka Pradesh Trade Union Congress. Their representation has been neglected. The union has no confidence of the workers. It is purely on the basis of the INTUC. I request the Labour Minister to look into this problem.

Under the Code of Discipline, there is a lot of responsibility on the Government and the Managements. They should arrange to see that Grievance Committees are appointed at the factory level. So far, most of the industries have not implemented this appointment of the Grievance Committee. Particularly during the National Emergency, the manage-

†Indicates that the remarks or speeches have not been revised by the member concerned.

(SRI S. RAJAGOPAL)

ment as well as employers are taking unilateral attitudes, and they are making it difficult to settle disputes. If the Grievance Committees are there, it would have been a great relief to the workers to settle the issues on the factory level. I therefore request the Hon'ble Minister to see that in all factories and industries, these Grievance Committees are set up immediately.

Particularly during the Emergency, a code of behaviour has been accepted by the Labour, the Employer and the Government. Unfortunately certain employers and factories are retrenching the labour and certain factories are closed without initimation to the Government, and certain others are taking independent action in the dismisal, punishment, etc., of the workers. During the emergency, this sort of an attitude should not be encouraged by the Government. If this is not done, there is no question of accepting the Code of Behaviour at all by the Labour. I therefore request the Hon'ble Labour Minister to stop these sort of practices. The Remco Factory in Hubli is closed. The Meenakshi Bhavan Hotel was closed, and even though the hotel re-opened, the previous workers have not been taken into service. These malpractices of the employers and the management should be stopped immediately.

An award has been passed in 1956 relating to the Night Shift Allowance to [illegible] workers in Fire Bricks and Potteries, Ltd., Bangalore. It [illegible] not been implemented so far. It is pending before the Ma[illegible] and Conciliation Officer. I request the Government to settle [illegible] iately.

The Shop [illegible] tablishment Inspectorate working in Bangalore Division, whi[illegible] jurisdiction over Chickballapur also, are only two in number. [illegible] ult for these to maintain work and supervision. In one of m[illegible] ions, I have suggested that a separate division should be m[illegible] for looking after Plans, and another to purely look after La[illegible] bifurcation and appointing officers separately will help car[illegible] ork smoothly. This will also help the workers. I request th[illegible] inister to consider this.

The Hu[illegible] Mines are under the management of our Government. The Labour [illegible] recognised, but they have not been given an office. Their request for [illegible] office so far has been neglected. These Mines may be transferred [illegible] the Centre, and before you do so, I request our Government to give an office for the Labour Union there to function properly.

Another thing on which I want to touch is the treatment given to workers in hospitals. It is bad, and particularly under the ESI Scheme, it is worse. I want to bring to the notice of the Government one instance. A worker of the Electro-Metallurgical Works, Dandeli, was admitted in the Karnataka Medical College Hospital, Hubli, prior to 11th March 1963. He died on the 11th March. But the authorities of the Hospital have written a letter to the employer at Dandeli on the 12th instant and to his family at Dandeli. The letter reaches them on

the 13th. On the 13th, a van was sent from Dandeli to remove the dead body of the worker. After all Dandeli is only 45 miles from Hubli. The hospital authorities could have sent a telegram or they could have telephoned. Instead, they have written a letter not on the 11th, but on the 12th, which reached the party on the 13th. You are not only in a position not to give proper treatment or save a worker's life. But even after his death, you are not in a position to respect the body of a worker.

Sri B. D. JATTI (Minister for Finance).—There is no ESI Hospital at Hubli.

Sri S. RAJAGOPAL.—It is because we have no ESI Hospital at Dandeli or at Hubli, the patient has been admitted in the Karnataka Medical College Hospital at Hubli. Five lakhs have been sanctioned for the construction of a ESI Hospital at Dandeli and you have not yet started the work. Because of that only, workers are forced to go to Hubli.

Sri B. D. JATTI.—The point is, you are referring to the ESI Hospital and mismanagement. There is no ESI Hospital at Hubli.

Sri S. RAJAGOPAL.—Yes, Sir. That is what I said. Because there are no ESI facilities in Dandeli, they are going to Hubli. Even there, the workers get the same bad treatment. There is no respect for labour itself. That is the thing that I want to place before Government. If a big man or a rich man died like that, they would have immediately taken care to remove the body from the hospital. Because it was a worker, that body was rotting in the hospital for three days. I want to place this point before you, Sir.

The other things, I have given in cut motions. You can go through them and try to answer as much as possible.

The second thing Sir, is about the Social Welfare Department. This Department is purely meant for the upliftment of the Scheduled caste and Schedule tribe people. The S.C. and S.T. are socially backward, economically backward and they have been given protection under the constitution in order to safegaurd their rights, social and economic. But here, compared to other States, the results achieved by our State is lagging behind; particularly in the matter of giving representation in the services, the Government has appointed a committee under the chairmanship .... They have submitted their report to the Government in the beginning of the year. So far the Government has not taken any action to implement the recommendations of that committee. I request the Government to kindly go through this report and implement all the recommendations made by this committee particularly in the matter of giving representation in the services.

In the education field Sir, mostly while we were discussing the Education Demand, so many Hon'ble Members have given their suggestions. We are lagging behind in the matter of admissions of S.C. children in schools. We are lagging behind compared to other States in this respect. This figure will show clearly that the enrolment of .C children as well as by paying scholarships to these children, it will be very

(SRI S. RAJAGOPAL)

relevant. In regard to admissions to primary schools, the Report of the Commissioner of Scheduled Caste and Scheduled Tribe for the year 1958-59 says :

> " In primary schools we are able to admit S.C. children in this State ; 1,55,117 as against 14,24,411 in Madras and 13,77,012 in Andhra."

When we are thinking of the upliftment of the S. C. and working out programmes in this respect, it must be remembered that unless and until they are educated properly, it is very difficult to fulfil the reservation of seats as well as to get proper position in the employment wherever it may be. So, it is the main field where you can make cartain progress. There also compared to other States, we are lagging behind. So, I request the Social Education Minister as well as the Education Minister to kindly consider the point of giving more facilities, schooling facilities to school-going children and providing enough scholarships also.

Sir, we are saying so much about mid-day meal, about clothing and other things. You are making your own programmes. I am not telling that you are not doing anything. But as compared to other States, we are lagging behind. Sir, Mysore State is in the fore-front in other matters, but in this matter, we are lagging behind.

Even distributing scholarships, if you compare, we have given in the year 1959-60, 17,218. In Bihar, it is 4,457 and in Madras the figures are 1,865.

Regarding untouchability—this is a problem which is very wide. It is very difficult to say whether we have solved that problem or not. The Commissioner in his report for 1960 says about untouchability throughout India—he has given his version :

> "Untouchability still persists in most of the rural areas. The oft-repeated slogan now requires a specific definition. It is difficult to have a measuring rod to say how much of the problem of untouchability has been solved and how much remains unsolved. Conditions of untouchability differ from State to State and even from region to region and even from district to tehsil in the same State. It was in this context that I suggested the appointment of a high power committee to find out exactly how far progress has been achieved in this direction."

Sri C. J. MUCKANNAPPA.—Who is responsible ?

Sri S. RAJAGOPAL.—Government. Sir, it would be possible to eradicate untouchability by opening more hostels, and allowing S.C. to enter hotels temples and schools then only it is possible. But even here, Compared to the all India figures, we are not in a position to say that we have opened more temples for S.C. Even the hotels are not progressive. So, I request the Government to appoint a committee specially to go into this aspect and measure correctly how far this Government is in a position to

eradicate untouchability and where it is prevailing; whether we are in a position to solve, what are the methods we have to adopt and give a report for this State of Mysore alone to eradicate untouchability as early as possible. I request the Social Welfare Minister to kindly appoint a committee to say whether it is impossible to eradicate untouchability as early as possible.

Mr. SPEAKER.—The Hon'ble Member may conclude; his time is over.

Sri S. RAJAGOPAL.—Another thing, Sir, the Ministers, when they are going on tours, they must make it a point to visit the Harijans. I request the Chief Minister particularly and even the subordinate officers whenever they are going on toursor attending functions, let them pay a vi it to the place where the S.C. people are residing and ask them to state their difficulties, how far they have improved, what are their needs, what are the facilities that they want. Let them give a report after finishing their tours. Then only is it possible for us to see whether if there has been a progress or not. Let them make it a point, the Ministers and High Officials to see that this work is done. That point has been suggested by the Commissioner himself and I see no reason why it cannot be implemented at least in this St te at the Ministers' level. With these words I conclude my speech and I thank the Hon'ble Speaker for giving me an opportunity.

† ಶ್ರೀ ಟಿ. ಮಾದಯ್ಯ ಗೌಡ (ರಾಮನಗರ).—ಮಾನ್ಯ ಅಧ್ಯಕ್ಷರೇ, ಸ್ವಾಮಿ, ಸ್ಟೋರ್ಸ್ ಪರ್ಚೇಸ್ ಕಮಿಟಿ ಎಂದು ಏನು ಮಾಡಿದ್ದೀವೆಯೋ ಅದು ಹೆಚ್ಚು ನಿಗಾವಹಿಸಿ ದೇಶದಲ್ಲಿ ತಯಾರಾಗತಕ್ಕ ಪದಾರ್ಥಗಳನ್ನು ಶೇಖರಿಸಿ ಅವನ್ನು ಹಂಚತಕ್ಕ ಏರ್ಪಾಡು ಮಾಡಬೇಕೆಂದು ಮೊದಲನೆಯದಾಗಿ ಸೂಚನೆ ಕೊಡುತ್ತೇನೆ. ಅನೇಕ ವಸ್ತುಗಳು ನಮ್ಮ ರಾಜ್ಯದಲ್ಲಿ ದೊರೆಯುತ್ತಾ ಇದ್ದರೂ ಸಹ ನೆರೆಹೊರೆ ಪ್ರಾಂತ್ಯದಿಂದ ತರಿಸಿ ಹಂಚುತ್ತಾ ಇದ್ದಾರೆ ಎಂದು ತಿಳಿದು ಬರುತ್ತದೆ. ಇದು ನಿಜವಾಗಿಯೂ ಸರಿಯಲ್ಲ ಎಂದು ಅಭಿಪ್ರಾಯಪಡುತ್ತೇನೆ. ಉದಾಹರಣೆಗೆ ಹೇಳುವುದಾದರೆ ನಮ್ಮ ದೇಶದಲ್ಲೇ ಈಗ ಈ ತೆಂಗಿನ ನಾರಿನಿಂದ ಬೇಕಾದಹಾಗೆ ಅನೇಕ ವಸ್ತುಗಳು ತಯಾರಾಗುತ್ತಿವೆ. ಹೀಗಿದ್ದಾಗೂ ಈ ದಿವಸ ನಮ್ಮ ದೇಶಕ್ಕೆ ಈ ತೆಂಗಿನ ನಾರಿನಿಂದ ತಯಾರಿಸಲ್ಪಟ್ಟ ವಸ್ತುಗಳನ್ನು ಬೇರೆ ಕಡೆಯಿಂದ ತರಿಸಿಕೊಂಡು ಕೊಳ್ಳಲಾಗುತ್ತಿದೆ ಎಂತ ಕೇಳುತ್ತಿದ್ದೇನೆ. ಈ ರೀತಿ ಮಾಡಿದರೆ ನಮ್ಮ ದೇಶದಲ್ಲಿ ತಯಾರಾಗತಕ್ಕ ಮಾಲುಗಳಿಗೆ ಸಾಕಷ್ಟು ಪ್ರೋತ್ಸಾಹವನ್ನು ಸರ್ಕಾರದವರು ಕೊಟ್ಟಹಾಗೆ ಆಗುವುದಿಲ್ಲವೆಂದು ತಿಳಿಸಲಪೇಕ್ಷಿಸುತ್ತೇನೆ.

12-30 P.M.

ಈ ದಿವಸ ನಮ್ಮ ಮುಜರಾಯಿ ಇಲಾಖೆಯು ಸರಿಯಾದ ಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವ ಹಾಗೆ ಕಾಣುತ್ತಿಲ್ಲ. ಇದು ಸರಿಯಾದ ರೀತಿಯಲ್ಲಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕಾದ್ದು ಅಗತ್ಯ. ಈ ಇಲಾಖೆಗೆ ಬರತಕ್ಕ ವರಮಾನವನ್ನೆಲ್ಲ ರಾಜ್ಯದಲ್ಲಿ ವಿದ್ಯಾಭಿವೃದ್ಧಿಗೆ ಖರ್ಚು ಮಾಡುವಂತೆ ಏರ್ಪಾಡಾಗುವುದು ನಮ್ಮೆಲ್ಲರಿಗೂ ಒಪ್ಪಿಗೆಯಾದಂಥ ಕೆಲಸವೆಂದು ಭಾವಿಸುತ್ತೇನೆ. ಈ ದಿವಸ ನಾನಾ ಕಡೆಗಳಲ್ಲಿರತಕ್ಕ ಈ ಛತ್ರ, ದೇವಸ್ಥಾನ ಮತ್ತು ಮಠಗಳು ಸರಿಯಾದ ಮಾರ್ಗದಲ್ಲಿ ಕೆಲಸ ಮಾಡುತ್ತಿಲ್ಲ. ಇವು ಸರಿಯಾದ ರೀತಿಯಲ್ಲಿ ನಡೆಯುವಂತೆ ಸರ್ಕಾರದವರು ನೋಡಿಕೊಳ್ಳಬೇಕಾದ್ದು ಅಗತ್ಯವೆಂತ ನಾನೀ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ.

ಇನ್ನು ಈ ನಮ್ಮ ಪ್ರಾಚೀನ ಸಂಶೋಧನಾ ಇಲಾಖೆ ಏನು ಕೆಲಸ ಮಾಡುತ್ತಿದೆಯೋ ಗೊತ್ತಿಲ್ಲ. ಈ ಹಿಂದೆ ಮೈಸೂರು ಸಂಸ್ಥಾನದಲ್ಲಿದ್ದ ಈ ಆರ್ಕಿಯೋಲಾಜಿಕಲ್ ಡಿಪಾರ್ಟ್‌ಮೆಂಟಿನವರು ಅತ್ಯುತ್ತಮ ರೀತಿಯಲ್ಲಿ ಕೆಲಸಗಳನ್ನು ಮಾಡಿ ಆ ಬಗ್ಗೆ ಅವರೊಂದು ಒಳ್ಳೆಯ ವರದಿಯನ್ನೂ ಸಹ ಒಪ್ಪಿಸುತ್ತಿದ್ದರು. ಈ ಸಂದರ್ಭದಲ್ಲಿ ನಾವು ಆರ್ರೈಸ್ ಸಾಹೇಬರನ್ನೂ, ಕೃಷ್ಣರವರನ್ನೂ ಮತ್ತು ನರಸಿಂಹಯ್ಯಂಗಾರ್ ಅವರನ್ನೂ ಪ್ರೇಮ ವಿಶ್ವಾಸಗಳಿಂದ ಜ್ಞಾಪಿಸಿಕೊಳ್ಳಬೇಕಾದ್ದು ಅಗತ್ಯ. ಈ ದಿವಸ ನಮ್ಮಲ್ಲಿನ್ನೂ ಅನೇಕ ಪ್ರಾಚೀನ ಸಂಶೋಧನಾ ಕಾರ್ಯಗಳು ನಡೆಯಬೇಕಾಗಿದೆ. ಅವು

(ಶ್ರೀ ಟಿ. ಮಾದಯ್ಯ ಗೌಡ)

ಗಳನ್ನು ನಡೆಸುವುದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆಗಳನ್ನು ಏರ್ಪಡಿಸಬೇಕು. ಹಿಂದೆ ನಡೆಸಿರತಕ್ಕ ಸಂಶೋಧನೆಗಳ ಬಗ್ಗೆ ಜನರಿಗೆ ಹೆಚ್ಚಿನ ಮಾಹಿತಿಗಳು ದೊರೆಯುವಂಥ ಒಂದು ಏರ್ಪಾಡಾಗಬೇಕು, ಎಂಬುದಾಗಿ ನಾನು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ.

ಇನ್ನು ನಮ್ಮ ದೇಶದಲ್ಲಿರತಕ್ಕ ಜನಗಳಿಗೆ ಅನೇಕ ವಿಚಾರಗಳಲ್ಲಿ ತಿಳುವಳಿಕೆಯನ್ನು ಕೊಡಬೇಕಾಗಿದೆ. ಈ ಬಗ್ಗೆ ಸರ್ಕಾರದವರು ಹೆಚ್ಚಿಗೆ ಪ್ರಚಾರಕಾರ್ಯವನ್ನು ಕೈಗೊಳ್ಳಬೇಕಾದ್ದು ಅಗತ್ಯ. ಈ ದಿವಸ ನಮ್ಮ ಈ ಫಿಲಂ ಇಲಾಖೆಯವರು ಇಂಥ ಯಾವ ಕಾರ್ಯವನ್ನು ಮಾಡುತ್ತಿರುವಂತೆ ಕಾಣುತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಈ ಹಿಂದೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಜನರಿಗೆ ಒಳ್ಳೆಯ ವಿಷಯಗಳನ್ನು ಬೋಧಿಸಲು ಅನೇಕ ವಿಚಾರಗಳನ್ನೊಳಗೊಂಡ ಅಂದರೆ ವ್ಯವಸಾಯ, ಕೈಗಾರಿಕೆ, ಆರೋಗ್ಯ, ವಿದ್ಯಾಭಿವೃದ್ಧಿ ಇತ್ಯಾದಿ ವಿಚಾರಗಳನ್ನೊಳಗೊಂಡ ಫಿಲಂಗಳ ಮೂಲಕ ಜನರಿಗೆ ಜ್ಞಾನ ಬೋಧನೆಯನ್ನು ಪ್ರಚಾರ ಮಾಡಲಾಗುತ್ತಿತ್ತು. ಇಂಥ ಒಂದು ಯೋಜನೆ ಹಿಂದೆಯಿತ್ತು. ಈಗ ಇದೆಯೋ ಇಲ್ಲವೋ ಗೊತ್ತಿಲ್ಲ. ನನಗೆ ಗೊತ್ತಿದ್ದ ಹಾಗೆ ಈ ಯೋಜನೆ ಎಲ್ಲಿಯೂ ಇದ್ದಂತೆ ಕಂಡು ಬರುತ್ತಿಲ್ಲ. ಈ ಕಾರ್ಯವನ್ನು ಹಿಂದೆ ವಿದ್ಯಾ ಇಲಾಖೆಯವರೂ, ಆರೋಗ್ಯ ಇಲಾಖೆಯವರೂ ಮತ್ತು ವಯಸ್ಕರ ಶಿಕ್ಷಣ ಸಮಿತಿಯವರೂ ಹೆಚ್ಚಿನ ಮುತವರ್ಜಿ ವಹಿಸಿ ಮಾಡುತ್ತಿದ್ದರು. ಆಗ ಜನರಿಗೆ ಹೆಚ್ಚಿನ ತಿಳುವಳಿಕೆ ಆಗಲು ಒಂದು ಅವಕಾಶವಿತ್ತು. ಈಗಲೂ ಇಂಥ ಒಂದು ಯೋಜನೆ ಇರಬೇಕಾದ್ದು ಅಗತ್ಯ. ಇಂಥ ಒಳ್ಳೆಯ ಫಿಲಂ ಭಂಡಾರಗಳನ್ನು ಪ್ರತಿ ಜಿಲ್ಲಾ ಹೆಡ್‌ಕ್ವಾರ್ಟರು ಗಳಲ್ಲೂ ಏರ್ಪಡಿಸಿ ಪ್ರತಿ ತಿಂಗಳಲ್ಲೂ ತಾಲ್ಲೂಕಾವಾಳಿ ಹತ್ತಾರು ಫಿಲಂ ಪ್ರದರ್ಶನಗಳ ಮೂಲಕ ಜನರಿಗೆ ತಿಳುವಳಿಕೆ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಏರ್ಪಡಿಸುವುದು ಈ ಮೂಲಕ ಜನರಿಗೆ ಹೆಚ್ಚು ವಿಚಾರಗಳ ಪ್ರಚಾರ ನಡೆಸುವುದು ಅತ್ಯವಶ್ಯಕ ಇದಕ್ಕೆಲ್ಲ ಸೂಕ್ತ ಏರ್ಪಾಡುಗಳನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಹೆಚ್ಚು ಹೆಚ್ಚಿನ ಮುತವರ್ಜಿಯಿಂದ ನಡೆಯುವಂತೆ ಆಗಬೇಕೆಂದು ನಾನು ಅಪೇಕ್ಷಿಸುತ್ತೇನೆ. ನನ್ನ ಅನುಭವದಲ್ಲಿರತಕ್ಕ ಒಂದು ವಿಚಾರವನ್ನೇ ಹೇಳುವುದಾದರೆ ರಾಮನಗರ ತಾಲ್ಲೂಕಿನಲ್ಲಿ ಒಂದು ಹಿಂದುಳಿದ ವರ್ಗದವರ ಹಾಸ್ಟಲನ್ನು ಮತ್ತು ಹಿಲ್ ಟ್ರೈಬ್ಸ್ ಜನರ ಮಕ್ಕಳಿಗೊಂದು ಸ್ಕೂಲನ್ನು ಏರ್ಪಡಿಸಬೇಕೆಂದು ಬಹಳ ದಿವಸಗಳಿಂದಲೂ ಪ್ರಯತ್ನ ಪಟ್ಟಿದ್ದಾಗ್ಯೂ ಇದುವರೆಗೂ ಅದು ಇನ್ನು ಸಾಧ್ಯವಾಗಿಲ್ಲ. ಮಾನ್ಯ ಮಂತ್ರಿಗಳು ಈ ಕೆಲಸವನ್ನು ಜಾಗ್ರತೆ ನಡೆಸಿಕೊಡಲು ಪ್ರಯತ್ನ ಮಾಡುತ್ತಾರೆಂದೂ ಅವರ ಗಮನ ಹೆಚ್ಚಿಗೆ ಇತ್ತ ಕಡೆಗೆ ಹರಿಯುವುದು ಅವಶ್ಯಕವೆಂದು ನಾನು ಅಪೇಕ್ಷಿಸುತ್ತೇನೆ.

ಇನ್ನು ಈ ಹರಿಜನರ ಹೌಸಿಂಗ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಅವರಿಗೆ ಮನೆಗಳನ್ನು ಕಟ್ಟಿಕೊಡತಕ್ಕ ಯೋಜನೆ ತಯಾರಾಗಿ ಪ್ರತಿವರ್ಷವೂ ಅನೇಕ ಲಕ್ಷ ರೂಪಾಯಿಗಳನ್ನು ಈ ಬಾಬಿನಲ್ಲಿ ಖರ್ಚು ಮಾಡಲಾಗುತ್ತಿದೆ. ಹೀಗೆ ಈ ಒಂದು ಅವರ ಸಹಕಾರ ಸಂಸ್ಥೆ ಸ್ಥಾಪನೆಯಾಗಿದ್ದಾಗ್ಯೂ ನನಗೆ ತಿಳಿದ ಮಟ್ಟಿಗೂ ಇನ್ನೂ ಈ ಯಾವ ಸಹಕಾರ ಸಂಸ್ಥೆಯೂ ಕೆಲಸವನ್ನು ಮಾತ್ರ ಇನ್ನು ಪ್ರಾರಂಭಿಸಿದಂತೆ ಕಂಡು ಬರಲಿಲ್ಲ. ಹೀಗಾಗಿ ಹರಿಜನರಿಗೆ ಈ ದಿವಸ ಮನೆಗಳೂ ದೊರೆಕಿಲ್ಲ ; ಹಣವೂ ದೊರಕಿಲ್ಲವೆಂತ ನನಗೆ ಅನಿಸುತ್ತಿದೆ. ಈ ಸೊಸೈಟಿಗಳಿಗೆ ಅನೇಕ ಹರಿಜನರು ಸದಸ್ಯರುಗಳಾಗಿರುತ್ತಾರೆ. ಆದರೆ ಈ ಹರಿಜನರ ಹೌಸಿಂಗ್ ಸೊಸೈಟಿಯ ಕಾನೂನಿನಲ್ಲಿ ಅನೇಕ ಲೋಪ ದೋಷಗಳಿವೆ. ಈ ಕಾರಣದಿಂದ ನನಗೆ ಗೊತ್ತಿರುವ ಮಟ್ಟಿಗೂ ಯಾರೂ, ಎಲ್ಲಿಯೂ ಮನೆಗಳನ್ನು ಕಟ್ಟಿಸಿಲ್ಲ ಅವರಿಗೆ ಹಣವೂ ದೊರೆಕಿಲ್ಲ. ಆದಕಾರಣ ಈ ದಿವಸ ಆ ಕಾನೂನಿನಲ್ಲಿರತಕ್ಕ ಲೋಪ ದೋಷಗಳನ್ನು ಬೇಗ ಸರಿಪಡಿಸಿ ಅವರಿಗೆ ಮನೆಗಳ ಸೌಕರ್ಯ ಸಿಗುವಂತೆ ಏರ್ಪಾಡನ್ನು ಮಾಡಬೇಕಂತ ಸೂಚಿಸಲಪೇಕ್ಷಿಸುತ್ತೇನೆ.

ಇನ್ನು ಈ ಹರಿಜನರಿಗೆ ಎತ್ತುಗಳನ್ನು ಕೊಟ್ಟು ಅವರಿಗೆ ಸಹಾಯ ಮಾಡಬೇಕೆಂದು ಸರ್ಕಾರದವರು ಉದ್ದೇಶ ಪಟ್ಟರೂ ಅದರಿಂದ ಅವರಿಗೇನೂ ಹೆಚ್ಚಿನ ರೀತಿಯಲ್ಲಿ ಸಫಲವಾಗಿಲ್ಲ ಎಂಬ ಅಂಶವನ್ನು ನಾನು ಬಹಳ ಸಂಕಟದಿಂದ ಸೂಚಿಸಲು ಅಪೇಕ್ಷಿಸುತ್ತೇನೆ. ಈ ದಿವಸ ಈ ಹರಿಜನರಿಗೆ ಕೊಡತಕ್ಕ ದನಗಳೇನಿವೆ ಅವು ಅವರ ಮನೆಗಳಲ್ಲಿರುವುದಿಲ್ಲ. ಬೇರೆ ಕಡೆಗೆ ಅವು ಪರಾರಿಯಾಗಿರುತ್ತವೆ. ಇದರಿಂದ ಅವರಿಗೂ ಸುಖವಿಲ್ಲ. ಸರ್ಕಾರಕ್ಕೂ ಸುಖವಿಲ್ಲ. ಆದರೆ ವ್ಯಥಾ ಸರ್ಕಾರಕ್ಕೆ ಹಣ ಖರ್ಚಾಗುತ್ತಿದೆ. ಆದ್ದರಿಂದ ಈ ಬಾಬಿನಲ್ಲಿ ಸರ್ಕಾರದವರು ಅವರಿಗೆ ನೀಡತಕ್ಕ ಈ ಸಹಾಯದಿಂದ ನಿಜವಾಗಿಯೂ ಅವರಿಗೆ ಅನುಕೂಲವಾಗುವಂತೆ ತಕ್ಕ ನಿಗಾವಣಿ ಇಡಬೇಕೆಂದು ಸೂಚಿಸಲಪೇಕ್ಷಿಸುತ್ತೇನೆ.

ಇನ್ನು ಈ ದಿವಸ ನಿವೃತ್ತ ಸರ್ಕಾರಿ ನೌಕರರುಗಳಿಗೆ ಸರ್ಕಾರ ಕೊಡತಕ್ಕ ಆ ಪೆನ್‌ಷನ್ ವಿಧಾನವನ್ನು ಅತ್ಯಂತ ತ್ವರಿತವಾಗಿ ಮಾಡುತ್ತಿದ್ದೇವೆಂಬುದಾಗಿ ಮಾನ್ಯ ಹಣಕಾಸಿನ ಸಚಿವರು ತಿಳಿಸುತ್ತಿದ್ದಾರೆ. ಆದರೆ ನನಗೆ ತಿಳಿದು ಬಂದಿರುವ ಹಾಗೆ ಈ ಪೆನ್‌ಷನ್ ಕೇಸುಗಳು ವರ್ಷಾನುಗಟ್ಟಲೆ ಆದರೂ ವಿಲೇವಾರಿಯಾಗುತ್ತಿಲ್ಲವೆಂಬುದಾಗಿ ರೇಷ್ಮೆ ಇಲಾಖೆಯಿಂದ ತಿಳಿದು ಬಂದಿದೆ. ಆ ರೇಷ್ಮೆ ಇಲಾಖೆಯಲ್ಲಿ ಇಂಥ ಒಂದೆರಡು ಕೇಸುಗಳು ನನ್ನ ಗಮನಕ್ಕೆ ತಂದಿದ್ದಾರೆ. ಅಲ್ಲಿ ಒಂದು ಕೇಸಿನಲ್ಲಿ ರಿಟೈರಾದ ಒಬ್ಬ ನೌಕರನು ಗತಿಸಿ ಹೋಗಿ ಒಂದೆರಡು ವರ್ಷಗಳಾದರೂ ಆತನಿಗೆ ಪೆನ್‌ಷನ್ ದೊರೆಯಲಿಲ್ಲ ಅಂತ ತಿಳಿದು ಬಂದಿದೆ. ಹೀಗೆ ಕಳೆದ ಎರಡು ವರ್ಷಗಳಲ್ಲಿ ಹತ್ತಾರು ಅರ್ಜಿಗಳ ಬಗ್ಗೆ ಈ ಪೆನ್‌ಷನ್ ಇನ್ನೂ ನಿರ್ಧಾರವಾಗಿಲ್ಲ. ಈ ರೀತಿ ಖಂಡಿತ ಆಗಬಾರದು. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನ ಕೊಡಬೇಕೆಂದು ಸೂಚಿಸುತ್ತೇನೆ.

ಇನ್ನು ಈ ಅಕ್ಕಸಾಲಿಗರ ವಿಷಯಕ್ಕೆ ಬಂದರೆ, ನಾನು ಈ ವಿಚಾರದಲ್ಲಿ ಸ್ವಲ್ಪ ಕಠಿಣವಾಗೇ ಹೇಳುವುದಾದರೆ ಈ ದಿವಸ ಅವರ ಪಾಡು ನಾಯಿಪಾಡಾಗಿದೆ. ಅವರು ಈ ದಿವಸ ಕೆಲಸ ಕಳೆದು ಕೊಂಡು ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಹಾಗಿದ್ದರೆ ಏತಕ್ಕೆ ನಮಗೆ ಇದುವರೆಗೂ ಅವರು ಯಾರೊಬ್ಬರೂ ಒಂದು ರೆಪ್ರೆಸೆಂಟೇಷನ್ ಕೊಡಲಿಲ್ಲ ? ಅವರು ಹಾಗೆ ಬೀದಿ ಬೀದಿಗಳಲ್ಲಿ ಅಲೆಯುತ್ತಿರುವುದು ನಮಗೆ ಯಾರಿಗೂ ಕಂಡು ಬಂದಿಲ್ಲ. ಹೀಗಿರುವಾಗ ಅವರೆಲ್ಲರೂ ಈ ಮಾನ್ಯ ಸದಸ್ಯರೊಬ್ಬರ ಕಣ್ಣಿಗೆ ಮಾತ್ರ ಹೇಗೆ ಬಿದ್ದರು ?

ಶ್ರೀ ಟಿ. ಮಾದಯ್ಯ ಗೌಡ.—ಅವರು ನಮ್ಮಲ್ಲಿ ಹೇಳಿಕೊಳ್ಳುತ್ತಿದ್ದಾರೆ. ಈ ವಿಚಾರ ತಮ್ಮ ಗಮನಕ್ಕೆ ಬಾರದಿದ್ದಲ್ಲಿ ಅದು ವಿಷಾದಕರ.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಅವರಿಂದ ಸರ್ಕಾರಕ್ಕೆ ರೆಪ್ರೆಸೆಂಟೇಷನ್ ಬಂದಿಲ್ಲ ಎಂದು ಹೇಳುತ್ತಾರೆ. ಅದು ನಿಜವೇ ?

ಶ್ರೀ ಬಿ. ಡಿ. ಜತ್ತಿ.—ಅವರು ಬೀದಿ ಬೀದಿಯಲ್ಲಿ ಅಲೆಯುತ್ತಿದ್ದಾರೆಂದು ಹೇಳಿದ್ದಕ್ಕೆ ನಾನು ಹಾಗೆ ಹೇಳಿದೆ.

ಶ್ರೀ ಟಿ. ಮಾದಯ್ಯ ಗೌಡ.—ಅವರಿಗೆ ಯಾವ ಕೆಲಸವೂ ಸಿಕ್ಕಿಲ್ಲ ; ದಿಕ್ಕು ತೋಚದೆ ಅಲೆಯುತ್ತಿದ್ದಾರೆ. ಆದ್ದರಿಂದ ನಾನು ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆಂದು ಹೇಳಿದೆ.

ವಿದ್ಯಾ ಇಲಾಖೆ, ಆರೋಗ್ಯ ಇಲಾಖೆ ಮತ್ತು ಇನ್ನೂ ಕೆಲವು ಇಲಾಖೆಗಳಲ್ಲಿ ಕೆಲವು ಸಂಸ್ಥೆಗಳಿಗೆ ಗ್ರ್ಯಾಂಟ್ ಕೊಡತಕ್ಕ ಪದ್ಧತಿ ಇದೆ. ಇದನ್ನು ಆಯಾ ಇಲಾಖೆಯ ಮುಖ್ಯಾಧಿಕಾರಿಗಳು ಕೊಡುವುದನ್ನು ತಪ್ಪಿಸಿ ಒಂದು ಕಮಿಟಿಯನ್ನು ಏರ್ಪಾಡು ಮಾಡಿ, ಆ ಕಮಿಟಿಯವರು ಯಾರಿಗೆ ಕೊಡಬೇಕು, ಯಾವ ರೀತಿ ಗ್ರ್ಯಾಂಟ್ ವಿಲೇವಾರಿ ಮಾಡಬೇಕು ಎಂದು ಆಲೋಚನೆ ಮಾಡಿ ಹಣವನ್ನು ಕೊಡುವುದು ಸೂಕ್ತವೆಂದು ನನ್ನ ಅಭಿಪ್ರಾಯ. ನಾವು ಸಾವಿರಾರು ಸಂಸ್ಥೆಗಳಿಗೆ ಗ್ರ್ಯಾಂಟ್ ಕೊಡುತ್ತೇವೆ. ಗ್ರ್ಯಾಂಟ್ ಪಡೆಯತಕ್ಕ ಸಂಸ್ಥೆಗಳು ಸರಿಯಾದುವೇ ; ಗ್ರ್ಯಾಂಟ್ ಪಡೆಯತಕ್ಕ institutions ಸರಿಯಾಗಿ ಕೆಲಸ ಮಾಡುತ್ತವೆಯೇ ಎನ್ನುವುದನ್ನೂ ವಿವೇಚನೆ ಮಾಡಿ ಗ್ರ್ಯಾಂಟ್ ಹಂಚುವುದಾದರೆ ಸರ್ಕಾರದಿಂದ ಕೊಡತಕ್ಕ ಗ್ರ್ಯಾಂಟ್ ಸರಿಯಾದ ರೀತಿಯಲ್ಲಿ ಖರ್ಚಾಗುತ್ತದೆ ಎನ್ನುವ ಒಂದು ವಿಶ್ವಾಸ ನಮಗೆ ಇರುತ್ತದೆ. ನೂರಾರು ಕೆಲಸಗಳಿರತಕ್ಕ ಮುಖ್ಯಾಧಿಕಾರಿಗಳು ಗ್ರ್ಯಾಂಟ್ ಕೊಡತಕ್ಕ ಕೆಲಸ ಮಾಡಬೇಕೆನ್ನುವುದಕ್ಕೆ ಬದಲಾಗಿ, ಒಂದು ಕಮಿಟಿಯನ್ನು ಏರ್ಪಾಡು ಮಾಡಿ ಆ ಕಮಿಟಿಯ ಮೂಲಕ ಗ್ರ್ಯಾಂಟ್ ವಿಲೇ ಮಾಡತಕ್ಕ ಪದ್ಧತಿಯನ್ನು ಆದಷ್ಟು ಜಾಗ್ರತೆ ತಾವು ಜಾರಿಗೆ ತರತಕ್ಕದ್ದು ಸೂಕ್ತವೆಂದು ನಾನು ಅಭಿಪ್ರಾಯಪಡುತ್ತೇನೆ.

ಸರ್ಕಾರಿ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅನೇಕ ಕಾನೂನುಗಳು ಮತ್ತು ನಿಬಂಧನೆಗಳು ಪ್ರಿಂಟ್ ಆಗುತ್ತವೆ. ಅನೇಕ ಸಂದರ್ಭಗಳಲ್ಲಿ ನಮಗೆ ಬೇಕಾದ ನಿಬಂಧನೆಗಳು ಸಿಕ್ಕುವುದಿಲ್ಲ. ಎಲ್ಲ 'out of stock' ಎಂದು ಹೇಳುತ್ತಾರೆ. ನಿಬಂಧನೆಗಳು ಮತ್ತು ಕಾನೂನುಗಳು ಬೇಕು ಎಂದು ಹೇಳಿದಾಗ 'out of stock' ಎಂದು ಹೇಳುವುದು ಸರಿಯಲ್ಲ, ಇವುಗಳ ಪ್ರತಿಗಳನ್ನು ಪ್ರಿಂಟ್ ಮಾಡಿ ಇಟ್ಟುಕೊಂಡು ಒದಗಿಸಬೇಕು. ಒಂದು ವೇಳೆ 'out of stock' ಆದರೆ ಕೂಡಲೆ ಅದನ್ನು ಪ್ರಿಂಟ್ ಮಾಡಿಸಬೇಕು.........

Mr. SPEAKER.—I am discussing this matter with Government. I have suggested that so far as the Acts passed by the Legislature are concerned, they had better be under the control of the Legislature. There will be no difficulty if that is achieved.

Sri T. MADIAH GOWDA.—Thank you very much, Sir.

ಕಾನೂನುಗಳು ಮತ್ತು ನಿಬಂಧನೆಗಳು ಸರ್ಕಾರಿ ಡಿಪೋಗಳಲ್ಲಿ ಮಾತ್ರ ಸಿಕ್ಕುತ್ತವೆ. ಇವುಗಳನ್ನು ಎಲ್ಲರಿಗೂ ಸುಲಭವಾಗಿ ಸಿಕ್ಕುವಂತೆ ಜಿಲ್ಲಾ ಕಸಬೆಗಳಲ್ಲಿ ಡಿಪೋಗಳನ್ನು ಏರ್ಪಾಡು ಮಾಡಿ ಅಥವಾ ಸರಿಯಾದ ಪುಸ್ತಕ ವ್ಯಾಪಾರಿಗಳಿಗೆ ಹಂಚಿ ಅವರು ಮಾರುವಂತೆ ಏರ್ಪಾಡು ಮಾಡುವುದಾದರೆ ಬಹಳ ಪ್ರಯೋಜನವಾಗುತ್ತದೆಂದು ಈ ಸಂದರ್ಭದಲ್ಲಿ ತಿಳಿಸಲು ಅಪೇಕ್ಷಿಸತ್ತೇನೆ.

ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri P. F. D'MELLOW (Nominated).—Sir, In dealing with the Demands before the House—which I would support—I would like to draw attention to 2 particular demands and the subjects covered by these demands, Demands 34 and 39.

In the first Chapter on the States Third Five-year plan we are told that planning in India has a dual aspect. It is in furtherance of both social and economic ends. Further the plans are in an essential sense, peoples' plan and with the emphasis on building up of human values in economic and social development. We go further when we add that human values are as important as econmic values and that our plans afford a permanent place to investment in people.

These are admirable sentiments and they indicate that we as a nation are indeed possessed with no less soccial conscience than any of the other advanced democratic countries. Social justice is indeed the very foundation of social progress and so it must depend very largely on the way in which we develop our social security programmes, if the country is to be afforded the peace and tranquillity which it requires, particularly so to-day when we are faced with what is a dual threat not only to our way of life but our very existence as an independent, sovereign nation. To this extent, I would submit, that social security to-day has assumed a definite measure of importance. It has, to my mind, become a vital instrument of our national defence, becaus, Sir, I feel that there could be nothing which could undermine our morale as a nation more than to see human sufferings and wants left unattended particularly where the victims are perhaps members of our own families.

A country like ours which claims that our social plans are based on 'investment on people' would surely find no difficulty in accepting the famous dictum of Lord Beveridge which says that 'it is the State's duty to ensure to all citizens a minimum income sufficient for human needs in all the main contingencies of life. To provide less is indefensible.'' Social security as a means of eliminating the great evils of society has been gaining momentum ever since the last war and particularly so in the more advanced democratic countries, which like ourselves are obliged to live with Communist neighbours. From statistics which have been compiled by the International Labour Organistation, we find that there has been a distinctive trend towards providing the greatest coverage for contingencies affecting old age and that in almost 93% of countries which have been recently surveyed. This acceptance of the need to pay more attention to the needs of the aged in advanced democratic countries is born of the realisation that the problems of the aged—I keep on repeating—have the makings of an explosive of political situation, which can very easily explode because, to my mind, not even

the most efficient plans in our family planning will ever check the growing population in the higher age groups. I feel that we have not given sufficient thought to this problem of the aged as much has been done in other countries where it has come to be recognised that higher age groups do provide the greater majority of voters than any other age groups.

With these observations I shall now touch on the two main problems which affect the aged citizen. Mr. Speaker in his recent budget speech the Hon'ble Finance Minister drew attention to the need to afford Govt. servant some relief, chiefly in the matter of Dearness Allowance and the Hon'ble Minister was pleased to mention that the Government were particularly solicitous about the welfare of their employees and that it had moreover adopted a liberal policy even in regard to their pensioners. I welcome that assurance, as I am sure the whole House does and I feel that Government will have no hesitation to pay more attention to the prayers of the pensioned staff who are in no less need of consideration because of the steep rise in the cost of living. I ask the Government to be pleased until such time as the State's finances are in a position to introduce the general old-age pension, to atleat show by way of a token some consideration for their pensioned employees by extending to them the same measure of consideration in the matter of Dearness Allowance recently sanctioned to those in employment, as well as to extend to them the same degeee of medical and educational facilities and other reliefs to which they would have been entities while in service. To my mind to express concern for an employee while he is still in service and posseses a weapon to enforce his demand and to show indifference to him the moment he has been pensioned off does not add up to this solicitude and to this declaration that we have indeed provided in our plans particularly in "investment in people".

I now come to the question of grants-in-aid to institutions and organisations which serve the needs of the aged and destitute. To pretend that the destitute and the aged are not entitled to our consideration is to show a pitiful lack of understanding on our part. India possesses an increasingly large aged population and they remain destitute until the moment of their death. I submit that it is the responsibility of the State to care for them so long as the State has not yet reached or formulated plans for social insurance. I ask the Hon'ble Ministers concerned, more particularly the Minister for Revenue in whose charge comes Charitable Endowments and Institutions, to be pleased to take a personal interest in the matter of the needs of these Institutions which continue until to-day to relieve the State of its responsibility towards the aged citizen.

I fear that the fate of many of these voluntary organisations, some grown old in the service of the deserving poor, are left for too much to the mercy of the junior officials who apparently find some satisfaction in depriving the orphan and the aged destitute of some part of the crumbs that come his way.

(SRI P. F. D'MELLOW)

I have in mind the experience of the Bangalore Friend in Need Society which I believe is shared by all the similar institutions. Here is an Institution, purely a voluntary organisation which has been devoting itself for the past 133 years to the service of the aged. Here we find over 62 aged individuals, housed, fed and clothed and nursed. We also see year after year provision made by Government in the budget of a sum of Rs. 6,000 by way of grant-in-aid to this particular institution. But when it comes to the actual disbursement of this money it passes my comprehension how we can try year after year to save ourselves by slashing this grant to mere Rs. 3,000, which leaves to this institution the problem of finding Rs. 5 per month per head to look after a human being, who is really the responsibility of the State.

SRI B. D. JATTI.—If the Hon'ble Member were to yield for a minute; the difficulty with the Government and particularly the Finance Department is this the Association is not submitting any accounts. Hence the Accountant-General's objection for that. If they submit accounts, we are prepared to give more money.

SRI P. F. D'MELLOW.—I will have to contradict the Hon'ble Minister. The accounts of this Institution are audited and submitted to the local Government Department and the Government of India. I think the Hon'ble Minister was not fully informed, but this particular Institution does submit accounts and I will take the trouble to meet him afterwards and give him the details. I mentioned this because we have been told by the Planning Commission that it is a matter of policy on the part of Government to support these voluntary organisations in the particular work that they are undertaking.

A number of social security schemes have been introduced in our country since independence but little attention has been paid so far to the care of the aged and infirm. Some States like the U. P., Madras and Andhra Pradesh have already introduced old age pensions and surely if we in this State are unwilling or unable to go the whole way, this is no reason why we should not honour our responsibility towards the aged citizen by providing for his basic human needs by continuing grants in aid by way of assistance to voluntary organisations which do relieve the State to a large extent of its obligation in this matter. I request Government to be pleased to call for detailed reports of these institutions before accepting the need to slash their grant in any way. The assistance given to them is not enough but at least the grant may be given to them to the extent that it has been provided. If the Hon'ble Ministers make a personal enquiry, I am sure they will be satisfied about the utility and good work of these institutions and the need to render them necessary assistance.

ಶ್ರೀಮತಿ ಚಂಪಾಬಾಯಿ ಬೋಗಲೆ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ 1963-64 ನೇ ಸಾಲಿಗಾಗಿ ಇಟ್ಟಿರುವ ಸೋಷಿಯಲ್ ವೆಲ್‌ಫೇರು ಡಿಮ್ಯಾಂಡನ್ನು ಅನುಮೋದಿಸುತ್ತ ಒಂದೆರಡು ಸಲಹೆಗಳನ್ನು ಮಾಡಬಯಸುತ್ತೇನೆ.

ಉತ್ತರ ಕರ್ನಾಟಕವು ಮೈಸೂರು ರಾಜ್ಯದಲ್ಲಿ ವಿಲೀನ ಮಾಡುವುದಕ್ಕಿಂತ ಮೊದಲು ಅಲ್ಲಿ ಹರಿಜನರ ಕಲ್ಯಾಣವು ಅಷ್ಟೊಂದು ರೀತಿಯಿಂದ ಆಗಿದ್ದಿಲ್ಲ. ವಿಲೀನವಾದಾಗಿನಿಂದ ಮೈಸೂರು ಸರಕಾರದವರು ಹರಿಜನರಿಗಾಗಿ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಇದು ನಮಗೆ ಅತ್ಯಂತ ಆನಂದದ ಮಾತು. ಆದರೆ 63-64 ನೇ ಸಾಲಿನ ಬಗ್ಗೆ ಈಗ ಹರಿಜನರಿಗಾಗಿ ಮಂಜೂರಾದ ಹಣವು ತೀರಾ ಕಡಿಮೆಯಿದೆ. ಸೋಷಿಯಲ್ ವೆಲ್‌ಫೇರ್ ಬೋರ್ಡಿಗೆ ಮಾತ್ರ ಸಾಕಷ್ಟು ಹಣ ಮಂಜೂರು ಮಾಡಿದೆ. ಆದರೆ ಸೋಷಿಯಲ್ ವೆಲ್‌ಫೇರ್ ಬೋರ್ಡಿನ ಕಾರ್ಯವು ಸಮಾಧಾನಕಾರಕವಿಲ್ಲ. ಅದನ್ನು ರದ್ದುಮಾಡಿ ಅದರ ರಖಮನೆಲ್ಲಾ ಸಮಾಜ ಕಲ್ಯಾಣ ಖಾತೆಗೆ ಮಂಜೂರು ಮಾಡಿ ಸದರೀ ಕಾರ್ಯವು ಮಿಷನರಿ ಪದ್ಧತಿಯಿಂದ ನಡೆಯಬೇಕೆಂದು ನನ್ನ ಅಭಿಲಾಷೆಯಿದೆ.

ಈಗ ಮುಂಬಯಿ ಕರ್ಣಾಟಕಕ್ಕೊಂದು ಕಾಯಿದೆ, ಹೈದರಾಬಾದಕ್ಕೊಂದು, ಮದ್ರಾಸ್ ಕರ್ಣಾಟಕಕ್ಕೊಂದು, ಹಾಗೂ ಹಳೇ ಮೈಸೂರಿಗೊಂದು, ಹೀಗೆ, ಬೇರೆ ಬೇರೆ ಕಾನೂನುಗಳು ಅವೆ. ಇದರಿಂದ ಹೊಸದಾಗಿ ವಿಲೀನವಾದ ಭಾಗಗಳಿಗೆ ಬಹಳ ಅನ್ಯಾಯವಾಗ ಹತ್ತಿದೆ. ಆದ್ದರಿಂದ ಇಡೀ ರಾಜ್ಯಕ್ಕೆ ಒಂದೇ ಕಾಯಿದೆ ಮಾಡಿ ಹರಿಜನರ ಕಲ್ಯಾಣ ಮಾಡಬೇಕೆಂದು ಕಳಕಳಿಯಿಂದ ಇಲ್ಲಿ ನಾನು ವಿನಂತಿ ಮಾಡುತ್ತೇನೆ.

ಸ್ವರಾಜ್ಯ ಸಿಕ್ಕಿ ನಮ್ಮ ದೇಶಕ್ಕೆ ಹದಿನೈದು ವರ್ಷಗಳಾದವು. ಪರಿಶಿಷ್ಟ ವರ್ಗದ ಸಲುವಾಗಿ, ಸಾಕಷ್ಟು ಹಣವನ್ನು ಮಧ್ಯವರ್ತಿ ಸರಕಾರದವರು ಮಂಜೂರು ಮಾಡಿದರೂ ಅಷ್ಟೊಂದು ಪರಿಣಾಮ ಕರವಾಗಿಲ್ಲವೆಂದು ನನಗನಿಸುತ್ತದೆ. ಸದ್ಯಕ್ಕೆ ಸ್ಟೇಟ್ ಗವರ್ನಮೆಂಟಿನವರು ಆಯಾ ಜಿಲ್ಲೆಗಳಿಗೆ ಗ್ರಾಂಟು ಕಳುಹಿಸುತ್ತಾರೆ. ಸದರಿ ಗ್ರಾಂಟನ್ನು ಡಿ. ಡಿ. ಕೌನ್ಸಿಲ್ಲದವರು ಹಂಚುತ್ತಿದ್ದಾರೆ. ಈ ಪದ್ಧತಿಯಿಂದ ಹರಿಜನರಿಗೆ ಅಷ್ಟೊಂದು ಅನುಕೂಲವಾಗುವುದಿಲ್ಲ. ಆದಕಾರಣ ಪ್ರತಿ ಜಿಲ್ಲೆಗೆ ಒಂದು ಆಡ್ವೈಜರಿ ಬೋರ್ಡು ಎಂದು ಸ್ಥಾಪಿಸಿ ಅದರ ಚೇರ್ಮನ್ನರಾಗಿ ಸೋಷಿಯಲ್ ವೆಲ್‌ಫೇರು ಆಫೀಸರರಾಗಿರಬೇಕು. ಮತ್ತು ಸದರಿ ಬೋರ್ಡಿನಲ್ಲಿ ಪ್ರತಿಯೊಂದು ತಾಲ್ಲೂಕಿನ ಡಿ. ಡಿ. ಬೋರ್ಡಿನ ಅಧ್ಯಕ್ಷರೂ ಮತ್ತು ಜಿಲ್ಲೆಯ ಹರಿಜನ ಎಂ. ಎಲ್. ಎ. ಗಳು ಅದರಲ್ಲಿ ಮೆಂಬರುಗಳಾಗಿರಬೇಕು. ಸದರಿ ಬೋರ್ಡಿನವರು ಪ್ರತಿಯೊಂದು ತಾಲ್ಲೂಕಿಗೂ ಆ ತಾಲ್ಲೂಕಿನ ಹರಿಜನರ ಜನಸಂಖ್ಯೆಗನುಸರಿಸಿ ಹಣವನ್ನು ಮಂಜೂರು ಮಾಡಬೇಕು ಮತ್ತು ಸದರಿ ತಾಲ್ಲೂಕಿಗೆ ಮಂಜೂರಾದ ಹಣವನ್ನು ಟಿ. ಡಿ. ಬೋರ್ಡಿನ ಸಬ್ ಕಮಿಟಿಯವರು ಆಯಾ ತಾಲ್ಲೂಕಿನ ಹರಿಜನರಿಗಾಗಿ ಖರ್ಚುಮಾಡಬೇಕು. ಸದರಿ ತಾಲ್ಲೂಕಾದ ಹರಿಜನರ ಸಬ್ ಕಮಿಟಿಯಲ್ಲಿ ವೆಲ್‌ಫೇರ್ ಆಫೀಸರರು ಹಾಜರು ಇರಬೇಕು ಮತ್ತು ಅವರೇ ಛೇರ್ಮನ್ನವರಾಗಿರಬೇಕು. ಇಂಥ ಜವಾಬುದಾರಿಯ ಕೆಲಸ ಮತ್ತು ಜಿಲ್ಲೆಯ ಯಾವತ್ತೂ ಹರಿಜನರ ಉದ್ಧಾರದ ಕೆಲಸಕ್ಕಾಗಿ ವೆಲ್‌ಫೇರ್ ಆಫೀಸರರಿಗೆ ಒಂದು ಜೀಪನ್ನು ಮಂಜೂರು ಮಾಡಬೇಕು.

ನಮ್ಮ ಸ್ಟೇಟಿನಲ್ಲಿ ಈಗ ಹತ್ತೊಂಬತ್ತು ಡಿಸ್ಟ್ರಿಕ್ಟುಗಳಿವೆ. ಪ್ರತಿ ಜಿಲ್ಲೆಗೆ ಒಬ್ಬ ವೆಲ್‌ಫೇರು ಆಫೀಸರರಿದ್ದಾರೆ. ಸದರಿ ವೆಲ್‌ಫೇರ್ ಆಫೀಸರರ ಜಾಗವು ಬಹಳ ಮಹತ್ವದ್ದಿರುತ್ತದೆ. ಹರಿಜನರ ಸಾಮಾಜಿಕ, ಆರ್ಥಿಕ, ಮತ್ತು ಶೈಕ್ಷಣಿಕ ಪ್ರಗತಿಯು ಶತಮಾನಗಳಿಂದ ಆಗಿಲ್ಲ. ಈ ಪ್ರಶ್ನೆಯು ತೀರಾ ಜಟಿಲವಾದದ್ದು. ಅವರ ಅಧೋಗತಿಯ ಕಾರಣವನ್ನು ತಿಳಿಯುವುದು ತೀರಾ ಕಠಿಣ ಸಮಸ್ಯೆ. ಇಂಥ ಪ್ರಶ್ನೆಯನ್ನು ಬಿಡಿಸಲು ಹಾಗೂ ಅದರಲ್ಲಿ ಪ್ರಗತಿ ಮಾಡಲು ಅತ್ಯಂತ ಅನುಭವ ವುಳ್ಳ ಆಫೀಸರಿರಬೇಕು. ಈಗಿನವರು ಎಲ್ಲರೂ ಹೊಸಬರಾದ ಆಫೀಸರುಗಳು ಇದ್ದಾರೆ. ಈ ಕಾರಣ ಅವರಲ್ಲಿ ಸ್ಪರ್ಧೆ ಹುಟ್ಟುವಂತೆ ಉತ್ತಮ ಕಾರ್ಯಮಾಡಿದವರಿಗೆ ಸ್ಟೇಟಿನಲ್ಲಿ ಬಹುಮಾನ ಇಡುವ ಪದ್ಧತಿಯಿರಬೇಕು. ಹೀಗಾಗಿ ಅವರಲ್ಲಿ ಸ್ಪರ್ಧೆ ಬೆಳೆದು ಕಾರ್ಯದಲ್ಲಿ ಪ್ರಗತಿಯಾಗುತ್ತೆ ಎಂದು ನನ್ನ ನಂಬಿಕೆ.

ಈಗ ಸ್ಟೇಟಿನಲ್ಲಿ ಒಬ್ಬರು ಸೋಷಿಯಲ್ ವೆಲ್‌ಫೇರ್ ಡೈರೆಕ್ಟರು ಹಾಗೂ ಐದಾರು ಅಸಿಸ್ಟೆಂಟು ಡೈರೆಕ್ಟರರುಗಳು ಇದ್ದಾರೆ. ಅವರೆಲ್ಲರೂ ಬೆಂಗಳೂರು ರಾಜಧಾನಿಯಲ್ಲಿಯೇ ಇದ್ದಾರೆ. ಇದರಿಂದ ಹರಿಜನರ ಕಾರ್ಯ ಸಮಾಧಾನಕಾರಕವಾಗುವುದಿಲ್ಲ. ಆದುದರಿಂದ, ಡಿವಿಜನಲ್ ಕಮಿಷನರ ಆಫೀಸು ಇರುವ ಕಡೆಗಳಲ್ಲಿ ಒಂದೊಂದು ಅಸಿಸ್ಟೆಂಟು ಡೈರೆಕ್ಟರವರ ಆಫೀಸು ತೆಗೆಯಬೇಕು. ಈಗಿರುವ ಆಫೀಸರುಗಳನ್ನೆಲ್ಲಾ ಡಿವಿಜನಲ್ ಆಫೀಸಿಗೆ ಕಳಿಸಬೇಕು. ಮತ್ತು ಕಡಿಮೆ ಬಿದ್ದರೆ ಈಗಿದ್ದ ಅನುಭವಿತ ಮತ್ತು ಹುಷಾರರಾಗಿರುವ ವೆಲ್‌ಫೇರು ಆಫೀಸರರನ್ನು ಅಸಿಸ್ಟೆಂಟು ಡೈರೆಕ್ಟರನ್ನಾಗಿ ಮಾಡಬೇಕು. ಸದರೀ ಡಿವಿಜನಲ್ ಆಫೀಸುಗಳನ್ನು ಸ್ವತಂತ್ರವನ್ನಾಗಿಯಿಡಬೇಕು. ರೆವೆನ್ಯೂ ಡಿಪಾರ್ಟುಮೆಂಟಿಗೆ ಯಾವ ತರಹದ ಸಂಬಂಧವೂ ಇರುವಂತೆ ಮಾಡಬಾರದು ಮತ್ತು ಅವರಿಗೆ ಸ್ವತಂತ್ರವಾದ ಅಧಿಕಾರ ಕೊಡಬೇಕು.

ಹರಿಜನರಲ್ಲಿ ಸಾಕಷ್ಟು ಶಿಕ್ಷಣ ಪ್ರಗತಿ ಆಗಲು ಜಿಲ್ಲೆಗೆ ಒಂದು ನೂರು ಗಂಡು ಮಕ್ಕಳ ವಸತಿ ಗೃಹ ಹಾಗೂ ಒಂದು ನೂರು ಹೆಣ್ಣು ಮಕ್ಕಳ ವಸತಿ ಗೃಹವನ್ನು ತೆರೆಯಬೇಕು. ಅದೇ ಪ್ರಕಾರ

(ಶ್ರೀಮತಿ ಡಂಪಾಬಾಯಿ ಥೋರಗ)

ತಾಲ್ಲೂಕಿಗೆ ಒಂದು ಗಂಡು ಹಾಗೂ ಹೆಣ್ಣು ಮಕ್ಕಳ ವಸತಿ ಗೃಹವನ್ನು ಆಯಾ ತಾಲ್ಲೂಕಿನ ಜನ ಸಂಖ್ಯೆಯನ್ನು ಅನುಸರಿಸಿ ವಸತಿ ಗೃಹಗಳನ್ನು ತೆರೆಯಬೇಕು.

ಶಿಕ್ಷಣವು ಪ್ರಸಾರವಾಗಲು ವಸತಿ ಗೃಹಗಳನ್ನು ತೆರೆಯುವಂತೆ ಹರಿಜನರಿಗೆ ಉದ್ಯೋಗದಂಥ ಶಿಕ್ಷಣ ಕೊಡಲು ಎಂದರೆ ಬಡಿಗತನ, ಕಮ್ಮಾರತನ, ಗೌಂಡಿತನ, ಪಾತ್ರೆ ತಯಾರಿಕೆ, ಮೆಕ್ಯಾನಿಕಲ್ ವರ್ಕ್ಸ್ ಹೀಗೆ ಎಲ್ಲ ತರದ ಸಣ್ಣ ಕೈಗಾರಿಕೆ ಶಿಕ್ಷಣವನ್ನು ಕೊಡಲು ಪ್ರತಿಯೊಂದು ಜಿಲ್ಲೆಗೆ 500 ಹುಡುಗರ ವಸತಿ ಗೃಹವನ್ನು ತೆರೆಯಬೇಕು. ಅವರಿಗೆಲ್ಲಾ ಪುಕ್ಕಟೆಯಾಗಿ ವ್ಯವಸ್ಥೆಯಾಗಬೇಕು.

ಮಾನ್ಯ ಎಸ್. ಕೆ.ಡೇಯವರು ವಿಕಾಸ ಯೋಜನೆಯ ಉದ್ಘಾಟನೆ ಸಮಾರಂಭಕ್ಕೆ ವಿನೋಬಾಜಿ ಭಾವೆಯವರನ್ನು ಆಮಂತ್ರಿಸಿದ್ದರು. ವಿನೋಬಾಜಿ ಉದ್ಗಾರ ತೆಗೆದದ್ದೇನೆಂದರೆ ಹಳ್ಳಿಗಳು ಬಹಳ ಹಿಂದುಳಿದವು ಇಂತಹ ಸಂದರ್ಭದಲ್ಲಿ ವಿಕಾಸ ಯೋಜನೆಯು ಯಶಸ್ವಿಯಾದೀತೆಂದು ನನಗನಿಸುವುದಿಲ್ಲ ಎಂದು ಭಾವೆಯವರು ಉದ್ಗಾರ ತೆಗೆದರು. ಇದರ ಪ್ರತಿಬಿಂಬವು ಹರಿಜನರ ಬಾಬಿನಲ್ಲಿ ಆದಂತೆ ಕಾಣುತ್ತದೆ. ಹರಿಜನರ ಉದ್ಧಾರದ ಸಲುವಾಗಿ ಎಷ್ಟೋ ಯೋಜನೆಗಳನ್ನು ಮಾಡಿದ್ದಾರೆ. ಆದರೆ ಅವೆಲ್ಲ ಸಮಾಧಾನಕರವಾದ ರೀತಿಯಲ್ಲಿ ಆಗಿಲ್ಲ. ಸುಪ್ರೀಂ ಕೋರ್ಟಿನ ನಿರ್ಣಯದ ಪ್ರಕಾರ ಸೀನಿಯಾರಿಟಿಯನ್ನು ಹರಿಜನರಿಗೆ ಕೊಡಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ ಮತ್ತು ಹರಿಜನ್ ನೌಕರರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಿರಿ. ರಿಟೈರ್ ಆಗುವವರಿಗೆ ನೀವು ಒಳಗಿನಿಂದಲೇ ಒಂದು ವರ್ಷ ಪ್ರಮೋಷನ್ನು ಕೊಡುತ್ತಿರುವಿರಿಯಾದ್ದರಿಂದ ಹರಿಜನರ ಮೇಲೆ ಬಹಳ ಅನ್ಯಾಯವಾಗಹತ್ತಿದೆ. ಹೀಗೆ ಮಾಡದೆ ಎಲ್ಲರಿಗೂ 58 ವರ್ಷದವರೆಗೂ ಮಾಡಿದ್ದೆಯಾದರೆ ಎಲ್ಲರಿಗೂ ಸರಿಯಾಗುತ್ತದೆ. ಒಬ್ಬೊಬ್ಬರಿಗೆ ಒಂದೊಂದು ರೀತಿ ಮಾಡಬಾರದೆಂದು ನಾನು ವಿನಂತಿಸುತ್ತೇನೆ.

ಒಂದೇ ಒಂದು ಉದಾಹರಣೆ ತೆಗೆದುಕೊಳ್ಳುವುದೆಂದರೆ ಹರಿಜನರಿಗೆ ಹಾಟೇಲ ಪ್ರವೇಶ ಮತ್ತು ದೇವರ ಗುಡಿಗಳ ಪ್ರವೇಶವು ಎಳ್ಳಷ್ಟೂ ಆಗಿಲ್ಲ. ದೊಡ್ಡ ದೊಡ್ಡ ಶಹರುಗಳಲ್ಲಿ ಹಾಗೂ ಸಣ್ಣ ಸಣ್ಣ ಪಟ್ಟಣಗಳಲ್ಲಿ ಹಾಟೇಲ ಪ್ರವೇಶವು ಆಗಿದೆ. ಆದರೆ ಹಳ್ಳಿಗಳಲ್ಲಿ ಮಾತ್ರ ಎಂದಿನಂತೆ ಅಸ್ಪೃಶ್ಯತೆಯು ಇದ್ದೇ ಇದೆ. ಅದರಲ್ಲಿ ಯಾವ ತರದ ಬದಲಾವಣೆಯಾಗಿಲ್ಲ. ಪಾನ ಪ್ರತಿಬಂಧಕದಲ್ಲಿ ಪೋಲಿಸರು ದಿವದಲ್ಲಿ ಎಷ್ಟೋ ಖಟ್ಲೆಗಳನ್ನು ಹಾಕುತ್ತಿದ್ದಾರೆ. ಆದರೆ ಹಾಟೇಲದಲ್ಲಿ ಹರಿಜನರಿಗೆ ಚಹಾ ಕೊಡಲು ನಿರಾಕರಿಸಿದವರ ಮೇಲೆ ಹಾಗು ದೇವರ ಗುಡಿಗಳಲ್ಲಿ ಪ್ರವೇಶ ಕೊಡದೆ ಪೂಜಾರಿ ಹಾಗು ಇತರರ ಮೇಲೆ ಖಟ್ಲೆ ಮಾಡಿದ್ದು ತೀರ ವಿರಳ ಬಹುತರವಾಗಿ ಇಲ್ಲವೆಂದರೆ ನಡೆದೀತು. ದಾರು ಪ್ರಕರಣದಲ್ಲಿ ಪೋಲಿಸರಿಗೆ ಲಂಚ ದೊರೆಯುತ್ತದೆ. ಆದರೆ ಚಹಾ ಕೊಡದವರ ಮೇಲೆ ಖಟ್ಲೆ ಹಾಕಲು ಲಂಚ ಸಿಗುವದಿಲ್ಲ, ಅಸ್ಪೃಶ್ಯತೆಯ ಕಲಂಕವು ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಇರುತ್ತದೆ. ಇದು ಸಂಪೂರ್ಣವಾಗಿ ಹೋಗದಿದ್ದರೆ ಮಹಾತ್ಮಾ ಗಾಂಧಿಯವರ ಆತ್ಮಕ್ಕೆ ಶಾಂತಿ ಹೇಗೆ ಆಗಬಹುದು ? ಅಸ್ಪೃಶ್ಯತೆಯನ್ನು ತೆಗೆದು ಹಾಕುವುದು ಅತ್ಯಂತ ಮಹತ್ವದ ಕಾರ್ಯ ದೇಶ ರಕ್ಷಿಸುವಷ್ಟೇ ಅಸ್ಪೃಶ್ಯತೆ ನಿವಾರಣೆ ಕಾರ್ಯ ಕಠಿಣವದೆ. ಸರಕಾರದವರು ಇದನ್ನು ಉಗ್ರ ಉಪಾಯದಿಂದ ತೆಗೆದು ಹಾಕಬೇಕು. ಇಲ್ಲವಾದರೆ ದೇಶವೇ ಸಂಕಟದಲ್ಲಿ ಇದ್ದಂತೆ ಆಗುವುದು, ಇಂಥ ಮಹತ್ವದ ಕಾರ್ಯವನ್ನು ಮಾಡುವ ಡಿವಿಜನಲ್ ಕಮಿಷನರ್ ಹಾಗು ಡೆಪ್ಯುಟಿ ಕಮಿಷನರರು ಬಹಳ ವಿಶಾಲ ಮನಸ್ಸಿನವರು ದಯಾಳುಗಳೂ ಹಾಗು ಹರಿಜನರ ಸಲುವಾಗಿ ಬಹಳ ತಳಮಳಿಕೆಯುಳ್ಳವರೂ, ಇರಬೇಕು.

1-00 P.M.

ಸ್ವರಾಜ್ಯ ದೊರತ ಐದಾರು ವರ್ಷಗಳವರೆಗೆ ಹಾಗು ಮಹಾತ್ಮಾಜಿಯವರ ಕಾಲದಲ್ಲಿ ಹರಿಜನರ ಸಲುವಾಗಿ ಆದರ ಭಾಷನೆಯಿತ್ತು. ಹರಿಜನರ ಉದ್ಧಾರಕ್ಕಾಗಿ ಕಾಂಗ್ರೆಸ್ ಸರಕಾರದವರು ಮಹಾತ್ಮಾ ಗಾಂಧಿಯವರ ಆಜ್ಞೆಯಂತೆ ಹೇರಳವಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಆದರೆ ಈಗ ಅಧಿಕಾರಿಗಳಲ್ಲಿ ಸದರೀ ಸಂಬಂಧ ಮತ್ಸರ ಭಾವನೆಯು ಆಗಿದೆ. ಹರಿಜನರು ಸರಕಾರದ ಅಳಿಯರಾಗಿದ್ದಾರೆಂದು ಪ್ರತ್ಯಕ್ಷ ಅನ್ನುತ್ತಿದ್ದಾರೆ.

ಮೊನ್ನೆ ಮೊನ್ನೆ ಬೆಳಗಾವದ ಡೆಪ್ಯುಟಿ ಕಮೀಷನರರು ಗೋಕಾಕ ಹಾಗು ಅಥಣಿ ಜಾಹೀರ ಸಭೆಗಳಲ್ಲಿ ಮಾತಾಡಿದ್ದೇನಂದರೆ ಹರಿಜನರದು ಬೇಕಾದಷ್ಟು ಕಾರ್ಯ ಮಾಡಿದರೂ ಅವರ ಉದ್ಧಾರವಾಗಲು ಸಾಧ್ಯವಿಲ್ಲೆಂದು ಜಾಹೀರ ರೀತಿಯಿಂದ ಮಾತಾಡಿದರು, ಇಂಥ ಜಿಲ್ಹಾಧಿಕಾರಿಯು ಈ ತರದ ಉದ್ಗಾರ ತೆಗೆಯುವದೆಂದರೆ ಬೆಳಗಾವ ಜಿಲ್ಲೆಯ ಹರಿಜನರಿಗೊಂದು ದೊಡ್ಡ ಆಘಾತ

ವಾಗಿದೆ. ಮತ್ತು ಇಂಥವರ ಕೈಯಿಂದ ಹರಿಜನರ ಉದ್ಧಾರವು ಹೇಗೆ ಆಗುವುದು ಸಂಶಯದ ಮಾತಾಗಿದೆ. ಇಂಥವರ ಮೇಲೆ ಸರಕಾರದವರ ಯೋಗ್ಯ ನಿಯಂತ್ರಣವಿರಬೇಕು. ಅವರು ಅಲ್ಲಲ್ಲಿ ಇದೇ ಪ್ರಕಾರ ಹರಿಜನರನ್ನು ಹೀಯಾಳಿಸಿ ಮಾತಾಡುತ್ತಿದ್ದಾರೆ. ಇದು ಅತ್ಯಂತ ದುಃಖದಾಯಕ ಸಂಗತಿ.

ಅಧಿಕಾರಿಗಳು ಹರಿಜನರ ಸಂಬಂಧ ಆದರ ಭಾವನೆ ತೋರಿಸುವಂತೆ ಅವರಿಗೆ ಮಾರ್ಗ ದರ್ಶನ ಮಾಡಬೇಕು. ಆದರಂತೆ ಹೋದ ತಿಂಗಳಿನಲ್ಲಿ ಸಮಾಜ ಕಲ್ಯಾಣ ಶಾಖೆಯ ಸಚಿವೆಯಾದ ಶ್ರೀಮತಿ ಯಶೋಧರ ದಾಸಪ್ಪ ಅವರು ಬೆಳಗಾವ ಜಿಲ್ಲೆಯಲ್ಲಿ ಟೂರ್ ಹಾಕಿಕೊಂಡು ಬಂದಾಗ್ಗೆ ಜಿಲ್ಲಾಧಿಕಾರಿಗಳು ಅವರಿಗೆ ಉಪಯೋಗಿಸಲು ಕಾರ್ ಇಲ್ಲ ಎಂದು ಹೇಳಿದರು ಮತ್ತು ಟೂರ್ ತೆಗೆದು ಹಾಕಿ ಎಂದರು. ಅಸ್ಪೃಶ್ಯತೆಯ ನಿವಾರಣೆಗೆ ಕೆಲಸ ಮಾಡುವ ಮಂತ್ರಿಗಳಿಗೆ ಕಾರು ಇಲ್ಲ ಎಂದು ಹೇಳುವುದು ನಿಜವಾಗಿಯೂ ಅಸ್ಪೃಶ್ಯರ ದುರ್ಭಾಗ್ಯ ಎಂದು ತಿಳಿದುಕೊಳ್ಳುತ್ತೇವೆ.

ಒಕ್ಕಲತನ ಉತ್ಪನ್ನ ತರದ ಬಾಬಿನಲ್ಲಿ ರೈತರ ಮೇಲೆ ಬಹಳ ಅನ್ಯಾಯವಾಗಹತ್ತಿದೆ. ಒಕ್ಕಲತನ ಉತ್ಪನ್ನದ ತರದ ಅಧಿಕಾರಿಯು ತಲಾಟಿಯು ಮಾಡಿದ ಪೀಕ ಪಾಹಣಿ ರಜಿಸ್ಟರ ಆಧಾರದ ಮೇಲೆ ಕರ ಹೇರುತ್ತಿದ್ದಾರೆ. ಒಬ್ಬ ಸಾಮಾನ್ಯ ತಲಾಟಿಯು ಮಾಡಿದ ರಿಕಾರ್ಡ ಆಧಾರದ ಮೇಲೆ ಮಾಡುವದೆಂದರೆ ಆಶ್ಚರ್ಯಕರ. ತಲಾಟಿಯು ಲಂಚ ಕೊಟ್ಟ ರೈತನದು 10 ಎಕರೆ ಬಾಗಾಯತ ಇದ್ದರೂ ಒಂದು ಎಕರೆ ಬಾಗಾಯಿತು ಇದೆ ಎಂದು ರಿಕಾರ್ಡು ಮಾಡುತ್ತಾನೆ. ಮತ್ತು ಲಂಚ ಕೊಡದ ರೈತನದು ಒಂದು ಎಕರೆ ಬಾಗಾಯತು ಜಮೀನು ಇದ್ದರೂ 10 ಎಕರೆ ಬಾಗಾಯತು ಜಮೀನು ಇದೆಯೆಂದು ರಿಕಾರ್ಡು ಮಾಡುತ್ತಾನೆ. ಇದೇ ಆಧಾರದ ಮೇಲೆ ಒಕ್ಕಲತನ ಉತ್ಪನ್ನದ ಕರ ಹೇರುವ ಅಧಿಕಾರಿಯು ಕರ ಹೇರುತ್ತಾನೆ. ಹೀಗಾಗಿ ರೈತರ ಮೇಲೆ ಬಹಳ ಅನ್ಯಾಯವಾಗುತ್ತದೆ. ಇಂಥ ಉದಾಹರಣೆಗಳು ನನ್ನ ದೃಷ್ಟಿಗೆ ಬಹಳ ಬಂದಿವೆ. ಕೇವಲ 70 ರೂಪಾಯಿ ಸಂಬಳ ದೊರೆಯುವ ತಲಾಟಿಯು ಸಾಕಷ್ಟು ಹಣ ಲಂಚ ರೂಪದಿಂದ ಗಳಿಸುತ್ತಿದ್ದಾನೆ. ಹೀಗಾಗಿ ತಲಾಟ ಸರ್ಕಲ್ ಆಫೀಸರರ ಮೇಲೆ ಯಾವ ತರದ ನಿಯಂತ್ರಣವಿಲ್ಲ. ಇದನ್ನು ತಪ್ಪಿಸಬೇಕಾದರೆ ತಲಾಟಿಯು ಸ್ವತಂತ್ರ ರೀತಿಯಿಂದ ಪೀಕ ಪಾಹನಿಯನ್ನು ಮಾಡದೆ ಗ್ರಾಮ ಪಂಚಾಯತಿಯ ಸರಪಂಚರು ಹಾಗು ಗ್ರಾಮ ಪಂಚಾಯತಿಯ ಮೆಂಬರರ ಸಹಕಾರದಿಂದ ಪೀಕ ಪಾಹನಿಯನ್ನು ಮಾಡಬೇಕು. ಸದರೀ ಕಾರ್ಯ ಮಾಡಲು ಗ್ರಾಮ ಪಂಚಾಯತಿಯ ಮೆಂಬರರಿಗೆ ಕೆಲವೊಂದು ಸಹಾಯ ಧನ ಮಂಜೂರು ಮಾಡಬೇಕು, ಹೀಗೆ ಮಾಡಿದರೆ ರೈತರ ಬಾಬಿನಲ್ಲಿ ಅಗ್ರಿಕಲ್ಚರಲ್ ಇನ್‌ಕಮ್ ಟ್ಯಾಕ್ಸ ಕೂಡಿಸುವಲ್ಲಿ ನ್ಯಾಯವು ದೊರೆಯುವಂತೆ ಆಗುವುದು. ಈ ಬಾಬಿನಲ್ಲಿ ಯೋಗ್ಯ ಕ್ರಮ ತೆಗೆದುಕೊಂಡು ಬಡ ಹಾಗು ಅಜ್ಞ ರೈತರ ಕಲ್ಯಾಣವಾಗುವಂತೆ ಮಾಡಬೇಕು.

ಶ್ರೀ ಬಿ. ಡಿ. ಜತ್ತಿ.—ಪಂಚ ಆಗಿರತಕ್ಕಂಥವರು ಪೀಕಪಾಹನಿ ಮಾಡುತ್ತಾರೆ. ಪಂಚರಿಲ್ಲದೆ ಯಾರೂ ಮಾಡುವದಿಲ್ಲ. ಇದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆಂದು ಕಾಣುತ್ತದೆ.

ಶ್ರೀಮತಿ ಚಂಪಾಬಾಯಿ ಭೋಗಲೆ.—ಇನ್ನು ರೈತರಿಗೆ ತಗಾಯಿ ಸಿಮೆಂಟ್ ವಗೈರೆ ಕೊಡುವ ಬಾಬಿನಲ್ಲಿ ಬಹಳ ಅನ್ಯಾಯವಾಗುವುದು. ತಗಾಯಿ ಸಿಮೆಂಟು ದೊರಕಿಸಲು ರೈತರಿಗೆ ಬಹಳ ತೊಂದರೆಯಾಗುವುದು. ಅವನ ತೊಂದರೆಗೆ ಮರ್ಯಾದೆಯೇ ಇಲ್ಲ, ತಲಾಟ ಸರ್ಕಲ್ ಆಫೀಸರರ ಶಿಫಾರಸಿನ ಮೇಲೆಯೇ ತಗಾಯಿಯನ್ನು ಅಧಿಕಾರಿಗಳು ಮಂಜೂರು ಮಾಡುತ್ತಾರೆ. ಇದರಿಂದ ಲಂಚತನವು ಹೆಚ್ಚಾಗಿ ಬೆಳೆದಿದೆ. ಇದನ್ನು ತಪ್ಪಿಸಬೇಕಾದರೆ ರೈತನಿಗೆ ತಗಾಯಿ ಕೊಡುವ ಬಾಬಿನಲ್ಲಿ ಪಂಚಾಯತಿಯ ಶಿಫಾರಸನ್ನು ಸರ್ಕಾರದವರು ತೆಗೆದುಕೊಳ್ಳಬೇಕು; ಮತ್ತು ತಗಾಯಿಯನ್ನು ರೈತರಿಗೆ ಆಯಾಯ ಗ್ರಾಮ ಪಂಚಾಯತಿಯ ಮತಿಯಿಂದ ಗ್ರಾಮದಲ್ಲಿಯೇ ಅಲ್ಲಿಯ ರೈತರಿಗೆ ತಗಾಯಿ ಹಂಚಬೇಕು ಇದೇ ಪ್ರಕಾರ ಸಿಮೆಂಟನ್ನು ಕೂಡ ಪಂಚಾಯತಿಯ ಮಾರ್ಫತ ಹಂಚಬೇಕು. ಈ ರೀತಿ ಒಂದು ವ್ಯವಸ್ಥೆ ಮಾಡಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಸಹಕಾರಿ ಸಂಘಗಳ ಬಾಬಿನಲ್ಲಿ ಸಹಕಾರ ಖಾತೆಯಿಂದ ಬಹಳ ಅನ್ಯಾಯವಾಗಹತ್ತಿದೆ. ಸರಕಾರದವರು ಸಹಕಾರಿ ಸಂಘಗಳನ್ನು ಮಾಡಲು ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದಾರೆ. ಆದರೆ ಬ್ಲ್ಯಾಕ್ ಮಾರ್ಕೆಟ್ ಮಾಡುವವರು ಸಹಕಾರಿ ಸಂಘಗಳನ್ನು ಸರಕಾರ ಖಾತೆಯ ಅಧಿಕಾರಿಗಳಿಗೆ ಲಂಚ ಕೊಟ್ಟು ಹೇರಳವಾಗಿ ಹಣ ಎತ್ತಿ ಹಾಕುತ್ತಿದ್ದಾರೆ. ಇದು ಸಹಕಾರ ಖಾತೆಯಲ್ಲಿ ಹೆಚ್ಚಾಗಿ ನಡೆದಿದೆ. ಮತ್ತು ಪ್ರಾಮಾಣಿಕ ರೀತಿಯಿಂದ ಸಹಕಾರ ಸಂಘಗಳನ್ನು ನಡೆಸುವ ಸಹಕಾರಿ ಸಂಘಗಳಿಗೆ ಯಾವ ತರದ ಪ್ರೋತ್ಸಾಹವು ಸಹಕಾರ ಖಾತೆಯಿಂದ ದೊರೆಯುತ್ತಿಲ್ಲ. ಹರಿಜನರಲ್ಲಿಯಂತೂ ಇಂಥ ಉದಾಹರಣೆಗಳು ಇವೆ. ಬೆಳಗಾಂವದಲ್ಲಿ ಲೆದರ್ ಮತ್ತು ಟ್ಯಾನಿಂಗ ಸೊಸೈಟಿಯನ್ನು ರಾಧಾಬಾಯಿ ಶ್ರೇಯಕರ ಅವರು ಸ್ಥಾಪಿಸಿ ಎಂಟು ಸಾವಿರ ರೂಪಾಯಿ ಸಾಲ ಹಾಗು ನಾಲು

(ಶ್ರೀಮತಿ ಚಂಪಾಬಾಯಿ ಭೋಗಲೆ)

ಸಾವಿರ ರೂಪಾಯಿ ಸಬ್‌ಸಿಡೀ ತೆಗೆದುಕೊಂಡು ಸದರಿ ಸೊಸೈಟಿಯ ಲಿಕ್ವಿಡೇಶನದಲ್ಲಿ ಹೋಯಿತು. ಇದು ಮುರಿದು ಹೋದ ಮೇಲೆ ಮತ್ತೊಂದು ಲೆದರ್ ಸೊಸೈಟಿಯನ್ನು ರಾಧಾಬಾಯಿ ಹಾಗೂ ಆಕೆಯ ಗಂಡನು ಮಾರುತಿ ಶ್ರೇಯಕರನು ಸ್ಥಾಪಿಸಿ ಸರಕಾರದಿಂದ 12,000 ರೂಪಾಯಿ ಸಾಲ ಸಂಪಾದಿಸಿದರು. ಮತ್ತು ಸೆಂಟ್ರಲ್ ಗವರ್ನಮೆಂಟ್ ಕಡೆಯಿಂದ 40,000 ರೂಪಾಯಿ ಸಾಲ ತೆಗೆದು ಹಿಂದಿನ 12,000 ರೂಪಾಯಿ ಸಾಲ ತೀರಿಸಿದರು. ಇಷ್ಟೊಂದು ಅಫರಾತಫರಿ ನಡೆಯುತ್ತಿದ್ದರೂ ಸಹಕಾರಿ ಖಾತೆಯವರು ತಿರುಗಿ ತಿರುಗಿ ಸಾಲ ಮಂಜೂರು ಮಾಡುವದೆಂದರೆ ಸಹಕಾರಿ ಖಾತೆಯ ಅಧಿಕಾರಿಗಳೇ ಕಾರಣರು. ಮೊದಲು ಒಂದು ಸಂಘವನ್ನು ಸ್ಥಾಪಿಸಿ ಅದನ್ನು ಲಿಕ್ವಿಡೇಶನ್‌ದಲ್ಲಿ ತೆಗೆದರೂ ಎರಡನೇ ಸಂಘವನ್ನು ಸಹಕಾರಿ ಖಾತೆಯವರು ರಿಜಿಸ್ಟರ್ ಮಾಡುವದೆಂದರೆ ಸಹಕಾರಿ ಖಾತೆಯ ಅಧಿಕಾರಿಗಳೇ ಇಂಥ ಕಾರ್ಯಕ್ಕೆ ಜವಾಬ್ದಾರರಾಗಿದ್ದಾರೆ. ಇದರಲ್ಲಿ ಅಧಿಕಾರಿಗಳೂ ಲಂಚ ತಿಂದು ಹೊರತಾಗಿ ಇಂಥ ಕಾರ್ಯವಾಗುವದಿಲ್ಲ. ಇಂಥ ಆಫೀಸರರ ಮೇಲೆ ಹಾಗೂ ಬೋಗಸ್ ಲೆದರ್ ಸೊಸೈಟಿಗಳನ್ನು ತೆಗೆದು ಹಣ ಎತ್ತಿ ಹಾಕುವ ರಾಧಾಬಾಯಿ ಶ್ರೇಯುತರ ಮೇಲೆ ಯಾಕೆ ಇಲ್ಲಿಯವರೆಗೆ ಕ್ರಮ ಕೈಕೊಂಡಿಲ್ಲ? ಅರ್ಜಿ ಹಾಕಿದರೂ ಯಾಕೆ ಗಮನ ಕೊಡುವದಿಲ್ಲ? ರಾಧಾಬಾಯಿಯು ಈ ಪ್ರಕಾರ 10–12 ವರ್ಷಗಳಿಂದ ಮಾಡುತ್ತಿದ್ದಾಳೆ. ಇಂಥವರ ಮೇಲೆ ತಕ್ಷಣ ಕ್ರಮ ಕೈಕೊಂಡರೆ ಮುಂದಿನವರಿಗೆ ಒಂದು ಆದರ್ಶ ಉದಾಹರಣೆಯು ಆಗುವುದು. ಈ ಸಂಬಂಧದಲ್ಲಿ ಯೋಗ್ಯಕ್ರಮ ಕೈಕೊಳ್ಳಬೇಕೆಂದು ನಾನು ಸರಕಾರಕ್ಕೆ ವಿನಂತಿಸುತ್ತೇನೆ.

ಇನ್ನು ಶ್ರೀಮತಿ ಯಶೋಧರ ದಾಸಪ್ಪ ಅವರಿಗೆ ಒಂದು ವಿನಂತಿ. ಸೋಷಿಯಲ್ ವೆಲ್‌ಫೇರ್ ಮಂತ್ರಿಯವರು ನನ್ನ ಯಾವತ್ತು ಸೂಚನೆಗಳನ್ನು ಅಮಲನಲ್ಲಿ ತಂದು ಹರಿಜನರ ಕಲ್ಯಾಣ ಮಾಡಬೇಕೆಂದು ನನ್ನ ಕಳಕಳಿಯ ವಿನಂತಿ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮೊದಲಿನಿಂದಲೂ ಬಹಳ ಕೆಳಗೆ ಇಳಿದಿದೆ. ಸಂಬಂಧಪಟ್ಟ ಅಧಿಕಾರಿಗಳಿಂದ ಆಫೀಸ್ ರಿಕಾರ್ಡ್ ತರಿಸಿ ಇಲ್ಲಿಯೇ ಕುಳಿತು ಅರ್ಜಿಗಳ ಮೇಲೆ ತಾವೇ ಸ್ವತಃ ಬರೆದು ತಿಳಿಸಬೇಕು ಮತ್ತು ಯೋಗ್ಯ ರೀತಿಯಲ್ಲಿ ಸರಿಪಡಿಸಬೇಕೆಂದು ವಿನಂತಿ ಮಾಡಿ ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಕೃಷ್ಣ.—ಸ್ವಾಮಿ, ಶ್ರೀಮತಿ ಚಂಪಾಬಾಯಿ ಭೋಗಲೆಯವರು ಅಭಿನಂದನಾ ಪತ್ರಿಕೆಯನ್ನು ಸಲ್ಲಿಸತಕ್ಕ ರೀತಿಯಲ್ಲಿ ಅವರು ಭಾಷಣಮಾಡಿದ ನಂತರ ನಾನು ಭಾಷಣ ಮಾಡಲು ಎದ್ದು ನಿಂತಿದ್ದೇನೆ. ಒಂದು ವಿಚಾರದಲ್ಲಿ ಶ್ರೀಮತಿಯವರು ಏನು ಭಾಷಣವನ್ನು ಹೊರಸೂಸಿದರೋ ಅದರ ಬಗ್ಗೆ ನಾನು ನನ್ನ ಸಂಪೂರ್ಣವಾದ ಅನುಮತಿಯನ್ನು ಕೊಡುವುದಕ್ಕೆ ನಿಂತಿದ್ದೇನೆ. ಅಸ್ಪೃಶ್ಯತೆಯ ದುಷ್ಟ ಪದ್ಧತಿಯ ಕಳಂಕ ನಮಗೆ ಸ್ವಾತಂತ್ರ್ಯ ಬಂದು 15 ವರ್ಷಗಳಾದರೂ ಕೂಡ ಈ ಒಂದು ಕಳಂಕ ನಮ್ಮ ಸಮಾಜದಲ್ಲಿರತಕ್ಕದ್ದು ನಮ್ಮ ಸಮಾಜಕ್ಕಾಗಲಿ, ರಾಷ್ಟ್ರಕ್ಕಾಗಲಿ ಯಾವ ರೀತಿಯ ಗೌರವವನ್ನೂ ಕೂಡ ತಂದು ಕೊಡುವಂತಹದಲ್ಲ, ಎಂಬುದನ್ನು ನಾನು ಈ ಸಭೆಯಲ್ಲಿ ತಿಳಿಸಲಿಚ್ಛಿಸುತ್ತೇನೆ. ಕೇವಲ ಸಮಸ್ಯೆಗೆ ಪರಿಹಾರವನ್ನು ಸರ್ಕಾರದ ವತಿಯಿಂದ ಮಾತ್ರ ನಿರೀಕ್ಷಣೆ ಮಾಡತಕ್ಕದ್ದು ಪ್ರಜೆಗಳಾದಂಥ ನಮಗೆ ಸಲ್ಲತಕ್ಕ ಮಾತಲ್ಲ ಎನ್ನುವುದನ್ನು ಕೂಡ ನಾವು ಮನಗಾಣಬೇಕಾಗಿದೆ. ನಮ್ಮ ರಾಜ್ಯಾಂಗ ಅಂಥಾ ಡಿಸ್‌ಕ್ರಿಮಿನೇಷನ್ನನ್ನೂ ತೊಡೆದ ಹಾಕಿದೆ. ಆದರೂ ಕೂಡ ನಾವು ನಮ್ಮ ದಿನಚರಿಯ ವ್ಯವಹಾರಗಳಲ್ಲಿ ಆ ಒಂದು ಸಮಸ್ಯೆಯ ಬೃಹದಾಕಾರವನ್ನು ನಾವು ಕಾಣುತ್ತಿದ್ದೇವೆ. ಸರ್ಕಾರ ಮತ್ತು ಸಾರ್ವಜನಿಕರು ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ, ಕಳಂಕವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು.

ನಮ್ಮ ಮುಂದಿರತಕ್ಕ ಹಲವಾರು ಬೇಡಿಕೆಗಳ ಬಗ್ಗೆ ಕೇವಲ ಎರಡು ಬೇಡಿಕೆಗಳ ವಿಚಾರದಲ್ಲಿ ಮಾತ್ರ ನಾನು ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊಟ್ಟಮೊದಲನೆಯದಾಗಿ ಮೋಟಾರು ವಾಹನಗಳಿಗೆ ಸಂಬಂಧಪಟ್ಟ ಹಾಗೆ ಸುಂಕವನ್ನು ವಸೂಲು ಮಾಡತಕ್ಕ ರೀತಿ ಮತ್ತು ಜಿಲ್ಲಾ ಮಟ್ಟದಲ್ಲಿರತಕ್ಕ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸುಗಳಲ್ಲಿ ನಡೆಯುತ್ತಾ ಇರುವ ಭ್ರಷ್ಟಾಚಾರವನ್ನು ನಾನು ಈ ಸಭೆಯವರ ಅವಗಾಹನೆಗೆ ತರಬೇಕೆಂದು ಬಯಸುತ್ತೇನೆ. ಯಾವ ಟೀಕೆ ಬಂದರೂ ಕೂಡ ಆ ಟೀಕೆಯಲ್ಲಿ ಏನಾದರೂ ಸತ್ಯವಿದೆಯೇ ಆ ಟೀಕೆಯಲ್ಲಿ ಏನಾದರೂ ಆಧಾರ ಇದೆಯೇ ಎನ್ನುವುದನ್ನು ವಿಮರ್ಶೆ ಮಾಡತಕ್ಕ ಗೋಜಿಗೆ ಸರ್ಕಾರ ಕೈಹಾಕಿಲ್ಲ. ವಿರೋಧ ಪಕ್ಷದವರು ಏನು ಟೀಕೆಯನ್ನು ಮಾಡಿದರೂ ಕೂಡ ನಗು ನಗುತ್ತಾ ಕೇಳೋಣ. ಆಮೇಲೆ ಮನೆಗೆ ಹೋದ ಮೇಲೆ ಅದನ್ನು ಮರೆಯೋಣ ಎನ್ನುವ ಮನೋಭಾವನೆ ಸರ್ಕಾರದವರಿಗೆ ಇದ್ದಹಾಗೆ ನನಗೆ ಭಾಸವಾಗುತ್ತದೆ. ಇದರ ಬಗ್ಗೆ ಕೆಲವು

ಅಂಕಿಅಂಶಗಳನ್ನು ಕೊಡೋಣ ಎಂದು ಹುಡುಕುತ್ತಿದ್ದ. ಸುಮ್ಮನೆ ಏತಕ್ಕೆ ಆ ಅಂಕಿಅಂಶಗಳನ್ನು ನೀವು ಹುಡುಕುತ್ತಿದ್ದೀರಿ, ಒಂದು ವೇಳೆ ನೀವು ಅಂಕಿಅಂಶಗಳನ್ನು ಕೊಟ್ಟು ಹೇಳಿದರೂ ಕೂಡ ಅವುಗಳ ಬಗ್ಗೆ ಯಾರು ಗಮನಕೊಡುತ್ತಾರೆ, ಸುಮ್ಮನೆ ನೀವು ಟೀಕೆಯನ್ನು ಮಾಡಿ ಎಂದು ಹೇಳಿದರು.

ಶ್ರೀ ಎಸ್. ನಿಜಲಿಂಗಪ್ಪ.—ನೀವು ಅಂಕಿ ಅಂಶಗಳನ್ನು ಕೊಡದೆ ಇರುವುದಕ್ಕೆ ಈ ಕಾರಣವನ್ನು ಹೇಳುತ್ತಿದ್ದೀರಿ.

ಶ್ರೀ ಎಸ್. ಎಂ. ಕೃಷ್ಣ.—ಇಂಥಾ ಒಂದು ಮನೋಭಾವನೆ ಶಾಸನಸಭಾ ಸದಸ್ಯರಿಗೆ ಬರುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರಲ್ಲಾ ಎಂದು ನನಗೆ ವ್ಯಾಕುಲವನ್ನುಂಟು ಮಾಡಿದೆ. ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸು ಲಂಚದ ಮೂಲಸ್ಥಾನವಾಗಿದೆ. ಆ ಆಫೀಸಿನಲ್ಲಿ ಲಂಚ ಎನ್ನತಕ್ಕದ್ದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ಇದೇ ರೀತಿ ಹಲವಾರು ಇಲಾಖೆಗಳಲ್ಲಿ ಲಂಚ ಇಲ್ಲದೇ ಹೋದರೆ ಯಾವ ಕೆಲಸವೂ ಆಗುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಪೋಲೀಸು ಇಲಾಖೆಯಲ್ಲಂತೂ ಲಂಚಕೊಡದೆ ಹೋದರೆ ಅವರನ್ನು ಅಪ್ರೋಚ್ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎನ್ನುವುದು ಜನ ಜನಿತವಾಗಿದೆ. ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಂತೂ ಲಂಚ ತಾಂಡವ ವಾಡುತ್ತಿದೆ. ಇದೇ ರೀತಿ ಹಲವಾರು ಉದಾಹರಣೆಗಳನ್ನು ಕೊಡಬಹುದು. ಲಂಚವನ್ನು ತೆಗೆದು ಕೊಳ್ಳತಕ್ಕ ಆಫೀಸುಗಳ ಲಿಸ್ಟಿಗೆ ಹೊಸದಾಗಿ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸು ಸಹ ಸೇರಿ ಹೋಗಿದೆ. ಖಾಸಗೀ ಬಸ್ ಮಾಲೀಕರು, ಲಾರಿ ಮಾಲೀಕರು ಮತ್ತು ಕಾರುಗಳನ್ನಿಟ್ಟುಕೊಂಡಿರ ತಕ್ಕವರು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸಿಗೆ ತಮ್ಮ ಟ್ಯಾಕ್ಸುಗಳನ್ನು ಕಟ್ಟಿ ಲೈಸೆನ್ಸ್‌ನ್ನು ಪಡೆಯುವುದಕ್ಕೆ ಹೋದಾಗ ಆ ಆಫೀಸಿನಲ್ಲಿರತಕ್ಕ ಕ್ಲಾರ್ಕುಗಳು ಮತ್ತು ಆಫೀಸರುಗಳು ಅವರಿಗೆ ಕೊಡತಕ್ಕ ಚಿತ್ರಹಿಂಸೆಯನ್ನು ಕೇಳಿದರೆ ಮನಸ್ಸಿಗೆ ಬಹಳ ಬೇಜಾರಾಗುತ್ತದೆ. ಇದಕ್ಕೆ ಸಂಬಂಧ ಪಟ್ಟ ಮಂತ್ರಿಗಳಾಗಲೀ ಅಥವಾ ಈ ಆಫೀಸುಗಳ ಮೇಲ್ವಿಚಾರಣೆಯ ಅಧಿಕಾರವನ್ನು ಪಡೆದಿರತಕ್ಕ ಅಧಿಕಾರಿಗಳಾಗಲೀ ಈ ಆಫೀಸುಗಳನ್ನು ತನಿಖೆ ಮಾಡುವುದಕ್ಕೆ ಪುರಸೊತ್ತಾಗಲೀ, ಅವಕಾಶ ವಾಗಲೀ ಇಲ್ಲವೇ ಎನ್ನುವ ಅನುಮಾನ ನಮಗೆ ಬರುತ್ತದೆ. ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸಿನಲ್ಲಿ ಪ್ರತಿಯೊಂದು ಕೆಲಸಕ್ಕೂ ಕೂಡ ಲಂಚವನ್ನು ಕೊಡಬೇಕಾಗಿದೆ. ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ತಮ್ಮ ಜಡತ್ವವನ್ನು ಬಿಟ್ಟು ಹೊರಗೆ ಬರಬೇಕಾಗಿದೆ. ಮಾನ್ಯ ಮಂತ್ರಿಗಳು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸಿಗೆ ಸರ್‌ಪ್ರೈಜ್ ವಿಜಿಟ್ ಕೊಟ್ಟು ತನಿಖೆಯನ್ನು ನಡೆಸಿ ನೌಕರರು ಮತ್ತು ಅಧಿಕಾರಿಗಳಿಗೆ ಒಂದು ರೀತಿಯ ಭಯ ಉಂಟಾಗುವ ಹಾಗೆ ಮಾಡಿದರೆ, ಒಂದು ವೇಳೆ ಅವರು ಲಂಚವನ್ನು ತೆಗೆದುಕೊಂಡರೂ ಕೂಡ ಲೀಲಾಜಾಲವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದರಿಂದ ಕೊಂಚಮಟ್ಟಿಗಾದರೂ ಲಂಚಕಡಿಮೆಯಾಗುತ್ತದೆ ಎನ್ನುವ ವಿಚಾರವನ್ನು ನಾನು ಈ ಸಮಯದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ.

ಸುಮಾರು 650 ಲಕ್ಷ ರೂಪಾಯಿಗಳನ್ನು ಮೋಟಾರು ವಾಹನಗಳಿಂದ ಸರ್ಕಾರದವರು ಪಡೆಯುತ್ತಿದ್ದಾರೆ. ಈ 650 ಲಕ್ಷ ರೂಪಾಯಿಗಳನ್ನು ಹೇಗೆ ಖರ್ಚು ಮಾಡಬೇಕೆಂಬ ವಿಚಾರದಲ್ಲಿ ಸರ್ಕಾರ ನಿರ್ಧಿಷ್ಟವಾದ ಒಂದು ನಿಲುವನ್ನು ತಾಳಿರುವ ಹಾಗೆ ಕಾಣುವುದಿಲ್ಲ. 650 ಲಕ್ಷ ರೂಪಾಯಿಗಳನ್ನು ಮೋಟಾರು ವಾಹನಗಳಿಂದ ಆದಾಯವನ್ನು ಪಡೆಯುವಾಗ ಅದೆಲ್ಲವನ್ನೂ ಕೂಡ ಸಂಬಂಧಪಟ್ಟ ರಸ್ತೆಗಳನ್ನು ಸರಿಪಡಿಸುವುದಕ್ಕೆ, ಸಂಬಂಧಪಟ್ಟ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಮಾತ್ರ ಉಪಯೋಗಿಸಬೇಕು. ಇವೊತ್ತಿನ ದಿವಸ 650 ಲಕ್ಷ ರೂಪಾಯಿಗಳನ್ನೂ ಸಾರ್ವಜನಿಕರ ಲೆಕ್ಕಕ್ಕೆ ತೆಗೆದುಕೊಂಡು ಅಷ್ಟು ದುಡ್ಡನ್ನೂ ಕೂಡ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಸರ್ಕಾರ ದವರು ಖರ್ಚು ಮಾಡುತ್ತಿದ್ದಾರೆಯೇ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ. ಮತ್ತು ಹಾಗೆಯೇ ಆ ಪ್ರಶ್ನೆಗೆ ನಾನು ಸರ್ಕಾರದಿಂದ ಉತ್ತರವನ್ನು ಕೂಡ ನಿರೀಕ್ಷಣೆ ಮಾಡುತ್ತೇನೆ.

ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯ ವ್ಯವಹಾರಗಳಲ್ಲಿ ಬೇಕಾದಷ್ಟು ಅವಿವೇಕಗಳು ನಡೆಯುತ್ತಿವೆ. ಸಾರ್ವಜನಿಕರಿಗೆ ಸರ್ಕಾರಿ ಬಸ್ಸುಗಳಲ್ಲಿ ಕುಳಿತುಕೊಂಡು ಹೋಗಲು ನೆಮ್ಮದಿಯೇ ಇರುವುದಿಲ್ಲ. ಅವು ಟೈಮಿಗೆ ಸರಿಯಾಗಿ ಬರುವುದಿಲ್ಲ. ದಾರಿಯ ಮಧ್ಯದಲ್ಲಿ ಒಂದು ವೇಳೆ ಬಸ್ಸೇನಾದರೂ ಕೆಟ್ಟು ಹೋದ ಪಕ್ಷದಲ್ಲಿ ರಾತ್ರಿಯೆಲ್ಲಾ ಅಲ್ಲಿಯೇ ಇರಬೇಕಾಗುತ್ತದೆ. ಇವೆಲ್ಲವೂ ಸಾರ್ವಜನಿಕರಿಗೆ ಚೆನ್ನಾಗಿ ಮನದಟ್ಟಾಗಿದೆ. ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಈ ವಿಚಾರದಲ್ಲಿ ಸ್ವಲ್ಪ ಹೆಚ್ಚಿನ ಆಸಕ್ತಿಯನ್ನು ವಹಿಸತಕ್ಕದ್ದು ಅತ್ಯಗತ್ಯವಾಗಿದೆ. ಈ ರಾಷ್ಟ್ರೀಕರಣದ ನೀತಿಯನ್ನು ಇನ್ನು ಮುಂದೆಯೂ ಕೂಡ ಸರ್ಕಾರ ಮುಂದುವರಿಸಿಕೊಂಡು ಹೋಗಬೇಕಾದರೆ ಈ ರಾಷ್ಟ್ರೀಕರಣದ ಕೆಲಸದಲ್ಲಿ ಇದುವರೆಗೆ ಏನು ಸಾಧನೆಯನ್ನು ಮಾಡಿದ್ದಾರೆಯೋ ಅದು ಸರಿಯಾದ ರೀತಿಯಲ್ಲಿ ನಡೆಯುತ್ತಿದೆಯೋ ಎನ್ನುವುದನ್ನು ಜನತೆಗೆ ತೋರಿಸಿಕೊಡಬೇಕಾದದ್ದು ಅಗತ್ಯವಾಗಿದೆ. ಆ ದೃಷ್ಟಿಯಿಂದ ಹಾಸನ ಜಿಲ್ಲೆಯನ್ನು ಉದಾಹರಣೆಗೆ ತೆಗೆದುಕೊಳ್ಳುವುದಾದರೆ

(ಶ್ರೀ ಎಸ್. ಎಂ. ಕೃಷ್ಣ)

ಹಾಸನ ಜಿಲ್ಲೆಯ ಜನರ ರೆಫರಂಡಂ ತೆಗೆದುಕೊಂಡರೆ ಅಲ್ಲಿ 100ಕ್ಕೆ 80 ಜನ ಈ ರಾಷ್ಟ್ರೀಕರಣದ ನೀತಿಯನ್ನು ವಿರೋಧಿಸುತ್ತಾರೆ. ಈ ರಾಷ್ಟ್ರೀಕರಣದ ನೀತಿಯಿಂದ ಜನತೆಗೆ ಒಳ್ಳೆಯ ಫಲವನ್ನು ಕೊಡುವುದರಲ್ಲಿ ಮತ್ತು ಪ್ರಯಾಣಿಕರಿಗೆ ಸೂಕ್ತ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರಲ್ಲಿ ನಮ್ಮ ಸರ್ಕಾರ ವಿಫಲವಾಗಿದೆ ಎಂದು ಜನತೆ ಹೇಳತಕ್ಕಂಥ ಸಮಯ ಬಂದಿದೆ ಎಂದು ನಾನು ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಲಚ್ಛಿಸುತ್ತೇನೆ.

ಆಮೇಲೆ ಕಾರ್ಮಿಕ ವರ್ಗದವರ ವಿಚಾರದಲ್ಲಿ ನಮ್ಮ ಸರ್ಕಾರದವರು ಅನುಸರಿಸತಕ್ಕ ನೀತಿಯನ್ನು ಬಹಳಮಟ್ಟಿಗೆ ಟೀಕೆ ಮಾಡಬೇಕಾಗಿದೆ. ಕಾರ್ಮಿಕರು ಇವೊತ್ತಿನ ದಿವಸ ದೇಶದ ಸಂಪತ್ತನ್ನು ರೂಢಿಸುವುದರಲ್ಲಿ, ಸಂಪತ್ತನ್ನು ಜಾಸ್ತಿ ಮಾಡುವುದರಲ್ಲಿ ಅವರು ಅವರ್ಣನೀಯವಾದ ಪಾತ್ರವನ್ನು ವಹಿಸಿದ್ದಾರೆ. ತುರ್ತು ಪರಿಸ್ಥಿತಿಯ ಮಟ್ಟದಲ್ಲಿ ನಮ್ಮ ದೇಶ ಇರುವಂತಹ ಕಾಲದಲ್ಲಿ ಕಾರ್ಮಿಕ ವರ್ಗದವರ ಪಾತ್ರ, ಕಾರ್ಮಿಕ ವರ್ಗದವರು ಮಾಡುತ್ತಿರುವ ಸೇವೆಯನ್ನು ಎಷ್ಟು ಕೊಂಡಾಡಿದರೂ ಕೂಡ ಅದು ಸಾಧ್ಯವಾಗುವುದಿಲ್ಲ.

ನಮ್ಮ ಕೈಗಾರಿಕಾ ಸಂಸ್ಥೆಗಳಲ್ಲಿ ಈ ಕಾರ್ಮಿಕ ವರ್ಗಕ್ಕೆ ಎಷ್ಟರಮಟ್ಟಿನ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದಾರೆ ಅನ್ನತಕ್ಕಂಥ ಪ್ರಶ್ನೆಗೆ ಉತ್ತರ ಹುಡುಕುವುದಕ್ಕೆ ಹೊರಟಾಗ ನಿರಾಶೆಯಾಗುತ್ತದೆ.

ಈಗ ಚನ್ನಪಟ್ಟಣ ಸ್ಪನ್ ಸಿಲ್ಕ್ ಮಿಲ್ಸ್ ವಿಷಯವಾಗಿ ಸವಿಸ್ತಾರವಾಗಿ ಪ್ರಸ್ತಾಪ ಮಾಡುವ ಉದ್ದೇಶವನ್ನು ಹೊಂದಿದ್ದೇನೆ. ಈ ಸ್ಪನ್ ಸಿಲ್ಕ್ ಮಿಲ್ಲನ್ನು ಕಾರಣಾಂತರಗಳಿಂದ ಒಂದುಕಾಲದಲ್ಲಿ ಮುಚ್ಚಿಬಿಟ್ಟರು, ಮತ್ತು ಅಲ್ಲಿದ್ದಂಥ ಎಲ್ಲ ಕಾರ್ಮಿಕರನ್ನು ರಿಟ್ರೆಂಚ್ ಮಾಡಿಬಿಟ್ಟರು. ಅನಂತರ ಸರ್ಕಾರದ ಆಡಳಿತದಲ್ಲಿ ಈ ಸ್ಪನ್ ಸಿಲ್ಕ್ ಮಿಲ್ಸ್‌ನ ಕೆಲಸ ಕಾರ್ಯಗಳನ್ನು ಪುನಃ ಶುರು ಮಾಡಿದರು. ನಾವು ಶುರು ಮಾಡಿರತಕ್ಕಂಥ ಲೇಬರ್ ವಾದ ಸೌಲಭ್ಯವನ್ನು ಈ ಕಾರ್ಮಿಕ ವರ್ಗಕ್ಕೆ ಮತ್ತೆ ಕೊಡತಕ್ಕಂಥ ಉದ್ದೇಶ ಸ್ವಲ್ಪಮಟ್ಟಿಗಾದರೂ ಈ ಸರ್ಕಾರಕ್ಕೆ ಇಷ್ಟಿದ್ದರೆ, ಅವರು ಇಷ್ಟು ಪ್ರತ್ಯಕ್ಷವಾಗಿ ಕಾರ್ಮಿಕರ ಕಾನೂನುಗಳನ್ನು ಉಲ್ಲಂಘನೆ ಮಾಡಿ ಚನ್ನಪಟ್ಟಣ ಸಿಲ್ಕ್‌ಮಿಲ್ಸಿನಲ್ಲಿ ಹಿಂದೆ ಯಾರು ಜೂನಿಯರ್ ಆಗಿದ್ದರೋ, ಹಿಂದೆ ರಾಜಕೀಯ ಕೆಲಸ ಕಾರ್ಯಗಳಿಗೋಸ್ಕರ ವಜ ಮಾಡಲ್ಪಟ್ಟಿದ್ದರೋ, ಅಂಥ ಜನರಿಗೆ ಇವತ್ತು ಯಥೇಚ್ಛವಾಗಿ ಸ್ಪನ್ ಸಿಲ್ಕ್ ಮಿಲ್ಸಿನಲ್ಲಿ ಕೆಲಸ ಕೊಟ್ಟು ಇಡುತ್ತಿದ್ದೀರಿ. ಸ್ವಾಮಿ, ಇದಕ್ಕೆ ನೂರು ಉದಾಹರಣೆಗಳನ್ನು ಕೊಡಬಲ್ಲೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಹಿಂದೆ ಇದ್ದದ್ದು ಒಂದು private management ಈ ವರ್ಷ ಸರಕಾರ ಇದನ್ನು ತೆಗೆದುಕೊಂಡ ಮೇಲೆ, ಒಂದು ಸ್ಕ್ರೀನಿಂಗ್ ಕಮಿಟಿ ಮಾಡಿ ಯಾರ್ಯಾರು ಒಳ್ಳೆಯ, ಯೋಗ್ಯ ಕೆಲಸಗಾರರು ಇದ್ದರೋ ಅವರನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಕಾನೂನಿನ ಪ್ರಕಾರ ನಾವು ಕೆಲಸಗಾರರನ್ನು ತೆಗೆದುಕೊಂಡಿದ್ದೇವೆ. ಏನೂ ತಾರತಮ್ಯ ಮಾಡಿಲ್ಲ. ಇವರು ಊಹಾಪೋಹಗಳ ಮೇಲೆ ಹೇಳುತ್ತಿದ್ದಾರೆ.

ಶ್ರೀ ಎಸ್. ಎಂ. ಕೃಷ್ಣ.—ಹಿಂದೆ private management ಇರಬಹುದು. ಇವತ್ತಿನ ದಿವಸ ಸರ್ಕಾರದವರು ಈ ಕಾರ್ಖಾನೆಯ ಆಡಳಿತವನ್ನು ನಿಮ್ಮ ವಶಕ್ಕೆ ತೆಗೆದುಕೊಂಡಿರುತ್ತೀರ. ಕೆಲವು ಸಂದರ್ಭದಲ್ಲಿ 28 ವರ್ಷಗಳು ಈ ಕಾರ್ಖಾನೆಯಲ್ಲಿ ಯಾರು ಕೆಲಸ ಮಾಡಿದ್ದಾರೆಯೋ ಅಂಥವರನ್ನು ನೀವು ಬಿಟ್ಟಿರುವುದರಲ್ಲಿ ಏನು ನೀತಿ ಇದೆ, ಏನು ಧರ್ಮ ಇದೆಯೆಂದು ನಾನು ಪ್ರಶ್ನೆ ಮಾಡುತ್ತೇನೆ. ಪ್ರೈವೇಟ್ ಮೇನೇಜ್‌ಮೆಂಟಿನಿಂದ ಸರ್ಕಾರದವರು ವಹಿಸಿಕೊಂಡು ಹೇಳಿ, ಇಷ್ಟು ಸುಲಭವಾಗಿ ಸರ್ಕಾರದವರು ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವುದರಲ್ಲಿ ಯಾವ ವಿಧವಾದ ಅರ್ಥವಿಲ್ಲ.

ಶ್ರೀ ಬಿ. ರಾಚಯ್ಯ.—ಬೇಕಾದರೆ ಲಿಷ್ಟು ಕೊಟ್ಟು ತೋರಿಸುತ್ತೇನೆ. ಅಲ್ಲಿ ಯಾರ್ಯಾರು ಕೆಲಸಗಾರರು ಇದ್ದರು, ಯಾರನ್ನು ತೆಗೆದುಕೊಂಡಿತು ಮುಂತಾದುದನ್ನು ತಿಳಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ನನಗೆ ಲಿಸ್ಟ್ ತೋರಿಸಬೇಕಾಗಿಲ್ಲ. ನಾನು ಈಗಲೂ ಸರ್ಕಾರಕ್ಕೆ ಕಳಕಳಿಯಿಂದ ಭಿನ್ನಹ ಮಾಡುತ್ತೇನೆ: ಸ್ಪನ್ ಸಿಲ್ಕ್ ಮಿಲ್ಸ್ ವ್ಯವಹಾರದಲ್ಲಿ ಕಾರ್ಮಿಕರಿಗೆ ಬಹಳ ಅನ್ಯಾಯವಾಗಿದೆ, ಈ ವಿಚಾರದಲ್ಲಿ ಕಾರ್ಮಿಕರಲ್ಲಿ ಅಸಂತುಷ್ಟಿ ಅಶಾಂತಿ ಉಂಟಾಗಿದೆ. ನಮಗೆ ತಿಳಿದಿರುವ ಹಾಗೆ ಇದು ಬಹಳಮಟ್ಟಿಗೆ ಸತ್ಯವಾದ ಮಾತು.

ಶ್ರೀ ಬಿ. ರಾಚಯ್ಯ.—ಅನ್ಯಾಯವಾಗಿದೆಯೆಂದು ಹೇಳಿದಿರಿ—ಕೆಲಸ ಕೊಡುವುದರಲ್ಲಿ ಕೆಲವರಿಗೆ ಎಂದು. ಲೇಬರ್ ಆಕ್ಟ್ ಪ್ರಕಾರ ಸೌಲಭ್ಯಗಳನ್ನು ಒದಗಿಸುವುದರಲ್ಲಿ ನಿಮ್ಮ ಅಭಿಪ್ರಾಯವೇನು ?

ಶ್ರೀ ಎಸ್. ಎಂ. ಕೃಷ್ಣ.—ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾದ್ದು ಮೂಲಭೂತವಾದ ಪ್ರಶ್ನೆ. ಅದರಲ್ಲಿ ಸರ್ಕಾರ ಎಡವಿದೆಯೆಂದು ನಿಮ್ಮನ್ನು ಚಾರ್ಜ್ ಮಾಡುತ್ತಾ ಇದ್ದೇನೆ.

ಶ್ರೀ ಬಿ. ಡಿ. ಜತ್ತಿ.—ಮೊದಲೇ ಏನೂ ನೋಡದೆ ಅವರಿಗೆ ಕೆಲಸ ಕೊಡಲಿಲ್ಲ. ಸ್ಕ್ರೀನಿಂಗ್ ಕಮಿಟಿ ನೇಮಕ ಮಾಡಿ, ಅವರು ಪರೀಕ್ಷೆ ಮಾಡಿ ತೆಗೆದುಕೊಂಡಿದ್ದಾರೆ. ಸ್ಕ್ರೀನಿಂಗ್ ಕಮಿಟಿಯವರು ಒಂದು ಬೇಸಿಸ್ ಇಟ್ಟುಕೊಂಡು, ಸೆಲೆಕ್ಟ್ ಮಾಡಿದ್ದಾರೆ.

ಶ್ರೀ ಎಸ್. ಎಂ. ಕೃಷ್ಣ.—ಈ ಸ್ಕ್ರೀನಿಂಗ್ ಕಮಿಟಿ ಬಗ್ಗೆ ಇದೇ ಸಭೆಯಲ್ಲಿ ಒಂದು ಪ್ರಶ್ನೆ ಬಂದಿತ್ತು. ಆಗ ನಾನೇ ಸಂಬಂಧಪಟ್ಟ ಮಂತ್ರಿಗಳಿಗೆ ಈ ಪ್ರಶ್ನೆ ಹಾಕಿದೆ: ಸ್ಕ್ರೀನಿಂಗ್ ಕಮಿಟಿ ಎಷ್ಟು ಸಾರಿ ಸಭೆ ಸೇರಿತ್ತು, ಎಷ್ಟು ಜನ ಕಾರ್ಮಿಕರನ್ನು ಆ ಕಮಿಟಿ ಸಂದರ್ಶಿಸಿದರು, ಮುಂತಾದ ವಿವರಗಳನ್ನು ಕೇಳಿದೆ. ಇದುವರೆಗೆ ಆ ವಿವರಣೆ ದೊರೆಯಲಿಲ್ಲ. ನನಗೆ ಖಚಿತವಾಗಿ ಗೊತ್ತಿರುವುದು ಏನೆಂದರೆ, ಅಡ್ಮಿನಿಸ್ಟ್ರೇಟಿವ್ ಆಫೀಸರು ನೇಮಕ ಮಾಡಿದರು ಎಂದು ಜಪಾನಿಗೆ ಕಳುಹಿಸಿ ಸಾಕಷ್ಟು ಅನುಭವ ಪಡೆದುಕೊಂಡು ಬಂದಿದ್ದಾರೆ. ಇವತ್ತು ನಿಮ್ಮ ರಾಜಕೀಯದ ಒತ್ತಡದಿಂದ ಎಂದು ನಾನು ಹೇಳಬಾರದು ಎಂದು ನಾನು ಇದುವರೆಗೆ ನಾನು ತಡೆದು ಇದ್ದೆ.

ಶ್ರೀ ಎಸ್. ನಿಜಲಿಂಗಪ್ಪ.—ನಿಮಗೆ ಬೇರೆ ಕಾರಣ ಸಿಕ್ಕುವುದಿಲ್ಲ, ಹೇಳಿ.

ಶ್ರೀ ಎಸ್. ಎಂ. ಕೃಷ್ಣ.—ಈಗ ಮಾನ್ಯ ಮುಖ್ಯಮಂತ್ರಿಗಳೇ ಹೇಳಿ ಅಂತ ಅಪ್ಪಣೆ ಕೊಟ್ಟರು. ರಾಜಕೀಯ ಒತ್ತಡಕ್ಕೋಸ್ಕರವಾಗಿ ಅಡ್ಮಿನಿಸ್ಟ್ರೇಟಿವ್ ಆಫೀಸರು ಅರ್ಜಿ ತೆಗೆದುಕೊಂಡ ಹಾಗೆ ತಿಳಿದುಬಂದಿದೆ. ವೈಯಕ್ತಿಕವಾಗಿ ನನಗೆ ಅದರಲ್ಲಿ ಆಸಕ್ತಿ ಏನೂ ಇಲ್ಲ. 28 ವರ್ಷ ಸರ್ವೀಸ್ ಮಾಡಿದ ಒಬ್ಬ ಬಾಯಿಲರ್ ನನಗೆ ಚೆನ್ನಾಗಿ ಗೊತ್ತು. ಇಂಜನಿಯರಾಗಿಯೂ ಕೆಲಸ ಮಾಡಿದ್ದಾನೆ. 28 ವರ್ಷ ಮಾಡಿದ್ದಕ್ಕೆ ಸರ್ಟಿಫಿಕೇಟ್ ಇದೆ. ಇವತ್ತು ಅವನಿಗೆ ಯಾವ ಕೆಲಸವನ್ನೂ ಕೊಡದೆ ಅವನನ್ನು ಬೀದಿಯಲ್ಲಿ ಅಲೆಯುವಂತೆ ಮಾಡಿರುತ್ತೀರಿ. ಈ ರೀತಿ ಮಾಡಿರುವುದಕ್ಕೆ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದೀರ ! old man ಅಂತ ಇದ್ದರೆ ಕಳುಹಿಸಿಬಿಡಿ ಅವನನ್ನು ಬೇರೆ ದೇಶಕೆ .

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಚೀಫ್ ಮಿನಿಸ್ಟರೂ ಹೋಗಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ತಜ್ಞರಾಗಿರತಕ್ಕಂಥವರು, ಯಾರಿಂದ ಫ್ಯಾಕ್ಟರಿಗೆ ಹೆಚ್ಚು ಉಪಯುಕ್ತತೆ ಇದೆಯೋ, ಅಂಥವರನ್ನು ಸ್ಕ್ರೀನಿಂಗ್ ಕಮಿಟಿ ಚುನಾಯಿಸಿದೆ. ರಾಜಕೀಯ ಮಾಡಿ ಗಾರರನ್ನು ತೆಗೆದುಕೊಂಡರೆ, ಇನ್ನೊಂದು ಸಾರಿ ಫ್ಯಾಕ್ಟರಿಯನ್ನು ಮುಚ್ಚಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಇಲ್ಲಿ ರಾಜಕೀಯ ಮಾಡುತ್ತಾ ಇದ್ದೀರಾ ?

ಶ್ರೀ ಬಿ. ರಾಚಯ್ಯ.—ಅವಕಾಶ ಕೊಡುತ್ತೇನೆ, ರೆಕಾರ್ಡ್ ತೋರಿಸುತ್ತೇನೆ. ಫ್ಯಾಕ್ಟರಿಗೂ ಬಂದು ನೋಡಬಹುದು. ಆಮೇಲೆ ಬಹುಶಃ ನೀವು ಹೀಗೆ ಹೇಳಲಾಗುವುದಿಲ್ಲ. ಫ್ಯಾಕ್ಟರಿ ಚೆನ್ನಾಗಿ ನಡೆಯಲಿ, ಲಾಭದಾಯಕವಾಗಿ ನಡೆಯಲಿ ಎಂಬ ದೃಷ್ಟಿಯಿಂದ ಸೆಲೆಕ್ಟ್ ಮಾಡಿದೆಯೇ ಹೊರತು, ರಾಜಕೀಯ ದೃಷ್ಟಿಯಿಂದ ಸೆಲೆಕ್ಟ್ ಮಾಡಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಮಂತ್ರಿಗಳು ನನ್ನ ಯೋಗ್ಯತೆಗೆ ಮೀರಿದಂಥ ಅವಕಾಶವನ್ನು ಕೊಟ್ಟಿದ್ದಾರೆ. ಆ ಗೋಜಿಗೆ ನಾನು ಹೋಗುವುದಿಲ್ಲ. ಆದರೆ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ :

Probe a little further into this matter and see if injustice has been done some people and if they can be employed in the factory so that they can also help in making profits to that factory.

ಶ್ರೀ ಬಿ. ರಾಚಯ್ಯ.— ಸೌಲಭ್ಯ ಕೊಟ್ಟಿರುವುದು ಹೇಳಲೇ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ.—ಅಕ್ಕಸಾಲಿಗರ ವಿಚಾರದಲ್ಲಿ ಒಂದೇ ಒಂದು ಮಾತನ್ನು ಹೇಳುವುದಕ್ಕೆ ನಾನು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಈಗ ತಾನೇ ಸಂಬಂಧಪಟ್ಟ ಮಂತ್ರಿಗಳು, ಅಕ್ಕಸಾಲಿಗರು ಯಾರೂ ಬೀದಿಯಲ್ಲಿ ಅಲೆಯುತ್ತಾ ಇಲ್ಲ ಎಂದು ಹೇಳಿದರು. ಅವರು ಅಲೆಯುತ್ತಿದ್ದಾರೆಯೋ, ಕಸಬು ಇಲ್ಲದೆ ಕೂತಿದ್ದಾರೆಯೋ ಅನ್ನುವ ವಿಚಾರವನ್ನು ನಾನು ಚರ್ಚೆ ಮಾಡುವುದಕ್ಕೆ ಹೊರಟಿಲ್ಲ. ಒಂದು ಮಾತ್ರ ಬಹು ಸತ್ಯ: ಈ ಚಿನ್ನದ ನಿಯಂತ್ರಣ ಆಜ್ಞೆ ಬಂದಮೇಲೆ ನಮ್ಮ ದೇಶದಲ್ಲಿ ಸಹಸ್ರಾರು ಜನ ಅಕ್ಕಸಾಲಿಗರು ಇವತ್ತಿನ ದಿವಸ ಕೆಲಸವಿಲ್ಲದೆ ಇದ್ದಾರೆ ಅನ್ನತಕ್ಕಂಥ ಮಾತು ಮಾತ್ರ ಸತ್ಯವಾದ ಮಾತು. ಮೈಸೂರು ಸಂಸ್ಥಾನದಲ್ಲಿ ಕೂಡ ನಿರುದ್ಯೋಗ ಅಕ್ಕಸಾಲಿಗರೆಲ್ಲರೂ ಕೂಡ ಸಂಘವನ್ನು ಮಾಡಿಕೊಂಡಿದ್ದಾರೆ. ಈ ಸಂಘದವರು ಈ ಸರ್ಕಾರಕ್ಕೂ, ಕೇಂದ್ರ ಸರ್ಕಾರಕ್ಕೂ, ಎಲ್ಲಾ ಸಂಬಂಧಪಟ್ಟವರಿಗೂ, ಮನವಿಪತ್ರಗಳನ್ನು ಕೊಟ್ಟಿದ್ದಾರೆ. ಈಗ ಸರ್ಕಾರದ ಜವಾಬ್ದಾರಿ ಏನು ಆಗಬೇಕಾಗಿತ್ತು ಅಂದರೆ, ಸಂಘದವರು ಮನವಿಪತ್ರ ಕೊಟ್ಟ ಮೇಲೆ, ಎಷ್ಟು ಜನ

(ಶ್ರೀ ಎಸ್. ಎಂ. ಕೃಷ್ಣ)

ಅಕ್ಕಸಾಲಿಗರಿಗೆ ನೀವು ಫ್ಯಾಕ್ಟರಿಗಳಲ್ಲಿ ಕೆಲಸದ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ, ಅನ್ನುವದಕ್ಕೆ ಆಧಾರಭೂತವಾದ ಅಂಕಿಅಂಶಗಳನ್ನು ಈ ಸಭೆಗೆ ಒದಗಿಸತಕ್ಕಂಥಾದ್ದು ಬಹು ಅತ್ಯವಶ್ಯಕವಾದ ವಿಚಾರ ಅನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಉಪಸಚಿವರಾದ ಶ್ರೀ ರಾಮಚಂದ್ರ ರವರು ಈ ವಿಚಾರದಲ್ಲಿ ಸಾಕಷ್ಟು ಆಸಕ್ತಿ ವಹಿಸಿದ್ದಾರೆ ಎಂದು ನಾನೂ ಪೇಪರುಗಳಲ್ಲಿ ಓದಿದೆ. ಈ ಆಸಕ್ತಿಯನ್ನು ವಹಿಸಿದ್ದರಿಂದ ಎಷ್ಟು ಜನಕ್ಕೆ ಎಷ್ಟರಮಟ್ಟಿನ ಅನುಕೂಲವಾಗಿದೆ, ನಿರುದ್ಯೋಗ ಪರಿಹಾರವಾಗಿದೆ ಎಂಬುದರ ಬಗ್ಗೆ ಸಂಬಂಧಪಟ್ಟ ಅಂ ಅಂಶಗಳನ್ನು ಕೊಡಬೇಕಾಗಿತ್ತು. ಈಗ ಮೈಸೂರು ಸಂಸ್ಥಾನದಲ್ಲಿ ಎಷ್ಟು ಜನ ಕೆಲಸಗಾರರಿದ್ದಾರೆ, ಎಷ್ಟು ಜನಕ್ಕೆ ಉದ್ಯೋಗಾವಕಾಶ ವನ್ನು ಕಲ್ಪನೆ ಮಾಡಿಕೊಟ್ಟಿದ್ದೀರಿ ಅನ್ನುವ ವಿಚಾರಗಳ ಬಗ್ಗೆ, ಉತ್ತರವನ್ನು ಕೊಡತಕ್ಕಂಥ ಮಾನ್ಯ ಮಂತ್ರಿಗಳು ಕರಾರುವಾಕ್ಕಾಗಿ ಅಂಕಿಅಂಶಗಳನ್ನು ಸಭೆಯಮುಂದಿಡಬೇಕೆಂದು ಒತ್ತಾಯ ಮಾಡು ತ್ತೇನೆ.

ಇಷ್ಟು ಹೇಳಿ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

1-30 P.M.

† ಶ್ರೀ ಜಿ. ಎಲ್. ಕಬಾಡಿ (ಬರಾಡೋಲ್).—ಸಭಾಪತಿಗಳೇ, ಇವತ್ತು ಈ ಸೋಷಿಯಲ್ ವೆಲ್‌ಫೇರ್ ಇಲಾಖೆಯ ಮೇಲೆ ಹೇಳಬೇಕೆಂದರೆ, ನಮ್ಮ ದೇಶದಲ್ಲಿ 2½ ಕೋಟಿ ಜನಸಂಖ್ಯೆ ಇದೆ. ಅದಕ್ಕನುಗುಣವಾಗಿ ಲಿಂಗಾಯಿತರು, ಒಕ್ಕಲಿಗರು, ಹರಿಜನರು ಎಷ್ಟು ಎಂಬುದನ್ನು ಆಧಾರ ತೆಗೆದುಕೊಂಡರೆ ಲಿಂಗಾಯಿತರು ಶೇ. 28. ಹರಿಜನರು ಶೇ. 13 ರಿಂದ ಶೇ. 14ರ ವರೆಗೆ ಬರು ತ್ತಾರೆ. ಆದರೂ ಉಳಿದ ಮತದವರು ಅದರ ಕೆಳಗೆ ಬರುತ್ತಾರೆ. ಇಂಥಾದ್ದರಲ್ಲಿ equal representation ಬೇಕು ಎಂದು ಹೇಳುತ್ತಾರೆ. ಆದರೆ ನಮ್ಮ ಹರಿಜನರಿಗೆ ಯಾವುದೇ ಸರ್ವಿಸ್ಸಿನಲ್ಲಾ ಗಲೀ ಅಥವಾ ಕಮಿಟಿಗಳಲ್ಲಾಗಲೀ ಅಥವಾ ಸ್ಥಾನಗಳಲ್ಲಾಗಲೀ ಮತ್ತು ಇತರೇ ರಾಜಕೀಯ ಸ್ಥಾನಗಳಲ್ಲಿ ಸರಿಸಮಾನವಾದ ಪಾಲು ದೊರಕುತ್ತಾ ಇಲ್ಲವೆಂಬುದು ಒಂದು ವಿಷಾದಕರವಾದ ಸಂಗತಿ. ಸೀಟುಗಳನ್ನು ಕೊಡುವುದರಲ್ಲಿ ಮತ್ತು ಇತರೇ ಯಾವ ವಿಧವಾದ ಸ್ಥಾನಮಾನಗಳನ್ನು ಕೊಡುವ ಎಲ್ಲದರಲ್ಲೂ ಸರಿಸಮಾನ ಪಾಲು ಸಿಗುತ್ತಲೇ ಇಲ್ಲ. ಒಂದು ಉದಾಹರಣೆಯನ್ನು ಸಂದರ್ಭದಲ್ಲಿ ಹೇಳಬೇಕು. ಸರ್ವಿಸ್ ವಿಷಯವನ್ನು ತೆಗೆದುಕೊಳ್ಳೋಣ, ಕ್ಲಾಸ್ 1, 2, 3 ಸರ್ಕಾರೀ ನೌಕರಿಗಳಲ್ಲಿ ಬಿ ರಪ್ಪ ಕಮಿಟಿ ಅಂಕಿಅಂಶಗಳ ಪ್ರಕಾರ ಎಷ್ಟು ಪರ್ಸಂಟೇಜ್ ಜನಸಂಖ್ಯೆ ಯಲ್ಲಿ ಹರಿಜನರಿಗೆ ಸೀಟುಗಳು ಸಿಕ್ಕಿವೆ. ಷೆಡ್ಯೂಲ್ ಕ್ಲಾಸ್, ಷೆಡ್ಯೂಲ್ ಟ್ರೈಬ್ಸ್‌ಗಳಲ್ಲಿ 1ನೇ ಕ್ಲಾಸ್‌ನಲ್ಲಿ ಕೇವಲ 1.89% ಮಾತ್ರ ದೊರಕಿದೆ ಎಂದು ಹೇಳಬಹುದು. ಕ್ಲಾಸ್ 2ರಲ್ಲಿ ಶೇ. 3.36 ಸಿಕ್ಕಿದೆ, ಕ್ಲಾಸ್ 3ರಲ್ಲಿ ಶೇ. 6.38 ಸಿಕ್ಕಿದೆ. ಷೆಡ್ಯೂಲ್ ಟ್ರೈಬ್ಸ್ ತೀರಾ ಕಡಿಮೆ. ಹೀಗೆ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಶೇಡ. 6.38 ಸಿಕ್ಕಿದರೆ ಇತರರಿಗೆ ಶೇ. 93.19 ಸಿಕ್ಕಿದೆ. ಎಷ್ಟು ಅನ್ಯಾಯ ನಮ್ಮ ಹರಿಜನ ರಿಗೆ ಆಗಿದೆ ಎಂಬುದು ಈ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಕ್ಲಾಸ್ 4 ಜನಾಂಗ ಇವರಲ್ಲಿ ಮುಂದೆ ಬರುತ್ತಾ ಇಲ್ಲ. ಹಿಂದುಳಿದ ಜನಾಂಗ ಹರಿಜನರೇ ಇದರಲ್ಲಿ ಹೆಚ್ಚಾಗಿ ಬರುವುದು. ಅದ ರಲ್ಲಿಯೂ ಸಹ ಕಡಿಮೆ ಪಾಲು ಇವರಿಗೆ ಸಿಕ್ಕಿದೆ. ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ 4,612ರಲ್ಲಿ ಶೇ. 11.96 ನಾಲ್ಕನೆಯ ಕ್ಲಾಸ್ ವರ್ಗದ ನೌಕರಿಗಳು ಸಿಕ್ಕಿವೆ, ಇತರರಿಗೆ 33,525 ಜನಸಂಖ್ಯೆಯಲ್ಲಿ ಶೇ. 86.94 ಸ್ಥಾನಗಳು ಸಿಕ್ಕಿವೆ. ಎಷ್ಟು ಡಿಸ್ಕ್ರಿಮಿನೇಟರಿ ಇದರಿಂದಾಗಿದೆ ಎಂದು ಹೇಳಬೇಕಾಗಿದೆ. ಈ ಹೌಸಿಂಗ್ ಬಾಬತ್ತಿನಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಸರ್ಕಾರದ ಉದ್ದೇ ಶದ ಪ್ರಕಾರ 3300 ಮನೆಗಳನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 4500 ಮನೆ ಗಳನ್ನು ಕಟ್ಟಬೇಕೆಂಬುದಾಗಿ ಒಂದು ಯೋಜನೆಯನ್ನು ಕೈಗೊಂಡರು. ಈ ಪ್ರಕಾರ ಕಟ್ಟಿದರೂ ಶೇ. 4½ಯಷ್ಟು ಸರ್ಕಾರ ಸಬ್ಸಿಡಿ ಕೊಡಬೇಕು. ಉಳಿದುದನ್ನು ಹರಿಜನರೇ ಹಾಕಿಕೊಳ್ಳಬೇಕು ಎಂಬುದಾಗಿ ಹೇಳಿದರು. ಮಂತ್ರಿಗಳಾಗಿ ಬಂದಮೇಲೆ ಬೇಕಾದಷ್ಟು ಸೌಕರ್ಯಗಳನ್ನು ಹರಿಜನರಿಗೆ ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು. ಅತ್ಯುತ್ತಮವಾದ ಮನೆಗಳನ್ನು, ಅವರಿಗಾಗಿ ಕಟ್ಟಿಸಿಕೊಡಬೇಕೆಂಬುದಾಗಿ ಸ್ಕೀಮ್ ಹಾಕಿಕೊಂಡದ್ದರೂ ಯಾವುದೂ ಕಾರ್ಯಗತವಾಗಿಲ್ಲ ಅದಕ್ಕೆ ದುಡ್ಡು ಇಲ್ಲ, ಇದಕ್ಕೆ ದುಡ್ಡು ಇಲ್ಲವೆಂದು ಹೇಳಿಕೊಂಡು ಎಲ್ಲಾ ಯೋಜನೆಗಳು ಹಾಗಾಗಿಯೇ ಇವೆ. ಕಾರ್ಯಗತವೇನೂ ಆಗಿಲ್ಲ. ಹರಿಜನರಿಗೆ ಇದರಿಂದಾದ ಅನ್ಯಾಯ ಹೇಳತೀರದು. ಇವತ್ತಿನವರೆಗೂ ಅವರಿಗೆ ಯಾವ ಹಣವೂ ದೊರೆಯದೆ ಹರಿಜನರು ಮನೆಗಳಿಲ್ಲದೆ ನರಳುವ ಪರಿಸ್ಥಿತಿ ಬಂದಿದೆ. ಇದನ್ನು ಸರ್ಕಾರದವರು ಇದ ವರೆಗೆ ಯಾವ ರೀತಿಯಲ್ಲೂ ವಿಚಾರ ಮಾಡದೇ ಇರುವುದು ಬಹಳ

ಖೇದಕರವಾದ ಸಂಗತಿಯಾಗಿದೆ. ಎಷ್ಟೊಂದು ಸಲ ನಾನು ಆರ್ಥಿಕ ಸಚಿವರನ್ನು ಕೇಳಿಕೊಂಡಾಗ್ಯೂ ಈ ಒಂದು ಹೌಸಿಂಗ್ ಪ್ರಾಬ್ಲಂಗೆ ಸಾಕಷ್ಟು ಪ್ರಾವಿಷನ್ ಮಾಡಲಿಕ್ಕೆ ಇವರ ಕೈಲಿ ಆಗಲಿಲ್ಲವಲ್ಲಾ ಎಂದು ನಾನು ವಿಷಾದಕರದಿಂದ ಹೇಳುತ್ತಿದ್ದೇನೆ. ಅದರ ಬಗ್ಗೆ ಒಂದು ಬೇರೆ ಸೂಚನೆಯನ್ನೂ ಸಹ ಕೊಟ್ಟಿದೆ. ಬೊಂಬಾಯಿ ಕರ್ಣಾಟಕದೊಳಗೆ ಬೇಸಾಯಗಾರರಿಗೋಸ್ಕರ re-construction schemes ನಲ್ಲಿ 219 ಲಕ್ಷ ರೂಪಾಯಿಗಳನ್ನು loan and subsidy ರೂಪದಲ್ಲಿ ಕೇಂದ್ರ ಸರ್ಕಾರದವರು ಕೊಟ್ಟಹಾಗೆ 1500 ರಿಂದ 3 ಸಾವಿರದವರಿಗೆ ಅವರಿಗೆ ಸಾಲ ಕೊಡಬೇಕೆಂದು ಅವರು ಮಾಡಿದ್ದಾರೆ. Free of interest ರೂಪದಲ್ಲಿ ಕೊಟ್ಟು 20 ವರ್ಷಗಳಲ್ಲಿ ಅದನ್ನು ಸುಲಭ ಕಂತು ರೂಪದಲ್ಲಿ ವಸೂಲು ಮಾಡಬಹುದು ಎಂದು ಸೂಚನೆ ಕೊಟ್ಟಿದೆ.

ಇನ್ನೊಂದು ವಿಷಯ. ಈ ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂ ಬಗ್ಗೆ ಈ ಹೌಸಿಂಗ್ ಸ್ಕೀಂ ಸಲುವಾಗಿ ಇಲ್ಲಿ ಒಂದು ಸರ್ಕಾರೀ ಆಜ್ಞೆಯನ್ನು ಮಾಡಿದರು. ಅದೇನೆಂದರೆ No. P & D 102 SCH. dated 2nd March 1959ರಲ್ಲಿ ಈ ರೀತಿ ಹೇಳಿದ್ದಾರೆ. "A good number of Scheduled Castes live on Government lands and on lands belonging to private individuals with the intention of conferring proprietory rights over such lands. If they have been occupied by these people before 1st January 1957, Government have ordered that steps should be taken to assign the lands for house site purposes provided they are suitable from the health point of view and also if the Government do not want them for any other purpose. Government have also ordered that in the case of private lands they should be acquired and assigned to these people." ಹೀಗಿದ್ದಾಗ ಸರ್ಕಾರದ ಎದುರಿಗ ಇರತಕ್ಕ ಎಷ್ಟೋ ಕೇಸುಗಳು ಇನ್ನೂ ತೀರ್ಮಾನವಾಗಿಲ್ಲ. ಗದಗ್, ಬಿಜಾಪುರ, ಬಾಗಿಲಕೋಟೆ ಪ್ರದೇಶಗಳಿಂದ ಬಂದಿ ತಕ್ಕ ಅರ್ಜಿಗಳು ಕ್ರಮವಾಗಿವೆ. ಅಲ್ಲಿನವರಿಗೆ ಜಾಗ ಕೊಡಬೇಕು ಎಂದು ವಿನಂತಿಮಾಡಿದರೂ ಮಾನ್ಯ ಸಮಾಜಕಲ್ಯಾಣ ಉಪಮಂತ್ರಿಗಳು ಆ ಜಾಗಗಳನ್ನು ಪರೀಕ್ಷೆಮಾಡಿ ಕೊಡುತ್ತೇವೆಂದು ಹೇಳಿದರು. ಇವತ್ತೂ ಆ ಬಗ್ಗೆ ಒಂದು ಶಿಫಾರಸ್ಸು ಸಹ ಆಗಿಲ್ಲ. ಯೋಗ್ಯವಾದ ಜಾಗವೂ ಇಲ್ಲವೆಂದು ಹೇಳುತ್ತಾರೆ. ಇಂತಹ ಕಾನೂನು ಮಾಡುವುದರಿಂದ ಮಾತ್ರವೇ ಅವರು ಯೋಗ್ಯ ಸ್ಥಿತಿಯಲ್ಲಿದ್ದಾರೆಂದು ಹೇಳುತ್ತಾರೆ. ಅದು ತಪ್ಪು ಮನೋಭಾವನೆ. ಇಲ್ಲಿಯವರೆಗೂ ಈ ಸರ್ಕಾರ ಅದರ ಬಗ್ಗೆ ಸಾಕಷ್ಟು ನಿಗಾ ಕೊಟ್ಟಿಲ್ಲವೆಂದು ನಾನು ಇಲ್ಲಿ ಹೇಳಬೇಕಾಗಿದೆ. ಆ ಜನರು ಎಲ್ಲಿ ಹೋಗಬೇಕು, 20-30 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಳ್ಳಬೇಕೆಂದು ಅಲ್ಲಲ್ಲಿ ಅಂಗಡಿಗಳನ್ನು ಹಾಕಿಕೊಂಡು ವ್ಯಾಪಾರ ಮಾಡತಕ್ಕ ಜನ ಎಲ್ಲಿಗೆ ಹೋಗಬೇಕು ! ಹೀಗಾಗಬಾರದು. ಈ ಒಂದು ಸಮಾಜದ ಜನ ಅಭಿವೃದ್ಧಿಯಾಗಬೇಕೆನ್ನುವ ದೃಷ್ಟಿ ಸರ್ಕಾರಕ್ಕೆ ಇರಬೇಕು. ಒಂದು ವೇಳೆ ಏನಾದರೂ ಈ ಸರ್ಕಾರದ ಬಗ್ಗೆ ದುರುದ್ದೇಶ ಇಟ್ಟುಕೊಂಡಿರುವ ಜನಗಳಿಗೆ ಯಾವ ತರಹ ಪ್ರೊಟೆಕ್ಷನ್ ಈ ಸರಕಾರದವರು ಕೊಡದಿದ್ದರೆ ಅವರ ಗತಿಯೇನಾಗಬೇಕು ! ಇಷ್ಟೇ ಅಲ್ಲ ಮುಂದೆ ಆ ಜನಾಂಗದ ಪ್ರಬಲ ಎಷ್ಟೇ ಆದರೂ ಕೆಲವೊಂದು ಪ್ರಭಾವಕ್ಕೊಳಗಾಗುವ ಪರಿಸ್ಥಿತಿ ಬಂದಿದೆ. ಅಂದರೆ ಅಂತಹ ಪರಿಸ್ಥಿತಿ ತರಬಾರದು, ಹರಿಜನರಿಗೆ ಯೋಗ್ಯವಾಗಿ ನ್ಯಾಯ ದೊರಕಿಸಬೇಕು ಎಂಬುದಾಗಿ ನಾನು ಸರ್ಕಾರದವರನ್ನು ಕೇಳುತ್ತಿದ್ದೇನೆ. ಅಲ್ಲದೆ ಇವತ್ತಿನ ದಿವಸ ನಮ್ಮ ಹರಿಜನರ ಕಲ್ಯಾಣಕ್ಕೋಸ್ಕರ ಬೀರಪ್ಪ ಕಮಿಟಿಯೊಂದನ್ನು ನೇಮಕ ಮಾಡಿದ್ದಿರಿ. 1962ರಲ್ಲಿ ಬೀರಪ್ಪ ಕಮಿಟಿಯವರು ಒಂದು ವರದಿಯನ್ನು ಕೊಟ್ಟರು. ಅದರೊಳಗೆ 22 ಶಿಫಾರಸ್ಸುಗಳನ್ನು ಮಾಡಿದ್ದಾರೆ. ಅದರೊಳಗೆ ಮೊನ್ನೆ ಎಷ್ಟೋ ವಿಧವಾದ ಕಮಿಟಿಗಳನ್ನು ರಚನೆ ಮಾಡಿದ್ದಾರೆ. ಆದರೆ ಈ 22 ಶಿಫಾರಸ್ಸುಗಳಲ್ಲಿ ಎಷ್ಟು ಇಂಪ್ಲಿಮೆಂಟ್ ಮಾಡಿದ್ದಾರೆಂದು ನೋಡಿದರೆ ಒಂದೂ ಸಹ ಇಂಪ್ಲಿಮೆಂಟ್ ಮಾಡಲಿಲ್ಲವೆಂದು ಹೇಳಿದರು. ಹರಿಜನರ ಕಲ್ಯಾಣಕ್ಕಾಗಿ ಏನೇನು ಮಾಡಬೇಕೆಂದು ಸರ್ಕಾರ ಉದ್ದೇಶ ಇಟ್ಟುಕೊಂಡಿದ್ದಾರೋ ಆ ಉದ್ದೇಶ ಸಫಲವಾಗದಿದ್ದರೆ, ಹರಿಜನರ ಮೇಲೆ ತೋರಿಸುವಂತಹ ಒಂದು ನೀತಿ ಅಕ್ರಮವಾಗುತ್ತದೆ ಎಂಬುದಾಗಿ ನಾನು ಹೇಳಬೇಕಾಗಿದೆ. ಆದರೆ article 16 (1)ರ ಪ್ರಕಾರ "There shall be equality of opportunity for all citizens in matters relating to employment or appointment to any office under the state" ಎಂದು ಹೇಳುತ್ತಾರೆ. ಇನ್ನು ಮುಂದೆ "In the state and not in the centre" ಎಂದು ಹೇಳುತ್ತಾರೆ. ಬರೀ ಯೂನಿಯನ್ ವರ್ಕ್, ಕೇಂದ್ರ ಸರ್ಕಾರದ ಆದೇಶ ಪ್ರಕಾರ ನಡೆಯುತ್ತೇವೆಂದು ಹೇಳುವುದು ನಿಜವಾಗಿ ಸರಿಯಾದುದಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಕಾನ್ಸ್ಟಿಟ್ಯೂಷನ್ ಪ್ರಕಾರ ಏನೇನು ಸೌಕರ್ಯಗಳನ್ನು ಕೊಡಬೇಕೋ ಆ ರೀತಿಯಲ್ಲಿ ನ್ಯಾಯಬದ್ಧವಾಗಿ ಅವರಿಗೆ ಸ್ಥಾನಮಾನಗಳನ್ನು ಕಲ್ಪಿಸಿ

(ಶ್ರೀ ಜೆ. ಎಲ್. ಕಬಾಡಿ)

ಕೊಡಬೇಕೆಂದು ನಾನು ಕೇಳುತ್ತೇನೆ. ಸುಪ್ರೀಂ ಕೋರ್ಟ್ ಕಾನೂನು ಪ್ರಕಾರ ಅನರಿಗೆ ಒಂದು, ಎರಡು, ಮೂರನೆಯ ಕ್ಲಾಸಿನ ಸ್ಟೇಟಸ್ಸನ್ನು ವಿಶೇಷವಾಗಿ ಕೊಡಬೇಕು. ಇಲ್ಲಿಯವರೆಗೂ ರಾಜ್ಯ ಸರ್ಕಾರ ಯಾವರೀತಿ ತೀರ್ಮಾನವನ್ನು ಕೈಗೊಳ್ಳದೇ ಇರುವುದು ನಿಜವಾಗಿ ವಿಷಾದವಾಗಿದೆ. ಇವತ್ತು ಕೇಂದ್ರ ಸರ್ಕಾರದವರು ಇವರಿಗೆ 3-4 ಕ್ಲಾಸಿನ ಸ್ಟೇಟಸ್ಸು ಕೊಡಲು ಅಡ್ಡಿ ಇಲ್ಲವೆಂದು ಹೇಳಿರುವುದನ್ನು ನಾನು ಪೇಪರ್‌ನಲ್ಲಿ ಕೇಳಿದೆ. ಆದರೆ ಆ ಬಗ್ಗೆ ಏನು ಕ್ರಮ ಇವರು ತೆಗೆದುಕೊಂಡಿದ್ದಾರೆಂಬುದು ಗೊತ್ತಿಲ್ಲ. ಅದನ್ನು ನಾವು ತಿಳಿಯಬೇಕು. ಇದು ಎಷ್ಟಾದರೂ ಸಹಿತ ಇಲಾಖೆಯ ವಿಚಾರ. ಇತರ ಇಲಾಖೆಗಳನ್ನು ನೋಡಿದರೆ ಈ ಇಲಾಖೆಯಲ್ಲಿ ಹರಿಜನರಿಗಾಗಿರುವಷ್ಟು ಅನ್ಯಾಯ ದೇಶದಲ್ಲಿ ಯಾರಿಗೂ ಆಗಿಲ್ಲವೆಂದು ಹೇಳಬಹುದು. ಇತರ ಜನಾಂಗಗಳಿಗೆ ತೋರಿಸುವಷ್ಟು ನ್ಯಾಯ ಇವರಿಗೆ ದೊರಕಿದೆ ಎಂಬ ಕಲ್ಪನೆಯಂತೂ ನನಗಿಲ್ಲವೆಂದು ನಾನು ಹೇಳುತ್ತೇನೆ. ಇದು ಆಗ ತಕ್ಕದ್ದು ಸರಿಯಲ್ಲ.

ಇನ್ನೂ ಎಷ್ಟೋ ವಿಷಯಗಳನ್ನು ಹೇಳಬೇಕೆಂದಿದ್ದರೂ ಕೂಡ ಸಾಕಷ್ಟು ಸಮಯವಿಲ್ಲ. ಹರಿಜನರ ಕಲ್ಯಾಣಕ್ಕೆ ಹೋದ ವರ್ಷಕ್ಕಿಂತ ಈ ವರ್ಷ ಹಣವನ್ನು ಕಡಮೆ ಮಾಡಿದ್ದಾರೆ. ನ್ಯಾಯವಾಗಿ ನಮಗೆ ಸೇಕಡಾ ಎಷ್ಟು ಭಾಗ ಸಿಕ್ಕಬೇಕೋ ಅಷ್ಟು ಭಾಗ ಹಣ ಸಿಕ್ಕಿಲ್ಲ. ರಾಜ್ಯದ ಸರ್ವಿಸ್‌ಗಳಲ್ಲಿ ಹೇಗೆ ಸೇಕಡಾವಾರು ನಮಗಿಟ್ಟಿದ್ದಾರೋ ಹಾಗೆಯೇ ಎಲ್ಲ ಖಾತೆಗಳಲ್ಲಿಯೂ ಸೇಕಡ 18 ರಷ್ಟು ಭಾಗ ಹಣವನ್ನು ನಮಗಾಗಿ ಇಡಬೇಕು.

ಕೆಲವು ಕಚೇರಿಗಳಲ್ಲಿ discrimination ನಡೆಯುತ್ತಿದೆ. ಈ ಹೊತ್ತು ಮುಂದುವರಿದ ಜನಾಂಗ, ಉಚ್ಚ ಮಟ್ಟದಲ್ಲಿರುವ ಜನಾಂಗ ಎಂದು ಯಾರನ್ನು ಹೇಳುತ್ತೇವೆಯೋ ಅವರಿಂದ ನಮಗಾಗುತ್ತಿರುವ ಅನ್ಯಾಯವನ್ನು ಹೇಳಬೇಕೆಂದಿಚ್ಛಿಸುತ್ತೇನೆ. ಬೆಂಗಳೂರಿನಲ್ಲಿ ನಮ್ಮವರು Class I posts ನಲ್ಲಿರುವವರು ತಮಗೆ ಮನೆಬೇಕೆಂದು ಕೇಳಿಕೊಂಡರೆ, ಇವರಿಗೆ ಕೊಡದೆ ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳು ಆಮೇಲೆ ಬಂದ ಬೇರೆ ಅರ್ಜಿದಾರರಿಗೆ ಪ್ರಾಧಾನ್ಯ ಕೊಡುತ್ತಾರೆ. ಕೇಳಿದರೆ; ಇವರಿಗೇಕೆ ಕೊಡಬೇಕು, ಎಂದು ಸಿಕ್ಕಾಪಟ್ಟೆ ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ. ಇಂಥ ಅಧಿಕಾರಿಗಳ ಮೇಲೆ ತಕ್ಕ ಕ್ರಮ ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಹರಿಜನ ಹಾಸ್ಟೆಲುಗಳ ವರ್ಗಾವಣೆ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ವಿದ್ಯಾಭ್ಯಾಸದ ಇಲಾಖೆಯ ಆಡಳಿತದಲ್ಲಿರುವ ಹರಿಜನ ಹಾಸ್ಟೆಲುಗಳನ್ನು ಸಮಾಜ ಕಲ್ಯಾಣ ಇಲಾಖೆಯ ಆಡಳಿತಕ್ಕೆ ವರ್ಗಮಾಡಬೇಕೆಂಬ ಸಲಹೆ ಬಂದಿದೆಯೆಂದು ಕೇಳಿದ್ದೇನೆ. ಶಿಕ್ಷಣವನ್ನು ತೆಗೆದುಕೊಂಡರೆ, ಹರಿಜನರಲ್ಲಿ ಸೇಕಡಾವಾರು ಬಹಳ ಕಡಮೆ ಇದೆ. ಇದನ್ನು ಹೆಚ್ಚುಮಾಡಬೇಕಾದರೆ ವಿದ್ಯಾಭ್ಯಾಸದ ಇಲಾಖೆಯಲ್ಲಿರುವ ಹಾಸ್ಟೆಲುಗಳನ್ನು ಅಲ್ಲಿಯೇ ಬಿಟ್ಟರೆ ಒಳ್ಳೆಯದು. ಎಲ್ಲ ದೃಷ್ಟಿಯಿಂದಲೂ ನೋಡಿ ಸರಿಯಾಗಿ ನಡೆಸಿಕೊಂಡು ಹೋಗುತ್ತಾರೆ. ಸೋಷಿಯಲ್ ವೆಲ್ ಫೇರ್ ಇಲಾಖೆಗೆ ಕೊಟ್ಟರೆ ಅಲ್ಲಿ ಇನ್ಸ್‌ಪೆಕ್ಟರಿದ್ದಾರೆ, ಅವರು ಹೊಸದಾಗಿ ನೇಮಕವಾದವರು, ಹೇಗೆ ನಡೆಸಬೇಕೆಂದು ಗೊತ್ತಿಲ್ಲ. ಆದುದರಿಂದ ಅವ್ಯವಸ್ಥೆಯಾಗುತ್ತದೆ. ಈ ದೃಷ್ಟಿಯಿಂದ ಸೋಷಿಯಲ್ ವೆಲ್ ಫೇರ್ ಇಲಾಖೆಗೆ ಕೊಡುವ ಬದಲು ಎಲ್ಲವೂ ವಿದ್ಯಾಭ್ಯಾಸ ಇಲಾಖೆಯಲ್ಲಿರುವುದೇ ಒಳ್ಳೆಯದು. ಹರಿಜನರ ಗೃಹ ವಸತಿ ಮುಂತಾದ ಎಲ್ಲ ವಿಷಯಗಳ ಕಡೆಗೂ ಗಮನಕೊಟ್ಟು ಸೌಕರ್ಯಮಾಡಬೇಕು. ಪ್ರತ್ಯೇಕವಾಗಿ ಜಿಲ್ಲೆ ಅಥವಾ ತಾಲ್ಲೂಕಿನಲ್ಲಿ ಈ ಜನರಲ್ ಹಾಸ್ಟೆಲುಗಳನ್ನಿಡದೆ, ಹರಿಜನರ ಹಾಸ್ಟೆಲುಗಳಿಗೆ ಸವರ್ಣೀಯರು ಸೇರುವ ಹಾಗೆ ವ್ಯವಸ್ಥೆ ಮಾಡಬೇಕು. ಏಕೆಂದರೆ, ಜನರಲ್ ಹಾಸ್ಟೆಲ್‌ಗೆ ಹರಿಜನರನ್ನು ಸೇರಿಸಿದರೆ ಅವರಿಗೆ ಸಾಕಷ್ಟು ಸೌಕರ್ಯ ಸಿಕ್ಕುವುದಿಲ್ಲವೆಂಬ ಭಾವನೆ ಇದೆ.

Mr. SPEAKER.—If there is anything more the Hon'ble Members may kindly pass on a chit to the Hon'ble Minister.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆದರೆ ಅದು proceding ನಲ್ಲಿ ಬರುವುದಿಲ್ಲವಲ್ಲ.

Mr. SPEAKER.—It will go into the proceedings if direct.

ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ, ಅಧ್ಯಕ್ಷರೇ, ಈ ದಿವಸ ನಮ್ಮ ಮುಂದಿರತಕ್ಕ ಬೇಡಿಕೆಯ ಮೇಲೆ ಅನೇಕ ಜನ ಸ್ನೇಹಿತರು ಮಾತನಾಡಿದ್ದಾರೆ. ನನಗಿಂತ ಮೊದಲು ಮಾತನಾಡಿದ ಸೋದರಿ ಚಂಪಾಬಾಯಿ ಬೋಗಲೆಯವರೂ, ಕಬಾಡಿಯವರೂ ಹರಿಜನರ ಬಗ್ಗೆ ಮಾತನಾಡಿದ್ದಾರೆ, ಬಹಳ ಸಂತೋಷ. ಹರಿಜನರಿಗೆ ಪ್ರಾಶಸ್ತ್ಯ ಕೊಡಬೇಕು, ಅವರು ಉತ್ತಮ ದರ್ಜೆಗೆ ಬರಬೇಕು, ಸಹಪಾಠಿಗಳಂತೆ ಜೀವನ ಮಾಡಬೇಕು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ, ಅವರು ಕೇಳಿದುದೂ ಸಾಧುವಾಗಿದೆ. ಅವರಿಗೆ ಯಾವ ರೀತಿಯಲ್ಲಿ ಪ್ರೋತ್ಸಾಹ ಕೊಟ್ಟರೂ ಅದು ತಪ್ಪೆಂದು ಯಾರೂ ಹೇಳುವುದಿಲ್ಲವೆಂದು ನಂಬಿದ್ದೇನೆ. ಆದರೆ ಅವರ ಕೇಳಿಕೆ ನ್ಯಾಯಬದ್ಧವಾಗಿರಬೇಕು, ಕಾನೂನಿಗೂ

ಳಿಪಟ್ಟಿರಬೇಕು, ಎಲ್ಲರೂ ಒಪ್ಪತಕ್ಕದ್ದಾಗಿರಬೇಕು. ಆಗ ಯಾರೂ ಇವರನ್ನು ದೂರವಿಡಬೇಕೆಂದು ತಿಳಿದುಕೊಂಡಿದ್ದಾರೋ ಅವರಿಗೆ ಕನಿಕರ ಬಂದು ಇವರನ್ನು ಮೇಲಕ್ಕೆತ್ತಬೇಕೆಂಬ ಭಾವನೆಯುಂಟಾಗುತ್ತದೆ. ಸ್ವಾಮಿ, ಕೆಲವು ದಿವಸಗಳ ಹಿಂದೆ ಕೆಲವರು ದೊಡ್ಡವರು—ಹರಿಜನರಾಗಿರತಕ್ಕವರು ಅವರ ಹಕ್ಕು ಭಾಧ್ಯತೆಗಳನ್ನು ಕೇಳುವುದರಲ್ಲಿ ಯಾವ ಮಟ್ಟಕ್ಕೆ ಹೋಗಿದ್ದರು ಎಂದರೆ, ಅವರು ಮಾಡುತ್ತಿದ್ದ ಭಾಷಣಗಳಲ್ಲಿ, 'ನೀವು ಸವರ್ಣ ಹಿಂದುಗಳ ಮೇಲೆ ದಬ್ಬಾಳಿಕೆ ಮಾಡಿ, ಅವರ ಹೆಣ್ಣು ಮಕ್ಕಳು ಒಪ್ಪುತ್ತಿದ್ದರೆ ದಬ್ಬಾಳಿಕೆಯಿಂದ ಅವರನ್ನು ಮದುವೆ ಮಾಡಿಕೊಳ್ಳಿ, ವೈಯುಕ್ತಿಕ ಮನೆಗಳಿಗೆ ಪ್ರವೇಶ ಮಾಡಿ, ದೇವಾಲಯಗಳಿಗೆ ಹೋಗಿ ಕೂಡಿ' ಇತ್ಯಾದಿಯಾಗಿ ಹೇಳುತ್ತಿದ್ದರು. ಹರಿಜನರಲ್ಲಿ ಪ್ರಮುಖರಾಗಿದ್ದವರು ಹೀಗೆಲ್ಲ ಹೇಳುತ್ತಿದ್ದರು. 'ಸರ್ಕಾರಿ ಜಮೀನಿದ್ದರೆ ನೀವು ಹೋಗಿ ಅದನ್ನು ಉತ್ತುಕೊಳ್ಳಿ, ಅದು ಅಕ್ರಮವಾಗಿದೆಯೆಂದು ಯಾರಾದರೂ ಬಂದರೆ ಅವರನ್ನೆದುರಿಸಿ' ಎಂದು ಹೇಳುತ್ತಿದ್ದರು. ಇಂಥ ಪೀಠಿಕೆ ಹಾಕಿಕೊಡಬಾರದು ಜನರಿಗೆ, ತಮ್ಮವರು ಮಂತ್ರಿಗಳಾಗಿದ್ದಾರೆಂದು ಹರಿಜನರು ಏನು ಮಾಡಿದರೂ ಚಿಂತೆಯಿಲ್ಲ ಎಂಬ ಭಾವನೆ ಜನರಲ್ಲಿ ಬರುವಂತೆ ಮಾಡಬಾರದು. ಈಗಿನ ಹರಿಜನ ಮಂತ್ರಿಗಳು ಗೌರವಯುತವಾಗಿ ವರ್ತಿಸುತ್ತಿದ್ದಾರೆ, ದೊಡ್ಡಸ್ತಿಕೆಯಿಂದ ವರ್ತಿಸುತ್ತಿದ್ದಾರೆನ್ನುವುದು ಬಹಳ ಸಂತೋಷದ ವಿಷಯ. ಹರಿಜನರಿಗೆ ಏನು ನ್ಯಾಯಬದ್ಧವಾಗಿ ದೊರಕಬೇಕೋ ಅದಕ್ಕಿಂತ ಇನ್ನೂ ಹೆಚ್ಚು ತೆಗೆದುಕೊಳ್ಳಲಿ, ಆದರೆ ಅವರ ಕೇಳಿಕೆ ನ್ಯಾಯಬದ್ಧವಾಗಿರಬೇಕು, ನ್ಯಾಯ ಸಮ್ಮತವಾಗಿರಬೇಕು. ಇನ್ನೊಬ್ಬರ ಮನಸ್ಸನ್ನು ಎಳೆಯುವಂತಿರಬೇಕು. ಇವರು ಕೇಳುವುದು ನ್ಯಾಯಬದ್ಧವಾಗಿದೆ, ಇವರ ಕೇಳಿಕೆ ಪರಿಶೀಲನಾರ್ಹವಾಗಿದೆ. ಇದನ್ನು ಪರಿಶೀಲನೆ ಮಾಡಬೇಕು ಎನ್ನುವ ಭಾವನೆ ಜನರಿಗೂ ಸರ್ಕಾರಕ್ಕೂ ಬರಬೇಕು. ಈ ರೀತಿ ವರ್ತಿಸುವುದು ಸರಿಯಾದ ಕ್ರಮವೇ ಹೊರತು ಇದನ್ನು ಬಿಟ್ಟು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಏನು ಸಹಾಯ ಕೊಡುತ್ತಾರೋ ಅದನ್ನು ದುರುಪಯೋಗ ಮಾಡಿಕೊಳ್ಳಬಾರದು. ತಮ್ಮ ಹಕ್ಕು ಬಾಧ್ಯತೆಗಳನ್ನು ಒಳ್ಳೆಯತನದಿಂದ ಪಡೆಯಬೇಕು. ಕೆಲವು ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಅನುಕೂಲ ಮಾಡಿಸಿಕೊಟ್ಟಿರುವುದು ನ್ಯಾಯ. ಇನ್ನೂ ಕೆಲವು ಜನರಿಗೆ ಸಿಕ್ಕಿಲ್ಲ. ಯಾವಾಗ ಕೆಲವರಿಗೆ ಸಿಕ್ಕಿದೆಯೋ ಆ ಜನಾಂಗದ ಇತರರಿಗೂ ಸಿಕ್ಕುವುದು ನ್ಯಾಯಬದ್ಧವಾಗಿದೆ. ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಿ ಇಷ್ಟು ವರ್ಷಗಳಲ್ಲಿ ಹರಿಜನರಿಗೆ ಗೃಹವಸತಿ, ಜಮೀನು ಒಬ್ಬರಿಗೇನು ಸಿಕ್ಕಿದೆಯೋ ಇನ್ನೊಬ್ಬರಿಗೂ ಅದೇ ರೀತಿ ಸಿಕ್ಕುವಂತೆ, ಸರ್ಕಾರ ಮಾಡಬೇಕು.

ಹಾಸ್ಟೆಲುಗಳ ವಿಚಾರ ಹೇಳುವುದಾದರೆ, ಹರಿಜನರಿಗೂ ಬೇರೆಯವರಿಗೂ ಬೇರೆ ಬೇರೆ ಹಾಸ್ಟೆಲುಗಳಿರಬಾರದೆಂಬುದನ್ನು ಒಪ್ಪುತ್ತೇನೆ. ಜನರಲ್ ಹಾಸ್ಟೆಲುಗಳಿಗೆ ಹರಿಜನರನ್ನು ಸೇರಿಸಿದರೂ ಒಂದೇ, ಹರಿಜನರ ಹಾಸ್ಟೆಲುಗಳಿಗೆ ಬೇರೆಯವರನ್ನು ಸೇರಿಸಿದರೂ ಒಂದೇ ; ಆದರೆ ಹರಿಜನರಿಗೇ ಪ್ರತ್ಯೇಕವಾಗಿರಬೇಕೆಂದು ಹೇಳುವುದು ಸರಿಯಲ್ಲ. ಒಂದು, ಎರಡು, ಮೂರನೆಯ ದರ್ಜೆಯ ಕೆಲಸಗಳಲ್ಲಿ ತಮಗೇ ಸಿಕ್ಕಬೇಕಾದಷ್ಟು ದೊರಕಿಲ್ಲವೆಂದು ಶ್ರೀಮಾನ್ ಕಬಾಡಿಯವರು ಹೇಳಿದರು, ಇದನ್ನೇನೋ ಒಪ್ಪುತ್ತೇನೆ. ಮೊದಲು ಹರಿಜನರು ದೇಶದಲ್ಲಿ ಯಾವ ಮಟ್ಟದಲ್ಲಿದ್ದರು, ಎಷ್ಟು ದಿವಸದಿಂದ ಅವರನ್ನು ಮುಂದೆ ತರುವುದಕ್ಕೆ ಏರ್ಪಾಡು ನಡೆಯುತ್ತಿದೆ, ಎಷ್ಟು ಜನರು ಅವರಲ್ಲಿ ವಿದ್ಯಾವಂತರಾಗಿದ್ದಾರೆ ಎಂಬುದನ್ನೆಲ್ಲಾ ನೋಡಬೇಕು ; ಅದಕ್ಕೆ ತಕ್ಕ ಹಾಗೆ ಯಾವ ಯಾವ ಸ್ಥಾನವನ್ನು ಯಾರು ಯಾರಿಗೆ ಕೊಡಬೇಕೆಂಬುದನ್ನು ಗಮನಿಸಿ ಕೊಡಬೇಕೇ ಹೊರತು, ಹರಿಜನರೆಂದ ಮಾತ್ರಕ್ಕೆ ಡಾಕ್ಟರ ಪರೀಕ್ಷೆ ಮಾಡಿದವನು ಕೆಲಸಕ್ಕೆ ಸೇರಿದ ಕೂಡಲೇ ಅವರನ್ನು ಸರ್ಜನ್ ಮಾಡಿ ಸೇಕಡ 18ರ ಪ್ರಕಾರ ಎಂದು ಹೇಳುವುದು ಸರಿಯಲ್ಲ. ಅವರು ಬುದ್ಧಿವಂತರಾಗಿ ಫಸ್ಟ್‌ಕ್ಲಾಸಿನಲ್ಲಿ ಬಂದರೆ ಅವರಿಗೆ ತಕ್ಕ ಸಹಾಯ ಮಾಡಬೇಕಾದ್ದು ಆವಶ್ಯಕ, ನ್ಯಾಯ. ಅವರ ವಿದ್ಯಾರ್ಹತೆಯನ್ನು ಗಮನಿಸಿ ನ್ಯಾಯಬದ್ಧವಾದ ಅನುಕೂಲತೆಗಳನ್ನು ಅವರಿಗೆ ಕಲ್ಪಿಸಿಕೊಡುವುದು ಒಳ್ಳೆಯದು.

ಎರಡನೆಯದಾಗಿ ಲೇಬರ್ ವಿಷಯವನ್ನು ಮಾನ್ಯ ಸದಸ್ಯರು ಸ್ವಲ್ಪ ಹೇಳಿದ್ದಾರೆ. ಸರ್ಕಾರದವರು ಈಗ ಕೂಲಿಗಾರರಿಗೆ ಅನೇಕ ಸೌಕರ್ಯಗಳನ್ನೊದಗಿಸಿದ್ದಾರೆ. ಅವರಿಗೆ ಇನ್ನೂ ಹೆಚ್ಚು ಸೌಕರ್ಯ ಮಾಡಿಕೊಡಿ ಎಂದು ಕೇಳುವುದು ಸಹಜ. ಸಾಧ್ಯವಾದಷ್ಟು ಕಾನೂನು ಬದ್ಧವಾಗಿ ಮಾಡಿಕೊಡುವುದು, ಹೆಚ್ಚು ಕೂಲಿ ವಗೈರೆ ಕೊಡುವುದು ಆವಶ್ಯಕ. ಕೂಲಿಗಾರರಿಗೆ ಬೋನಸ್ ಕೊಡುತ್ತಾರೆ. ಅದನ್ನು ಯಾವ ಆಧಾರದ ಮೇಲೆ ಕೊಡಬೇಕೆಂಬುದನ್ನು ಯೋಚಿಸಬೇಕು. ಉತ್ಪತ್ತಿ ಮತ್ತು ಕ್ವಾಲಿಟಿ ಇವೆರಡರ ಆಧಾರದ ಮೇಲೆ ಅದನ್ನು ಕೊಡುವುದು ಸೂಕ್ತ ಎಂದು ನನಗನ್ನಿಸುತ್ತದೆ. ಉತ್ಪತ್ತಿ ಹೆಚ್ಚಿಸಬೇಕು. ಹಾಗೆ ಮಾಡಿ ಉತ್ತಮವಾದ ಕ್ವಾಲಿಟಿಯ ಆಧಾರದ ಮೇಲೆ ಬೋನಸ್ ಕೊಡಲು ಅವಕಾಶ ಮಾಡುವುದು ಸೂಕ್ತ. ಕೆಲವರು ಕಷ್ಟಪಟ್ಟು ದುಡಿಯುವುದು, ಕೆಲವರು ಸೋಮಾರಿಗಳಾಗಿರುವುದು—ಹೀಗಿರುವಾಗ ಸೋಮಾರಿಗಳಾಗಿರುವವರಿಗೆ ಕೂಡ ಬೋನಸ್ ವಗೈರೆ ಕೊಟ್ಟು ಪ್ರೋತ್ಸಾಹ ನೀಡುವುದು ಸಕ್ರಮವಾದುದಲ್ಲ. ಲೇಬರ್ ಪೈಕಿ ಕೆಲವರು ಟೆಕ್ನೀಷಿಯನ್ಸ್, ಪ್ರವೀಣರು, ದೊಡ್ಡ ವಿದ್ಯಾವಂತರು ನಮ್ಮಲ್ಲಿದ್ದಾರೆ. ಅಂಥವರನ್ನು ಕಂಡುಹಿಡಿದು ಅವರಿಗೆ

(ಶ್ರೀ ಜಿ. ಮರುಳಪ್ಪ)

ಹೆಚ್ಚು ಪ್ರೋತ್ಸಾಹ ನೀಡಲು ಸುವ್ಯವಸ್ಥೆ ಮಾಡಿ ತನ್ಮೂಲಕ ದೇಶಕ್ಕೆ, ಕೈಗಾರಿಕೆಗೆ ಸಹಾಯವಾಗುವಂತೆ ಮಾಡಬೇಕು. ಹಾಗೆ ಮಾಡಿದರೆ ಬುದ್ಧಿವಂತರು, ಜಾಣರು ಯಾರಿದ್ದಾರೋ ಅವರಿಂದ ದೇಶಕ್ಕೆ ಹೆಚ್ಚು ಅನುಕೂಲವಾಗುತ್ತದೆ.

ಮೂರನೆಯದಾಗಿ ಒಂದು ಸರ್ವೆ ಮಾಡಬೇಕು. ಅವಿದ್ಯಾವಂತರಾದ ಲೇಬರರ್ಸ್ ಎಷ್ಟು ಮಂದಿ ಇದ್ದಾರೆ, ವ್ಯವಸಾಯದ ಲೇಬರರ್ಸ್ ಎಷ್ಟಿದ್ದಾರೆ, ಟೆಕ್ನಿಕಲ್ ಅನ್ ಎಜುಕೇಟೆಡ್ ಲೇಬರರ್ಸ್ ಎಷ್ಟಿದ್ದಾರೆ ಎಂದು ಒಂದು ಸರ್ವೆ ಮಾಡಿ ಪ್ಲಾನ್ ಮಾಡಬೇಕು. ಕೈಗಾರಿಕೆಗಳನ್ನು ಕೈಕೊಳ್ಳುವಾಗ ಅದಕ್ಕೆ ಎಷ್ಟು ಜನ ಬೇಕು, ಈಗ ಎಷ್ಟು ಮಂದಿ ಇದ್ದಾರೆ, ಮುಂದೆ ಎಷ್ಟು ಮಂದಿ ಶಾಲೆಗಳಿಂದ ತಯಾರಾಗಿ ಬರಬಹುದು ಎಂದು ಸರ್ವೆ ಮಾಡಿನೋಡಿ ಅದಕ್ಕೆ ತಕ್ಕಂತೆ ಕೈಗಾರಿಕೆಯನ್ನು ಡಿಸ್ಟ್ರಿಕ್ಟ್ ಮಟ್ಟದಲ್ಲಿ ಅಥವಾ ದೇಶದ ಮಟ್ಟದಲ್ಲಿ ಸ್ಥಾಪಿಸಬೇಕು. ಕೆಲವು ವೇಳೆ ಟೆಕ್ನೀಷಿಯನ್ಸ್ ಹೆಚ್ಚಾಗಿರುವಾಗ ಸಾಕಷ್ಟು ಕೈಗಾರಿಕೆಗಳಿರುವುದಿಲ್ಲ ಕೈಗಾರಿಕೆಗಳು ಹೆಚ್ಚಿಗಿರುವಾಗ ಟೆಕ್ನೀಷಿಯನ್ಸ್ ಸಾಕಾದಷ್ಟು ಸಿಕ್ಕುವುದಿಲ್ಲ. ಆದುದರಿಂದ ಈ ಎರಡು ವಿಚಾರದಲ್ಲೂ ಸರ್ವೆ ಮಾಡಿ ಅದರ ಆಧಾರದ ಮೇಲೆ ಸವ್ಯವಸ್ಥಿತವಾದ ಏರ್ಪಾಡು ಮಾಡುವುದು ಒಳ್ಳೆಯದೆಂದು ನಾನು ಸೂಚಿಸಬಿಚ್ಛಿಸುತ್ತೇನೆ.

ಇನ್ನು ಎಂ. ಜಿ. ಆರ್. ಟಿ. ಡಿ. ಬಗ್ಗೆ ಒಂದೆರಡು ಮಾತು. ಮಾನ್ಯ ಮಿತ್ರರು ಈ ಸಂಬಂಧವಾಗಿ ಮಾತನಾಡಿದ್ದಾರೆ. ಆದರೆ ಯಾವ ಡಿಮ್ಯಾಂಡ್ ಬಂದರೂ ಲಂಚ, ಲಂಚ ಎಂದು ಆರೋಪಿಸುತ್ತಾರೆ. ದೇಶದಲ್ಲಿರುವ ಅನೇಕ ಅಧಿಕಾರಿಗಳು ಲಂಚಕೋರರೆಂದು ನಿನ್ನೆಯ ದಿವಸ ಟೀಕಿಸಿದರು. ಪದೇ ಪದೇ ಈ ಸಭೆಯಲ್ಲಿ ಹೀಗೆ ಅನೇಕ ರೀತಿಯಲ್ಲಿ ಹೇಳುವುದರಿಂದ ನಮ್ಮ ದೇಶದ ವಿಚಾರದಲ್ಲಿ ಯಾರಿಗೂ ಒಳ್ಳೆಯ ಅಭಿಪ್ರಾಯ ಬರಲಾರದು, ಈ ಸಭೆಗೂ ಗೌರವ ತರಲಾರದು ಎಂದು ನನಗನ್ನಿಸುತ್ತದೆ. ನಮ್ಮಲ್ಲಿ ಬಹಳ ಜನ ಒಳ್ಳೆಯ ಅಧಿಕಾರಿಗಳಿದ್ದಾರೆ, ಸತ್ಯವಂತರಿದ್ದಾರೆ, ನ್ಯಾಯವಾಗಿ ನಿಷ್ಠೆಯಿಂದ ಕೆಲಸ ಮಾಡುವವರಿದ್ದಾರೆ. ಹಾಗಿರುವಾಗ ಅವರನ್ನೂ ಒಟ್ಟುಗೂಡಿಸಿ ನಮ್ಮ ದೇಶದ ಹೆಸರನ್ನು ಕೆಡಿಸುವಂತೆ ಲಂಚಕೋರರು ನಮ್ಮ ದೇಶದಲ್ಲಿ ಹೆಚ್ಚಾಗಿದ್ದಾರೆಂದು ಆಗಾಗ್ಗೆ ಪ್ರಸ್ತಾಪಿಸಿ ಟೀಕಿಸುವುದು ಅಷ್ಟು ಸರಿಯೆ ಎಂದು ನನಗಾದರೂ ಅನ್ನಿಸುತ್ತದೆ. ಈಗ ಲಂಚ ನಿರೋಧ ಶಾಖೆ ಯೊಂದಿದೆ, ಆದರೆ ಅದು ತನ್ನ ಕಾರ್ಯದಲ್ಲಿ ಅಷ್ಟು ಯಶಸ್ವಿಯಾಗಿಲ್ಲ. ಆದುದರಿಂದ ಅದನ್ನು ರದ್ದು ಮಾಡಿ ಲಂಚಗುಳಿತನವನ್ನು ಹೋಗಲಾಡಿಸಲು ಬೇರೆ ಏನಾದರೂ ಒಂದು ಮಾರ್ಗವನ್ನು ಕಂಡುಹಿಡಿಯಲು ಯೋಚನೆ ಮಾಡುವುದು ಒಳ್ಳೆಯದು ಎಂದು ಹೇಳ ಬಯಸುತ್ತೇನೆ. ಈಗ ಕೆಲವು ಕಡೆ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ, ಇನ್ನು ಕೆಲವು ಕಡೆ ಮಾಡಬೇಕೆಂದಿದ್ದಾರೆ. ರಾಷ್ಟ್ರೀಕರಣ ಮಾಡಿರುವ ಅನೇಕ ಕಡೆಗಳಲ್ಲಿ ಕೆಲಸ ತೃಪ್ತಿಕರವಾಗಿ ಜರುಗುತ್ತಿದೆ, ಅದರಿಂದ ಜನರಿಗೆ ಬಹಳ ಅನುಕೂಲವಾಗಿದೆ, ಜನರ ಆವಶ್ಯಕತೆ ಪೂರೈಸಿದೆ ಎಂಬ ಭಾವನೆ ಇದೆ. ಆದರೆ ಈಗ ಬೇರೆ ಕಡೆ ರಾಷ್ಟ್ರೀಕರಣ ಮಾಡುವುದನ್ನು ತಡೆಹಿಡಿಯುವುದು ಮೇಲು ಎಂದು ನನಗನ್ನಿಸುತ್ತದೆ. ನಾನು ಪತ್ರಿಕೋದ್ಯಮಿಯಾಗಿ ಇದನ್ನು ಹೇಳುತ್ತಿದ್ದೇನೆ. ಬಳ್ಳಾರಿ ವಿಷಯ ಗಮನಿಸಬೇಕು. ಅನೇಕ ಕಡೆ ಸರ್ಕಾರಿ ಬಸ್ಸುಗಳಿಂದ ಅನುಕೂಲವಾಗಿದ್ದರೂ ರಾಷ್ಟ್ರೀಕರಣವಾಗಿರುವ ಕೆಲವು ಕಡೆ ಬಹಳ ತೊಂದರೆಯಾಗಿದೆ. ಆದುದರಿಂದ ಅನೇಕರಿಗೆ ಆದಷ್ಟು ರಾಷ್ಟ್ರೀಕರಣ ಮಾಡದಿರುವುದು ಒಳ್ಳೆಯದು ಎಂಬ ಅಭಿಪ್ರಾಯ ಬಂದಿದೆ. ಅದೇನೇ ಇರಲಿ, ಎಲ್ಲಿಯವರೆಗೆ ನೀವು ಕ್ರಮವಾಗಿ, ಸುವ್ಯವಸ್ಥಿತವಾಗಿ ಕೆಲಸ ನಡೆಸಲು ಸಾಧ್ಯವಿಲ್ಲವೋ ಅಲ್ಲಿಯವರೆಗೆ ರಾಷ್ಟ್ರೀಕರಣ ಮಾಡುವುದನ್ನು ಸ್ವಲ್ಪ ವಿಳಂಬ ಮಾಡುವುದು ಒಳ್ಳೆಯದು. ಒಟ್ಟಿನಲ್ಲಿ ಬೇರೆ ಇಲಾಖೆಗಳಿಗಿಂತ ರಸ್ತೆ ಸಾರಿಗೆ ಇಲಾಖೆಯಲ್ಲಿ ಲಂಚಗುಳಿತನ ಜಾಸ್ತಿಯಾಗಿದೆ ಎಂಬ ಭಾವನೆಯಿದೆ. ಇದನ್ನು ತಡೆಗಟ್ಟಲು ಮೊದಲು ತ್ರೂ-ಬಸ್ ಮತ್ತು ಲಕ್ಷುರಿ ಬಸ್ ಇರುವ ಕಡೆ ಬಸ್ ಹೊರಡುವ ಜಾಗದಲ್ಲೇ ಟಿಕೆಟ್ ಕೊಡುವಂತೆ ವ್ಯವಸ್ಥೆ ಮಾಡಬೇಕು. ಕಂಡಕ್ಟರು ಟಿಕೆಟ್ ಕೊಡಲು ಅವಕಾಶ ಕಡಿಮೆ ಮಾಡಬೇಕು. ಸರಿಯಾಗಿ ಚೆಕ್ ಮಾಡಬೇಕು. 15 ದಿವಸ ರೆಗ್ಯುಲರ್ ಆಗಿ ದೊಡ್ಡ ಅಧಿಕಾರಿ ಚೆಕ್ ಮಾಡಿ ಉತ್ಪತ್ತಿ ಯಾವ ಯಾವ ದಿವಸ ಎಷ್ಟಿತ್ತು, ಯಾವ ದಿವಸ ಕಡಮೆಯಾಯಿತು, ಅದಕ್ಕೆ ಕಾರಣವೇನು ಎಂದು ಕಂಡುಹಿಡಿಯುವಂತೆ ವ್ಯವಸ್ಥೆ ಮಾಡುವುದು ಒಳ್ಳೆಯದು. ಆದಷ್ಟು ದೊಡ್ಡ ಅಧಿಕಾರ ಸ್ಥಾನಗಳಲ್ಲಿರುವವರು ಚೆಕ್ ಮಾಡುವುದು ಒಳ್ಳೆಯದು. ಇದಲ್ಲದೆ ಬಸ್ಸು ಸಕಾಲದಲ್ಲಿ ಹೊರಡುವಂತೆ ವ್ಯವಸ್ಥೆ ಮಾಡಬೇಕು ಮತ್ತು ಸಕಾಲದಲ್ಲಿ ತಲುಪಬೇಕಾಗಿರುವ ಸ್ಥಳ ಸೇರುವಂತೆ ಮತ್ತು ಬಸ್ ಕಂಡೀಷನ್ ಸುವ್ಯವಸ್ಥಿತವಾಗಿರುವಂತೆ ನೋಡಿಕೊಳ್ಳುವುದು ಒಳ್ಳೆಯದು. ಇದಿಷ್ಟನ್ನು ಮಾಡಲು ಏನು ಕಷ್ಟವಿದೆಯೆಂಬುದು ಅರ್ಥವಾಗುವುದಿಲ್ಲ ಮದ್ರಾಸಿನಲ್ಲಿ ಬಸ್ಸುಗಳ ವ್ಯವಸ್ಥೆ ಬಹಳ ಚೆನ್ನಾಗಿದೆ, ಡೀಲಕ್ಸ್ ಬಸ್ಸುಗಳಿವೆ. ಅಲ್ಲಿ ಬಸ್ ಹೊರಡ

ವುದನ್ನು, ಬರುವುದನ್ನು ನೋಡಿ ಗಡಿಯಾರವಿಲ್ಲದೆ ಗಂಟೆ ಎಷ್ಟೆಂದು ಹೇಳಬಹುದು. ಒಂದು ನಿಮಿಷ ಕೂಡ ವ್ಯತ್ಯಾಸವಾಗದಂತೆ ಕಾಲಕ್ಕೆ ಸರಿಯಾಗಿ ಬಸ್ಸುಗಳು ಓಡುತ್ತವೆ. ಅದರಂತೆ ಇಲ್ಲಿಯೂ ಕೂಡ ಮಾಡುತ್ತಾರೆ, ಆದಷ್ಟು ಶೀಘ್ರದಲ್ಲಿ ಮಾಡುತ್ತಾರೆ ಎಂದು ನಂಬುತ್ತೇನೆ.

ಅವರು ಆ ರೀತಿ ಸುವ್ಯವಸ್ಥಿತವಾಗಿ ನಡೆಸುತ್ತಿರಬೇಕಾದರೆ ಸರ್ಕಾರದವರೇ ವಹಿಸಿರುವಾಗ ಸುವ್ಯವಸ್ಥಿತವಾಗಿ ನಡೆಸಲು ಕಷ್ಟಕರವಾಗಲಾರದು ಎಂದು ನಾನು ನಿವೇದಿಸುತ್ತೇನೆ. ಅದೂ ಅಲ್ಲದೇ ಯಾರು ಹೆಚ್ಚು ಅನಾಹುತಗಳನ್ನು ಮಾಡದೇ ಸಕಾಲಕ್ಕೆ ಸರಿಯಾಗಿ ಬಸ್ಸುಗಳನ್ನು ನಡೆಸುತ್ತಾರೋ ಅಂತಹ ಡ್ರೈವರುಗಳಿಗೆ ಹೆಚ್ಚು ಪ್ರೋತ್ಸಾಹ ದೊರೆಯಬೇಕು. ಇಂಥಾ ವ್ಯವಸ್ಥೆ ಮಾಡುವುದರಿಂದ ಅನಾಹುತಗಳಾಗುವುದು ಕಡಿಮೆಯಾಗಬಹುದು ಎಂದು ಹೇಳಿ ಇಷ್ಟು ಅವಕಾಶ ಕೊಟ್ಟದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2-00 P.M.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ ನಮ್ಮ ಮುಂದೆ ಇರುವ ಈ ಎಲ್ಲ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಬೇಡಿಕೆಗಳ ಬಗ್ಗೆ ಈಗ ಕೆಲವು ಮಾತುಗಳನ್ನು ಆಡಬೇಕೆಂದು ಇದ್ದೇನೆ. ಮೊದಲನೆಯದಾಗಿ ಸೋಷಿಯಲ್ ವೆಲ್‌ಫೇರ್ ಬೋರ್ಡ್, ಸೋಷಿಯಲ್ ವೆಲ್‌ಫೇರ್ ಇಲಾಖೆ ಇದಕ್ಕೆ ವ್ಯತ್ಯಾಸವೇನು ಎನ್ನುವುದು ಸರಿಯಾಗಿ ತಿಳಿದಿಲ್ಲ ಎಂದು ಅನ್ನಿಸುತ್ತಾ ಇದೆ. ಮಾನ್ಯ ಸದಸ್ಯರು ಮಾತನಾಡುವಾಗ ಸೋಷಿಯಲ್ ವೆಲ್‌ಫೇರ್ ಬೋರ್ಡಿನ ಜೀಪುಗಳು ಓಡಾಡುತ್ತವೆ. ಸೋಷಿಯಲ್ ವೆಲ್‌ಫೇರ್ ಇಲಾಖೆಯ ಜೀಪುಗಳು ಓಡಾಡುತ್ತವೆ. ಎನ್. ಇ. ಎಸ್.ನ ಜೀಪುಗಳು ಓಡಾಡುತ್ತವೆ. ಮಹಿಳೆಯರು ಈ ಮೂರು ಕಡೆಯೂ ಕೆಲಸ ಮಾಡುತ್ತಾರೆ. ಮೂರು ಕಡೆಯಲ್ಲಿ ಮಹಿಳೆಯರು ಮಾಡುತ್ತಿರುವ ಕೆಲಸ ಯಾವುದು, ಜೀಪುಗಳು ಓಡಾಡುತ್ತಿರುವುದು ಯಾವ ಕೆಲಸಕ್ಕಾಗಿ ಎಂಬುದು ಸರಿಯಾಗಿ ಅರ್ಥವಾಗದೆ ಟೀಕೆಗೆ ಅವಕಾಶವಾಗಿದೆ ಎಂದು ಅನ್ನಿಸುತ್ತಾ ಇದೆ. ಆದ್ದರಿಂದ ಮಾನ್ಯ ಮಹಿಳಾ ಮಂತ್ರಿಗಳಲ್ಲಿ ವಿನಂತಿ ಏನೆಂದರೆ ತಾವು ಉತ್ತರ ಕೊಡುವಾಗ ಈ ಮೂರು ಕಡೆ ಮಹಿಳೆಯರು ಏನು ಕೆಲಸ ಮಾಡುತ್ತಾ ಇದ್ದಾರೆ; ಈ ಮೂರು ಕಡೆ ಜೀಪುಗಳು ಎಲ್ಲೆಲ್ಲಿ ಓಡಾಡುತ್ತವೆ, ಯಾವ ಕೆಲಸಕ್ಕೆ ಹೋಗುತ್ತಾರೆ ಎಂಬುದನ್ನು ವಿವರವಾಗಿ ತಿಳಿಸುವುದು ಒಳ್ಳೆಯದು ಎಂದು ನನ್ನ ಸಲಹೆ. ನಮ್ಮ ಸರ್ಕಾರದಲ್ಲಿ ಯಾವ ಇಲಾಖೆಯಲ್ಲೂ ಆಗದೇ ಇದ್ದಂಥ ಏನೋ ಒಂದು ಅವ್ಯವಸ್ಥೆ ಈ ಇಲಾಖೆಯಲ್ಲಿ ಆಗುತ್ತಿದೆ ಎಂದು ಟೀಕೆ ಮಾಡುತ್ತಾ ಇದ್ದಾರೆ. ಕೆಲಸ ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಹೇಳುತ್ತಾ ಇದ್ದಾರೆ. ಈ ಸಂದೇಹ ಪರಿಹಾರವಾಗುವ ರೀತಿಯಲ್ಲಿ, ವೆಲ್‌ಫೇರ್ ಬೋರ್ಡ್, ವೆಲ್‌ಫೇರ್ ಇಲಾಖೆ, ಎನ್. ಇ. ಎಸ್. ಇವುಗಳಲ್ಲಿ ಮಹಿಳೆಯರ ಕೆಲಸವೇನು ಎಂಬುದನ್ನು ವಿವರವಾಗಿ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಮಹಿಳೆಯರನ್ನು ನೇಮಕ ಮಾಡುವಾಗ ಯಾವ ಅರ್ಹತೆ ಇರಬೇಕು, ಯಾವ ಶಿಕ್ಷಣ ಹೊಂದಿರಬೇಕು ಎಂದು ಮಾಡಿದ್ದಾರೆಂಬುದನ್ನು ದಯವಿಟ್ಟು ತಿಳಿಸಬೇಕು. ಇನ್ನೊಂದು ಬಹಳ ಆಶ್ಚರ್ಯವಾಗುತ್ತದೆ, ಕೋಟಿ ಕೋಟಿ ರೂಪಾಯಿ ಖರ್ಚಾಗುತ್ತಾ ಇರುವಂಥಾ ಈ ಇಲಾಖೆಗಳ ಡಿಮ್ಯಾಂಡ್‌ಗಳಿಗೆ ಪ್ರತ್ಯೇಕವಾಗಿ ಖರ್ಚಿಗೆ ಇಟ್ಟು ಮಹಿಳೆಯರ, ಹರಿಜನರ, ಗಿರಿಜನರ ಪ್ರಗತಿಗಾಗಿರುವ ಈ ಇಲಾಖೆಯನ್ನು ಕಲಸು ಮೇಲೋಗರ ಮಾಡಿ, miscellaneous ಅಂತ ಮಾಡಿರುವುದು ಏಕೆ? ಮಹಿಳೆಯರ ಕೆಲಸವೆಲ್ಲಾ ಕಲಸು ಮೇಲೋಗರ ಎಂದು ಅರ್ಥವೇ? ಸಾಧಾರಣವಾಗಿ ಈ ಇಲಾಖೆಗೆ ಒದಗಿಸಿರುವ ಹಣ ಅತ್ಯಲ್ಪ, ಟೀಕೆ ನೋಡಿದರೆ ಬಹಳವಾಗಿದೆ. ಎಷ್ಟು ಹಣ ಒದಗಿಸಿದ್ದೀರಿ ಎಂಬುದನ್ನು ಉತ್ತರ ಕೊಡುವಾಗ ಹೇಳಬೇಕು. ಈಗ ಶೇಕಡ 50 ಹೆಣ್ಣುಮಕ್ಕಳು ಇದ್ದೇವೆ. ನಮ್ಮ ಸಚಿವರು ಮಹಿಳಾ ಮಂತ್ರಿಗಳಾಗಿದ್ದಾರೆ. ಹಣದ ಅವಶ್ಯಕತೆ ಬಹಳವಾಗಿ ಇರುವಾಗ ಇಷ್ಟು ಕಡಿಮೆ ಹಣ ಕೊಟ್ಟಿರುವುದರಿಂದ ಮಹಿಳೆಯರ ಅವಶ್ಯಕತೆಗೆ ಆಗಬೇಕಾದ ಕೆಲಸ ಮಾಡಲು ಆಗೊಲ್ಲ. ನಿಮ್ಮ ಬೆಂಬಲಕ್ಕೆ ನಾವು ಇದ್ದೇವೆ, ಅವರು ಧೈರ್ಯವಾಗಿ ಹೆಚ್ಚು ಹಣ ವಸೂಲು ಮಾಡಲಿ ಎಂದು ವಿನಂತಿ. ತಮ್ಮ ಇಲಾಖೆಯಲ್ಲಾಗಲೀ ಯಾವ ಇಲಾಖೆಯಲ್ಲೇ ಆಗಲೀ ಹೆಣ್ಣು ಮಕ್ಕಳ ಲೋಪ ದೋಷ ಏನೇ ಇರಲಿ ಅದನ್ನು ತಿದ್ದಿ, ಹೆಚ್ಚಿನ ಶಿಕ್ಷಣ ಕೊಟ್ಟು ಸಚ್ಚರಿತರನ್ನಾಗಿ ಮಾಡಿ ಅವರಲ್ಲಿ ಸೇವಾ ಮನೋಭಾವ ಬರುವಂತೆ ಮಾಡಬೇಕೆಂದು ನನ್ನ ಸಲಹೆ. ಹೆಣ್ಣು ಮಕ್ಕಳು ನಿಷ್ಠಾವಂತರಾಗಿ ಹೆಚ್ಚಿನ ರೀತಿಯಲ್ಲಿ, ಗಂಡು ಮಕ್ಕಳಿಗಿಂತಲೂ, ದುಡಿಯುವಂತಾಗಬೇಕು. ಆ ರೀತಿ ಮಾಡಲು ಸಾಧ್ಯ. ಹೆಣ್ಣು ಮಕ್ಕಳಿಗೆ ವೆಲ್‌ಫೇರ್ ಬೋರ್ಡ್ ಸರಿಯಾಗಿ ನಡೆಯುವುದಿಲ್ಲ ಹಾಗೆ ಹೀಗೆ ಎಂದು ಟೀಕೆ ಮಾಡುತ್ತಾ ಇದ್ದಾರೆ. ಯಾವ ಕೆಲಸ ಸರ್ಕಾರ ಮಾಡಬೇಕು. ಯಾವ ಕೆಲಸ ಇಲಾಖೆ ಮಾಡಬೇಕು ಎಂದು ಹೇಳುವುದಕ್ಕಿಂತ ಹೆಣ್ಣು ಮಕ್ಕಳ ಏಳಿಗೆಗೆ ಹೆಣ್ಣು ಮಕ್ಕಳಿಗಾಗಿ ಇರುವುದು ಇದು ಒಂದೇ ಸಂಸ್ಥೆ. ಈ ಬೋರ್ಡ್ ಸರಿಯಾಗಿ ನಡೆಯುವಂತೆ ನೋಡಿಕೊಳ್ಳ

(ಶ್ರೀಮತಿ ರತ್ನಮ್ಮ ಮಾಧವರಾವ್)

ಬೇಕಾದ್ದು ನಮ್ಮದೇ ಕೆಲಸ ಎಂದು ನನಗೆ ಅನಿಸುತ್ತದೆ. ಎಂ. ಎಲ್. ಎ. ಮೆಂಬರುಗಳಾಗಿ ಅಲ್ಲಿಗೆ ಬರಬೇಕೆಂದು ಹೇಳುವುದಿಲ್ಲ. ಅಲ್ಲಿ ನಡೆಯಬೇಕಾದ ಕೆಲಸ ಇದ್ದರೆ ಮಹಿಳಾ ಮಂತ್ರಿಗಳು ಇದ್ದರೆ ಅವರಿಗೆ ಹೇಳಬಹುದು ಕೆಲಸ ಮಾಡಿಸಬಹುದು. ಇದನ್ನೆಲ್ಲಾ ಮಾಡಬೇಕಾದ್ದು ನಮ್ಮ ಕರ್ತವ್ಯ. ಹೆಣ್ಣು ಮಕ್ಕಳ ಸಹಕಾರ ಇದ್ದು ಕೆಲಸ ಮಾಡಿದ್ದೇ ಆದರೆ ಬೋರ್ಡು ತೆಗೆದು ಹಾಕಬೇಕಾದ ಅವಶ್ಯಕತೆ ಇಲ್ಲ, ಚೆನ್ನಾಗಿ ನಡೆಯುತ್ತದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಸರ್ಕಾರಿ ಅಧಿಕಾರಿಗಳು ಐ. ಎ. ಎಸ್. ಮತ್ತು ಐ. ಪಿ. ಎಸ್ ಇವರಿಗೆ 58 ವಯೋ ಪರಿಮಿತಿ ಮಾಡಿರುವಂತೆ ಇತರ ಎಲ್ಲಾ ಅಧಿಕಾರಿಗಳೂ ಕೂಡ ಏಕೆ ಮಾಡಬಾರದು, ನಿರುದ್ಯೋಗ ಸಮಸ್ಯೆ ಬಹಳವಾಗಿ ಇದೆ. ಹೊರಗಿನವರಿಗೆ ಹೆಚ್ಚು ನೌಕರಿಗಳನ್ನು ಕೊಡುವುದಕ್ಕಿಂತ ಸ್ಥಳದವರಿಗೇ ಹೆಚ್ಚು ಅವಕಾಶ ಮಾಡಿಕೊಡಿ. ಆ ರೀತಿ ನಿಮ್ಮ ಇಲಾಖೆಗಳಲ್ಲೂ ಮತ್ತು ಫ್ಯಾಕ್ಟರಿಗಳಲ್ಲೂ ನೌಕರಿಗಳನ್ನು ಕೊಡುವುದು ಬಹಳ ಅವಶ್ಯಕ ಎಂದು ನನ್ನ ವಿನಂತಿ.

ಅಬ್ಕಾರಿ ವಿಷಯದಲ್ಲಿ ಮಾತಾಡಿದ್ದಾರೆ.

ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ವಿಚಾರ ಹಿಂದೆ ಒಮ್ಮೆ ಮಾತನಾಡಿದ್ದೆ. ಅಲ್ಲಿ ನಿಜವಾಗಿಯೂ ಕೂಡ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ನಾನು ಭದ್ರಾವತಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ನೋಡಿದ್ದೇನೆ. ಮೊದಲು ನಂಬರು ರಿಜಿಸ್ಟರ್ ಮಾಡಿಕೊಂಡಿರುತ್ತಾರೆ. ಕೆಲಸ ಸಿಕ್ಕುವುದಿಲ್ಲ. ಕೊನೆಗೆ ಬಂದವನಿಗೆ ಕೆಲಸ ಮೊದಲು ಸಿಕ್ಕುತ್ತದೆ. ಇದನ್ನು ಪರಿಹಾರ ಮಾಡುವುದಕ್ಕೆ ಏನಾದರೂ remedy ಕಂಡು ಹಿಡಿದು ಸರಿಪಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಮೆಟ್ರನಿಟಿ ಬೆನಿಫಿಟ್ ಸೆಂಟ್ರಲ್ ಆಕ್ಟ್ 1961ರಲ್ಲಿ ಪಾಸ್ ಆಯಿತು. ಕಾನೂನು ಪ್ರಕಾರ ಹೆಣ್ಣು ಮಕ್ಕಳು ಹೆರಿಗೆಗೆ ಹೋದಾಗ 12 ವಾರ ರಜ ಮತ್ತು ಇನ್ನಿತರ ಅನುಕೂಲಗಳೇನಿವೆಯೋ ಅವನ್ನೆಲ್ಲಾ ಉಪಯೋಗ ಮಾಡಿಕೊಳ್ಳಲು ಅವಕಾಶವಿದೆ. ಆದರೆ ಅದಿನ್ನೂ ಇಲ್ಲಿ ಜಾರಿಗೆ ಬಂದಿಲ್ಲ ಗೆಜೆಟ್‌ನಲ್ಲಿ ಬರುವ ತನಕ ಜಾರಿಗೆ ಬರುವುದಿಲ್ಲ. ಎರಡನೆಯದಾಗಿ ಶುಗರ್ ಕೇನ್ ಫಾರಂ ಮತ್ತು ಅಗ್ರಿಕಲ್ಚರಲ್ ಎಸ್ಟ್ಯಾಬ್ಲಿಷ್‌ಮೆಂಟ್‌ನಲ್ಲಿ ಇರತಕ್ಕ ಹೆಣ್ಣಾಳುಗಳಿಗೆ ಬೇರೆ ಯಾವ ತರಹ ಸೌಲಭ್ಯವೂ ದೊರೆಯುವುದಿಲ್ಲ. ಅವರಿಗೂ ಕೂಡ ಈ ಸೌಲಭ್ಯ ದೊರಕುವಂತೆ ಮಾಡಲು ಹೆಚ್ಚು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ. ಕಾರ್ಮಿಕ ಇಲಾಖೆಯವರು ಲೇಬರ್ ಗೆಜೆಟನ್ನು ಪ್ರಕಟಣೆ ಮಾಡುತ್ತಾ ಇಲ್ಲ ಅದಷ್ಟು ಜಾಗ್ರತೆ ಪ್ರಕಟಣೆ ಮಾಡಬೇಕೆಂದು ಸಲಹೆ ಮಾಡಿ ಕಾಲಾವಕಾಶವಿಲ್ಲದೇ ಇರುವುದರಿಂದ ಈ ಬೇಡಿಕೆಗೆ ನನ್ನ ಅನುಮೋದನೆಯನ್ನು ಕೊಟ್ಟು, ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B R. SUNTHANKAR (Belgaum City).—Mr. Speaker, Sir, I wish to make a few observations on labour and employment. Sir, in the Third Five-Year Plan of Mysore State it is said that we are wedded to the socialistic pattern of society and wedded to the welfare of the labour and so on.

These are very well stated words but the question is whether this precept is followed by practice. Looking to the performance of the labour Department, one is compeled to say that the performance of this Department is very poor. As a matter of fact, the Labour Department is one of the most neglected departments. Sir, till 1960–61 there was no separate Head for labour and employment. Since 1961–62 a separate Head has been maintained and after that, if we take a review of the achievements and performance of this department, we would clearly see that this department has not been performing its function well and it has not been keeping pace with the planned programmes

Sir, as for the achievement of this department in the Second Plan, the total outlay of the State for this department, with the aid of the Central Government, was 232 lakhs. Out of this outlay, the expenditure for the whole of the Second Plan was only 90 lakhs, *i.e.*, nearly 2/3 of the Plan programme of the Second Plan was not implemented and executed.

Similarly in 1961-62, the budget allotment was 60 lakhs while the expenditure was 38 lakhs. In 1962-63, the budget allotment was 59 lakhs while the expenditure according to the revised estimate is only 45 lakhs. Year after year, there has been shortfall in expenditure of this department. It is no use simply allotting amounts in the budget. Every effort should be made to see that the budget provisions are fully utilised and the targets are achieved every year.

During 1962-63, there was a scheme in the department regarding publicity and propaganda unit. The number of the scheme is 853; but we find that this scheme was deferred owing to the paucity of funds. That is the remark made under the scheme. It is really a surprise that when so much amounts remain unspent, funds could not be made available for such a small scheme. Similarly, the working of this department has been very slow. There has been inordinate delay in conciliation proceedings, as has been already pointed out by my friend Mr. Rajagopal. There has been considerable delay in implementation of awards. The appointment of Implementation Evaluation Committee took many months for the Government. In the meantime lot of work lagged behind.

I would like to know from the Government the progress of the schemes in the first 2 years of the third plan. How many schemes that were chalked out were implemented? What are the results achieved during the first 2 years?

There was a scheme for industrial training institutes in the second five-year plan. Four schemes were included, one each at Belgaum, Bijapur, Karwar and Hassan. In 1961-62 these schemes were included but they wers not implemented at all. In 1962, only the building at Bijapur was under construction. I want to know from the Government what progress has been made regarding the scheme, whether the scheme is being implemented, whether the institutes are started at all and how many workers could get the benefit from these training institutions.

About starting of evening classes for workers at Hubli and Mysore, I would like to know from the Hon'bel Minister at what stage these schemes are at present, whether they are implemented and how many workers are getting benefit from these classes.

About training classes and training institutes, Government has not provided for teaching in Marathi in the Marathi border areas. Government must provide instructors who can teach in Marathi for these workers. Otherwise, the Marathi workers will be deprived of this training.

I will turn to the question of unemployment. Employment is one of the chief objectives of plans in our country. In the second and third plans, there have been schemes for utilisation of man-power, particularly rural manpower and schemes for the educated unemployed. But we have not got any information as to what extent these schemes are being implemented. During the second plan how many persons got employed, including the educated unemployed under the various schemes? We have no information or statistic or data, Government should collect this information and acquaint this House about the existing state of affairs. I

(SRI B. R. SUNTHANKAR)

would request the Hon'bel Minister to furnish at the end of every year statistics regarding unemployment and how many persons were given additional employment on account of the various schemes.

The Tata Social Service League at Bombay had conducted a survey regarding unemployment 2 or 3 years back. Their finding was that there were nearly 5 crores of unemployed in the whole of the country. If we take the proportion of Mysore State, it may come to several lakhs. It has been said that the Employment Exchanges are doing some work. Of course they are doing some work but it can hardly reach the fringe of the problem. Thousands say a lakh or so of unemployed people have registered in these exchanges but hardly 10 to 20% got employment. What about the remaining 80 or 90%. Government should find out channels to employ all these. There are hundreds of vacancies in the various departments of Government and if they are filled some relief could be given to the educated unemployed. Similarly, unemployment is also created by certain Government schemes such as prohibition or extension of Prohibution, Land Reforms, the Gold Control Order and so on. There is no planning with the Government to provide for employment of these people who have become unemployed owing to the schemes of Government I would particularly refer to agricultural labour, that is, landless labour. Their lot is very pitiable. The agricultural Labour Enquiry Committee made a survey of the conditions of the landless labour in the country. Of course the conditions in this State are not available but I can speak from the survey of this Committee.

The finding of the Committee is that the percentage of land holdings by labour has fallen from 13·49 per cent to 6·87 per cent. This is the result of the land reforms that were carried in the various parts of the country. Similarly, their wages also have fallen from 109 nP. to 96 nP. per day.

SRI D. DEVARAJ URS (Minister for Labour, Housing and Transport).- May I know what that Report is ?

SRI B. R. SUNTHANKAR.—It is the Report of the Agricultural Labour Enquiry Committee, published in the year 1962.

SRI D. DEVARAJ URS.—Who has published that Report ?

SRI B. R. SUNTHANKAR.—Government of India. But now, I am referring to extracts from newspapers.

Similarly, there has been an increase in the days of unemployment from 90 to 128 days. The increase in total indebtedness of these unemployed is from Rs. 80 crores to 143 crores. Government will have to do something to ameliorate their lot.

†SRI J. P. SARWESH (Serum).—Mr. Speaker, Sir, the majority of the population in our country live in villages. So is the case with the Scheduled Castes and Tribes. The main occupation of the Scheduled Caste people who live in villages is agricultural labour. Their wages are so meagre that they cannot live like a human being. The agricultural family particularly in dry areas like Gulbarga earn with great difficult

Rs. 100 per year. With that Rs. 100 it is very difficult for the agricultural family to maintain themselves. Several times I have brought to the notice of Government that the conditions of these labourers should be improved ; but unfortunately the Department of Social Welfare does not have any effective scheme for the upliftment of the agricultural labour living in rural parts. In every village there is a temple and 100 to 200 acres is the property of the temple. In every village there is a mosque which has got some acres of land in its name. In each village Government reserve 100 to 200 acres of land for cattle grazing. These people who are the tillers of the soil do not have even one square foot of land reserved for them. Government should at least see that the land reserved for cattle is granted to the landless and the landlords are told that they should graze their cattle on their own lands. Or, Government should see that half the extent of land reserved for cattle grazing is granted to Harijans, thereby raising the level of the Harijans to that of the cattle at least. If that is not feasible, Government should purchase some lands from the landlords and grant the same to the landless Harijans on the lines of co-operative farming.

I am afraid the Social Welfare Department has not any concretfe schemes for the upliftment of the Harijans. Last year they spent 60 per cent of the budget for their economic upliftment. This time they reduced it to 30 per cent. When we question them, they say that they are spending more money for education. The Department of Education are spending something like Rs. 18 crores in this respect. Why should the Social Welfare Department run separate hostels for the Harjans? The Education Department should take under its control all the hostel run by the Social Welfare Department. For the maintenance of these hostels, it should be the responsibility of the Education Department alone.

Regarding removal of untouchability, there are no schemes worth mentioning. The problem of untouchability is more closely linked with the economic problem of the Harijans. Unless the economic condition of the Harijans is improved, the problem of untouchability cannot be solved. Government should pay more attention to the upliftment of the scheduled castes and tribes economically. Unless that is done, it is not possible to eradicate untouchability completely. Suppose we take Harijans to the well and make them draw water. The next day the Harijans cannot go and draw water. The economic condition of the Harijans should be improved and all efforts are made in that direction. The education of the Harijans is also very important. What percentage of scheduled caste people are educated ? Hardly one per cent. Steps must be taken to improve the literacy of these people.

Mostly, the District Welfare Officers are inexperienced people ; they are recruits. Social Welfare is an important work which should be entrusted to persons who have some experience in the field. I should say there are characterless people among the District Welfare Officers.

MR. SPEAKER.—The hon'ble Member says something which he does not mean when he says 'characterless'. Let him not use the word 'characterless'.

Sri J. P. SARWESH.—The District Social Welfare Officers do not have any work; they are peforming merely the job of postmen. All the amount is distributed to the taluks and the taluk boards are distributing the whole amount. What is the purpose of having a district social welfare officer who has only to attend to correspondence work and nothing else? He has got no power. Either give power to this officer or in this emergency, it is better to abolish that post.

2-30 P.M.

†ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಸ್ವಾಮಿ, ಈ ದಿನ ಈ ಸಭೆಯ ಮುಂದೆ ಬಂದಿರುವಂಥ Miscellaneous Departments, Social Welfare, Motor Vehicles, ಈ ವಿಷಯ ಮಾತನಾಡುತ್ತ ನಾನು ಈ ಡಿಮಾಂಡುಗಳನ್ನು ವಿರೋಧಿಸುತ್ತಿದ್ದೇನೆ. ಏಕೆಂದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಯಾವ ಹಣ ಖರ್ಚಾಗುತ್ತದೆಯೋ ಅದು ಸರಿಯಾದ ಕೆಲಸಕ್ಕೆ ಬೀಳುವುದಿಲ್ಲ, ಜನತೆಗೆ ಮುಟ್ಟುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಹರಿಜನರ ಉದ್ಧಾರಕ್ಕಾಗಿ ಎಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ನನಗೆ ತಿಳಿದ ಮೇರೆಗೆ ಕೆಲವು ಹರಿಜನರಿಗೆ ಮನೆ ಕಟ್ಟುವುದಕ್ಕೆ ಹಣ ಕೊಟ್ಟಿರುತ್ತಾರೆ. ಆದರೆ ಮನೆಯನ್ನೇ ಕಟ್ಟಿರುವುದಿಲ್ಲ. ಕೆಲವು ಕಡೆ ಹರಿಜನರ ಕಾಲೋನಿಯಲ್ಲಿ ಯಾರೂ ಹರಿಜನರೇ ಇರುವುದಿಲ್ಲ. ಎತ್ತು ತೆಗೆದು ಕೊಳ್ಳುವುದು, ಮತ್ತು ವ್ಯವಸಾಯಕ್ಕೆ ಬೇರೆ ಯಾವತ್ತೂ ಸವಲತ್ತುಗಳನ್ನು ಕೊಡುತ್ತಿದ್ದಾರೆ. ಅದನ್ನು ಯಾರು ಪಡೆಯುತ್ತಾರೆಯೋ ಅವರು ಆ ಕೆಲಸ ಮಾಡುತ್ತಾರೆಯೇ ಎನ್ನುವ ಬಗ್ಗೆ ನನಗೆ ಸಂಶಯವುಂಟಾಗಿದೆ. ಕೆಲವು ಕಡೆ ಹರಿಜನರಿಗೆ ಮನೆಕಟ್ಟಲು ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದ ಬಾಗಿಲು, ಕಿಟಕಿ, ಇವುಗಳನ್ನು ಕೊಟ್ಟು 200 ರೂಪಾಯಿಗಳನ್ನು ಕೊಡುತ್ತಾರೆ.

ನಾನು ತಿಳಿದಮಟ್ಟಿಗೆ ಹರಿಜನರಿಗಾಗಿ ಕೊಡುವ ಇನ್ನೂರು ರೂಪಾಯಿಗಳಲ್ಲಿ ಅವರ ಕೈಗೆ ಸೇರುವ ವೇಳೆಗೆ ಕೇವಲ 20 ಅಥವಾ 30 ರೂಪಾಯಿಗಳಷ್ಟು ಮಾತ್ರ ಸಿಗುತ್ತದೆ. ಉಳಿದ ಹಣವೆಲ್ಲ ಈ ಡಿಪಾರ್ಟುಮೆಂಟಿನಲ್ಲೇ ಹಣ ತೆಗೆದುಕೊಂಡು ಬಾಕಿ ಉಳಿಕೆಯಾದ ಸ್ವಲ್ಪ ಹಣ ಮಾತ್ರ ನಾನು ಮೇಲೆ ಹೇಳಿದಂತೆ ಅವರಿಗೆ ಸಿಗುತ್ತಿದೆ ಎಂದು ನನ್ನ ತಿಳುವಳಿಕೆಗೂ ಬಂದಿದೆ. ಒಟ್ಟಿನಲ್ಲಿ ಸೋಷಿಯಲ್ ವೇಲ್‌ಫೇರ್ ಶಾಖೆ ಹೇಗೆ ನಡೆಯುತ್ತಿದೆ ಎಂದರೆ ಅದು ನಿಜವಾಗಿಯೂ ಒಂದು ಒಳ್ಳೆಯ ರೀತಿಯಲ್ಲಿ ನಡೆಯುತ್ತಿಲ್ಲ. ಇದರಲ್ಲಿ ನನ್ನ ಮಿತ್ರರು ಆಗಲೇ ಹೇಳಿದ ಹಾಗೆ ಇದನ್ನು ಲಂಚ ಎಂದು ಹೇಳಬಾರದು ಎಂದರು. ಆದಕಾರಣ ನಾನು ಇದನ್ನು ಮಾಮೂಲು ಎಂದು ಕರೆಯುತ್ತೇನೆ. ಹಾಗೆ ಈ ಡಿಪಾರ್ಟುಮೆಂಟಿನಲ್ಲಿ ಮಾಮೂಲು ಪದ್ಧತಿ ಬಹಳ ಹೆಚ್ಚಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಎರಡನೇದು, ರೋಡು ಟ್ರಾನ್ಸ್‌ಪೋರ್ಟು ಡಿಪಾರ್ಟುಮೆಂಟಿನ ವಿಚಾರ. ನಮಗೆ ಈಗ ಬಸ್ಸಿನಲ್ಲಿ ಕುಳಿತುಕೊಳ್ಳುವ ಒಂದು ಸುಯೋಗ ಲಭಿಸಿದೆ. ನಾವು ಮಂಗಳೂರಿನಿಂದ ಬಸ್ಸಿನಲ್ಲಿ ಬರುವಾಗ ಪ್ರತಿನಿತ್ಯವೂ ಬಸ್ಸಿನಲ್ಲಿ ಐವತ್ತು ಜನರಿದ್ದರೆ ಅದರಲ್ಲಿ ಸುಮಾರು ಇಪ್ಪತ್ತೈದು ಜನಕ್ಕೆ ಮಾತ್ರ ಟಿಕೆಟ್ಟನ್ನು ಕೊಟ್ಟಿರುತ್ತಾರೆ. ಉಳಿದ ಹನ್ನೆರಡು-ಹದಿಮೂರು ಜನಕ್ಕೆ ಟಿಕೆಟ್ಟುಗಳನ್ನೇ ಕೊಟ್ಟಿರುವುದಿಲ್ಲ. ನಾನು ಒಂದು ಸಾರಿ ಅಲ್ಲಿದ್ದ ಬಸ್ಸಿನ ಕಂಡಕ್ಟರನ್ನು ಕೇಳಿದರೆ ಆಗ ಅವರು ನಗುತ್ತ ರವಾಗಿ 'ಏನು ಸ್ವಾಮೀ, ನಮ್ಮ ಡಿಪಾರ್ಟುಮೆಂಟಿನಲ್ಲಿ ಈ ರೀತಿ ಮುಂಚಿನಿಂದಲೂ ಇದು ನಡೆದುಕೊಂಡು ಬರುತ್ತಿದೆ. ಏನೋ ಅಲ್ಪ ಸಲ್ಪ ಮಾಡುತ್ತಿರುವವರನ್ನು ನೀವು ಕೇಳುತ್ತಿದ್ದೀರಿ, ನಮ್ಮಲ್ಲಿರುವ ದೊಡ್ಡ ಆಫೀಸರುಗಳೇ ಆನೆಯಂತೆ ಕದಿಯುತ್ತಿದ್ದಾರೆ' ಎಂದು ಹೇಳಿದರು. ಸಣ್ಣವರಿಗಿಂತ ದೊಡ್ಡವರೇ ಜಾಸ್ತಿ ಕದಿಯುವವರು ಎನ್ನುವ ಅರ್ಥದಿಂದ ಹೇಳಿದರು ಎಂದು ಕಾಣುತ್ತದೆ. ಅಲ್ಲದೆ ಇವರು ಗುರು ಶಿಷ್ಯರಿದ್ದ ಹಾಗೆ ತೋರುತ್ತೆ. ಈ ಬಸ್ಸಿನ ಕಂಡಕ್ಟರುಗಳು 'ನಾವು ಎಲ್ಲಿ ಹೋದರೂ—ಪೆಟ್ರೋಲು ಬಂಕಿಗೆ, ಡೀಸಲ್ ಆಯಿಲ್ ಹಾಕಿಸಲು ಹೋಗುವಾಗ ಮತ್ತು ಬಸ್ಸು ಗ್ಯಾರೇಜು ಬಿಡುವಾಗ ಎಲ್ಲ ಕಡೆಯಲ್ಲಿಯೂ ಮಾಮೂಲು ಕೊಡಬೇಕು. ಕೊಡದೇ ಹೋದರೆ ಬಸ್ಸು ಗ್ಯಾರೇಜಿನಿಂದೀಚೆಗೆ ಬರುವುದಿಲ್ಲ. ಅಲ್ಲಿರುವ ಫಿಟ್ಟರುಗಳಿಗೆ ಸರಿಯಾದ ನಟ್ ಬೋಲ್ಟ್ ಹಾಕಲಿಕ್ಕೆ ಮಾಮೂಲು ಕೊಡಬೇಕು. ಹೀಗೆ ಎಲ್ಲ ಕಡೆಯಲ್ಲಿಯೂ ಮಾಮೂಲಿಲ್ಲದೆ ಯಾವ ಕೆಲಸವೂ ನಡೆಯುವುದೇ ಇಲ್ಲ. ಇದರಿಂದ ಮಾನ್ಯ ಮಂತ್ರಿಗಳು ಈ ದೃಷ್ಟಿಯಲ್ಲಿ ಸರಿಯಾದ ಆಲೋಚನೆ ಮಾಡಿ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟ್ರಾನ್ಸ್‌ಪೋರ್ಟು ಸಿಸ್ಟಂ ಎಷ್ಟು ಚೆನ್ನಾಗಿ ನಡೆಯುತ್ತಿದೆ ಎಂದರೆ, ಒಂದೊಂದು ಕಂಪೆನಿಯವರು ಸಿ.ಪಿ.ಸಿ. ಕಂಪೆನಿ, ಶಂಕರ್ ಕಂಪೆನಿ, ಹನುಮಾನ್ ಕಂಪೆನಿ, ಹೀಗೆ ಬೇರೆ ಬೇರೆ ಇರುವ ಕಂಪೆನಿಯವರೆಲ್ಲಾ ಒಟ್ಟಿಗೆ ಕೂಡಿಕೊಂಡು ಕಂಬೈನ್‌ಡ್ ಆಗಿ ಬಸ್ಸುಗಳನ್ನು ನಡೆಸುತ್ತಿದ್ದಾರೆ. ಅವರು ತಮ್ಮ ನೌಕರರುಗಳಿಗಾಗಿ ಹೋದಸಲ ಆರಾರು ತಿಂಗಳ ಸಂಬಳವನ್ನು ಬೋನಸ್ಸಾಗಿ, ಮತ್ತಿತರ ಡಿವಿಡೆಂಡುಗಳನ್ನು ಕೊಟ್ಟಿದ್ದಾರೆ. ಅವರು ತಮ್ಮ ಕೈಕೆಳಗೆ ನುರಿತ ಅಧಿಕಾರಿಗಳನ್ನು ಇಟ್ಟುಕೊಂಡು ಈ ಕೆಲಸ ನಡೆಸುತ್ತ ಬಂದಿದ್ದಾರೆ. ಇದನ್ನೆಲ್ಲಾ ನಮ್ಮ ಮಾನ್ಯ ಮಂತ್ರಿಗಳು ಇಲ್ಲಿಗೆ ಬಂದು ನೋಡಿ ಈ ಕಂಪನಿಗಳವರು ಯಾವ ರೀತಿಯಲ್ಲಿ ಬಸ್ಸುಗಳನ್ನು ನಡೆಸುತ್ತಿದ್ದಾರೆ, ಅಂತಹ ಕಂಪನಿಗಳವರ ಕಡೆಯಿಂದ ಅನುಭವ ಪಡೆದಂತಹವರನ್ನು ನಮ್ಮಲ್ಲಿಗೆ ಕರಿಸಿ, ಸ್ವಲ್ಪ ಸಂಬಳ ಹೆಚ್ಚಿಗೆ ಕೊಟ್ಟರೂ ಚಿಂತೆಯಿಲ್ಲ, ಅವರಿಂದ ಇಲ್ಲಿನ ಟ್ರಾನ್ಸ್‌ಪೋರ್ಟು ಸಿಸ್ಟಂನ್ನೂ ಕೂಡ ಸುವ್ಯವಸ್ಥಿತವಾಗಿ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ರೋಡು ಟ್ರಾನ್ಸ್‌ಪೋರ್ಟು ಇಲಾಖೆಯಲ್ಲಿ ಇನ್ನೊಂದು ವಿಷಯ ಇದೆ. ಸಾಧಾರಣವಾಗಿ ಹತ್ತು ಮೈಲಿಗಳಿರುವ ಒಂದೊಂದು ಜಾಗದಲ್ಲಿ ಬಸ್ಸಿನ ಒಬ್ಬ ಏಜೆಂಟರನ್ನಾಗಿ ನೇಮಕ ಮಾಡಿರುತ್ತಾರೆ. ಅವರೇನು ಮಾಡುತ್ತಾರೆಂದರೆ, ಬಸ್ಸಿನಲ್ಲಿ ಕೊಟ್ಟಿರುವ ಟಿಕೆಟ್ಟುಗಳ ನಂಬರಿನ ಸ್ಟೇಟುಮೆಂಟು ಮಾಡುತ್ತಾರೆ. ಅನಂತರ ಅದರ ಮೇಲೆ ಕಂಡಕ್ಟರಿನ ರುಜು ಮಾಡಿಸಿಕೊಂಡು ಕಳುಹಿಸುತ್ತಾರೆ. ಆದರೆ ಇದರಿಂದೇನೋ ಕೆಲವು ವೇಳೆ ಹಣವನ್ನು ಕದ್ದುಕೊಳ್ಳುವ ಪರಿಸ್ಥಿತಿ ಒದಗುವುದಿಲ್ಲ ಎಂದು ನನಗನಿಸುತ್ತದೆ. ಇದನ್ನೇ ಸರಿಯಾಗಿ ಮುಂದೆ ತರಲು ಸ್ವಲ್ಪ ಆಲೋಚನೆ ಮಾಡಬೇಕು ಮತ್ತು ರೋಡು ಟ್ರಾನ್ಸ್‌ಪೋರ್ಟು ಇಲಾಖೆ ಚಲೋ ಆಗಿ ನಡೆಸುವಂತೆ ಮಾಡಿ ಹೆಚ್ಚಿನ ಉತ್ಪತ್ತಿ ಬರುವ ಕಡೆಗೆ ಸರಕಾರ ಹೆಚ್ಚು ನಿಗಾ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಮಾನ್ಯ ಸಚಿವೆಯರಾದ ಶ್ರೀಮತಿ ಯಶೋಧರಾ ದಾಸಪ್ಪನವರು ನಮ್ಮ ಮಂಗಳೂರಿಗೆ ಬಂದಿದ್ದರು. ಈ ವಿಚಾರವನ್ನು ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡಿನ ಬಗ್ಗೆ ಹೇಳುವುದನ್ನು ಮರೆತಿದ್ದರಿಂದ ಈಗ ಹೇಳುತ್ತಿದ್ದೇನೆ. ನಮ್ಮಲ್ಲಿ ಹೆಚ್ಚಿಗೆ ಕಲಿತ ಹೆಣ್ಣುಹುಡುಗಿಯರು ಏನೂ ಕೆಲಸವಿಲ್ಲದೆ ಮನೆಯಲ್ಲೇ ಇದ್ದಾರೆ. ಅಂತಹ ಹುಡುಗಿಯರ ಬಗ್ಗೆ ಒಂದು ಹೊಸ ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಮೈಸೂರಿಗೆ ಇವರೆಲ್ಲ ಬಂದರೆ, ಅವರಿಗೆ ಒಳ್ಳೆಧಂದೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿ ಬಂದರು. ಆದರೆ ಅವರು ಬರಲಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವಿದ್ಯಾವಂತರ ಸಂಖ್ಯೆ ಹೇಗಿದೆ ಎಂದರೆ 7,51,000 ಗಂಡಸರು 8,22,000 ಹೆಂಗಸರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾರೆ. ಮೈಸೂರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರಿದ್ದಾರೆ. ಎಂದು ಇಲ್ಲಿ ಹೇಳಿದರೆ ತಪ್ಪಾಗಲಾರದು. ಹೀಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವಿದ್ಯಾವಂತರಿರುವ ಹೆಂಗಸರುಗಳಿಗಾಗಿ ಸೋಷಿಯಲ್ ವೆಲ್‌ಫೇರ್ ಇಲಾಖೆ ಮೂಲಕ ಸರಿಯಾದ ಯೋಜನೆ ಮಾಡಿ, ಹೊಲಿಗೆ ಯಂತ್ರಗಳಲ್ಲಿ ಅಥವಾ ಕಸೂತಿಯಲ್ಲೋ ತರಬೇತಿ ಕೊಡುವ ತರಬೇತಿ ಕೇಂದ್ರಗಳನ್ನು ತೆರೆಯಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಲೇಬರ್ ಇಲಾಖೆಯ ವಿಚಾರವಾಗಿ ಈಗಾಗಲೇ ನನ್ನ ಮಿತ್ರರನೇಕರು ಹೇಳಿದ್ದಾರೆ. ಈ ದೇಶದಲ್ಲಿ ಎಷ್ಟು ಜನರಿಗೆ ಉದ್ಯೋಗವನ್ನು ಒದಗಿಸಿದ್ದಾರೆ ಎನ್ನುವುದರ ಬಗ್ಗೆ ನನ್ನ ಸ್ನೇಹಿತರು 1960-61ನೇ ಸಾಲಿನಲ್ಲಿ, 1962-63ನೇ ಸಾಲಿನಲ್ಲಿ ಎಷ್ಟು ಜನರಿಗೆ ಕೆಲಸ ಸಿಕ್ಕಿತು, ಎಷ್ಟು ಜನಕ್ಕೆ ಕೆಲಸ ಸಿಗಲಿಲ್ಲ ಎನ್ನುವ ವಿವರಗಳನ್ನೆಲ್ಲಾ ಆಗಲೇ ಹೇಳಿದ್ದಾರೆ. ಅಲ್ಲದೇ ಇದರ ಬಗ್ಗೆ ಸರಿಯಾದ ಅಂಕಿ ಅಂಶ ನಮ್ಮ ತಿಳುವಳಿಕೆಗೆ ಬರುತ್ತಿಲ್ಲ. ಮತ್ತು ಆ ರೀತಿಯಾದ ಪಟ್ಟಿಯನ್ನು ತಯಾರಿಸಿಲ್ಲ. ಮೈಸೂರು ರಾಜ್ಯದಲ್ಲಿರುವ ಎರಡೂವರೆ ಕೋಟಿ ಜನ ಸಂಖ್ಯೆಯಲ್ಲಿ ಶೇಕಡಾ ಇಪ್ಪತ್ತೈದರಷ್ಟು ಜನ ವಿದ್ಯಾವಂತರಿದ್ದರೂ ಅವರು ಕೆಲಸವಿಲ್ಲದೇ ಹಾಗೇ ಇದ್ದಾರೆ. ಇನ್ನೂ ಕೆಲವರು ಕಳ್ಳಬಟ್ಟಿಯ ಕೆಲಸವನ್ನು ಎಂಪ್ಲಾಯ್‌ಮೆಂಟಾಗಿ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಪ್ರೊಹಿಬಿಷನ್ನನ್ನು ತಂದು ಒಂದು ಸಮಾಜದವರನ್ನೇ ಬಲಿ ತೆಗೆದುಕೊಂಡಿದ್ದಾರೆ. ಅವರು ಈಗ ಯಾವುದೂ ಕೆಲಸವಿಲ್ಲದೇ ಹಾಗೇ ಇದ್ದಾರೆ. ಈಡಿಗರು ಹಾಗೂ ಬಿಲ್ಲವರು ಎನ್ನುವ ಸಮಾಜದ ಜನಕ್ಕೆ ಪ್ರೊಹಿಬಿಷನ್ನಿನಿಂದ ತೊಂದರೆಯಾಗಿದೆ. ಹಾಗೂ ಈಗ ಬಂದಿರುವ ಚಿನ್ನದ ನಿಯಂತ್ರಣದಿಂದಾಗಿ ಎಷ್ಟೋ ಜನ ಅಕ್ಕಸಾಲಿಗರಿಗೆ ಕೆಲಸವಿಲ್ಲದೇ ಇರುವ ಪರಿಸ್ಥಿತಿ ಬಂದಿದೆ. ಹೀಗೆ ಕೆಲಸವಿಲ್ಲದೇ ಪಟ್ಟಣಗಳಲ್ಲಿರುವವರು ಹಳ್ಳಿಗಳಿಗೆ ಹೋಗಿ ಒಂದು ತರದ ದುಶ್ಚಟಕ್ಕೆ ಬಿದ್ದೋ, ಏನೋ ಅಲ್ಪ ಸ್ವಲ್ಪ ಸಂಪಾದನೆ ಮಾಡುವವರೂ ಇದ್ದಾರೆ. ಅಲ್ಲದೇ ಅಕ್ಕಸಾಲಿಗರೂ ಅಲ್ಪಸ್ವಲ್ಪ ಸಂಪಾದನೆ ಮಾಡಿಕೊಂಡು ಕೆಲವು ಊರುಗಳಲ್ಲಿದ್ದರು. ಅವರಿಗೆ ಈ ಚಿನ್ನದ ನಿಯಂತ್ರಣದಿಂದಾಗಿ ಅವರ ಸ್ಥಿತಿ ಇನ್ನೂ ಉಲ್ಬಣವಾಗಬಹುದು ಎಂದು ಖಂಡಿತವಾಗಿ ಇಲ್ಲಿ ಹೇಳುತ್ತೇನೆ. ಇದಕ್ಕೇನಾದರೂ ಸರಕಾರ ಸಕಾಲದಲ್ಲಿ ಉಪಾಯವನ್ನು ಕಂಡುಹಿಡಿಯದೇ ಹೋದರೆ ಇವರ ಪರಿಸ್ಥಿತಿ ಮತ್ತೂ ಉಲ್ಬಣ-

(ಶ್ರೀ ಬಿ. ಭಾಸ್ಕರ ಶೆಟ್ಟಿ)

ವಾಗಿ ದೇಶದಲ್ಲೆಲ್ಲಾ ಅಲ್ಲೋಲ ಕಲ್ಲೋಲವಾಗಬಹುದು. ನನಗಾದರೂ ಅನಿಸುವುದು, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ನಾಜೂಕಾದ ಒಡವೆಗಳನ್ನು ಹೆಚ್ಚಿಗೆ ತಯಾರಿಸುವ ಅಕ್ಕಸಾಲಿಗರಿದ್ದರು ಎನ್ನುವುದು ದೇಶದ ಪರ್ಸೆಂಟೇಜು ತೆಗೆದುಕೊಂಡು ನೋಡಿದರೆ ಎಲ್ಲರಿಗೂ ತಿಳಿಯುತ್ತದೆ. ಇಂತಹ ಅಕ್ಕಸಾಲಿಗರ ಬಗೆಗೆ ಏನಾದರೂ ಸರಿಯಾದ ಪರಿಹಾರ ಕ್ರಮವನ್ನು ಒದಗಿಸದೇ ಹೋದರೆ ಇವರುಗಳ ಸ್ಥಿತಿ ಬಹಳ ಕಷ್ಟಕ್ಕೆ ಸಿಗುತ್ತದೆ. ಇದಕ್ಕಾಗಿ ಸರಿಯಾದ ಕೆಲಸಗಳನ್ನು ಕೊಡುವುದರ ಕಡೆಗೆ ಸರಕಾರ ತೀವ್ರವಾಗಿ ಆಲೋಚನೆ ಮಾಡಬೇಕೆಂದು ಹೇಳಿ, ಇಷ್ಟು ಸಮಯ ಅಧ್ಯಕ್ಷರು ಕೊಟ್ಟುದಕ್ಕಾಗಿ ಅವರನ್ನು ವಂದಿಸುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿಟ್ಟಿರುವ ಹದಿನೇಳು ಬೇಡಿಕೆಗಳನ್ನು ನನ್ನ ಸಂಪೂರ್ಣವಾದ ಒಪ್ಪಿಗೆಯನ್ನು ಕೊಟ್ಟು, ಒಂದೆರಡು ಬೇಡಿಕೆಗಳ ಬಗ್ಗೆ ಮಾತ್ರ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ.

ಮುಖ್ಯವಾಗಿ ಸಮಾಜ ಕಲ್ಯಾಣ ಖಾತೆ ಬಹಳ ಪ್ರಾಮುಖ್ಯವಾದುದು. ನಮ್ಮ ದೇಶದಲ್ಲಿ ಅಲ್ಪ ಸಂಖ್ಯಾತರಾಗಿರುವ ಹರಿಜನರಿಗಾಗಿ ಮತ್ತು ಅವರ ಉದ್ಧಾರಕ್ಕಾಗಿ ಸರಕಾರದವರು ಏನೇನೋ ಸೌಕರ್ಯಗಳನ್ನು ಕಲಿಸಿಕೊಡುತ್ತಿದ್ದಾರೆ. ಅವರನ್ನು ಸುವ್ಯವಸ್ಥಿತಿಯಿಂದ ಸಾಮಾಜಿಕವಾಗಿ ಇರಲು ಅವರನ್ನು ಸವರ್ಣ ಹಿಂದುಗಳವರೊಡನೆ ಇರುವುದಕ್ಕಾಗಿ ಏನೇನೋ ರಿಯಾಯಿತಿಗಳನ್ನು ಕಲ್ಪಿಸಿ ಕೊಡುತ್ತಿದ್ದಾರೆ. ಇದರಲ್ಲಿ ಕಳೆದ ಒಂದು ವರ್ಷದಿಂದ ಏನಾಗಿದೆ ಎಂದರೆ, ಮೊದಲು ಹರಿಜನರ ಸಲುವಾಗಿ ಮನೆಗಳನ್ನು ಕಟ್ಟಿಸಿಕೊಳ್ಳುವುದಕ್ಕಾಗಿ ಸರಕಾರದವರು ಇಷ್ಟು ಹಣ ಎಂದು ಕೊಡುತ್ತಿದ್ದರು. ಇದನ್ನು ಈಗ ನಿಲ್ಲಿಸಿಬಿಟ್ಟಿದ್ದಾರೆ. ಹಿಂದೆ ಹರಿಜನರಿಗೆ ಸಾವಿರಾರು ಮನೆಗಳು ಆಗತಕ್ಕ ಸೌಕರ್ಯವಿತ್ತು. ಈಗ ಇದನ್ನು ತಪ್ಪಿಸಿ ಸಹಕಾರ ಸಂಘಗಳ ಮೂಲಕ ಹಣವನ್ನು ಒದಗಿಸಿ ಕೊಡಬೇಕೆಂದು ಹೊಸ ಕಾನೂನನ್ನು ಮಾಡಿದ್ದಾರೆ. ಇದು ಜಾರಿಗೆ ಬರದೆ, ಕಳೆದ ಒಂದು ವರ್ಷದಿಂದಲೂ ಬಹುಶಃ ನನಗೆ ಗೊತ್ತಿರುವ ಹಾಗೆ, ಹರಿಜನರಿಗಾಗಿ ಒಂದು ಮನೆಯನ್ನೂ ಕಟ್ಟಿಸಿಕೊಟ್ಟಿಲ್ಲ ನನ್ನ ಕ್ಷೇತ್ರದಲ್ಲಿಯೇ ಯಾವ ಒಂದು ಹಳ್ಳಿಯಲ್ಲೇ ಆಗಲೀ ಒಬ್ಬ ಹರಿಜನನಿಗಾಗಿ ಎಂದು ಒಂದು ಮನೆಯನ್ನೂ ಕಟ್ಟಿಸಿಕೊಟ್ಟಿಲ್ಲ. ಅಲ್ಲದೆ ಈ ಹಿಂದೆ ಹಣ ಕೊಟ್ಟು ಕಟ್ಟಿದ ಮನೆಗಳೂ ಇನ್ನೂ ಪೂರ್ತಿಯಾಗದೇ ಅರ್ಧದಲ್ಲೇ ನಿಂತಿವೆ. ಅಲ್ಲದೇ ಹರಿಜನರಿಗಾಗಿ ಎಂದು ಹೊಸದಾಗಿ ಮಾಡಿದ ಕಾನೂನು ಇನ್ನೂ ಜಾರಿಗೆ ಬರದೇ ಇರುವುದರಿಂದ ಈ ಹೊಸ ಪದ್ಧತಿಯಿಂದ ಯಾವ ಹರಿಜನರಿಗೂ ಸಹಾಯವಾಗಲಿಲ್ಲ ಎಂದು ಸರಕಾರಕ್ಕೆ ತಿಳಿಸಬೇಕಾಗಿದೆ.

ಜಾಗ್ರತೆ ಯವುದಾದರೂ ಒಂದು ಕ್ರಮ ತೆಗೆದುಕೊಂಡು, ಸಹಾಯಮಾಡಿ ತೀವ್ರ ಹರಿಜನರಿಗೆ ಮನೆ ಕಟ್ಟಿಸಲು ಹಣ ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಎರಡನೇಯದಾಗಿ ಮನೆ ಕಟ್ಟಿಸಲು ಮೊದಲು ಸೈಟ್ ಅಕ್ವೈರ್ ಮಾಡಬೇಕಾಗುತ್ತದೆ. ಇದರಲ್ಲಿ ಬಹಳ ಕಷ್ಟವಾಗಿದೆ. ಹಿಂದಕ್ಕೆ ನಾನೊಂದು ಪ್ರಶ್ನೆ ಕೇಳಿದಾಗ್ಗೆ ಅವಕೆ ಸಚಿವರು ಉತ್ತರ ಕೊಡುತ್ತಾ 50 ಕೇಸಿಸ್ ಪೆಂಡಿಂಗ ಇವೆಯೆಂದು ಹೇಳಿದ್ದಾರೆ. ಇರತಕ್ಕಂಥ 50 ಕೇಸಸ್ ಹೇಗೆ ಪೆಂಡಿಂಗ ಉಳಿದಿವೆ ? ಜಮೀನು ಅಕ್ವೈರ್ ಮಾಡುವವರಲ್ಲಿ ವೆಸ್ಟೆಡ್ ಇಂಟರೆಸ್ಟ್ ಇದ್ದವರು ಒಳಗೆ ಪ್ರಭಾವ ಬೀರಿ, ಕೋರ್ಟಿಗೆ ಹೋಗಿ ಏನೇನೋ ತಕರಾರು ಮಾಡಿ ತಡೆಗಟ್ಟುವದರಿಂದ ಹರಿಜನ ಬಾಂಧವರಿಗೆ ಸೈಟು ಸಿಕ್ಕುತ್ತಾ ಇಲ್ಲ. ಆದುದರಿಂದ ಸರಕಾರ ಮನೆ ಕಟ್ಟಲು ಹಣ ಕೊಟ್ಟರೆ ಸಾಕಷ್ಟು ಆಗುವದಿಲ್ಲ ಎಂದು ಈ ಸಭೆ ಮತ್ತು ಸರಕಾರದ ಗಮನಕ್ಕೆ ತರುತ್ತೇನೆ. ಸರಕಾರ ಇದಕ್ಕೆ ತಕ್ಕ ಕ್ರಮ ತೆಗೆದುಕೊಂಡು ಸೈಟು ದೊರೆಯುವ ಹಾಗೆ ಮಾಡಬೇಕಾದುದು ಅವಶ್ಯಕ. ಪ್ರಭಾವಶಾಲಿ ವ್ಯಕ್ತಿಗಳು ಕೋರ್ಟಿಗೆ ಎಳೆದುಕೊಂಡು ಹೋಗಿ ಸತಾಯಿಸುವುದು ನಿಲ್ಲಬೇಕು. ಇದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಲು ಸರಕಾರ ಯೋಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಮೂರನೇಯದಾಗಿ ಹರಿಜನರ ವಿದ್ಯಾಭ್ಯಾಸಕ್ಕಾಗಿ ವಸತಿ ಸೌಕರ್ಯಕ್ಕಾಗಿ ಸರಕಾರ ಹಣ ಖರ್ಚು ಮಾಡುತ್ತಿದೆ. ಹರಿಜನರಿಗಾಗಿ separate hostel ಮಾಡುವುದರಿಂದ ಏನೂ ಅನುಕೂಲವಾಗುವದಿಲ್ಲ. ಮಹಾತ್ಮಾಗಾಂಧಿಯವರು ಹೇಳಿದ ಹಾಗೆ ನಮ್ಮ ಸಮಾಜದಲ್ಲಿ ಅಸ್ಪೃಶ್ಯತೆ ಒಂದು ದೋಷವಿದೆ, ಕೊಳೆಯಿದೆ, Blot on Hinduism ಎಂದು ಅವರು ಹೇಳಿದ್ದಾರೆ. ಬೇರೆ ಬೇರೆ ಹಾಸ್ಟೆಲ್ ಮಾಡುವದರಿಂದ ಅವರು ಬೇರೆ ನಾವು ಬೇರೆ ಎಂಬ ಭಾವನೆಯುಂಟಾಗುತ್ತದೆ. ಇದನ್ನು ತಡೆದು ಎಲ್ಲರೂ ಒಂದು ಎಂಬ ಭಾವನೆ ಬರುವ ಹಾಗೆ ಸರಕಾರ ಕೆಲಸ ಮಾಡಬೇಕು. ಇಲ್ಲವಿದ್ದರೆ ಉದ್ದೇಶ ಸಾರ್ಥಕವಾಗುವದಿಲ್ಲ. ಇದಲ್ಲದೆ change of heart ಅಂದರೆ ಹೃದಯ ಪರಿವರ್ತನೆಯಾಗಬೇಕು. ಇದರಿಂದ ನೂತನ ಸಮಾಜ ನಿರ್ಮಾಣವಾಗಬೇಕೆಂದು ತಿಳಿಸುತ್ತೇನೆ.

ಬಡತನ, ಕಷ್ಟದಲ್ಲಿ ಹರಿಜನರು ಇದ್ದಾರೆ. 100ಕ್ಕೆ 90ರಷ್ಟು ಜನ ಕೂಲಿಕಾರರ ಕೆಲಸ ಮಾಡುತ್ತಾರೆ. ಹರಿಜನರಿಗೆ ಸ್ವಂತದ ಜಮೀನು ಇರುವದಿಲ್ಲ, ಇತ್ತೀಚೆಗೆ ಸರಕಾರ ಜಮೀನು ಕೊಡುತ್ತಿದ್ದಾರೆ. ಆದರೆ ಹಳ್ಳಿಯಲ್ಲಿ ಜಮೀನು ಮಾಲಿಕರು ಆ ರೀತಿ ಕೊಟ್ಟದ್ದನ್ನು ಅವರಿಂದ ಕಿತ್ತುಕೊಳ್ಳುತ್ತಾರೆ. ನಿಜವಾಗಿಯೂ ಹರಿಜನರಿಗೆ ಇದರಿಂದ ಸಹಾಯವಾಗುತ್ತಿಲ್ಲ ಎಂದು ಹೇಳಬೇಕಾಗಿದೆ. ಈ ಸಮಸ್ಯೆ ಪರಿಹಾರವಾಗಬೇಕಾಗಿದೆ. ಈ ಸಮಸ್ಯೆ ಬೃಹದಾಕಾರವಾಗಿ ನಮ್ಮ ಮುಂದೆ ನಿಂತಿದೆ. ನಮ್ಮ ಕರ್ತವ್ಯದ ದೃಷ್ಟಿಯಿಂದ ಈ ಕೆಲಸ ಮಾಡಬೇಕಾಗಿದೆ. ಇದರಲ್ಲಿ ಒಂದು ಸಂತೋಷಕರ ಸಂಗತಿ ಏನೆಂದರೆ ಹರಿಜನ ಇಲ್ಲದೇ ಇಂತಕ್ಕಂಥ ಮಾನ್ಯ ಸಚಿವೆಯರು ಈ ಇಲಾಖೆಯನ್ನು ವಹಿಸಿ ಕೊಂಡಿದ್ದಾರೆ. ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಹರಿಜನರ ವಿಚಾರ ಎಲ್ಲ ಅವರಿಗೆ ಗೊತ್ತಿದೆ. ಅದುದರಿಂದ ಸರಕಾರದ ಸಹಾಯ ನೇರವಾಗಿ ಜಾಗ್ರತೆ ಹರಿಜನ ಬಾಂಧವರಿಗೆ ತಲುಪಿ ಸಮಾಜ ದಲ್ಲಿಯ ಆರ್ಥಿಕ ಕೊರತೆ ಮಾಯವಾಗಿ ಒಳ್ಳೇ ನಾಗರಿಕರಾಗಿ ಬಾಳುವಹಾಗೆ ಸರಕಾರ ಹರಿಜನರಿಗೆ ಸಹಾಯ ಮಾಡಬೇಕು. ಇನ್ನೂ ಅಧಿಕವಾಗಿ ಈ ಬಾಬಗೆ ಹಣ ಒದಗಿಸಿ ಕೊಟ್ಟು ಹರಿಜನರ ಆಶೆ ಆಕಾಂಕ್ಷೆಗಳನ್ನು ನೆರವೇರಿಸುವಂತೆ ಮಾಡಿ ಸಮಾಜದಲ್ಲಿ ಸರಿಸಮಾನವಾದ ಹಕ್ಕು ಬಾಧ್ಯತೆಗಳನ್ನು ಪಡೆಯುವ ಹಾಗೆ ಕೆಲಸಮಾಡಬೇಕೆಂದು ಸರಕಾರಕ್ಕೆ ವಿನಯಪೂರ್ವಕವಾಗಿ ವಿನಂತಿ ಮಾಡಿ ಕೊಳ್ಳುತ್ತೇನೆ.

ಇನ್ನು ಲೇಬರ್ ಮತ್ತು ಎಂಪ್ಲಾಯಮೆಂಟ್–ನಮ್ಮ ಲೇಬರ್ ಇಲಾಖೆಯ ಸಚಿವರು ಕೂಲಿಕಾರರಿ ಗೋಸ್ಕರ ಅನೇಕ ಸೌಕರ್ಯಗಳನ್ನು ಮಾಡಿ ಕೊಟ್ಟಿದ್ದಾರೆ. ಈ ತುರ್ತು ಪರಿಸ್ಥಿತಿಯಲ್ಲಿ ಕೂಲಿ ಕಾರರು ಇನ್ನೂ ಹೆಚ್ಚು ಕೆಲಸ ಮಾಡಿ, ದೇಶದ ಸಂಪತ್ತು ಹೆಚ್ಚಿಸಿ, ದೇಶದ ಅಭಿವೃದ್ಧಿ ಕಾರ್ಯಕ್ಕೆ ಸರ್ವತೋಮುಖವಾಗಿ ಪ್ರಯತ್ನ ಮಾಡುತ್ತಿರುವದರಿಂದ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಎಂಪ್ಲಾಯಮೆಂಟ ಎಕ್ಸಚೇಂಜ ಆಫೀಸು ಡಿಸ್ಟ್ರಿಕ್ಟ ಹೆಡ್‌ಕ್ವಾರ್ಟರ್ಸಿನಲ್ಲಿ ಮಾತ್ರವಿರುತ್ತದೆ. ನೂರಾರು ಜನ, ಸಾವಿರಾರು ಜನ ಈ ಆಫೀಸಿನಲ್ಲಿ ಕಾಯಬೇಕಾಗುತ್ತದೆ. ಸಣ್ಣ ಪುಟ್ಟ ಕೆಲಸಕ್ಕಾಗಿ ಎಂಪ್ಲಾಯಮೆಂಟ ಎಕ್ಸಚೇಂಜ ಆಫೀಸಿನಲ್ಲಿ ರೆಜಿಸ್ಟರ್ ಮಾಡಿಸಬೇಕಾಗುತ್ತದೆ. ಇದರಿಂದ ಬಹಳ ಅನನುಕೂಲವಾಗಿದೆ. ಐದಾರು ವರ್ಷಗಳ ಹಿಂದೆ ರಿಜಿಸ್ಟರ್ ಮಾಡಿದ ಜನ ಕೆಲಸವಿಲ್ಲದೆ ಇದ್ದಾರೆ. ಈ ವ್ಯವಸ್ಥೆ ಸರಿಯಾಗಿಲ್ಲ. ಈ ವಿಚಾರದಲ್ಲಿ ಸರಕಾರದ ನೀತಿ ಬದಲಾವಣೆಯಾಗಬೇಕಾಗಿದೆ. ನಿರುದ್ಯೋಗಿಗಳಿಗೆ ಜಾಗ್ರತೆ ಕೆಲಸ ಒದಗಿಸಿಕೊಟ್ಟು ದೇಶದಲ್ಲಿಯ ನಿರುದ್ಯೋಗ ಸಮಸ್ಯೆ ಪರಿಹಾರ ವಾಗಲು ಅನುಕೂಲವಾಗುವ ರೀತಿಯ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸಿನಲ್ಲಿ ಒಂದೇ ಆಫೀಸು ಮಾಡದೆ ಇನ್ನೂ ಜಾಸ್ತಿ ಮಾಡಬೇಕು, ಒಂದು ಜಿಲ್ಲೆಗೆ ಎರಡು ಆಫೀಸು ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ.

ಇನ್ನೂ ಮಾತನಾಡುವುದು ಬಹಳವಿದೆ. ಆದರೆ ಕಾಲಾವಕಾಶವಿಲ್ಲ, ಕೊನೆಯದಾಗಿ ಒಂದು ವಿಷಯ ಪ್ರಸ್ತಾಪ ಮಾಡುತ್ತೇನೆ. ನ್ಯಾಷನಲ್ ಡಿಫೆನ್ಸ್ ಫಂಡಿಗೆ ಬಡವರು, ಮಧ್ಯಮ ವರ್ಗದವರು ಕೋಟ್ಯಾಂತರ ರೂಪಾಯಿ ಕೊಟ್ಟಿದ್ದಾರೆ. ಮಂತ್ರಿಗಳು ಸಹ ಒಂದು ತಿಂಗಳ ಸಂಬಳ ಕೊಟ್ಟಿದ್ದಾರೆ. ದೇಶದ ಹಿತ ದೃಷ್ಟಿಯಿಂದ ನಮ್ಮ ಗೌರ್ನರಾದ ಶ್ರೀಮನ್ ಮಹಾರಾಜರವರು, ತಮ್ಮ ಪ್ರೀವಿಪರ್ಸನ್ನು ಇತರರ ಹಾಗೆ ಉದಾರ ಮನಸ್ಸಿನಿಂದ ಬಿಟ್ಟು ಕೊಡಬೇಕೆಂದು ಆಶಿಸುತ್ತೇನೆ. ಈ ನಿಧಿಗೆ ಕೊಡ ಬೇಕೆಂದು ಸೂಚಿಸುತ್ತೇನೆ. ಶ್ರೀಮಂತರು ಹೆಚ್ಚು ಅನುಕೂಲವಿದ್ದವರು ಹೆಚ್ಚು ತ್ಯಾಗ ಮಾಡಿ ಈ ತುರ್ತು ಪರಿಸ್ಥಿತಿಯಲ್ಲಿ ದೇಶದ ಸಂರಕ್ಷಣೆಗೆ ಸಹಾಯ ಮಾಡಬೇಕೆಂದು ಸೂಚಿಸುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವ ಬೇಡಿಕೆಗಳ ಬಗ್ಗೆ ಮಾತನಾಡುತ್ತ ಒಂದೆರಡು ಸಲಹೆ ಮಾಡಲಿಚ್ಛಿಸುತ್ತೇನೆ. ಸ್ವಾಮಿ, ನಮ್ಮ ದೇಶಕ್ಕೆ ಸ್ವರಾಜ್ಯ ಬಂದು 15 ವರ್ಷವಾಯಿತು. ಈ ಪರ್ವಕಾಲದಲ್ಲಿ ಜನತೆಗೆ ವಸತಿ ಸೌಕರ್ಯ ಒದಗಿಸಿಕೊಟ್ಟಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. ನಮ್ಮ ಮುಂದೆ ಈಗ ಇರತಕ್ಕಂಥ ಡಿಮಾಂಡುಗಳನ್ನು ಪರಿಶೀಲನೆ ಮಾಡಿ ನೋಡಿದರೆ ನಾಲ್ಕಾರು ರೂಪದಲ್ಲಿ ವಸತಿ ಸೌಕರ್ಯಕ್ಕಾಗಿ ಹಣ ಒದಗಿಸುವ ಕಲ್ಪನೆ ಮಾಡಿದ್ದಾರೆ. ಹೌಸಿಂಗಬೋರ್ಡ ಮುಖಾಂತರ, ಹೌಸಿಂಗ ಕಾರ್ಪೊರೇಷನ್ ಮುಖೇನ ಹಾಗೂ ಇನ್ನೂ ಕೆಲವು ಬಾಬುಗಳ ಮುಖೇನ ವಸತಿ ಸೌಕರ್ಯಕ್ಕೆ ಹಣ ಒದಗಿಸುವ ಏರ್ಪಾಡು ಮಾಡಿದ್ದಾರೆ.

ಲೋ ಇನ್‌ಕಂಗ್ರೂಪಿಗೆ ಸಂಬಂಧಪಟ್ಟವರಿಗೆ ಅನೇಕ ತರಹ ಸೌಕರ್ಯಗಳನ್ನು ಒದಗಿಸಿಕೊಡಲು ಸರ್ಕಾರದವರು ಹಣವನ್ನು ಒದಗಿಸಿದ್ದಾರೆ. ಆದರೆ ಹಳ್ಳಿಯ ಜನತೆಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲು ರೂರಲ್ ಹೌಸಿಂಗ್ ಸೆಲ್ ಮುಖೇಣ ಈ ವರ್ಷ ಬಜೆಟ್ಟಿನಲ್ಲಿ ಸರ್ಕಾರದವರು

(ಶ್ರೀ ಎಚ್. ಡಿ. ದೇವೇಗೌಡ)

ಹಣವನ್ನೊದಗಿಸಿರುವುದು ಕೇವಲ 81 ಸಾವಿರ ರೂಪಾಯಿಗಳು ಮಾತ್ರ. ಇದು ಬಹಳ ಶೋಚನೀಯವಾಗಿ ಕಾಣುತ್ತದೆ. ಏತಕ್ಕೆಂದರೆ 100ಕ್ಕೆ 80 ಜನ ಹಳ್ಳಿಗಾಡುಗಳಲ್ಲಿವಾಸವಾಗಿದ್ದಾರೆ. ಹಳ್ಳಿಗಾಡಿನಲ್ಲಿರತಕ್ಕ ಜನತೆಗೆ ವಸತಿ ಸೌಕರ್ಯವನ್ನು ಒದಗಿಸಲು ಸಾಕಷ್ಟು ಹಣವನ್ನು ಸರ್ಕಾರದವರು ಒದಗಿಸಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಹಳ್ಳಿಗಾಡುಗಳಲ್ಲಿ ಅನೇಕ ಜನ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರೆ. ಹಳ್ಳಿಗಾಡಿನ ಜನತೆಗೆ ವಸತಿ ಸೌಕರ್ಯವನ್ನು ಒದಗಿಸುವ ವಿಷಯದಲ್ಲಿ ಸರ್ಕಾರದವರ ಸಾಕಷ್ಟು ಪ್ರಾಶಸ್ತ್ಯವನ್ನು ಕೊಟ್ಟಿಲ್ಲ. ಹಳ್ಳಿಗಾಡಿನ ಜನತೆಯ ಬಗ್ಗೆ ಒಂದು ಅಲಕ್ಷ್ಯ ಮನೋಭಾವನೆಯನ್ನು ತೋರಿಸಿದರೆ ಸರ್ಕಾರದ ಧ್ಯೇಯ ಧೋರಣೆಗಳೇನಿವೆಯೋ ಅವುಗಳಿಗೆ ಒಂದು ಉತ್ತಮವಾದ ಪರಿಣಾಮ ದೊರೆಯುವುದಿಲ್ಲ. ಆದ್ದರಿಂದ ಹಳ್ಳಿಗಾಡಿನ ಜನತೆಗೆ ವಸತಿ ಸೌಕರ್ಯಗಳನ್ನು ಕಲ್ಪಿಸುವುದರ ಬಗ್ಗೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕಳೆದ ಅಧಿವೇಶನದಲ್ಲಿ ಒಂದು ವಿಷಯವನ್ನು ಈ ಸಭೆಯಲ್ಲಿ ನಾನು ತಂದಿದ್ದೆ. ಅದೇನೆಂದರೆ ಕಳೆದ ವರ್ಷ ನನ್ನ ತಾಲ್ಲೂಕಿನಲ್ಲಿರುವ ಒಂದು ಊರಿಗೆ ಮನೆಯನ್ನು ಕಟ್ಟಿಸಲು ರೂರಲ್ ಹೌಸಿಂಗ್ ಸೆಲ್ ಮುಖೇಣ ಹಣವನ್ನು ಒದಗಿಸಿದ್ದೇವೆಂದು ಸರ್ಕಾರದವರು ಒಂದು ಆರ್ಡರನ್ನು ಹೊರಡಿಸಿದರು. ಆ ಮೇಲೆ ಸ್ವಲ್ಪ ದಿವಸಗಳಾದಮೇಲೆ ಇಲ್ಲ ಎಂದು ಹೇಳಿ ಆರ್ಡರನ್ನು ವಿತ್‌ಡ್ರಾ ಮಾಡಿದರು. ಇದರಿಂದ ಆ ಊರಿನ ಜನಗಳಿಗೆ ಬಹಳ ತೊಂದರೆಯಾಯಿತು. ಇಂತಹ ವೇಗ್ ಆರ್ಡರ್ ಹೊರಡಿಸುವುದಕ್ಕೆ ಮುಂಚೆ ಹಳ್ಳಿಗಾಡಿನ ಜನತೆಗೆ ವಸತಿ ಸೌಕರ್ಯಗಳನ್ನು ಒದಗಿಸತಕ್ಕ ಬಾಬಿನಲ್ಲಿ ಹಣ ಇದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿ ಸರ್ಕಾರದವರು ಆರ್ಡರನ್ನು ಹೊರಡಿಸುವುದು ಉತ್ತಮ ಎಂದು ನಾನು ಹೇಳುತ್ತೇನೆ. ಇಂತಹ ಅವಿವೇಕವಾದ ಆರ್ಡರುಗಳನ್ನು ಹೊರಡಿಸುವುದರಿಂದ ಜನತೆಗೆ ಹೆಚ್ಚಿನ ತೊಂದರೆಯಾಗುತ್ತದೆ. ಆದ್ದರಿಂದ ಇನ್ನು ಮುಂದೆ ಹಳ್ಳಿಗಾಡಿನ ಜನತೆಗೆ ವಸತಿ ಸೌಕರ್ಯವನ್ನು ಒದಗಿಸುವ ಬಗ್ಗೆ ಯಾವ ಒಂದು ಆರ್ಡರನ್ನು ಹೊರಡಿಸಬೇಕಾದರೂ ಕೂಡ ಆ ಬಾಬಿನಲ್ಲಿ ಹಣ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿ ನಂತರ ಆರ್ಡರನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಸೋಷಿಯಲ್ ವೆಲ್‌ಫೇರ್ ಬಗ್ಗೆ ಹೇಳುವುದಾದರೆ, ಈ ವಿಷಯದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಹಿಂದುಳಿದಿರತಕ್ಕ ಜನಾಂಗದವರ ಅಂಕಿ ಅಂಶಗಳನ್ನು ನೋಡುವುದಾದರೆ ಅವರಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆತಿಲ್ಲ, ಉತ್ತಮ ಜನಾಂಗದವರು ಹಿಂದುಳಿದ ಜನಾಂಗದವರಿಗೆ ಕಿರುಕುಳವನ್ನು ಕೊಡುತ್ತಿದ್ದಾರೆ ಎನ್ನತಕ್ಕಂಥ ಆರೋಪಣೆಗಳನ್ನು ನಾವು ಕೇಳುತ್ತಿದ್ದೇವೆ. ಕೆಲವರು ಹಿಂದುಳಿದ ಜನಾಂಗದವರನ್ನು ಶೋಷಣೆ ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಸರ್ಕಾರದವರು ಹಿಂದುಳಿದ ಜನಾಂಗದವರಿಗೆ ಮತ್ತು ಹರಿಜನರಿಗೆ ಕೊಡತಕ್ಕಂಥ ಸಹಾಯ ಧನ ಸರಿಯಾದ ರೀತಿಯಲ್ಲಿ ಅವರಿಗೆ ಮುಟ್ಟುವುದಕ್ಕೆ ಅಧಿಕಾರಿಗಳು ಅವಕಾಶವನ್ನು ಮಾಡಿಕೊಟ್ಟಿದ್ದರೂ ಕೂಡ ನಾನು ನೋಡಿರುವ ಹಾಗೆ ಸಾಮಾನ್ಯವಾಗಿ ಸ್ಥಳೀಯ ಅಧಿಕಾರಿಗಳು ಏನು ಇರುತ್ತಾರೆ, ಅವರು ಹಣವನ್ನು ಹಂಚತಕ್ಕ ಕಾಲದಲ್ಲಿ ಜನರಿಗೆ ಅನ್ಯಾಯ ಮಾಡುತ್ತಾರೆ, ಎನ್ನುವುದು ಎಲ್ಲರಿಗೂ ಗೊತ್ತಿದೆ. ಈ ಇಲಾಖೆಯಲ್ಲಿ ಸ್ವಲ್ಪ ಮಟ್ಟಿಗೆ ದಲ್ಲಾಳಿಗಳು ಜಾಸ್ತಿಯಾಗಿದ್ದಾರೆ. ಸರ್ಕಾರದವರು ಕೊಡತಕ್ಕಂಥ ಯಾವ ಹಣ ಸಾಮಾನ್ಯ ಮನುಷ್ಯನಿಗೆ ದೊರೆಯಬೇಕೋ ಅದು ಅವನಿಗೆ ದೊರೆಯುತ್ತಾ ಇಲ್ಲ. ಹರಿಜನರಿಗೆ ಕುರಿ, ಹಸು, ಎತ್ತುಗಳು ಇವುಗಳನ್ನು ಒದಗಿಸುವ ವಿಷಯದಲ್ಲಿ ಎಲ್ಲಾ ಬೋಗಸ್ ಆಗಿ ನಡೆಯುತ್ತಿದೆ. ಕುರಿ, ಹಸು, ಎತ್ತುಗಳು ಮುಂತಾದುವುಗಳನ್ನು ತಂದು ಸಂಬಂಧಪಟ್ಟ ಕಮಿಟಿಯವರ ಮುಂದೆ ತೋರಿಸಿ ಯಾರಿಗೆ ಅವುಗಳನ್ನು ಕೊಡಬೇಕೋ ಅವರ ಸಹಿಯನ್ನು ಮಾತ್ರ ಪಡೆದು ಅವುಗಳನ್ನು ಅವರಿಗೆ ಕೊಡದೆ ಅವು ಮಧ್ಯದಲ್ಲಿಯೇ ವಿಲೇವಾರಿಯಾಗುತ್ತವೆ. ಆದ್ದರಿಂದ ಅದನ್ನು ನಿಲ್ಲಿಸಿ ಹರಿಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಹಣವನ್ನು ವೆಚ್ಚ ಮಾಡುವುದು ಸೂಕ್ತ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವ ವಿಚಾರದಲ್ಲಿ ಹೇಳುವುದಾದರೆ ಕಳೆದ ಅಧಿವೇಶನದಲ್ಲಿ ಅಪೂರ್ಣವಾಗಿರತಕ್ಕ ಹರಿಜನರ ಮನೆಗಳನು ಪೂರ್ಣಗೊಳಿಸಲು ಸರ್ಕಾರದವರು ಹಣವನ್ನೊದಗಿಸಬೇಕೆಂದು ಹೇಳಿದ್ದೆನು. ಆ ಬಗ್ಗೆ ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಆದರೆ ಇದುವರೆಗೂ ಆ ರೀತಿ ಅರ್ಧಂಬರ್ಧ ಮನೆಗಳನ್ನು ಕಟ್ಟಿಕೊಂಡಿರತಕ್ಕ ಹರಿಜನರಿಗೆ ಸರ್ಕಾರದವರು ಇನ್ನೂ ಹಣವನ್ನು ಒದಗಿಸಿಲ್ಲ. ನಮ್ಮ ತಾಲ್ಲೂಕಿನಲ್ಲಿ ಸುಮಾರು 129 ಮನೆಗಳು ಅರ್ಧಂಬರ್ಧವಾಗಿವೆ. ಅವುಗಳಿಗೆ ಸರ್ಕಾರದವರು ಹಣವನ್ನೊದಗಿಸದಿದ್ದರೆ ಅವು ಪೂರ್ಣವಾಗುವುದಿಲ್ಲ.

ಇದುವರೆಗೆ ಅರ್ಧಂಬರ್ಧ ಮನೆಗಳನ್ನು ಕಟ್ಟುವುದಕ್ಕೆ ಏನು ಹಣವನ್ನು ಖರ್ಚು ಮಾಡಿದ್ದಾರೆಯೋ ಅದರಿಂದ ಯಾವ ಪ್ರತಿಫಲವೂ ಅವರಿಗೆ ಬರುವುದಿಲ್ಲ. ಮತ್ತು 129 ಸಂಸಾರಗಳಿಗೂ ಯಾವ ಉಪಯೋಗವೂ ಆಗುವುದಿಲ್ಲ. ಆದ್ದರಿಂದ ಈಗ ಅಪೂರ್ಣವಾಗಿರತಕ್ಕ ಮನೆಗಳನ್ನು ಪೂರ್ಣ ಮಾಡುವುದಕ್ಕೆ ಸರ್ಕಾರದವರು ಯಾವುದಾದರೂ ರೀತಿಯಲ್ಲಿ ಹಣವನ್ನು ಪ್ರೊವೈಡ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಈಗ ಹಳ್ಳಿಗಾಡಿನ ಜನರಿಗೆ ಮನೆಗಳನ್ನು ಕಟ್ಟಿಸಲು ರೂರಲ್ ಹೌಸಿಂಗ್ ಬೋರ್ಡ್, ಕೋ-ಆಪರೇಟೀವ್ ಸೊಸೈಟಿಗಳ ಮುಖೇಣ ಹಣವನ್ನು ಹಂಚುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ನನಗೆ ತಿಳಿದಿರುವ ಹಾಗೆ ಯಾವ ಹೌಸಿಂಗ್ ಬೋರ್ಡ್, ಕೋ-ಆಪರೇಟೀವ್ ಸೊಸೈಟಿಗಳೂ ಸಹ ಕಾರ್ಯತಃ ಸರಿಯಾಗಿ ನಡೆಯುತ್ತಿಲ್ಲ. ತಹಸೀಲ್ದಾರರು, ಬಿ.ಡಿ.ಓಗಳು ಮತ್ತು ಅದಕ್ಕೆ ಸಂಬಂಧಪಟ್ಟ ಸೋಷಿಯಲ್ ವೆಲ್‌ಫೇರ್ ಇನ್ಸ್‌ಪೆಕ್ಟರುಗಳಿಂದ ಹಳ್ಳಿಗಾಡಿನಲ್ಲಿ ಎಲ್ಲೆಲ್ಲಿ ಮನೆಗಳಿಲ್ಲ, ಯಾರು ಯಾರಿಗೆ ಮನೆಗಳಿಲ್ಲ ಎನ್ನತಕ್ಕಂಥ ಅಂಕಿ ಅಂಶಗಳನ್ನು ಒಳಗೊಂಡ ಒಂದು ವರದಿಯನ್ನು ಯಾವ ಅಧಿಕಾರಿಗಳೂ ತರಿಸಿಕೊಂಡದ್ದು ನಮಗೆ ಕಂಡುಬಂದಿಲ್ಲ. ಹಳ್ಳಿಗಾಡಿನ ಜನತೆಗೆ ಮನೆಗಳನ್ನು ಕಟ್ಟಲು ಹೌಸಿಂಗ್ ಬೋರ್ಡ್ ಸೊಸೈಟಿಗಳ ಮುಖೇಣ ಹಣವನ್ನು ಒದಗಿಸಿ ಅವರಿಗೆ ವಸತಿ ಸೌಕರ್ಯವನ್ನು ಒದಗಿಸುವ ಬಗ್ಗೆ ಸರ್ಕಾರದವರು ಫೇಲಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಸರ್ಕಾರದವರು ಹಳ್ಳಿಗಾಡಿನ ಜನತೆಗೆ ವಸತಿ ಸೌಕರ್ಯವನ್ನೊದಗಿಸಲು ರೂರಲ್ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿಗಳಿಗೆ ಸಾಕಷ್ಟು ಹಣವನ್ನು ಒದಗಿಸಿ ಅವರಿಗೆ ವಸತಿ ಸೌಕರ್ಯವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಬಗ್ಗೆ ಉದಾಹರಣೆಗಳನ್ನು ಕೊಟ್ಟು ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ನಿನವರು ಇತ್ತೀಚೆಗೆ ಕೆಲವು ಜಿಲ್ಲೆಗಳಲ್ಲಿ ಬಸ್ ರೂಟನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಆ ಪ್ರದೇಶಗಳಲ್ಲಿ ಸರ್ಕಾರದವರು ವ್ಯವಸ್ಥಿತವಾದ ರೀತಿಯಲ್ಲಿ ಬಸ್ಸುಗಳನ್ನು ಓಡಿಸುತ್ತಿಲ್ಲ. ಪ್ರಯಾಣಿಕರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ಕೆಲವು ಕಡೆ 200-300 ಮೈಲುದೂರ ಕೆಲವು ಬಸ್ಸುಗಳನ್ನು ಓಡಿಸುತ್ತಾರೆ. ಅಂಥಾ ಬಸ್ಸುಗಳ ಬಾಡಿಗಳು ಒಂದೂ ಸರಿಯಾಗಿಲ್ಲ. ಆ ರೂಟುಗಳಲ್ಲಿ ಬಹಳ ಅವ್ಯವಸ್ಥೆಯನ್ನು ಮಾಡಿದ್ದಾರೆ. ಆದ್ದರಿಂದ ಕೆಟ್ಟುಹೋಗಿರತಕ್ಕ ಬಸ್ಸುಗಳನ್ನು ರಿಪೇರಿ ಮಾಡಿಸಿ, ಪ್ರಯಾಣಿಕರಿಗೆ ಸೌಲಭ್ಯವನ್ನು ಒದಗಿಸುವುದಕ್ಕೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಹಾಸನ ಜಿಲ್ಲೆ ಮತ್ತು ಇನ್ನೂ ಕೆಲವು ಕಡೆ ಅನೇಕ ಬಸ್ಸುಗಳು ಕೆಟ್ಟು ಹೋಗಿವೆ. ಅಂಥಾ ಬಸ್ಸುಗಳನ್ನು ಹುಬ್ಬಳ್ಳಿ ವರ್ಕ್‌ಷಾಪಿಗಾಗಲೀ ಅಥವಾ ಬೆಂಗಳೂರು ವರ್ಕ್‌ಷಾಪಿಗಾಗಲೀ ಕಳುಹಿಸಿ ರಿಪೇರಿ ಮಾಡಿಸಬೇಕು ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ಬಸ್ಸುಗಳನ್ನು ಓಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲ್‌ಮಲ).—ಮಾನ್ಯ ಅಧ್ಯಕ್ಷರೇ, ನಾನು ಸೋಷಿಯಲ್ ವೆಲ್‌ಫೇರ್ ಬೋರ್ಡ್ ಡಿಮ್ಯಾಂಡಿನ ಬಗ್ಗೆ ಎರಡು ಮಾತುಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ರಾಯಚೂರು ಜಿಲ್ಲೆ ಬಹಳ ಹಿಂದುಳಿದ ಪ್ರದೇಶ. ಈ ಪ್ರದೇಶದ ಕಡೆಗೆ ನಮ್ಮ ಸರ್ಕಾರದವರು ಹೆಚ್ಚು ನಿಗಾ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಹರಿಜನರ ಅಭಿವೃದ್ಧಿಗಾಗಿ ಮತ್ತು ಹರಿಜನರ ವಿದ್ಯಾರ್ಥಿನಿಲಯಗಳಿಗೆ ಸರ್ಕಾರದವರು ಕೊಡತಕ್ಕಂಥ ಗ್ರಾಂಟನ್ನು ಬಹಳ ಕಡಿಮೆ ಕೊಡುತ್ತಿದ್ದಾರೆ. ಇದನ್ನು ಹೆಚ್ಚಿಗೆ ಕೊಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹರಿಜನ ವಿದ್ಯಾರ್ಥಿಗಳಿಗೆ ಸರ್ಕಾರದವರು ಕೊಡತಕ್ಕಂಥ ಸ್ಕಾಲರ್‌ಷಿಪ್ ಮತ್ತು ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಳ್ಳಲು ಕೊಡುತ್ತಿರುವ ಧನಸಹಾಯ ಇವುಗಳ ಕಡೆಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮಗೆ ಸ್ವಾತಂತ್ರ್ಯ ಬಂದು 15 ವರ್ಷಗಳಾದರೂ ಕೂಡ ಹರಿಜನರಿಗೆ ಸೈಟುಗಳನ್ನು ಸರಿಯಾದ ರೀತಿ ಒದಗಿಸುತ್ತಿಲ್ಲ.

[MR. Deputy SPEAKER in the Chair].

ಆರು ಸಾವಿರ ಬಾವಿಗಳನ್ನು ಮಂಜೂರು ಮಾಡಿದ್ದೇವೆಂದು ಹೇಳುತ್ತೀರಾ ಇದುವರೆಗೆ ಕುಡಿಯುವುದಕ್ಕೆ ಬಾವಿಗಳು ಇಲ್ಲ, ಬಹಳ ಕಷ್ಟವಿದೆ, ಬಹಳ ಘೋರವಾದ ಕಷ್ಟವಿದೆ, ಆ ಕಷ್ಟ ಹೇಳುವುದಕ್ಕೆ

(ಶ್ರೀಮತಿ ನಾಗಮ್ಮ)

ಸಾಧ್ಯವಿಲ್ಲ. ಅದರ ಸಲುವಾಗಿ ಇದರ ಕಡೆ ಹೆಚ್ಚು ಗಮನ ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತಾ ಇದ್ದೇನೆ. ನಮ್ಮ ದೇಶ ಬಹಳ ಬಡತನದ ದೇಶ. ಅದರಲ್ಲಿ ನಮ್ಮ ಪ್ರದೇಶದಲ್ಲಿ ಬಹಳ ಬಡತನವಿದೆ. ಆದ್ದರಿಂದ ಹಣ ಮಂಜೂರು ಮಾಡುವಾಗ ಈ ಪ್ರದೇಶಕ್ಕೆ ಆಗಾಗ್ಗೆ ಹೆಚ್ಚಿನ ದುಡ್ಡು ಕೊಟ್ಟು, ಎಲ್ಲಾ ಹರಿಜನರಿಗೂ ಸಲಹೆ ಮಾಡಿ ಕೊಡಬೇಕೆಂದು ಸಲಹೆ ಮಾಡಿಕೊಳ್ಳುತ್ತೇನೆ. ಮೊದಲು ಹರಿಜನರಿಗೆ ಮನೆಗಳು ಉಳಿದಿರುವುದಿಲ್ಲ, ಅವುಗಳ ಬಗ್ಗೆ ಸೌಲಭ್ಯ ಒದಗಿಸಿಕೊಡಬೇಕು.

ಹರಿಜನ ಹಾಸ್ಟಲ್ಲುಗಳಿಗೆ ಮಕ್ಕಳಿಗೆ 15 ರೂಪಾಯಿ ಕೊಡುತ್ತಿದ್ದಾರೆ; ಅದು ಸಾಲದು; ಅದನ್ನು ಹೆಚ್ಚಿಸಿ 30 ರೂಪಾಯಿ ಮಾಡಿಕೊಡಬೇಕು; ನಮ್ಮಲ್ಲಿ ಹಾಸ್ಟಲನ್ನು ಮಾಡಿದ್ದಾರೆ; ಅದರಲ್ಲಿ ಸ್ಥಳ ಸಾಲದು. ನೀರಿನ ಕಷ್ಟ, ವಸತಿ ಕಷ್ಟ ಇದೆ. ಕಾಂಪೌಂಡು ಹಾಕಿಲ್ಲ; ಈ ಸೌಕರ್ಯಗಳನ್ನೆಲ್ಲಾ ಏರ್ಪಡಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

3.00 P. M.

ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ನಮ್ಮ ಹರಿಜನ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಆಟಪಾಟಗಳ ಸಾಮಾನುಗಳನ್ನು ಒದಗಿಸಲು ಏನಾದರೂ ಸಹಾಯ ಮಾಡಬೇಕು.

ನಮ್ಮ ರೆವಿನ್ಯೂ ಮಂತ್ರಿಗಳಲ್ಲಿ ನಾಲ್ಕು ಮಾತುಗಳನ್ನು ಕೇಳಿಕೊಳ್ಳಬೇಕೆಂದಿದ್ದೇನೆ. ಇದುವರೆಗೆ ಹರಿಜನರಿಗೆ ಮಂಜೂರು ಮಾಡಿರತಕ್ಕ ಗೈರಾಣಿ ಭೂಮಿಯಲ್ಲಿ, ಹರಿಜನರಿಗೆ ಕೊಡಲು ಸಾಕಾಗಿಲ್ಲ. ಇನ್ನು ಒಂದೆರಡು ತಿಂಗಳೊಳಗಾಗಿ, ಎಲ್ಲೆಲ್ಲಿ ಗೈರಾಣಿ ಭೂಮಿ ಇರುತ್ತದೆಯೋ, ಅದನ್ನು ತೀವ್ರವಾಗಿ ಎಲ್ಲರಿಗೂ ಹಂಚಿಕೊಡಬೇಕು. ಈ ಸಂಬಂಧದಲ್ಲಿ, ದೊಡ್ಡ ದೊಡ್ಡ ರೈತರು 200-300 ಎಕರೆ ಗೈರಾಣಿ ಭೂಮಿಯನ್ನು ಅಭಿವೃದ್ಧಿ ಮಾಡುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸರ್ವೆ ಮಾಡಿ, ಜಮೀನು ಹಂಚುವ ಬಗ್ಗೆ ನಿಗಾ ಕೊಡಬೇಕು. ಅದನ್ನು ಬರೀ ಹರಿಜನ ಗಿರಿಜನರಿಗೇ ಕೊಡಬೇಕೆಂದು ಹೇಳುತ್ತಿಲ್ಲ. ಬಡವರು ಯಾರಿದ್ದಾರೆಯೋ, ಭೂಮಿ ಇಲ್ಲದವರು ಯಾರಿದ್ದಾರೆಯೋ, ಎಲ್ಲರಿಗೂ ಕೊಡಬೇಕು. ಈ ಸಲಹೆಯನ್ನು ಎರಡು ತಿಂಗಳೊಳಗಾಗಿ ಜಾರಿಗೆ ಕೊಡಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ನಮ್ಮ ಮೈಸೂರು ರಾಜ್ಯ ಬಹಳ ಬಡತನದ ರಾಜ್ಯ. ಅದರಲ್ಲಿಯೂ ನಮ್ಮ ಮೂರು ಡಿಸ್ಟ್ರಿಕ್ಟುಗಳು, ಅಂದರೆ, ಬದರ್, ಗುಲ್ಬರ್ಗ, ರಾಯಚೂರು, ರಾಜ್ಯದಲ್ಲಿರುವ 19 ಜಿಲ್ಲೆಗಳಲ್ಲಿ ಬಹಳ ಹಿಂದುಳಿದಿವೆ. ಅದಕ್ಕೋಸ್ಕರ ಆ ಜಿಲ್ಲೆಗಳಿಗೆ ಹೆಚ್ಚು ಗಮನ ಕೊಡಬೇಕು, ಮತ್ತು ಹರಿಜನ ಉದ್ಧಾರ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹರಿಜನರ ಮಕ್ಕಳೂ ಹುಡುಗರು ವಿದ್ಯಾಭ್ಯಾಸ ಮಾಡುವುದಕ್ಕೆ ಹೆಚ್ಚಿಗೆ ಶಾಲೆಗಳು, ಹೆಚ್ಚಿಗೆ ಹಾಸ್ಟಲುಗಳ ಅನುಕೂಲ ಮಾಡಿಕೊಡಬೇಕು. ಊಟಕ್ಕೆ ಕೊಡುವ ನಾಲ್ಕು ಆಣೆ ಛಾರ್ಜೇನೂ ಸಾಲದು; ಅದನ್ನು ಒಪ್ಪತ್ತಿಗೆ ಎಂಟು ಆಣೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಸೋಷಿಯಲ್‌ವೆಲ್‌ಫೇರ್ ಇಲಾಖೆಯ ಕೆಲಸಗಳು ತ್ವರಿತವಾಗಿ ನಡೆಯಬೇಕಾದರೆ, ಸೋಷಿಯಲ್ ವೆಲ್‌ಫೇರ್ ಆಫೀಸುಗಳಿಗೆ ಜೀಪು ಕೊಡಬೇಕು; ಕೊಡಬೇಕೆಂದು ಬಹಳ ವಿಧವಾಗಿ ಕೇಳಿಕೊಂಡಿದ್ದೇನೆ. ನಮ್ಮ ಕಡೆ ರಸ್ತೆಗಳು ಇಲ್ಲ ; ಇದ್ದವೂ ಚೆನ್ನಾಗಿಲ್ಲ ; ನಮ್ಮದು ಗುಡ್ಡಗಾಡು ಪ್ರದೇಶ, ಆದ್ದರಿಂದ ಸೋಷಿಯಲ್ ವೆಲ್‌ಫೇರ್ ಆಫೀಸರಿಗೆ ಓಡಾಡಲಿಕ್ಕೆ ಜೀಪು ಬೇಕೇ ಬೇಕು; ಇಲ್ಲದೆ ಹೋದರೆ ಕೆಲಸ ಕಾರ್ಯಗಳು ಆಗುವುದಿಲ್ಲ ಮತ್ತು ನಿಮ್ಮ ಉದ್ದೇಶ ನೆರವೇರುವುದಿಲ್ಲ. ನಮ್ಮ ಜಿಲ್ಲೆಯ ಕಲೆಕ್ಟರು ಬಹಳ ಒಳ್ಳೆಯವರಿದ್ದಾರೆ; ನಮ್ಮ ತಾಲ್ಲೂಕಿನ ಅಮಲ್ದಾರರೂ ಒಳ್ಳೆಯವರಿದ್ದಾರೆ; ಆಫೀಸರುಗಳೆಲ್ಲಾ ಒಳ್ಳೆಯವರಿದ್ದಾರೆ. ನಮ್ಮ ರೆವಿನ್ಯೂ ಮಂತ್ರಿಗಳೂ ರೈತರ ಉದ್ಧಾರಕ್ಕಾಗಿ ಬಹಳ ಕಷ್ಟಪಡುತ್ತಿದ್ದಾರೆ, ಅವರು ಬಹಳ ದಯಾಳುಗಳು. ನಮ್ಮ ಜಿಲ್ಲೆಯ ಅವಶ್ಯಕತೆಯನ್ನು ಅರಿತು ಜೀಪನ್ನು ಅಲ್ಲಿಗೆ ತಕ್ಷಣ ಕೊಟ್ಟೇ ಕೊಡುತ್ತಾರೆಂದು ನಂಬಿದ್ದೇನೆ. ಈ ಜೀಪುಗಳು ಬೆಂಗಳೂರು ಸಿಟಿಯಲ್ಲೇ ಓಡಾಡುತ್ತವೆ, ಅವುಗಳನ್ನು ಜಿಲ್ಲೆ ಜಿಲ್ಲೆಗೂ ಕೊಡಲಿಕ್ಕೇ ಬೇಕು.

ಇದೂ ಅಲ್ಲದೇ ಹರಿಜನರಿಗಾಗಿ ಕೊಟ್ಟ ಗ್ರಾಂಟನ್ನು ಬಟವಾಡೆ ಮಾಡಬೇಕಾದರೆ ಸೋಷಿಯಲ್ ವೆಲ್‌ಫೇರ್ ಆಫೀಸರೂ ಹರಿಜನರೇ ಇದ್ದರೆ ಬಹಳ ಅನುಕೂಲವಾಗುತ್ತದೆ. ಇನ್ನಾರಾದರೂ ಬೇರೆಯವರು ಆ ಹುದ್ದೆಯಲ್ಲಿದ್ದರೆ, ಹರಿಜನರ ಉದ್ಧಾರವಾಗುವುದಿಲ್ಲ.

ಈ ಎರಡು ಮಾತನ್ನು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸ್ವಾಮಿ, ಈ ಸಮಾಜ ಕಲ್ಯಾಣ ವಿಷಯದಲ್ಲಿ ಅನೇಕರು ಚೆನ್ನಾಗಿ ಹೇಳಿದ್ದಾರೆ. ನಮ್ಮ ಮೈಸೂರಿನಲ್ಲಿ 15 ವರ್ಷದಿಂದ ಸಮಾಜ ಕಲ್ಯಾಣಕ್ಕಾಗಿ, ಹರಿಜನರಿಗೋಸ್ಕರ, ಸರ್ಕಾರದವರು 25 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಅದರ ಪ್ರತಿಫಲ ಕಾಂಗ್ರೆಸ್ ಸರ್ಕಾರಕ್ಕೆ ಓಟಿನ ಮೂಲಕ ಬಂದಿದೆ. ಕಾಂಗ್ರೆಸ್ಸಿನವರು ಈ ಒಂದು ಅನುಕೂಲದಿಂದ ತಾವು ಚುನಾವಣೆಯಲ್ಲಿ ಗೆಲ್ಲಲಿಕ್ಕೆ ಅವಕಾಶ ಮಾಡಿಕೊಂಡಿದ್ದಾರೆಯೇ ವಿನ, ಈ ಹಣದಿಂದ ಹಿಂದುಳಿದ ಜನಾಂಗದ ಉದ್ಧಾರಕ್ಕೋಸ್ಕರವಾಗಿ ಏನೂ ಮಾಡಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಷೆಡ್ಯೂಲ್ಡ್ ಕ್ಯಾಸ್ಟುಗಳ ಓಟು ನಮ್ಮ ರಾಜ್ಯದಲ್ಲಿ ಸುಮಾರು 30 ಪರ್ಸೆಂಟಿನಷ್ಟಿದೆ. ಕಾಂಗ್ರೆಸ್ಸಿಗೆ ಚುನಾವಣೆಯಲ್ಲಿ ಬರುವುದು ಸುಮಾರು 35 ಪರ್ಸೆಂಟ್ ಓಟು. ಈ 25 ಕೋಟಿ ರೂಪಾಯಿಯನ್ನು ಚುನಾವಣೆಯಲ್ಲಿ ಜಯಗಳಿಸಲು ಒಂದು ಸಾಧನವಾಗಿ ಕಾಂಗ್ರೆಸ್ಸಿನವರು ಇಟ್ಟುಕೊಂಡಿದ್ದಾರೆ. ಈ ಸೋಷಿಯಲ್ ವೆಲ್‌ಫೇರ್ ಆಫೀಸರುಗಳನ್ನು ಆ ಉದ್ದೇಶಕ್ಕಾಗಿ ಉಪಯೋಗಿಸುತ್ತಿದ್ದಾರೆ ಮತ್ತು ಸೇವಕ ಮಾಡಿಕೊಂಡಿದ್ದಾರೆ. ಈ ಇಲಾಖೆಯ ಹಣ ದೊಡ್ಡ ಮೀನು ಚಿಕ್ಕ ಮೀನನ್ನು ತಿಂದ ಹಾಗೆ ದುರುಪಯೋಗವಾಗುತ್ತಿದೆ. ದೊಡ್ಡ ಮೀನು ಚಿಕ್ಕ ಮೀನನ್ನು ನುಂಗಿದ ಹಾಗೆ, ದೊಡ್ಡ ದೊಡ್ಡ ಅನುಕೂಲಸ್ಥ ಹರಿಜನರು ಚಿಕ್ಕ ಚಿಕ್ಕ ಅಸಹಾಯಕ ಹರಿಜನರ ಹೆಸರಿನಲ್ಲಿ ತಾವು ಉಪಯೋಗ ಹೊಂದಿ, ದಿಕ್ಕಿಲ್ಲದ ಹರಿಜನರಿಗೆ ಅನ್ಯಾಯ ಮಾಡುತ್ತಿದ್ದಾರೆ, ಅವರನ್ನು ಶೋಷಿಸುತ್ತಿದ್ದಾರೆ. ಈ ಸೋಷಿಯಲ್ ವೆಲ್‌ಫೇರ್ ಆಫೀಸರುಗಳ ನೇಮಕದಲ್ಲಿ ಯಾವ ಒಂದು ನೀತಿಯೂ ಇಲ್ಲ. ಅವರಿಗೆ ಕೊಡುವ ಸಂಬಳವೂ ಅನ್ಯಾಯ. ಹರಿಜನರ ಏಳಿಗೆಗಾಗಿ ಈ ಆಫೀಸರುಗಳು ಏನೂ ಮಾಡುತ್ತಿಲ್ಲ. ಈ ಇಲಾಖೆಯ ಮೂಲಕ ಹರಿಜನರು ಆರ್ಥಿಕವಾಗಿಯಾಗಲಿ, ವಿದ್ಯಾವಂತಿಕೆಯಲ್ಲಾಗಲೀ ಮುಂದುವರಿಯಲು ಸಾಧ್ಯವಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಈಗಲಾದರೂ ಸ್ವಾತಂತ್ರ್ಯ ಬಂದು 16 ವರ್ಷಗಳಾಗಿ 17ನೇ ವರ್ಷದಲ್ಲಿ ಕಾಲಿಟ್ಟಿರುವಾಗ ಈ ವೋಟಿನ ಭಯವನ್ನೂ, ಉದ್ದೇಶವನ್ನೂ ಬದಿಗಿಟ್ಟು ದೇಶದ ಅಭ್ಯುದಯಕ್ಕಾಗಿ, ಹಿಂದುಳಿದ ಜನಾಂಗದ ಏಳಿಗಾಗಿ, ಅವರ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ನಿಸ್ಪೃಹತೆಯಿಂದ ದುಡಿಯಲು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಲೇಬರ್ ಕಮೀಷನರ ಆಡಳಿತದಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಇವೆ. ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಒಂದು ದೊಡ್ಡ ಸಿಬ್ಬಂದಿ ಇಟ್ಟುಕೊಂಡು ಒಂದು ದಿವಸಕ್ಕೆ 30 ಜನ ನಿರುದ್ಯೋಗಿಗಳ ಹೆಸರುಗಳನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಅದಕ್ಕೆ ಅಭ್ಯರ್ಥಿಗಳಿಗೆ ಕೊಡುವ ತ್ರಾಸೆಷ್ಟು? ಬೆಳಿಗ್ಗೆ ನಾಲ್ಕು ಗಂಟೆಯಿಂದ ಸಂಜೆಯವರೆಗೆ ಅವರನ್ನು ಆಫೀಸಿನ ಮುಂದೆ ನಿಲ್ಲಿಸಿ ಕಾಯಿಸುತ್ತಾರೆ. ಇಷ್ಟು ಕಾಯಿಸಿ [illegible] ಹೋಗಲಿ, ಕೆಲಸ ಕೊಡುತ್ತಾರೆಯೇ? ಇಲ್ಲ, ಬರೀ ಹೆಸರು ರಿಜಿಸ್ಟರ್ ಮಾಡುತ್ತಾರೆ; ರಿಜಿಸ್ಟರು ಆದ ಮೇಲೆಯೂ ಕೆಲಸ ದೊರೆಯುವುದಿಲ್ಲ; ಕೆಲಸ ದೊರೆಯುವ ಅವಕಾಶವಿಲ್ಲ. ಯಾವುದಾದರೂ ಒಂದು ಇಲಾಖೆಯಲ್ಲಿ ನಾಲ್ಕು ವೇಕೆನ್ಸಿಗಳಿದ್ದರೆ, ಈ ಎಕ್ಸ್‌ಚೇಂಜಿಗೆ ಬರೆಯುತ್ತಾರೆ; ಇವರು 10 ಜನರ ಒಂದು ಲಿಸ್ಟನ್ನು ಅವರಿಗೆ ಕಳುಹಿಸುತ್ತಾರೆ. ಇಲಾಖೆಯವರು ಅದರಲ್ಲಿ ಆರಿಸಿಕೊಳ್ಳುತ್ತಾರೆ. ಈಗ ಏನೋ ಆ ಲಿಸ್ಟನ್ನು ಒಂದು ಪ್ರಯಾರಿಟಿ, ಒಂದು ಕ್ರಮಾನ್ವಯದ ಮೇಲೆ ತಯಾರಿಸುತ್ತಿದ್ದಾರಂತೆ. ಮೊದಲು ಸ್ವಲ್ಪ ಕೈಬೆಚ್ಚಗೆ ಮಾಡಿಬಿಟ್ಟರೆ, ತಮಗೆ ಬೇಕಾದವರನ್ನು ಸೇರಿ ಹಾಕುವುದು, ಬೇಡದವರನ್ನು ಕೈಬಿಡುವುದು ಎಲ್ಲಾ ಪಡಪೋಸಿ ಮಾಡುತ್ತಿದ್ದರಂತೆ. ಈಗೇನು ರಿಜಿಸ್ಟರು ಮಾಡಿದ ಪ್ರಯಾರಿಟಿ ಪ್ರಕಾರ ಲಿಸ್ಟ್ ತಯಾರಿಸಿ ಕಳುಹಿಸುತ್ತಾರಂತೆ. 10 ಜನರಲ್ಲಿ 3-4 ಜನಕ್ಕೆ ಅಪಾಯಿಂಟ್‌ಮೆಂಟ್ ಆದರೆ ಜಾಸ್ತಿ; ಇದೂ ರಿಜಿಸ್ಟ್ರೇಷನ್ ಮತ್ತು ಮೆರಿಟ್ ಅಗ್ರಮಾನ್ಯತೆ ಮೇಲೆ ಸಿಗುವುದಿಲ್ಲ; ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಿಲ್ಲ. ಈ ಸಂಪತ್ತಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಈ ಒಂದು ಶಾಖೆ ಏಕೆ ಇರಬೇಕು? ಇದರ ಅವಶ್ಯಕತೆ ನನಗಂತೂ ಅರ್ಥವಾಗುವುದಿಲ್ಲ. ಇದನ್ನು ತೆಗೆದು ಹಾಕಬಹುದೆಂದು ಕಾಣುತ್ತದೆ.

ಈ ಸೋಷಿಯಲ್ ವೆಲ್‌ಫೇರ್ ಆಫೀಸರುಗಳು ಡಿಸ್ಟ್ರಿಕ್ಟಿಗೆ ಒಬ್ಬೊಬ್ಬರಿದ್ದಾರೆ; ಅವರು ಏತಕ್ಕೆ? ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡುಗಳಿವೆ, ತಾಲ್ಲೂಕು ಬೋರ್ಡುಗಳಿವೆ, ಎನ್. ಇ. ಎಸ್ ಬ್ಲಾಕುಗಳಿವೆ; ಅವುಗಳ ಮೂಲಕ ಬಂದ ಹಣವನ್ನು ಹಂಚಬಹುದು. ಈ ಕೆಲಸಕ್ಕೋಸ್ಕರ ಸೋಷಿಯಲ್ ವೆಲ್‌ಫೇರ್ ಆಫೀಸರುಗಳಿಗೆ ಅನ್ಯಾಯವಾಗಿ ಏಕೆ ಸಂಬಳ ಕೊಡುತ್ತೀರಿ? ಅವರನ್ನು ಕೆಲಸದಲ್ಲಿಟ್ಟುಕೊಂಡಿರಬೇಕೆಂಬ ಆಕಾಂಕ್ಷೆ ಇದ್ದರೆ, ಅವರಿಗೆ ಇನ್ನೂ ಬೇರೆ ಯಾವುದಾದರೂ ಇಲಾಖೆಯಲ್ಲಿ ಕೆಲಸ ಇರುವ ಕಡೆ ಹಾಕಿ, ಅವರಿಂದ ಕೆಲಸ ತೆಗೆದುಕೊಂಡು ಸಂಬಳಕೊಡಿ, ಬೇಡ ಅನ್ನುವುದಿಲ್ಲ. ಈ ಗ್ರ್ಯಾಂಟುಗಳನ್ನು ಹಂಚಲಿಕ್ಕಾಗಿ ಇಟ್ಟಿರುವ ಈ ಸೋಷಿಯಲ್ ವೆಲ್‌ಫೇರ್ ಆಫೀಸರುಗಳನ್ನು ತೆಗೆದುಬಿಡಬೇಕು.

(ಶ್ರೀ ಬಿ. ಚನ್ನಬೈರೇಗೌಡ)

ಹಾಗೂ ಈ ಅಸ್ಪೃಶ್ಯತೆಯ ನಿವಾರಣೆಯ ಸಂಬಂಧದಲ್ಲಿ ಈ ಸರ್ಕಾರ ಬೇಕಾದಷ್ಟು ಕ್ರಮಗಳನ್ನು ತೆಗೆದುಕೊಂಡು ಇದನ್ನು ಜಾರಿಗೆ ತರಲು ಸುಮಾರು 15 ವರ್ಷಗಳಿಂದಲೂ ಒಂದೇಸಮನಾಗಿ ಅಧಿಕಾರ ನಡೆಸುತ್ತಿದ್ದಾರೆ. ಅನೇಕ ವರ್ಷಗಳಿಂದ ಈ ಅಸ್ಪೃಶ್ಯತೆ ನಿವಾರಣೆ ಮಾಡಲು ಮತ್ತು ಹರಿಜನರನ್ನು ಉದ್ಧಾರ ಮಾಡಲು ಇವರು ತೆಗೆದುಕೊಂಡಿರತಕ್ಕ ಕ್ರಮಗಳಾದರೂ ಏನು ಎಂದು ವಿಚಾರ ಮಾಡಬೇಕಾಗಿದೆ. ಅವರನ್ನು ಬುದ್ಧಿವಂತರನ್ನಾಗಿ ಮಾಡಲು ಮತ್ತು ಸತ್ಪ್ರಜೆಗಳನ್ನಾಗಿ ಮಾಡಲು ಅವರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೆಯೇ ಅಥವಾ ತಕ್ಕಷ್ಟು ಹಣವನ್ನು ಒದಗಿಸಿದ್ದಾರೆಯೇ ಎಂದರೆ ಅದೇನೂ ಕಾಣಲಿಲ್ಲ. ಇನ್ನು ಅವರಿಗೋಸ್ಕರ ಹರಿಜನ ಹಾಸ್ಟಲ್ ಎಂದು ಮಾಡಿದ್ದಾರೆ. ಒಂದೊಂದು ತಾಲ್ಲೂಕಿಗೆ 30-35 ಜನಗಳಿಗೆ ಒಂದು ಹಾಸ್ಟಲ್ ಎಂದು ಮಾಡಿದ ಮಾತ್ರಕ್ಕೆ ಶೇ 32ರಷ್ಟು ಹರಿಜನಬಾಂಧವರನ್ನು ಉದ್ಧಾರಮಾಡಿದಂತಾಗುತ್ತದೆಯೇ? ಕೇವಲ 30-35 ಜನ ಮಾತ್ರ ಹಾಸ್ಟೆಲ್‌ನಲ್ಲಿ ಓದಿದರೆ ಸಾಕೆ ? ಇನ್ನು ಕೇವಲ ಒಂದು ಜೊತೆ ಎತ್ತುಗಳನ್ನು ಕೊಡುತ್ತೀರಿ. ಕೇವಲ 300 ರೂಪಾಯಿಗಳನ್ನು ಹೆಂಚು ಬಂಬುಗಳಿಗಾಗಿ ಕೊಡುತ್ತೀರಿ. ಇವೆಲ್ಲವನ್ನು ಹರಿಜನರ ಓಟುಗಳಿಸುವ ಒಂದು ದುರುದ್ದೇಶದಿಂದ ಈ ರೀತಿ ಮಾಡುತ್ತೀರೇ ಹೊರತು ಮತ್ತೇನೂ ಇಲ್ಲ. ಅವರಂತೂ ಉದ್ಧಾರವಾಗುವಂತಿಲ್ಲ. ಇನ್ನೂ ಹೌಸಿಂಗ್ ಬೋರ್ಡ್ ಸ್ಕೀಂ ಪ್ರಕಾರ ಮನೆಗಳನ್ನು ಕೊಡುತ್ತೇವೆಂದು ಹೇಳಿದ ಮೇಲೆ ಅವರು ಕೆಲವು ಸೊಸೈಟಿಗಳನ್ನು ಮಾಡಿಕೊಂಡಿದ್ದಾರೆ. ಎರಡು ವರ್ಷಗಳಿಂದ ಷೇರುಗಳನ್ನು ಕಲೆಕ್ಟ್ ಮಾಡಿದ್ದೀರಿ. ಆದರೆ ಒಂದು ಕಾಸು ಸಾಲವನ್ನು ಕೊಟ್ಟಿಲ್ಲ. ಏತಕ್ಕೋಸ್ಕರ ತಾಲ್ಲೂಕ್ ಬೋರ್ಡ್ ಚೇರ್‌ಮನ್ ಆಗಬೇಕು ? ಸರ್ಕಾರೀ ಆಜ್ಞೆ ಪ್ರಕಾರ ಅವರಿಗೆ ಆ ಅಧಿಕಾರವಿಲ್ಲ. ಕಂಟ್ರಾಕ್ಟರ್ ಮತ್ತು ಷೇರು ಹೋಲ್ಡರುಗಳ ಪೈಕಿ ಒಬ್ಬ ಪ್ರೆಸಿಡೆಂಟ್ ಆದರೆ ಒಳ್ಳೆಯದು. ವಿರೋಧಕ್ಕೆ ಕಾರಣವಿರುವುದಿಲ್ಲ. ರಾಜಕೀಯದಲ್ಲಿ ದೂರದೃಷ್ಟಿ ಇಲ್ಲದೇ ಹೋದರೆ ಬಹಳ ಕಷ್ಟ. ರಾಜಕೀಯ ಹಿನ್ನೆಲೆ ಬೇಕು. ಇಲ್ಲದಿದ್ದರೆ ಸರ್ಕಾರದ ಕಾರ್ಯಕಲಾಪಗಳು ಸಮರ್ಪಕವಾಗಿ ನಡೆಯುವುದಿಲ್ಲ. ನೀವು 15 ವರ್ಷಗಳಿಂದ ರಾಜ್ಯಭಾರ ಮಾಡಿದ್ದು ಸಾಕು. ನಮ್ಮ ಹಿಂದೂ ಸಂಸ್ಕೃತಿಯನ್ನು ನಾವು ತಿಳಿಯಬೇಕು. ಬೇರೆ ದೇಶಗಳಿಗೆ ಮಾರ್ಗದರ್ಶಕರಾಗಬೇಕು. ನಾವು ಸುಸಂಸ್ಕೃತರಾಗಬೇಕು. [illegible] ನಮ್ಮಿಂದ ಬಂಗಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಬಂಗಾರ ದೇಶದ ಜನಗಳಲ್ಲಿ ಇಲ್ಲದಿದ್ದರೆ ನಮ್ಮ ದೇಶದ ಸ್ಥಿತಿ ಏನಾಗುತ್ತಿತ್ತು ಎಂಬುದನ್ನು ನಾವು ಗಮನಿಸಬೇಕು ಈಗಾಗಲೇ ಗುಂಡಿನಿಂದ ಹೊಡೆಯುತ್ತೇವೆಂದು ಹೇಳಿ ನಮ್ಮಲ್ಲಿರತಕ್ಕ ಬಂಗಾರವನ್ನೆಲ್ಲಾ ತೆಗೆದುಕೊಳ್ಳುತ್ತಿದ್ದಾರೆ. ಮುಂದೆ ಇನ್ನು ಎಂತಹ ಕಾಲ ಬರುತ್ತದೊ ಹೇಳುವುದಕ್ಕಾಗುವುದಿಲ್ಲ.

ಇನ್ನು ಪೆನ್ಷನ್ ಕೊಡುತ್ತಿರುವ ಬಗ್ಗೆ ಕೆಲವಾರು ಮಾತುಗಳನ್ನಾಡಬೇಕೆಂದು ಇಚ್ಛಿಸುತ್ತೇನೆ. 1964 ನೇ ಇಸವಿಯಲ್ಲಿ ಎಷ್ಟು ಜನರು ರಿಟೈರ್ ಆಗುತ್ತಾರೆಂಬ ಬಗ್ಗೆ ಸಂಬಂಧಪಟ್ಟ ಇಲಾಖೆಯಲ್ಲಿ ಸಾಕಷ್ಟು ಅಂಕಿಅಂಶಗಳೇ ಇರುವುದಿಲ್ಲ. ಡಿಸೆಂಬರ್ 64ರಲ್ಲಿ ರಿಟೈರ್ ಆಗುತ್ತಾರೆಂದರೆ ಮೇ ಒಂದನೇ ತಾರೀಖು ಅಷ್ಟುಹೊತ್ತಿಗೆ ಅಥವಾ ಜೂನ್ ಒಂದನೇ ತಾರೀಖಿನೊಳಗೇ ಅವನ ಪೆನ್ಷನ್ ರಿಕಾರ್ಡ್ಸ್ ಸಿದ್ಧವಾಗಿರಬೇಡವೇ? ಆ ಇಲಾಖೆಯವರು ಅದೇನು ಕೆಲಸ ಮಾಡುತ್ತಾರೋ ಗೊತ್ತಿಲ್ಲ. ಯಾರೇ ರಿಟೈರ್ ಆಗಲಿ ಅವರ ಪೆನ್ಷನ್ ರಿಕಾರ್ಡ್ಸ್ ಮೊದಲೇ ಸಿದ್ಧವಾಗಿರಬೇಕು. ಪ್ರತಿವರ್ಷವೂ ಇಂತಿಂಥವರು ರಿಟೈರು ಆಗುತ್ತಾರೆಂಬ ಪಟ್ಟಿ ಹಿಂದಿನ ವರ್ಷದ ಕೊನೆಯಲ್ಲಾದರೂ ಸಿದ್ಧಮಾಡಿಟ್ಟಿರಬೇಕು. ಇದಕ್ಕೋಸ್ಕರ ಒಂದು ಸಂಬಂಧಪಟ್ಟ ಪ್ರತ್ಯೇಕ ಇಲಾಖೆ, ಗುಮಾಸ್ತರು, ಅಸಿಸ್ಟೆಂಟ್ ಡೈರೆಕ್ಟರುಗಳು, ಬೇಕಾದಷ್ಟು ಅಂಡರ್ ಸೆಕ್ರೆಟರಿಗಳು ಸೆಕ್ರೆಟರಿಗಳು ಮತ್ತೆ ಬೋರ್ಡ್, ಹೀಗೆ ಎಲ್ಲಾ ಇದ್ದರೂ ಪೆನ್ಷನ್‌ದಾರರಿಗೆ ಅನುಕೂಲವಿಲ್ಲ. ಆದ್ದರಿಂದ ಈ ಬಗ್ಗೆ ಮೊದಲೇ ಕರೆಸ್‌ಪಾಂಡೆನ್ಸ್ ಮಾಡಿ ಅವರ ಸರ್ವಿಸ್ ರಿಕಾರ್ಡ್ಸ್ ಎಲ್ಲವನ್ನು ಪರಿಶೀಲನೆಮಾಡಿ ಅವನ ಪೆನ್ಷನ್ ಇಷ್ಟೇ ಎಂಬುದನ್ನು ಜಾಗ್ರತೆ ನಿಗದಿ ಮಾಡಬೇಕು. ಪೆನ್ಷನ್ ಆದ ಒಂದು ತಿಂಗಳಲ್ಲಿಯೇ ಅವನು ತನ್ನ ಪೆನ್ಷನ್ ಪಡೆಯುವಂತೆ ವ್ಯವಸ್ಥೆ ಮಾಡಬೇಕು. ಅದೇ ವಿಷಯವನ್ನು ಫ್ಯಾಕ್ಟರಿಗಳಲ್ಲಿ ನೋಡಿ ಸುಮಾರು 2 ತಿಂಗಳಿಗೆ ಮುಂಚೆಯೇ ಅವನಿಗೆ ಕೊಡಬೇಕಾದ ಪೆನ್ಷನ್, ಪ್ರಾವಿಡೆಂಟ್‌ಫಂಡು ಇಷ್ಟೇ ಎಂದು ಲೆಕ್ಕಮಾಡಿಟ್ಟಿರುತ್ತಾರೆ. ಅದನ್ನು ಯಾವುದಾದರೂ ಒಂದು ಬ್ಯಾಂಕಿನಲ್ಲಿ ರೆಮಿಟ್ ಮಾಡಿರುತ್ತಾರೆ. ಅವರುಗಳಲ್ಲಿಯೂ ಸೊಸೈಟಿ ಇದೆ. ಗುಮಾಸ್ತ ಅಥವಾ case workers ಮುಖಾಂತರ ಕರೆಸ್‌ಪಾಂಡೆನ್ಸ್ ಮಾಡಿಕೊಂಡು ತನಗೆ ಬೇಕಾದ ಬ್ಯಾಂಕಿನಲ್ಲಿ ಆ ಹಣವನ್ನು ಇಟ್ಟಿರುತ್ತಾರೆ. ಆತ ತನಗೆ ಬೇಕಾದಾಗ ಅದನ್ನು ಉಪಯೋಗಿಸುವುದಕ್ಕೆ ಅನುಕೂಲವಿರುತ್ತದೆ. ಸಾಧಾರಣವಾಗಿ ಫ್ಯಾಕ್ಟರಿಗಳಲ್ಲಿ ಒಬ್ಬ ಗುಮಾಸ್ತ ಮಾಡುವ ಕೆಲಸವನ್ನು ಸರ್ಕಾರದಲ್ಲಿ ಒಬ್ಬ ದೊಡ್ಡ ಆಫೀಸರ್ ಮಾಡುತ್ತಿದ್ದಾರೆ. ಸುಮ್ಮನೆ ಸಾವಿರ ರೂಪಾಯಿಗಳ ಸಂಬಳವೇಕೆ? ಇದೇ

ಒಬ್ಬ ಸೀನಿಯರ್ ನೌಕರನಿಗೂ ಮತ್ತು ಐ. ಎ. ಎಸ್. ಆಫೀಸರಿಗೂ ಇರತಕ್ಕ ವ್ಯತ್ಯಾಸ ಆದ್ದರಿಂದ ದೊಡ್ಡ ದೊಡ್ಡ ಆಫೀಸರುಗಳ ಮೇಲೆ ಈ ಬಗ್ಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಬೇಕು. ಏಕೆಂದರೆ ಸಾವಿರ, ಎರಡು ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವವರಗಿಂತ. 150 ರೂಪಾಯಿಗಳ ಸಂಬಳ ತೆಗೆದು ಕೊಳ್ಳುವ ನೌಕರನು ಹೆಚ್ಚಿಗೆ ಕೆಲಸ ಮಾಡುತ್ತಾನ, ಕಾಗದಗಳು ಒಂದು ಮೇಜಿನಿಂದ ಇನ್ನೊಂದು ಮೇಜಿಗೆ ಮೂವ್ ಆಗಬೇಕಾದರೆ, ಮಂತ್ರಿಗಳ ಹಿನ್ನೆಲೆ ಯಾರಿಗೆ ಇದೆಯೋ, ಯಾರ ಕಡೆ ಇದೆಯೋ ಯಾವ ಮಂತ್ರಿಗಳಿಂದ ಇದಕ್ಕೆ ಬೆಂಬಲವಿದೆಯೆಂಬುದನ್ನು ನೋಡುತ್ತಾರೆ. ಮತ್ತು ಸರ್ಕಾರ ಯಾವ ಪಕ್ಷವಹಿಸಿದೆ ಎಂಬುದನ್ನೂ ಸಹ ನೋಡುತ್ತಾರೆ. ಇಷ್ಟೇ ಆಫೀಸರುಗಳಿಗೂ ಮತ್ತು ಆಫಿಷಿಯಲ್ಸ್‌ಗೂ ಇರತಕ್ಕ ವ್ಯತ್ಯಾಸ. ಆದರೆ ದೇಶದ ಕೆಲಸವನ್ನು ಇದರಿಂದ ನ್ಯಾಯವಾಗಿ ಮಾಡುವುದಕ್ಕೆ ಇವರ ಕೈಲಿ ಆಗಲಾರದು ಎಂದು ನಾನು ಭಾವಿಸಬೇಕಾಗಿದೆ. ಹೋದವರ್ಷವೂ ನಾನು ಇವೇ ಬೇಡಿಕೆಗಳನ್ನು ಮತ್ತು ಬೇಕಾದಷ್ಟು ಟೀಕೆ ಟಿಪ್ಪಣಿಗಳನ್ನೂ ಸಹ ಮಾಡಿದ್ದೇನೆ. ಸರ್ಕಾರ ಇನ್ನೊಂದು ತನ್ನ ಧೋರಣೆಯನ್ನು ಅನುಸರಿಸಿಲ್ಲ. ರೋಡ್ ಟ್ರಾನ್ಸ್‌ಪೋರ್ಟ್ ಮೇಲೆ ಬೇಕಾದಷ್ಟು ಟೀಕೆ ಮಾಡಿದ್ದಾರೆ. ಆದರೆ ಇಫಿಷಿಯನ್ಸಿ ಹೋಗಲೇ ಇಲ್ಲ. ಲೀಕೇಜಸ್ಸನ್ನು ನಿಲ್ಲಿಸಲಿಕ್ಕೆ ಯಾವ ಪ್ರಯತ್ನವೂ ನಡೆದಿಲ್ಲ. ಬಸ್ ಕೆಪಾಸಿಟಿ 40-42 ಇದ್ದರೆ 62 ಜನರನ್ನು ತುಂಬುವುದು. ಅದರಲ್ಲಿ ಟಿಕೆಟ್ ಇಲ್ಲದೆ ಹೋಗುವವರು ಎಷ್ಟೋ ಜನರಿರುತ್ತಾರೆ. ಅದರಲ್ಲಿ ಏನಾದರೂ ಲಕ್ಷಣವಿದೆಯೇ? ಇಷ್ಟೇ ಜನರನ್ನು ಕುಳ್ಳಿರಿಸಬೇಕೆಂದು ನಿಗದಿ ಮಾಡಿದ್ದರೂ ಅದರಂತೆ ನಡೆಯುತ್ತಿಲ್ಲ. ಇದಕ್ಕೆ ದಿಕ್ಕು ದೆಸೆಯೇನೂ ಇಲ್ಲವೆಂದು ಹೇಳಬೇಕಾಗಿದೆ. ಖಂಡಿತವಾಗಿ ಇದನ್ನು ಇವರ ಕೈಲಿ ನಡೆಸುವುದಕ್ಕಾಗುವುದಿಲ್ಲವೆಂದು ನಾನು ಹೇಳುತ್ತೇನೆ. ತಮಗೆ ಬೇಕಾದವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಇವರು ನಡೆಸುತ್ತಿದ್ದಾರೋ ಏನೋ ಗೊತ್ತಾಗಲಿಲ್ಲ. ಸುಮಾರು 12 ಕೋಟಿಗಳಷ್ಟು ಬಂಡವಾಳ ಇದರ ಮೇಲೆ ಹಾಕಿರುವಾಗ ಸರ್ಕಾರಕ್ಕೆ ಅದರ ಲಾಭವಿರಬೇಕು. ಸಾರ್ವಜನಿಕರಿಗೆ ಉಪಯೋಗವಿರಬೇಕು. ಇವೆರಡೂ ಇಲ್ಲ. ಮನಾಪಲಿ ಮಾಡಿದ್ದೇವೆಂದು ಮಾಡುವುದು ಸರಿಯಲ್ಲ. ನಾವು ಮಾಡಿದ್ದೇ ಸರಿಯೆಂದು ಈ ಮಾನ್ಯ ಸಭೆಯಲ್ಲಿ ಹೇಳುವುದಕ್ಕೆ ಯಾವುದಾದರೂ ನಿದರ್ಶನ ಇದ್ದರೆ ಸರ್ಕಾರ ಹೇಳಲಿ ಒಂದು ವೇಳೆ ಅದು ಸರಿ ಇಲ್ಲದಿದ್ದರೆ ಉತ್ತಮ ಪಡಿಸೋಣ. ಸರ್ಕಾರಕ್ಕೆ ಹೆಚ್ಚು ಲಾಭ ಪಡಿಸೋಣ. ಲಂಚರುಷುವತ್ತುಗಳನ್ನು ಕಡಿಮೆ ಮಾಡೋಣ. ನಾವು ಹೋದ ವರ್ಷ ಮಾಡಿದಂತಹ ಟೀಕೆಗಳನ್ನು ಎಷ್ಟರ ಮಟ್ಟಿಗೆ ಸರಿಪಡಿಸಿದ್ದೀರಿ ಎಂಬುದನ್ನು ಹೇಳಬೇಕು. ಒಂದು ವೇಳೆ ಕೆಲವಾರು ಟೀಕೆಗಳ ಕಡೆಗೆ ಇನ್ನೂ ಗಮನ ಕೊಡದೆ ಇದ್ದರೆ ಮುಂದಿನ ವರ್ಷವಾದರೂ ತಕ್ಕ ಕ್ರಮವನ್ನು ಹಾಕಿಕೊಳ್ಳಬೇಕು. ಆದರೆ ನಿಮ್ಮಲ್ಲಿ ಬೇಕಾದಷ್ಟು ಮೆಜಾರಿಟಿ ಇದೆ, ಏನು ಬೇಕಾದರೂ ಮಂಜೂರು ಮಾಡಿ ತೆಕ್ಕೊಳ್ಳಬಹುದು ಎಂದು ಎಲ್ಲಾ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟು ಪಾಸ್ ಮಾಡುತ್ತಿದ್ದೀರೇ ಹೊರತು ಸರ್ಕಾರದ ನೀತಿಯನ್ನಾಗಲೀ ಅಥವಾ ಸರ್ಕಾರದ ಇಲಾಖೆಗಳಲ್ಲಿ ದಕ್ಷತೆಯನ್ನು ಉಳಿಸುವುದಕ್ಕಾಗಲೀ ಏನೊಂದು ವ್ಯವಸ್ಥಿತ ಕಾರ್ಯಕ್ರಮವನ್ನು ಇದುವರೆಗೂ ಹಾಕಿಕೊಳ್ಳದೇ ಇರುವುದರಿಂದ ನಾನು ಬಹಳ ಮಟ್ಟಿಗೆ ವಿಷಾದಪಡುತ್ತೇನೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಈಗ ಮೊಟ್ಟಮೊದಲನೆಯದಾಗಿ ಈ ಸೋಷಿಯಲ್ ವೆಲ್‌ಫೇರ್ ವಿಷಯದಲ್ಲಿ ಸರ್ಕಾರಕ್ಕೆ ಯಾವುದಾದರೂ ಒಂದು ಕಾರ್ಯಕ್ರಮವನ್ನು ಬದಲಾವಣೆ ಮಾಡಬೇಕಾದರೆ ನಿರ್ದಿಷ್ಟವಾದ ಯೋಚನೆ ಇರಬೇಕು. ನಮ್ಮಲ್ಲಿ ಅನೇಕ ಇಲಾಖೆಗಳು ವಿಧಾನ ಸೌಧದಲ್ಲಿವೆ. ಪ್ಲಾನಿಂಗ್ ಸೆಕ್ಷನ್ ಏನಿದೆ, ಅದು ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ತಾವು ಯೋಚನೆ ಮಾಡಿ ಮಾಡಬೇಕು. ಈಗ ಸುಮಾರು 400 ರೂಪಾಯಿಗಳನ್ನು ಗ್ರಾಂಟು ರೂಪವಾಗಿ ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೋಸ್ಕರ ಕೊಡುತ್ತೀರಿ. ಆ ಬಗ್ಗೆ ಬೇಕಾದಷ್ಟು ಪ್ರಚಾರಗಳನ್ನು ಮಾಡುತ್ತೀರಿ. ಅಂತಹ ಮನೆಗಳನ್ನು ಕಟ್ಟಿದರೂ ಅವು ಬಹು ಜಾಗ್ರತೆಯಾಗಿ ಎರಡು ಮೂರು ವರ್ಷಗಳಲ್ಲಿಯೇ ಬಿದ್ದು ಹೋಗಿರುವುದು ಉಂಟು. ಅನೇಕರಿಗೆ ಗ್ರಾಂಟು ಕೊಟ್ಟಿಲ್ಲ ಕೆಲವರಿಗೆ ಅಪೂರ್ಣವಾಗಿ ಗ್ರಾಂಟು ಕೊಟ್ಟಿದೆ. ಕೆಲವರಿಗೆ ಕಾಲಕ್ಕೆಸರಿಯಾಗಿ ಗ್ರಾಂಟು ಕೊಡದೆ ಮಧ್ಯದಲ್ಲಿಯೇ ಕಾರ್ಯವನ್ನು ನಿಲ್ಲಿಸಿದ್ದಾರೆ. ಹಿಂದೆ ಯಾರೋ ಕಟ್ಟಿಸಿದ್ದರು. ಅವರಿಗೆ ನೇರವಾಗಿ ಹಣ ದೊರೆಯದೆ ಇದ್ದುದರಿಂದ ಏಕಾ ಏಕಿ ಬೇರೆಯವರಿಗೆ ಬದಲಾವಣೆ ಮಾಡಿದರು. ಹೀಗಾಗಿ ಕೊಡತಕ್ಕ ಹಣ ಮನೆಗಳನ್ನು ಕಟ್ಟಲಿಕ್ಕೆ ಸಾಕಾಗುತ್ತಿಲ್ಲ. ಈಗ ಸೊಸೈಟಿಗಳನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಇನ್ನೂ ಯಾವ ಒಂದು ಸೊಸೈಟಿಗೂ ಕೂಡ 3 ಕಾಸಿನ ಸಾಲವನ್ನು ಕೂಡ ಇವತ್ತಿನವರೆಗೂ ಕೊಟ್ಟಿಲ್ಲ. ಇದಕ್ಕೋಸ್ಕರ ನ್ಯಾಯವಾಗಿ ಕೆಲಸ ಮಾಡುವ ಜನಗಳಿಗೂ ಕೂಡ ಬಹಳ ತೊಂದರೆಯಾಗಿದೆ.

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಇದಕ್ಕಾಗಿ ಕೆಲವು ಗ್ರಾಂಟುಗಳನ್ನು ತಾಲ್ಲೂಕ್ ಬೋರ್ಡಿನ ಮೂಲಕ ಹಂಚುತ್ತಾರೆ. ಒಂದೂವರೆ ಸಾವಿರ ರೂಪಾಯಿಯನ್ನು ಹೋದ ತಿಂಗಳು ನಮ್ಮ ಕಡೆ ಕೊಟ್ಟರು. ಇದನ್ನು ಹಂಚುವುದಕ್ಕೆ ಹದಿನೈದು ಇಪ್ಪತ್ತು ಜನ ಸದಸ್ಯರು ಮತ್ತು ಅಧಿಕಾರಿಗಳು! ಜನರಿಗೆ ಹಸು, ಎಮ್ಮೆ, ಕೋಳಿ ಕೊಡಬೇಕೆಂದಿದೆ. ಮೊದಲು ಇನ್ಸ್‌ಪೆಕ್ಟರು ಹೋಗಿ ನೋಡಿಕೊಂಡು ಬರಬೇಕು, ಆಮೇಲೆ ತಾಲ್ಲೂಕು ಬೋರ್ಡಿನಲ್ಲಿ ಮಂಜೂರು ಮಾಡಬೇಕು. ಇದರಿಂದ ಜನರಿಗೆ ಎಷ್ಟು ಉಪಯೋಗವಾಗುತ್ತದೆಂಬುದನ್ನು ಸರ್ಕಾರ ಆಲೋಚನೆ ಮಾಡಬೇಕು. ಈ ರೀತಿ ಗ್ರಾಂಟು ಕೊಡುವುದನ್ನು ನಿಲ್ಲಿಸಿ, ಇದಕ್ಕೆ ಬದಲು ವಿದ್ಯಾಭ್ಯಾಸಕ್ಕೆ ಸಹಾಯ ಮಾಡಲಿ. ಅಥವಾ ಜಮೀನನ್ನು ಕೊಡಲಿ. ಸುಮ್ಮನೆ ಹೀಗೆ ಗ್ರಾಂಟು ಕೊಡುತ್ತೇವೆಂದು ಹೀಗೆ ಹಂಚಿದರೆ ಅನ್ಯಾಯವಾಗುತ್ತದೆ. ಅಲ್ಲದೆ ಜನರಲ್ಲಿ ಜಗಳಗಳು ಬರುವುದಕ್ಕೆ ಅವಕಾಶ ಕಲ್ಪಿಸಿದ ಹಾಗಾಗುತ್ತದೆ.

ಮಹಿಳೆಯರು ಮಾತ್ರ ದಕ್ಷರೆಂದು ಶಿವಮೊಗ್ಗದ ಸದಸ್ಯರು ಹೇಳಿದರು. ಮಹಿಳೆಯರ ದಕ್ಷತೆಯ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಒಂದು ಮಿತಿಯಲ್ಲಿ ಕೆಲಸಮಾಡಿದರೆ ದಕ್ಷತೆ ಗೊತ್ತಾಗುತ್ತದೆ; ಅದು ಬಿಟ್ಟು ಸುಮ್ಮನೆ ಜೀಪಿನಲ್ಲಿ ಓಡಾಡಿ ಎಲ್ಲೆ ಮೀರಿ ಕೆಲಸಮಾಡಿದರೆ ಅದು ಸರಿಯಲ್ಲ. ಯಾವಾಗ ಬೇಕಾದರೂ ಬೆಂಗಳೂರಿಗೆ ಹೋಗಬೇಕಾದರೆ ಜೀಪ್‌ನಲ್ಲಿ ಬರುತ್ತಾರೆ. ಇದನ್ನು ನಿಲ್ಲಿಸಬೇಕು.

ಕಾಲೋನಿ ಎಂದು ಮಾಡುತ್ತಾರೆ. ಮಾರ್ಚ್ ಆಖೈರಾಗುವುದಕ್ಕೆ ಹದಿನೈದು ಇಪ್ಪತ್ತು ದಿವಸಕ್ಕೆ ಮುಂಚೆ ಗ್ರಾಂಟು ಬರುತ್ತದೆ. ಏನಾದರೂ ಮಾಡಿ ಆ ಗ್ರಾಂಟನ್ನು ಖರ್ಚು ಮಾಡಬೇಕೆಂದು ಎಲ್ಲ ಜನರು ಜಾಸ್ತಿಯಾಗಿ ಜಮೀನು ಬೇಕೆಂದು ಕೇಳುತ್ತಿರುತ್ತಾರೋ ಅಲ್ಲಿ ಕಾಲೋನಿ ಮಾಡಿ ಅಲ್ಲಿಗೆ ಯಾರನ್ನೋ ತಂದು ಹಾಕುತ್ತಾರೆ. ಅವರು ಆಮೇಲೆ ಹಣವನ್ನು ತೆಗೆದುಕೊಳ್ಳುವವರೆಗೆ ಅವರು ಅಲ್ಲಿರುತ್ತಾರೆ, ನಂತರ ಪತ್ತೆ ಇರುವುದಿಲ್ಲ! ನಮ್ಮ ತಾಲ್ಲೂಕಿನಲ್ಲೇ ಹೀಗಾಗಿವೆ. ಮಂತ್ರಿಗಳು ಹೋಗಿ ನೋಡಬೇಕು. ಅಲ್ಲಿ ನೋಡಿದರೆ, ಹಣವೂ ಇಲ್ಲ, ಎತ್ತು, ಕೋಳಿ, ಜನ, ಯಾರೂ ಅಲ್ಲಿಲ್ಲ. ಜಮೀನು ಮಾತ್ರ ಉಳಿದಿದೆ. ಕಾಲೋನಿ ಮಾಡುವುದರಲ್ಲಿ, ಗ್ರಾಂಟು ಕೊಡುವುದರಲ್ಲಿ ಸರ್ಕಾರಕ್ಕೆ ಒಳ್ಳೆಯ ಉದ್ದೇಶವಿದೆ, ಆದರೆ ಆ ಉದ್ದೇಶ ಸಫಲವಾಗುತ್ತಿಲ್ಲ. ಜಮೀನಿದ್ದು ಜನರು ಕಡಮೆಯಿದ್ದ ಕಡೆ ಕಾಲೋನಿ ಮಾಡಿ ಜನರು ಸುಖವಾಗಿರಬೇಕೆಂದು ಕಾಲೋನಿಗೆಂದು ಗ್ರಾಂಟು ಕೊಟ್ಟರೆ, ಆರು ತಿಂಗಳಾದ ಮೇಲೆ ಅಲ್ಲಿ ನೋಡಿದರೆ ಅಲ್ಲಿ ಯಾರೂ ಇರುವುದಿಲ್ಲ. ಸರ್ಕಾರ ಕೊಟ್ಟ ಕುರಿ, ಮೇಕೆ ಎಮ್ಮೆ ಯಾವುದೂ ಇರುವುದಿಲ್ಲ ಯಾರೂ ಇಲ್ಲದ ಹಾಳು ಬಾವಿ ಇರುತ್ತದೆ. ಸಾರ್ವಜನಿಕರ ಹಣವನ್ನು ಈ ರೀತಿ ದುರುಪಯೋಗ ಮಾಡಬಾರದು......

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿಯಲ್ಲಿ ಯಾರೂ ಇರುವುದಿಲ್ಲವೆಂದು ಹೇಳಿದರು, ಬಾವಿಯ' ಯಾರಿರುತ್ತಾರೆ? (ನಗು!)

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಿಮಗೆ ಯಾವಾಗಲೂ ಬಾವಿಯ ಜ್ಞಾನ. ಒಳ್ಳೆಯ ವಿಷಯದಲ್ಲಿ ಹೆಚ್ಚಾಗಿ ಯೋಚನೆ ಮಾಡಿ ಎಂದು ಹೇಳುತ್ತೇನೆ.

ಲೋಪದೋಷಗಳನ್ನು ಸಾಧ್ಯವಾದಷ್ಟು ಸರ್ಕಾರದ ಗಮನಕ್ಕೆ ತರುತ್ತೇನೆ. ನಾವು ಕೇಳಿದ ವಿಷಯಗಳಲ್ಲಿ ಒಂದಕ್ಕೂ ಮಂತ್ರಿಗಳು ಉತ್ತರ ಹೇಳಿಲ್ಲ. ಹೀಗೆ ಸರಿಯಾಗಿ ಉತ್ತರ ಹೇಳದೇಯಿರುವ ಸರ್ಕಾರ ಎಷ್ಟು ದಿವಸ ಇರುತ್ತದೆ? ಶನಿ ಪೂಜೆ ಮಾಡುವ ಹಾಗೆ ಅಧಿಕಾರದಲ್ಲಿರುವ ಮಂತ್ರಿಗಳನ್ನು ಸ್ವಲ್ಪಕಾಲ ಪೂಜೆ ಮಾಡುತ್ತಿದ್ದಾರೆ, ಜನ. ಅನಿಷ್ಟವನ್ನು ಸ್ವಲ್ಪ ದಿವಸ ಅನುಭವಿಸಬೇಕಾಗುತ್ತದೆ. ಇದರ ನಿವಾರಣೆಗೆ ಏನು ಮಾಡಬೇಕೆಂದು ಮುಂದೆ ಯೋಚನೆ ಮಾಡೋಣ.

ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಮುಖ್ಯವಾಗಿ ಸರ್ಕಾರದ ಉದ್ದೇಶ ನೆರವೇರುವಂತೆ ಕೆಲಸ ಮಾಡಬೇಕು. ಜಮೀನು ಹಂಚುವಾಗ ಹರಿಜನರಾಗಲೀ ಬೇರೆಯವರಾಗಲೀ ನಿಜವಾಗಿಯೂ ಬಡವರಿಗೆ ಹಂಚಬೇಕು. ಒಟ್ಟಾಗಿ ಹದಿನಾರು ಮದುವೆ ಮಾಡುವಾಗ ಶಾಸ್ತ್ರಿಗಳು ಎಲ್ಲ ಮಂತ್ರಗಳನ್ನೂ ಸೇರಿಸಿ ಹೇಳಿ ಮುಗಿಸುವ ಹಾಗಾಗಿದೆ. ಈ ಡಿಮ್ಯಾಂಡುಗಳನ್ನೆಲ್ಲಾ ಓದುವುದಕ್ಕೇ ಎಷ್ಟೋ ಕಾಲಬೇಕು. ಈಗ ಕಾಲವಿಲ್ಲ, ಹೋಗಲಿ. ಜಮೀನನ್ನು ಹಂಚುವಾಗ ದೊಡ್ಡವರಿಗೆ ಕೊಡಬಾರದು; ಬಡವರಿಗೆ ಅದೂ ಸ್ಥಳದವರಿಗೆ ಕೊಡಬೇಕು. ಕುರಿ, ಕೋಣ, ಎಮ್ಮೆ ಇವುಗಳನ್ನು ಕೊಡುವುದನ್ನು ನಿಲ್ಲಿಸಬೇಕು.

ಇನ್ನು ಬಸ್ ರಾಷ್ಟ್ರೀಕರಣದ ವಿಚಾರ. ಇದರಲ್ಲಿ ಕೆಲವು ಅನುಮಾನ ಬರುವುದಕ್ಕೆ ಆಸ್ಪದ ಮಾಡಿದ್ದಾರೆ. ಈ ವರ್ಷ ಬಳ್ಳಾರಿಯಲ್ಲಿ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳುವುದು, ಆಮೇಲೆ

ಮಾಡುವುದಿಲ್ಲವೆಂದು ಹೇಳುವುದು. ಹೀಗೆ ಮಾಡಿದರೆ, ಜನರು ಲಕ್ಷ ರೂಪಾಯಿ ತೆಗೆದುಕೊಂಡರು, ಐವತ್ತು ಸಾವಿರ ತೆಗೆದುಕೊಂಡರು ಎಂದು ಮಾತನಾಡಿಕೊಳ್ಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆ, ಕೋಲಾರ, ಬಳ್ಳಾರಿ ಜಿಲ್ಲೆಗಳ ಉದಾಹರಣೆಯೇ ಸಾಕು. ಮಧ್ಯದಲ್ಲಿ ದಳ್ಳಾಳಿಗಳು ಈ ಕೆಲಸ ಮಾಡುತ್ತಾರೆಂದು ಜನರಲ್ಲಿ ನಂಬಿಕೆಯಿದೆ. ಇದಕ್ಕೆಲ್ಲ ಅವಕಾಶವಿರಬಾರದು. ಮೊದಲೇ ಯೋಚನೆ ಮಾಡಿ, ಇಂಥ ತಿಂಗಳು, ಇಂಥ ತಾರೀಕು ಇಂಥ ಪ್ರದೇಶದಲ್ಲಿ ಮಾಡಬೇಕೆಂದು ತೀರ್ಮಾನಮಾಡಿ, ಪ್ರಕಟಮಾಡಿ ಕೆಲಸ ಮಾಡಬೇಕು. ಮುಂದೆ ಬಳ್ಳಾರಿಯಲ್ಲಿ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳುವುದು, ನಂತರ ಯಾರೋ ಒಬ್ಬರು ನಾನು ಮಂತ್ರಿಗಳನ್ನು ನೋಡಿದ್ದೇನೆ, ಅವರಲ್ಲಿ ಹೋಗಿ ಇದನ್ನು ನಿಲ್ಲಿಸುತ್ತೇನೆ ಎಂದು ಹೇಳುವುದು. ಇದಕ್ಕೆಲ್ಲ ಅವಕಾಶಕೊಡಬಾರದು. ರಾಷ್ಟ್ರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಆದಾಯ ಬರಬೇಕು, ಜನರಿಗೆ ಸುಲಭವಾಗಿ ಸಂಚಾರ ಸೌಕರ್ಯ ಸಿಕ್ಕಬೇಕು ಎಂಬುದು. ಆದರೆ ಈಗ ನಡೆಯುತ್ತಿರುವುದು ಈ ಉದ್ದೇಶಕ್ಕೆ ವಿರೋಧವಾಗಿದೆ. ಈ ವಿಷಯದ ಮೇಲೆ ರಾಜೀನಾಮೆ ಕೊಟ್ಟು ಪುನಃ ಚುನಾವಣೆ ನಡೆಸಲು ಸರ್ಕಾರದವರು ತಯಾರಾಗಿದ್ದರೆ. ನಾವು ರಾಜೀನಾಮೆ ಕೊಟ್ಟು ಚುನಾವಣೆಗೆ ನಿಲ್ಲಲು ಸಿದ್ಧರಾಗಿದ್ದೇವೆ. ಸೇಕಡ 90ರಷ್ಟು ಓಟುಗಳು ಕಾಂಗ್ರೆಸ್‌ಗೆ ಬರದೆ ಬೇರೆಯವರಿಗೆ ಬರುತ್ತವೆ. ಇದಕ್ಕೆ ಅವಕಾಶಮಾಡಿಕೊಡಲಿ. ಹಾಸನ ಜಿಲ್ಲೆಯಲ್ಲಿ ಬಸ್ ರಾಷ್ಟ್ರೀಕರಣದ ಕತೆ ಹೇಳುತ್ತಾರೆ. ಈ ವಿಷಯದಲ್ಲಿ ಬಹಳ ಉದಾಸೀನ ಮನೋಭಾವ ತೋರಿಸುತ್ತಿದ್ದಾರೆ. ಆ ಬಸ್ಸುಗಳನ್ನು ಕೊಂಡವರು ಯಾರು, ಅವುಗಳ ಬಾಡಿಗಳನ್ನು ಕಟ್ಟಿದವರು ಯಾರು ಎಂಬುದು ನಮಗೆ ಗೊತ್ತಿಲ್ಲ. ಒಂದೇ ವರ್ಷದಲ್ಲಿ ಬಸ್ಸುಗಳು ಕೆಟ್ಟು ಹೋಗಿವೆ, ರಿಪೇರಿ ಮಾಡುವುದಕ್ಕೂ ಆಗುವುದಿಲ್ಲ. ಅವುಗಳನ್ನೆಲ್ಲಾ ಭದ್ರಾವತಿಗೆ ಕಳುಹಿಸಿದರೆ, ಸ್ವಲ್ಪ ಕಬ್ಬಿಣವಾದರೂ ಸಿಕ್ಕುತ್ತದೆ, ಅವನ್ನು ರಿಪೇರಿ ಮಾಡಿಸಿದರೆ, ಸಾಯುವ ಮನುಷ್ಯನಿಗೆ ಔಷಧ ಕೊಟ್ಟಹಾಗಾಗುತ್ತದೆ, ಅಷ್ಟೆ. ಈ ಬಸ್ಸುಗಳ ವಿಷಯದಲ್ಲಿ ಅನೇಕ ಸಂದರ್ಭಗಳಲ್ಲಿ ಮಂತ್ರಿಗಳಿಗೆ ದೂರು ಕೊಟ್ಟಿದ್ದೇವೆ. ಅವರಿಗೇನೋ ಸರಿಯಾಗಿ ನಡೆಸಬೇಕೆಂಬ ಉತ್ಸಾಹವಿದೆ, ಆದರೆ ಸಾಧ್ಯವಿಲ್ಲವಾಗಿದೆ. ಹಿಂದೆ ಆಡಳಿತ ನಡೆಸಲು ಒಬ್ಬರು ದಿವಾನರು, ಒಬ್ಬಿಬ್ಬರು ಮಂತ್ರಿಗಳಿರುತ್ತಿದ್ದರು; ಈಗ ಅನೇಕ ಮಂತ್ರಿಗಳು, ಉಪಮಂತ್ರಿಗಳಿದ್ದಾರೆ. ಈ ಉಪಮಂತ್ರಿಗಳಿಗೆ ಉದ್ಯೋಗವಿಲ್ಲ; ಆದರೆ ಸಂಬಳ ಕೊಡುತ್ತಾರೆ. ಇವರಿಗೆ ಕೆಲಸಕೊಡಲಿ. ಇವರು ಪ್ರವಾಸಮಾಡಿ ಬಸ್ಸುಗಳನ್ನು ಚೆಕ್ ಮಾಡುವ ಕೆಲಸಕೊಡಲಿ. ಅವರಿಗೇನೂ ಕೆಲಸಕೊಡದೇ ಹೋದರೆ ತುಕ್ಕುಹಿಡಿದು ಅವರ ಶರೀರದ ಅಂಗಾಂಗಗಳು ನಶಿಸಿಹೋಗುತ್ತವೆ. ಅವರು ಆಫೀಸಿಗೆ ಹೋದರೆ ಅಲ್ಲಿ ಒಂದು ಕಾಗದವೂ ಇರುವುದಿಲ್ಲ. ಪಾಪ! ಅಲ್ಲಿಗೆ ಬಂದು ಬೆಲ್ಲನ್ನು ಒತ್ತಿ, ಕಾಫಿ ತರಿಸಿ ಕುಡಿದು, 'ಯಾರಾದರೂ ಬಂದರೆ ಸಾಹೇಬರು ಹೊರಗೆ ಹೋಗಿದ್ದಾರೆ ಎಂದು ಹೇಳು' ಎಂದು ಜವಾನನಿಗೆ ಹೇಳಿಹೋಗುತ್ತಾರೆ. ಇವರಿಗೆ ಹತ್ತು ಕಾಗದಗಳನ್ನಾದರೂ ಕೊಟ್ಟು, ಅದನ್ನು ಅವರು ನೋಡಿ ಕೆಲಸ ಮಾಡಿದರೂ ಸಾಕು, ದೇಶಕ್ಕೆ ಒಳ್ಳೆಯದಾಗುತ್ತದೆ.

ಇನ್ನೊಂದು ವಿಷಯ. ಕಾರ್ಮಿಕರಿಗೆ ಒದಗಿಸುವ ಸೌಲಭ್ಯಗಳನ್ನು ಗಮನಿಸಬೇಕಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಡ್ರೈವರುಗಳು, ಕಂಡಕ್ಟರುಗಳು ಮತ್ತು ಇನ್ನು ಕೆಲವು ನೌಕರರು ಯಾವಾಗಲೂ ಹಂಗಾಮಿ ನೌಕರರಾಗೇ ಮುಂದುವರೆಯುತ್ತಿರುತ್ತಾರೆ. ಅವರಿಗೆ ಪೆನ್ಷನ್ ಕೊಡುವುದಿಲ್ಲ, ಸಂಬಳ ಹೆಚ್ಚಿಸುವುದಿಲ್ಲ. ಇದು ಬಹಳ ಅನ್ಯಾಯ. ಹೀಗೆ ಅನೇಕ ಇಲಾಖೆಗಳಲ್ಲಿದೆ. ದಯೆಯಿಟ್ಟು ಇದನ್ನು ಬದಲಾವಣೆ ಮಾಡಬೇಕು.

3-30 P. M.

ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ವಿಷಯ ಅನೇಕರು ಹೇಳಿದ್ದಾರೆ. ಕಾರ್ಡಿಲ್ಲದೆ ಯಾರನ್ನೂ ತೆಗೆದುಕೊಳ್ಳುವುದಿಲ್ಲ ಎಂಬುದು ಸರ್ಕಾರದ ಧೋರಣೆ. ಯಾರೋ ಒಬ್ಬರು ಕಾರ್ಡ್ ಮಾಡಿಸಿಕೊಂಡುಬಂದರು, ಇಂಟರ್‌ವ್ಯೂಗೆ ಕರೆಯಬಹುದೆಂಬ ನಿರೀಕ್ಷೆಯಿತ್ತು. ಆದರೆ ಕರೆಯಲಿಲ್ಲ, ಅವರನ್ನು ಕೇಳುವವರೇ ಇಲ್ಲದೇ ಹೋಯಿತು. ಅದೇ ರಿಜಿಸ್ಟರ್ ಮಾಡಿಸಿ ಮೂರು ಮೂರು ತಿಂಗಳಾಗಿದ್ದವರಿಗೆ ಕೆಲಸ ಕೊಟ್ಟರು, ನನಗೆ ಕೊಡಲಿಲ್ಲ ಎಂದು ಹೇಳಿದರು. ಎಲ್ಲರಿಗೂ ಅದರಿಂದ ಅನುಕೂಲವಾಗಲು ಸಾಧ್ಯವಿಲ್ಲ ದೇಶದಲ್ಲಿ ಜನರೇನು ಆಡಿಕೊಳ್ಳುತ್ತಾರೆಂಬುದನ್ನು ಮಂತ್ರಿಗಳು ನೋಡಬೇಕು. ಹಿಂದೆ ಒಬ್ಬಿಬ್ಬರು ಕೌನ್ಸಿಲರುಗಳಿದ್ದಾಗ ದೇಶಸಂಚಾರಮಾಡಿ ಸಾಮಾನ್ಯ ಜನರೊಡನೆ ಬೆರೆತು ಅವರ ಕಷ್ಟಸುಖಗಳನ್ನರಿತು ಸಹಾಯ ಮಾಡುತ್ತಿದ್ದರು. ಸದಸ್ಯರು ಏನೋ ಹೇಳುತ್ತಾರೆಂದು ಉದಾಸೀನ ಮಾಡಬಾರದು. ಸರ್ಕಾರಕ್ಕೆ ಚೆನ್ನಾಗಿ ತಿಳಿಯಲಿ ಎಂದು ನಾವು ಪದೇ ಪದೇ ಹೇಳುತ್ತೇವೆಯೇ ವಿನಾ ಇನ್ನೇನೂ ಉದ್ದೇಶವಿಲ್ಲ. ಅದನ್ನು ಗಮನಿಸಿ ಇರುವ ಲೋಪದೋಷಗಳನ್ನು ನಿವಾರಣೆ ಮಾಡಿ ಜನರಿಗೆ ಸಹಾಯ ಮಾಡಬೇಕು.

ಶ್ರೀ ಬಿ. ಕೆ. ಲಿಂಗೇಗೌಡ (ಚನ್ನಪಟ್ಟಣ).—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಈ ದಿವಸ ನಮ್ಮ ಮುಂದಿಟ್ಟಿರುವ ಬೇಡಿಕೆಗಳನ್ನು ಪುಷ್ಟೀಕರಿಸುತ್ತಾ ಒಂದೆರಡು ಮಾತುಗಳನ್ನಾಡಬೇಕೆಂದಿದ್ದೇನೆ. ನಮ್ಮ ಕಾಂಗ್ರೆಸ್ ಸರ್ಕಾರದವರು 15 ವರ್ಷಗಳಿಂದ ಹರಿಜನರ ಅಭಿವೃದ್ಧಿ ಕಾರ್ಯಗಳನ್ನು ಎಲ್ಲರ ಮೆಚ್ಚುಗೆಗೆ ಪಾತ್ರವಾಗುವ ಹಾಗೆ ಮಾಡಿದ್ದಾರೆ. ಅದರೆ ನಮ್ಮ ವಿರೋಧಪಕ್ಷದ ಅನೇಕ ಸದಸ್ಯರು ಹರಿಜನರ ಅಭಿವೃದ್ಧಿ ಕಾರ್ಯಗಳಲ್ಲಿ ಯಾವ ಪ್ರಗತಿಯನ್ನೂ ಸಾಧಿಸಿಲ್ಲವೆಂದು ಹೇಳಿರುವುದನ್ನು ನೋಡಿದರೆ ನಿಜವಾಗಿಯೂ ನನಗೆ ಆಶ್ಚರ್ಯವಾಗುತ್ತದೆ. ಆದರೆ, ಹರಿಜನರ ಅಭಿವೃದ್ಧಿಗೆ ಏನೇನು ಕೆಲಸಗಳನ್ನು ಯಾವಯಾವಕಾಲದಲ್ಲಿ ಮಾಡಬೇಕೋ ಅವನ್ನು ತ್ವರಿತವಾಗಿ ಮಾಡುತ್ತಿಲ್ಲ ಎಂದು ಮಾತ್ರ ಹೇಳಬಹುದು. ಹರಿಜನರ ಏಳಿಗೆಗಾಗಿ ಹಸು, ಎತ್ತು, ಕೋಳಿ ಮುಂತಾದುವುಗಳನ್ನು ಸರ್ಕಾರದವರು ಹರಿಜನರಿಗೆ ಒದಗಿಸುತ್ತಿದ್ದಾರೆ- ಅದರೆ ಆ ಸಹಾಯ ನಿಜವಾಗಿಯೂ ಹರಿಜನರಿಗೆ ಸರಿಯಾಗಿ ದೊರಕುತ್ತಿಲ್ಲ, ಅನೇಕ ಮಧ್ಯಸ್ತಗಾರರು ಅವರೇ ಲಪಟಾಯಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ಈಗಾಗಲೇ ಅವನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೆ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಳ್ಳದಿರುವುದು ನಿಜವಾಗಿಯೂ ಶೋಚನೀಯ. ಹರಿಜನರಿಗೆ ಮನೆಕಟ್ಟಿಕೊಳ್ಳುವುದಕ್ಕೆ ಸರ್ಕಾರದವರು ಮುಫತ್ತಾಗಿ ಸೈಟುಗಳನ್ನು ಕೊಡುತ್ತಿದ್ದಾರೆ. ಹೆಸರಿಗೆ ಮಾತ್ರ ಮುಫತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ನಮ್ಮ ತಾಲ್ಲೂಕಿನ ಹರಿಜನರ ಸ್ಥಿತಿಯನ್ನು ಕಣ್ಣಾರೆ ನೋಡಿದ್ದೇನೆ. ಒಂದೆರಡು ಗ್ರಾಮಗಳಲ್ಲಿ ಸರ್ಕಾರಿ ಆರ್ಡರಾಗಿದ್ದರೂ ಇದುವರೆಗೂ ಸೈಟುಗಳನ್ನು ಹಂಚಿಕೆಮಾಡಿಲ್ಲ. ಈ ಸಮಸ್ಯೆ ಸುಮಾರು 10-12 ವರ್ಷಗಳಿಂದ ತೀರ್ಮಾನವಾಗದೆ ನಿಂತಿದೆ. ಹರಿಜನರು ತಾಲ್ಲೂಕು ಆಫೀಸಿಗೆ, ಡೆಪ್ಯುಟಿ ಕಮಿಷನರ ಆಫೀಸಿಗೆ; ಸಬ್‌ಡಿವಿಜನ್ ಆಫೀಸಿಗೆ ಹೋಗಿಬರಲು ಬಹಳವಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಇದನ್ನು ನೋಡಿದರೆ ಸರ್ಕಾರ ನಿಜವಾಗಿಯೂ ಹರಿಜನರಿಗೆ ಸೈಟುಗಳನ್ನು ಮುಫತ್ತಾಗಿ ಹಂಚುತ್ತಿದೆಯೆ ಎಂದು ಯೋಚನೆ ಮಾಡಬೇಕಾಗುತ್ತದೆ. ಸರ್ಕಾರದ ಆಲಸ್ಯ ನೀತಿಯಿಂದ ಹರಿಜನರಿಗೆ ಬಹಳ ತೊಂದರೆಯಾಗಿದೆ. ಇದಕ್ಕೆ ಒಂದೆರಡು ಗ್ರಾಮಗಳ ಉದಾಹರಣೆ ಕೊಡುವುದು ಅವಶ್ಯಕವೆಂದು ಕಾಣುತ್ತದೆ. ಉದಾಹರಣೆಗಳನ್ನು ಕೊಡದೆ ಹೋದಲ್ಲಿ ಮಂತ್ರಿಗಳು ಹೇಳುವುದು ಏನೂ ಇಲ್ಲ, ನಾವು ಎಲ್ಲಾ ಸರಿಯಾದ ವ್ಯವಸ್ತೆ ಮಾಡಿದ್ದೇವೆ ಹರಿಜನರಿಗೆ ಬಹಳವಾಗಿ ಸಹಾಯ ಮಾಡುತ್ತಿದ್ದೇವೆಂದು ಹೇಳುತ್ತಾರೆ. ನಮ್ಮ ತಾಲ್ಲೂಕಿನ ಅಕ್ಕೂರು ಮತ್ತು ಬೇಡರಹಳ್ಳಿ ಈ ಎರಡು ಗ್ರಾಮಗಳ ಹರಿಜನರು ಸುಮಾರು 10-12 ವರ್ಷಗಳಿಂದ ನಿವೇಶನಗಳಿಗಾಗಿ ಒಂದೇ ಸಮನೆ ಸರ್ಕಾರದಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದಾರೆ. ಆ ಬಗ್ಗೆ ಸರ್ಕಾರದ ಕೊನೇ ತೀರ್ಮಾನವಾಗಿ ಸುಮಾರು ಒಂದೂವರೆ ವರ್ಷವಾಯಿತು. ಅನಂತರ ಜಮೀನ್ದಾರರು ರಿಟ್‌ದಾಖಲು ಮಾಡಲು ಹೈಕೋರ್ಟಿಗೆ ಹೋದರು. ಮತ್ತು ಅವರೇ ಆ ರಿಟ್ ವಾಪಸು ತೆಗೆದುಕೊಂಡರು. ಇಷ್ಟಾದ ಮೇಲೂ ನಮ್ಮ ಸೋಷಿಯಲ್‌ವೆಲ್ ಫೇರ್ ಇಲಾಖಾ ಮಂತ್ರಿಗಳು "ಕಡೆ" ಆರ್ಡರ್ ಕೊಟ್ಟಿರುವುದು ನಿಜವಾಗಿಯೂ ಆಶ್ಚರ್ಯಕರ. ಈ ರೀತಿಯ ಆರ್ಡರ್ ಮಾಡುವುದರಿಂದ ಹರಿಜನರಿಗೆ ಎಷ್ಟು ತೊಂದರೆಯಾಗುತ್ತದೆಂದು ವಿವರವಾಗಿ ನಾನೇ ಅವರಿಗೆ ತಿಳಿಸಿದೆ. ಆದರೂ ಕೂಡ ಇದುವರೆಗೂ ಈ ಬಡ ಹರಿಜನಗಳಿಗೆ ಯಾವ ಪರಿಹಾರವೂ ಕೊಡಲ್ಪಟ್ಟಿಲ್ಲ. ಇದೇರೀತಿ ಹರಿಜನರಿಗೆ ಭೂಮಿ ಹಂಚುವ ವಿಷಯದಲ್ಲೂ ಅನ್ಯಾಯವಾಗಿದೆ.

ನಮ್ಮ ತಾಲ್ಲೂಕಿನಲ್ಲಿ ಸುಮಾರು ಶೇಕಡ 95 ಜನರಿಗೆ ಭೂಮಿಯಿಲ್ಲ. ಸುಮಾರು ಮೂರು ವರ್ಷಗಳ ಹಿಂದೆ ಒಂದು ಭೂಮಿ ಹಂಚಿಕೆಯ ಆರ್ಡರಾಗಿದೆ. ಅದರಂತೆ 750 ಎಕರೆಗಳನ್ನು ಕಾಡಿನಿಂದ ಕೆಲವಾಗೆ ಮಾತ್ರ ಹೆಸರು ಸಮೂದಿಸಿ ಅರಣ್ಯ ಇಲಾಖಾ ಮಂತ್ರಿಗಳು ಆರ್ಡರು ಹೊರಡಿಸಿದ್ದಾರೆ ಆದರೆ 50 ಎಕರೆ, 40 ಎಕರೆ ಹೀಗೆ ಹೊಂದಿದ್ದ ಸವರ್ಣೀಯ ಜಮೀನುದಾರರಿಗೆ ಆ ಭೂಮಿಯನ್ನು ಕೊಟ್ಟಿದ್ದಾರೆ. ಭೂಮಿಯಿಲ್ಲದ, ಹರಿಜನರ್‍ಯಾರಿಗೂ ಕೊಟ್ಟಿಲ್ಲ, ಕೇವಲ ಜಮೀನಿರುವ ಏಳೆಂಟು ಕುಳ ಹರಿಜನರನ್ನು ಮಾತ್ರ ಆ ಪಟ್ಟಿಯಲ್ಲಿ ಸೇರಿಸಿದ್ದಾರೆ. ಇಂಥಹ ಅನ್ಯಾಯ ನಡೆಯಲು ಅವಕಾಶಕೊಡಬಾರದು, ಹರಿಜನಗಳ ಏಳಿಗೆ ಅಗಬೇಕಾದರೆ ಅವರಲ್ಲಿ ಕಡುಬಡವರಿಗೆ ಆಹಾರಧಾನ್ಯ ಬೆಳೆಯುವ ಭೂಮಿ ಹಂಚಿಕೆಯಾಗಬೇಕು ; ಖಾಲಿನಿವೇಶನಗಳನ್ನು ಮನೆಕಟ್ಟಿಕೊಳ್ಳಲು ಮುಫತ್ತಾಗಿ ಕೊಡಬೇಕು ; ಮನೆಗಳನ್ನು ಕಟ್ಟಿಕೊಳ್ಳಲು ಈಗ ಸರ್ಕಾರದವರು ಮಂಜೂರುಮಾಡಿರುವ ಸಾಲದ ಸೌಲಭ್ಯವು ಅತಿಜಾಗ್ರತೆಯಾಗಿ ದೊರಕಲು ಏರ್ಪಾಡುಮಾಡುವ ಬಗ್ಗೆ ಹೆಚ್ಚು ಗಮನಕೊಡಬೇಕು. ಮೇಲಾಗಿ ಹರಿಜನರ ಏಳಿಗೆಗೊ ಹರಿಜನ ಮಕ್ಕಳ ವಿದ್ಯಾಭ್ಯಾಸದ ಸೌಕರ್ಯಗಳನ್ನು ಹೆಚ್ಚು ಹೆಚ್ಚು ಒದಗಿಸಿದರೆ ಮಾತ್ರ, ಹರಿಜನಗಳು ಮುಂದುವರಿಯಲು ಸಾಧ್ಯವೆಂದು ನಾನು ಭಾವಿಸುತ್ತೇನೆ. ಸರ್ಕಾರದವರು ನಡೆಸುತ್ತಿರುವ ಬಸ್ಸುಗಳ ವ್ಯವಸ್ತೆ ಯಾವರೀತಿ ನಮ್ಮ ಮೈಸೂರಿನಲ್ಲಿದೆಯೆಂದು ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ನಾನು ಹೆಚ್ಚು ಹೇಳಲು ಇಷ್ಟಪಡುವುದಿಲ್ಲ. ನಮ್ಮ ಮಂತ್ರಿಗಳೇನೋ ನಿಜವಾಗಿಯೂ ಯಾವರೀತಿ ಆ ಇಲಾಖೆಯಲ್ಲಿ ಹಾಲಿಇರುವ ಲೋಪದೋಷ

ಗಳನ್ನು ಸರಿಪಡಿಸಬೇಕೆಂದು ಹಗಲಿರುಳೂ ಇನ್ನೂ ಯೋಚನೆ ಮಾಡುವುದರಲ್ಲಿಯೇ ಇದ್ದಾರೆ. ಆದರೆ ಯಾವ ಉತ್ತಮವಾದ ಕಾರ್ಯಸಾಧನೆಗಳೂ ಇದುವರೆಗೆ ನಡೆಸಿಲ್ಲದಿರುವುದು ಶೋಚನೀಯ. ನಾನೂ ಸರ್ಕಾರಿ ಬಸ್ಸುಗಳಲ್ಲಿ ಒಂದೆರಡು ಸಾರಿ ಇತ್ತೀಚೆಗೆ ಪ್ರಯಾಣಮಾಡಿದ್ದೇನೆ. ಕಂಡಕ್ಟರುಗಳು ಎಷ್ಟರ ಮಟ್ಟಿಗೆ ಸರ್ಕಾರಕ್ಕೆ ದ್ರೋಹ ಮಾಡುತ್ತಿದ್ದಾರೆಂಬುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆ ವಿಷಯವನ್ನು ಮಂತ್ರಿಗಳಿಗೂ ತಿಳಿಸಿದ್ದೇನೆ, ಮುಖ್ಯಾಧಿಕಾರಿಗಳಿಗೂ ಹೇಳಿದ್ದೇನೆ. ಹೇಳಿ ಒಂದು-ಒಂದೂವರೆ ತಿಂಗಳಾದರೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲವೆಂದು ನನಗೆ ಗೊತ್ತಾಗಿದೆ. ಒಂದು ಸಾರಿ ರಾಮನಗರದಿಂದ ಚನ್ನಪಟ್ಟಣಕ್ಕೆ ಬಸ್ಸಿನಲ್ಲಿ ಹೋದೆ. ಸುಮಾರು 15 ಜನರಿಗೆ ಟಿಕೆಟ್ ಕೊಡಲಿಲ್ಲ! ಸರ್ಕಾರ ಈ ಸಭೆಯ ಸದಸ್ಯರುಗಳ ಮಾತಿಗೂ ಬೆಲೆ ಕೊಡುತ್ತಿಲ್ಲದಿರುವುದನ್ನು ನೋಡಿ ನನಗೆ ತುಂಬಾ ನಿರಾಶೆಯುಂಟಾಗಿದೆ. ಇರುವ ಲೋಪದೋಷಗಳನು ನಾವು ಪದೇಪದೇ ಸರ್ಕಾರದ ಗಮನಕ್ಕೆ ತರುತ್ತಿರುವುದರಿಂದ ಬಹುಶಃ ನಮ್ಮ ವಿಷಯದಲ್ಲಿ ಬೇಜಾರುಉಂಟಾಗಿರಬಹುದು.

ಅಂಥಾದಕ್ಕೆ ಕೈ ಹಾಕಬಾರದು ಎಂದು ಮನಸ್ಸಿನಲ್ಲಿ ತೀರ್ಮಾನ ಮಾಡಿಕೊಂಡು ಈ ಮಾನ್ಯ ಸಭೆಯಲ್ಲಿ ಹೇಳುತ್ತಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಕಡೆ ಬನ್ನಿ.

ಶ್ರೀ ಬಿ. ಜೆ. ಲಿಂಗೇಗೌಡ.—ಅಂಥಾದ್ದೇನೂ ಅಗತ್ಯವಿಲ್ಲ. ಈಗ ನಡೆಯುತ್ತಿರುವ ಸರ್ಕಾರವೇ ಖಂಡಿತ ಈ ಮಾನ್ಯತೆಗಳನ್ನು ಸರಿಪಡಿಸುತ್ತೆ ಎಂಬುದು ನನ್ನ ನಂಬಿಕೆ. ಈ ಸರ್ಕಾರವೂ ಸರಿಪಡಿಸದಿದ್ದರೆ ಡೆಮಾಕ್ರೆಟಿಕ್ ಸೆಟಪ್ ಆಫ್ ಗವರ್ನಮೆಂಟಿಗೇ ಒಳ್ಳೆಯ ಹೆಸರನ್ನು ತರಲು ಸಾಧ್ಯವೇ ಇಲ್ಲವೆಂದು ಹೇಳಬಹುದು. ಆದ್ದರಿಂದ ಈ ಸರ್ಕಾರ ಶೀಘ್ರವಾಗಿ ಇರುವ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ತಕ್ಕ ಕ್ರಮಗಳನ್ನು ಕೈಗೊಳ್ಳಲಿ ಎಂಬುದನ್ನು ಮಾತ್ರ ಸರ್ಕಾರಕ್ಕೆ ಸೂಚಿಸುತ್ತಿದ್ದೇನೆಯೇ ಹೊರತು ಸರಕಾರದ ತಪ್ಪುಗಳನ್ನು ಕಂಡುಹಿಡಿದು ಸರ್ಕಾರದ ಬದಲಾವಣೆಯನ್ನು ಮಾಡುವುದಕ್ಕೆ ಈ ರೀತಿ ಹೇಳುತ್ತಾ ಇಲ್ಲ. ಈ ವಿಷಯಗಳನ್ನು ಸರಕಾರದವರ ಗಮನಕ್ಕೆ ತಂದು ಬಸ್ಸುಗಳ ಕಂಡಕ್ಟರುಗಳಿಂದ ಉಂಟಾಗತಕ್ಕ ಅನ್ಯಾಯಗಳನ್ನು ಸರಿಪಡಿಸಿ ಸರಕಾರಕ್ಕೆ ಬರುವ ಆದಾಯವನ್ನು ಹೆಚ್ಚು ಮಾಡಿಕೊಳ್ಳಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆಮಾಡಿಕೊಳ್ಳುವ ಉದ್ದೇಶದಿಂದ ಮಾತ್ರ ಮಾನ್ಯ ಸಭೆಯ ಮುಂದೆ ಲೋಪದೋಷಗಳನ್ನು ಇಡುತ್ತಿದ್ದೇನೆ.

[MR. SPEAKER in the Chair]

ಕೂಲಿಗಾರರ ವಿಚಾರದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರದವರು ಅನೇಕ ಸೌಕರ್ಯಗಳನ್ನು ಒದಗಿಸಿರುವುದು ತಮಗೆಲ್ಲರಿಗೂ ಗೊತ್ತಿದೆ. ಇತ್ತೀಚೆಗಂತೂ ಕೂಲಿಗಾರರೂ ಯಾವ ವಿಧದಲ್ಲೂ ತೊಂದರೆ ಪಡಕೂಡದು ಎಂಬ ತತ್ವವನ್ನು ಅನುಸರಿಸಿ ಅವರುಗಳಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ವಿರೋಧ ಪಕ್ಷದ ಮಾನ್ಯ ಸದಸ್ಯರೊಬ್ಬರು ಈ ಸಭೆಯಲ್ಲಿ ಮಾತನಾಡುತ್ತಾ ಚನ್ನಪಟ್ಟಣ ಸ್ಪನ್ ಸಿಲ್ಕ್ ಮಿಲ್ಸ್‌ನ ಆಡಳಿತ ವರ್ಗದವರು ಅಲ್ಲಿನ ಕೂಲಿಗಾರರಿಗೆ ಅನ್ಯಾಯ ಮಾಡುತ್ತಿದ್ದಾರೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಎಂದು ತಿಳಿದು ಬಂತು. ನಿಜಾಂಶವನ್ನು ಮಾನ್ಯ ಸಭೆಗೆ ತಿಳಿಸಬೇಕಾದರೆ ಸರ್ಕಾರದವರು ಯಾವ ಪಕ್ಷ ಬೇಧಭಾವನೆಯನ್ನು ಮಾಡದೇ ನ್ಯಾಯವಾಗಿ ಹಿಂದೆ ನಡೆದುಕೊಂಡಿದ್ದ ಅನೇಕ ಕೆಲಸಗಾರರನ್ನು ಪುನಃ ತೆಗೆದುಕೊಂಡಿದ್ದಾರೆ. ಹಿಂದೆ ಈ ಮಿಲ್ಲು ಕಂಪೆನಿ ಆಡಳಿತದಲ್ಲಿದ್ದಾಗ ಏಕೆ ಮುಚ್ಚಲ್ಪಟ್ಟಿತು ಎಂಬುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತು. ಮುಖ್ಯವಾಗಿ ಆಗ ನಡೆಯುತ್ತಾ ಇದ್ದ ಆಡಳಿತ ವರ್ಗದವರಿಗೂ ಮತ್ತು ಕೂಲಿಗಾರರಿಗೂ ಬಹಳ ವೈಷಮ್ಯ ಬಂದು ಕೊನೆಗೆ ಆ ಕೂಲಿಗಾರರಲ್ಲೇ ವೈಷಮ್ಯವುಂಟಾಗಿ ಕೂಲಿಗಾರರ ನಡವಳಿಕೆಗಳಿಂದ ಮಿಲ್ಲು ಮುಚ್ಚಬೇಕಾಗಿ ಬಂತು. ಅಂತಹ ಮಿಲ್ಲನ್ನು ನಮ್ಮ ಸರ್ಕಾರದವರು ಖರೀದಿಗೆ ತೆಗೆದುಕೊಂಡು ಅನೇಕ ಹಿಂದೆ ಕೆಲಸಮಾಡುತ್ತಿದ್ದ ಕೂಲಿಗಾರರಿಗೆ ಕೆಲಸಗಳನ್ನು ಒದಗಿಸಿದ್ದಾರೆ. ಇದರಲ್ಲಿ ಯಾವ ಅನ್ಯಾಯವೂ ಆಗಿಲ್ಲವೆಂದು ಘಂಟಾ ಘೋಷವಾಗಿ ಹೇಳುತ್ತೇನೆ. ಇದರಲ್ಲಿ ರಾಜಕೀಯ ಇದೆ ಎಂದು ಯಾರಾದರೂ ಭಾವಿಸಿದ್ದರೆ ಅದು ತಪ್ಪು. ಮತ್ತು ಅಲ್ಲಿನ ಅಧಿಕಾರಿಗಳ ನಡವಳಿಕೆ ವಿಚಾರವೂ ಸಹ ಈ ಸಭೆಯಲ್ಲಿ ಪ್ರಸ್ತಾಪಕ್ಕೆ ಬಂದಿರುವುದು ಶೋಚನೀಯವೆಂದು ಮಾತ್ರ ಹೇಳಿ ಆ ವಿಷಯದಲ್ಲಿ ನಾನು ಹೆಚ್ಚಿಗೆ ಏನೂ ಹೇಳುವುದಕ್ಕೂ ಇಷ್ಟಪಡುವುದಿಲ್ಲ.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ರಾಜಕೀಯ ಇಲ್ಲ ಎಂದು ಹೇಳಿದಿರಿ. ಅಲ್ಲಿ ಕುಳಿತುಕೊಂಡು ಈ ದಿವಸ ಈ ಸಭೆಯಲ್ಲಿ ರಾಜಕೀಯ ಮಾಡುತ್ತಾ ಇರುವವರು ನೀವೇ ಅಲ್ಲವೇ ?

Mr. SPEAKER.—The chair does not mind Hon'ble Members making general criticisms. Interjection is bad enough but making allegations against another individual Member is certainly not good.

Sri K. LAKKAPPA.—I certainly did not make any such allegation. ರಾಜಕೀಯ ಯಾರು ಮಾಡುತ್ತಾ ಇರುವುದು ಎಂದು ಹೇಳಿದೆ ಅಷ್ಟೆ.

ಶ್ರೀ ಬಿ. ಜಿ. ಲಿಂಗೇಗೌಡ.—ಅದಕ್ಕೆ ಉತ್ತರವನ್ನು ಮಂತ್ರಿಗಳು ಹೇಳುತ್ತಾರೆ. ನಾನು ಆ ವಿಚಾರದಲ್ಲಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ನಮ್ಮ ಚನ್ನಪಟ್ಟಣ ಸ್ಪನ್ ಸಿಲ್ಕ್ ಮಿಲ್ಸಿನ ಆಡಳಿತ ಬಹಳ ಸಮರ್ಪಕವಾಗಿದೆ. ಕೂಲಿಗಾರರೆಲ್ಲರೂ ಕೂಡ ಒಗ್ಗಟ್ಟಾಗಿ ಚೆನ್ನಾಗಿ ಕೆಲಸ ಮಾಡುತ್ತಾ ಇದ್ದಾರೆ. 1,500 ಜನ ಕೊಡುತ್ತಿದ್ದ ಉತ್ಪನ್ನವನ್ನು 500 ಜನ ಕೊಡುತ್ತಾ ಇದ್ದಾರೆ. ಹೀಗಿರುವಾಗ ತಾವು ವಿಷಯಗಳನ್ನು ಹೆಚ್ಚಾಗಿ ತಿಳಿದುಕೊಳ್ಳದೇ ಈ ಸಭೆಯಲ್ಲಿ ಹೆಚ್ಚಿನ ಪ್ರಸ್ತಾಪ ಮಾಡಿ ಅಲ್ಲಿನ ಕೂಲಿಗಾರರ ಶ್ರೇಯಸ್ಸಿಗೆ ಮತ್ತು ಮಿಲ್ಲಿನ ಅಭಿವೃದ್ಧಿಗೆ ಅಡ್ಡಿ ಬರಬೇಡಿರೆಂದು ತಮ್ಮನ್ನು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಆದರೆ ಸಮರ್ಪಕವಾಗಿ ನಡೆಯುತ್ತಿರುವ ಅಲ್ಲಿನ ಕೆಲಸಕ್ಕೆ ಧಕ್ಕೆ ಮತ್ತು ಯಾವ ಅಡ್ಡಿಯೂ ಆಗದಂತೆ ನೋಡಿಕೊಳ್ಳಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತೇನೆ. ಇಷ್ಟು ಮಾತ್ರ ಹೇಳಿ ಈ ಬೇಡಿಕೆಗಳ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಹೇಳಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಸರ್ಕಾರದವರು ಮಾನ್ಯ ಸಭೆಯ ಮುಂದೆ ಸುಮಾರು 17 ಬೇಡಿಕೆಗಳನ್ನು ಮಂಡಿಸಿರುತ್ತಾರೆ. ಎಲ್ಲಾ ಬೇಡಿಕೆಗಳ ವಿಷಯದಲ್ಲಿ ಪ್ರಸ್ತಾಪಿಸುವುದು ಕಾಲದ ಅಭಾವದ ದೃಷ್ಟಿಯಿಂದ ಬಹಳ ಕಷ್ಟ. ಕೆಲವು ಮುಖ್ಯ ವಿಷಯಗಳನ್ನು ಕುರಿತು ನಾನು ಹೇಳಬೇಕೆಂದಿದ್ದೇನೆ. ಮೊದಲನೆಯದಾಗಿ ಈಗಾಗಲೇ ಬಸ್ ರಾಷ್ಟ್ರೀಕರಣದ ವಿಷಯ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ನಾವು ಈ ರಾಜ್ಯದಲ್ಲಿ ಕೆಲವು ಭಾಗ, ಕೆಲವು ರಸ್ತೆಗಳನ್ನು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಮುಖೇನ ನಡೆಸಿಕೊಂಡುಹೋಗುತ್ತಾ ಇದ್ದೇನೆ. ರಾಜ್ಯದ ಎಲ್ಲಾ ಕಡೆ ಈ ಒಂದು ರಾಷ್ಟ್ರೀಕರಣದ ವ್ಯವಸ್ಥೆಯನ್ನು ವಿಸ್ತರಿಸತಕ್ಕಂಥ ಒಂದು ದೃಢವಾದ ಹೆಜ್ಜೆಯನ್ನು ಸರ್ಕಾರ ಇಡುವುದಕ್ಕೆ ಬಹಳ ಹಿಂದು ಮುಂದು ನೋಡುತ್ತಾ ಇದೆ. ಇದನ್ನು ನೋಡಿದರೆ ರಾಷ್ಟ್ರೀಕರಣದಲ್ಲಿ ಈ ಸರ್ಕಾರಕ್ಕೆ ಮೂಲತಃ ನಂಬಿಕೆ ಇಲ್ಲವೋ ಏನೋ ಎಂಬ ಅನುಮಾನ ನಮ್ಮಲ್ಲಿ ಬರುತ್ತಾ ಇದೆ. ಅದಕ್ಕೆ ಸರ್ಕಾರದವರು ಏನು ಉತ್ತರ ಕೊಡುತ್ತಾರೆ ಕಾದು ನೋಡಬೇಕಾಗಿದೆ. ಅವರು ಹೇಳಬಹುದು. ಈಗಿರತಕ್ಕ ವ್ಯವಸ್ಥೆಯನ್ನು ನಾವು ಭದ್ರಪಡಿಸಿಕೊಂಡು ಮುಂದೆ ಹೋಗುತ್ತೇವೆ ಎಂದು ಆದರೆ ಅರೆಮನಸ್ಸಿನ, ಅರೆನಿರ್ಧಾರದ ಹೆಜ್ಜೆ ಇಂಥಾ ವಿಷಯಗಳಲ್ಲಿ ಯಾವಾಗಲೂ ಅಪಾಯಕಾರಿ ಎನ್ನುವುದನ್ನು ಮಾತ್ರ ಸರ್ಕಾರದವರು ಮರೆಯಬಾರದು ಎಂಬುದನ್ನು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ. ಒಂದು ಮಾತು ಇಲ್ಲಿ ಹೇಳಬೇಕೆಂದರೆ ಈಗಾಗಲೇ ಮಾನ್ಯ ಸದಸ್ಯರನೇಕರು ಅಭಿಪ್ರಾಯಪಟ್ಟಿದ್ದಾರೆ. ಈಗ ನಡೆಸಿಕೊಂಡು ಹೋಗುತ್ತಾ ಇರತಕ್ಕ ವ್ಯವಸ್ಥೆಯಲ್ಲೂ ಕೂಡ ಶ್ರೀಯುತ ದೇವರಾಜ ಅರಸ್ ಅವರು ಈ ಸಭೆಯ ಮುಂದೆ ಮಂತ್ರಿಗಳಾಗಿ ಬಂದಾಗ ನಮ್ಮ ಆಶೆ, ನಿರೀಕ್ಷೆಗಳಿಗೆ ಬೆಂಬಲ ಕೊಟ್ಟು ಈ ವ್ಯವಸ್ಥೆಯನ್ನು ಜನಾದರಣೀಯವಾಗಿ ಮಾಡಿ ಮತ್ತೆ ಒಳ್ಳೆಯ ನ್ಯಾಯ ದೊರೆಯುತಕ್ಕ ಇಲಾಖೆಯಾಗಿ ಮಾಡಬೇಕೆಂದು ಏನು ಹೇಳಿದ್ದೆವೋ ಅದನ್ನು ಮಾನ್ಯ ಸದಸ್ಯರು ಈಗ ತಾನೆ ಮಾತನಾಡಿದರು ಅವರು ಹೇಳಿರುವ ಪ್ರಕಾರ, ಅಂಥಾದ್ದೇನೂ ಪ್ರಗತಿ ನಡೆದಿಲ್ಲ, ಸಮಾಧಾನ ಅಥವಾ ಹೆಮ್ಮೆ ಪಟ್ಟುಕೊಳ್ಳತಕ್ಕ ಒಂದು ಒಳ್ಳೆಯತನ ಅಥವಾ ಒಳ್ಳೆಯ ಕೆಲಸ ಅಲ್ಲಿ ಆಗಿಲ್ಲ ಎಂದು ಹೇಳಿದರು ಅದನ್ನು ಮಾನ್ಯ ಮಂತ್ರಿಗಳು ಬಹುಶಃ ಒಪ್ಪುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಅವರು ಕಷ್ಟಪಡುತ್ತಾ ಹೇಳಬಹುದು. ಈ ವಿಷಯದಲ್ಲಿ ನಮಗೆ ಅನೇಕ ಸಲ ಗೊತ್ತಿದೆ. ಈ ವ್ಯವಸ್ಥೆಯನ್ನು ಸುಧಾರಿಸಬೇಕು ಮತ್ತು ಜನಕ್ಕೆ ಹೆಚ್ಚು ಸೌಲಭ್ಯ ಕೊಡಬೇಕು. ಅಲ್ಲಿ ಆಗತಕ್ಕ ಹಣದ ದುರುಪಯೋಗ ತಡೆಗಟ್ಟಬೇಕೆಂಬುದು ಬಹಳ ಅವಶ್ಯಕ. ಅವರಿಗೆ ಬಸ್ಸುಗಳು ಎಲ್ಲ ನಡೆಸಬೇಕೆನ್ನುವುದು ಇನ್ನು ವ್ಯವಸ್ಥೆ ಇಲ್ಲ ಮತ್ತು ಲಕ್ಷಾಂತರ ರೂಪಾಯಿ ಸಾಮಾನುಗಳನ್ನು ಹೇಗೆ ನೋಡಿಕೊಳ್ಳಬೇಕು; ಪೂರ್ವಕಾಲದ ಹಾಗೆ ಹೇಗೆ ನೋಡಿಕೊಳ್ಳಬೇಕು ಇಂಥಾದ್ದೆಲ್ಲಾ ಬಹು ಬೇಗ ಅವರು ಸರಿಪಡಿಸಬೇಕೆಂದು ಒತ್ತಾಯಪಡಿಸುತ್ತೇನೆ. ಏಕೆಂದರೆ ಈ ರಾಷ್ಟ್ರದ ಹಣ, ಇಲ್ಲಿ ಒಂದು ಮಾತನ್ನು ಹೇಳಬಹುದು. ನಾನು ಮೂಲತಃ ಮರಣದಂಡನೆಯನ್ನು ವಿರೋಧಿಸುತ್ತೇನೆ. ಮತ್ತು ಅದರ ಬಗ್ಗೆ ನನಗೆ ನಂಬಿಕೆ ಇಲ್ಲ.

ನಂಬಿಕೆ ಇಲ್ಲ ಇದು ಇರಬಾರದು ಎಂತ ಹೇಳುತ್ತಿದ್ದೆ. ಜೀವಾದಿ ಶಿಕ್ಷೆ ಮಾತ್ರ ಇದ್ದರೆ ಸಾಕು ಅನ್ನತಕ್ಕವರ ಪೈಕಿ ನಾನೂ ಒಬ್ಬ ಮನುಷ್ಯ. ಆದರೆ ಇತ್ತೀಚೆಗೆ ಈ ಸಾರ್ವಜನಿಕ ಸ್ವತ್ತುಗಳು ವಸ್ತುಗಳು ದುರುಪಯೋಗವಾಗುತ್ತಿರುವುದನ್ನು ನೋಡಿದ ಮೇಲೆ ಇಂಥ ತಪ್ಪಿತಸ್ಥರಿಗೆ ಆ ಮರಣ ದಂಡನೆಯನ್ನೇ ವಹಿಸಬೇಕು ಎಂತ ನನಗೂ ಅನ್ನಿಸುತ್ತದೆ. ಈ ದಿವಸ ಆ ರಷ್ಯಾ ದೇಶದಲ್ಲೂ ಸಹ ಸಾರಜನಿಕ ವಸ್ತುಗಳು ಕಳವು-ಅವುಗಳನ್ನು ದುರುಪಯೋಗಪಡಿಸತಕ್ಕವರು ಯಾರೆಂಬುದನ್ನು ಪತ್ತೆ ಹಚ್ಚಿ, ಅಂಥಾ ಅಕ್ಷಮ್ಯಕೃತ್ಯಗಳಿಗೆ ಯಾರ್ಯಾರು ಜವಾಬ್ದಾರರಾಗಿರುತ್ತಾರೋ ಅಂಥವರನ್ನು ಪತ್ತೆ ಹಚ್ಚಿ ಅವರೆಲ್ಲರಿಗೂ ಉಗ್ರ ಶಿಕ್ಷೆ ಆಗಲೇಬೇಕೆಂದು ಹೇಳಿದ್ದಾರೆ. ಹೀಗೆಂದು ಏನಾದರೂ ವ್ಯವಸ್ಥೆ ಮಾಡದಿದ್ದರೆ ಇಂಥ ವ್ಯವಹಾರಗಳಲ್ಲಿ-ರಾಷ್ಟ್ರೀಕಾರಣ ಜಾರಿಗೆ ಬಂದ ಕಾಲದಲ್ಲಿ, ಸರ್ಕಾರ ಯಾವ ಕೆಲಸ ಮಾಡಲಿಕ್ಕೂ ಸಾಧ್ಯವಿಲ್ಲದಂತಾಗುತ್ತದೆ. ಇಂಥ ಕೃತ್ಯಗಳನ್ನು ತಡೆಗಟ್ಟದೆ ದೇಶಲ್ಲಿದ ಆ ಯಾವ ಸಮಾಜವಾದ ಪದ್ಧತಿಯನ್ನು ಜಾರಿಗೆ ತಂದರೂ ಪ್ರಯೋಜನವಿಲ್ಲ, ಇಂಥಾ ರಾಷ್ಟ್ರೀಕರಣ ಯೋಜನೆಗಳಿಂದಲೂ ಪ್ರಯೋಜನವಿಲ್ಲ. ಇದನ್ನು ಹೀಗೆ ಬೆಳೆಯ ಬಿಟ್ಟರೆ ಮುಂದೆ ದೇಶದಲ್ಲಿ ಇದು ಮತ್ತಷ್ಟು ಭಯಂಕರ ರೂಪತಾಳುತ್ತದೆ. ಆದುದರಿಂದ ನಾನೀಗ ಇಷ್ಟು ಕಟುವಾದ ಶಿಕ್ಷೆ ವಿಧಿಸಬಹುದೆಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡ ಬಯಸುತ್ತೇನೆ.

ಇನ್ನು ಕಬ್ಬಿಣ-ಉಕ್ಕು ಇತ್ಯಾದಿಗಳ ಬಗ್ಗೆ ಪರ್ಮಿಟ್‌ಗಳನ್ನು ಕೊಡತಕ್ಕ ವಿಷಯದಲ್ಲಿ ಈಗಾಗಲೇ ಕೈಗಾರಿಕಾ ಮಂತ್ರಿಗಳು ಕೆಲವು ಸಮಾಜಾಯಿಷಿಗಳನ್ನು ಹೇಳಿದ್ದಾರೆ. ಆದರೆ ಅಷ್ಟು ಒಳ್ಳೆ ರೀತಿಯಲ್ಲಿ ಅವು ಕಾರ್ಯಗತವಾಗುತ್ತಿಲ್ಲ. ಇವುಗಳಿಂದ ಜನರಿಗೇನೂ ಅನುಕೂಲವಾಗಿಲ್ಲ. ಈ ಅನುಕೂಲವೇನಿದ್ದರೂ ಈ ಸರ್ಕಾರ ಏನು ಕೆಲವು ವ್ಯಕ್ತಿಗಳನ್ನು ಸಾಕ್ಷ ಇಟ್ಟುಕೊಂಡಿದೆಯೋ ಅಂಥಾವರಿಗೆ ಮಾತ್ರ ಅನುಕೂಲದೊರೆತು—ಅವರಿಂದ ಪರೋಕ್ಷವಾಗಿ ಮಂತ್ರಿಗಳಿಗೂ ಸಹ ಪ್ರಯೋಜನ ಪಡೆಯುತ್ತಿದ್ದಾರೆ ಅನ್ನತಕ್ಕ ಅನುಮಾನ ಬಂದಿದೆ ಎಂಬ ಅಂಶವನ್ನು ನಾನೀ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಈ ಅನುಮಾನವನ್ನು ಪರಿಹರಿಸಬೇಕೆಂದು ಹೇಳುತ್ತೇನೆ. ಈಗಾಗಲೇ ಆ ಸ್ಕ್ರ್ಯಾಪ್‌ರೆಸ್ ಸ್ಟೀಲಿನ ವಿಚಾರದಲ್ಲಿ ಸಾಕಷ್ಟುಗಲಾಟೆ ಎದ್ದಿದೆ. ಅದರ ಗುಟ್ಟೆಲ್ಲ ಹೊರಬೀಳತಕ್ಕ ಸಂದರ್ಭವಿದೆ. ಆದರೆ ಇದೊಂದು ಲೈಸೆನ್ಸ್ ಕೊಡೋ ರಾಜ್ಯವಲ್ಲ ಅನ್ನುವುದನ್ನು ತೋರಿಸಿಕೊಳ್ಳೋ ರೀತಿಯಲ್ಲಿ ಸರ್ಕಾರದವರು ವರ್ತಿಸಬೇಕಾಗಿರುತ್ತೆಂದು ನಾನೀ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಕಾರ್ಮಿಕ ಇಲಾಖೆಯ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಖೋತಾ ನಿರ್ಣಯಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಇಂದು ಒಂದು ಯೋಜನೆಯ ಕಾಲದಲ್ಲಿದ್ದೇವೆ. ರಾಷ್ಟ್ರಕ್ಕೆ ಸಂಕಟಾವಸ್ಥೆ ಬೇರೆ ಒಂದು ಕಡೆ ಇಟ್ಟುಕೊಂಡಿದೆ. ಇಂಥ ಕಾಲದಲ್ಲಿ ಸರ್ಕಾರ ಮತ್ತು ಅದರ ನಿರ್ದೇಶದ ಪ್ರಕಾರ ಕೆಲಸ ನಡೆಸುತ್ತಿರುವ ನೌಕರಶಾಹಿ ವರ್ಗದಮೇಲೆ ಬಹಳ ಹೆಚ್ಚಿನ ಜವಾಬ್ದಾರಿ ಬಿದ್ದಿದೆ. ಕೆಲವು ಸಂದರ್ಭಗಳಲ್ಲಿ ಇಂಥ ವಿಚಾರಗಳೇ ಅವರಿಗೆ ಅರ್ಥವಾಗುವುದಿಲ್ಲ. ವಿರೋಧ ಪಕ್ಷದ ಸ್ಥಾನದಲ್ಲಿ ನಿಂತು ಹೀಗೆಂದು ಭಾಷಣ ಮಾಡುವುದರಿಂದ ಅವರಿಗೆ ಇದರ ಅರ್ಥವಾಗುತ್ತದೆಯಲ್ಲವೇ ಅಂದರೆ ಅದೂ ಸಹ ನನಗೆ ಸರಿ ಎಂತ ಅನಿಸುತ್ತಿಲ್ಲ. ಆದರೆ ನಾವು ಇವರೆಲ್ಲರೂ ಯಾವ ನಿಷ್ಠೆ–ನೇಮಗಳಿಂದ ನಡೆದುಕೊಳ್ಳಬೇಕೆಂದು ಒಂದು ಸಂಪ್ರದಾಯವನ್ನು ಹಾಕಿ ಕೊಟ್ಟಿದ್ದೇವೋ ಅವುಗಳನ್ನು ಇವರು ದಾಟಿ ಹೋಗದಂತೆ ತಡೆಗಟ್ಟಲು ಸಾಧ್ಯವೇ ಇಲ್ಲ ಎಂತ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇತ್ತೀಚೆಗೆ ಕಾರ್ಮಿಕ ವರ್ಗಕ್ಕೆ ಕೆಲವು ಸೌಲಭ್ಯಗಳನ್ನೊದಗಿಸಿದ್ದಾರೆ. ಅದಕ್ಕಾಗಿ ನಾವು ಆ ಗುಲ್ಜಾರಿಲಾಲ್ ನಂದಾರವರಿಗೆ ನಮ್ಮ ಅಭಿವಂದನೆಯನ್ನು ಸಲ್ಲಿಸಬೇಕಾಗಿದೆ. ಆದರೆ ಅವುಗಳನ್ನು ಎಷ್ಟರಮಟ್ಟಿಗೆ ಕಾರ್ಯಗತ ಮಾಡಿದ್ದಾರೆ ಅನ್ನುವುದನ್ನು ಕಾರ್ಮಿಕ ಶಾಖಾ ಮಂತ್ರಿಗಳು ಸ್ವಲ್ಪ ಪರಿಶೀಲನೆ ಮಾಡಿ ನೋಡಬೇಕಾಗಿದೆ. ಈ ದಿವಸ ಮಿನಿಮಂ ವೇಜಸ್ ಆಕ್ಟ್ ಜಾರೀಲಿದೆ–ಹೆಸರಿಗೆ ಮಾತ್ರ. ಅದು ಕಾರ್ಯಗತವಾಗುತ್ತಿಲ್ಲ. ಮಿನಿಮಂ ವೇಜಸ್ ಕೊಡದ ಮಾಲೀಕರಿದ್ದಾರೆ. ಈಗಲೂ ಸಹ 10-12 ವರ್ಷ ವಯಸ್ಸಿನ ಮಕ್ಕಳನ್ನು ಅಲ್ಲಲ್ಲೇ ಕೂಲಿಗೆ ಇಟ್ಟು ಕೊಂಡಿರುವುದನ್ನು ನಾವೆಲ್ಲರೂ ನೋಡಬಹುದು. ಆದರೆ ಈ ದಿವಸ ಈ ಕೂಲಿಗಾರರಿಗೆ ಗ್ರಾಚುಯಿಟಿ, ಬೋನಸ್ ಇತ್ಯಾದಿಗಳನ್ನು ಮಾಲೀಕರು ಕೊಡಬೇಕೆಂಬ ಕಾನೂನಿದೆ. ಆದರೆ ಇದು ಕಾರ್ಯರೂಪದಲ್ಲಿ ನಡೆಯುತ್ತಿದೆಯೇ ಎಂಬುದನ್ನು ಮಂತ್ರಿಗಳು ಪರಿಶೀಲನೆ ಮಾಡಿ ನೋಡಬೇಕು. ಹೀಗೆ ಪ್ರತಿಯೊಂದು ಕೈಗಾರಿಕೆಯಲ್ಲೂ ಪರಿಶೀಲನೆ ಮಾಡಿ ಹೀಗೆ ಈ ಕಾರ್ಮಿಕ ವರ್ಗಕ್ಕೆ ರಕ್ಷಣೆ ಕೊಡಬಹುದು ಎಂಬುದನ್ನು ಕಂಡುಹಿಡಿಯಲು ಕಾರ್ಮಿಕ ಇಲಾಖೆಯವರೂ ಮತ್ತು ಕಾರ್ಮಿಕ ಮಂತ್ರಿಗಳೂ ಈ ವಿಚಾರಕ್ಕೆ ಹೆಚ್ಚು ಗಮನ ಕೊಡುತ್ತಾರೆಂದು ನಾನು ಆಶಿಸುತ್ತೇನೆ.

ಇನ್ನು ಈ ಉದ್ಯೋಗ ವಿನಿಮಯ ಕೇಂದ್ರಗಳ ವಿಚಾರಕ್ಕೆ ಬಂದರೆ ನನ್ನ ಮನಸ್ಸಿಗೆ ಇದು ಇನ್ನು ಹೆಚ್ಚಿನ ನೋವನ್ನುಂಟು ಮಾಡತಕ್ಕದ್ದಾಗಿದೆ. ಆದರೆ ಈ ವಿಚಾರದಲ್ಲಿ ಈ ಕೇಂದ್ರಕ್ಕೆ ಉದ್ಯೋಗ

(ಶ್ರೀ ಎಸ್. ಗೋಪಾಲಗೌಡ)

ಕ್ಕಾಗಿ ಎಷ್ಟು ಜನರಿಂದ ಅರ್ಜಿಗಳು ಬಂದಿದ್ದವು. ಎಷ್ಟು ಜನರಿಗೆ ಕೆಲಸ ದೊರಕಿಸಿ ಕೊಡಲಾಯಿತು ಎನ್ನತಕ್ಕ ಅಂಶವನ್ನು ತಿಳಿಸುವುದು ಮಾತ್ರವೇ ಹೊರತು ಎಲ್ಲರಿಗೂ ಉದ್ಯೋಗವನ್ನು ಒದಗಿಸುವಂಥ ಒಂದು ಜವಾಬ್ದಾರಿ ನಮ್ಮ ಸರ್ಕಾರಕ್ಕಿಲ್ಲ. ಅಂತ ಅವರು ಮೊದಲೇ ಹೇಳಿದ್ದಾರೆ. ನಿರುದ್ಯೋಗಿಗಳಾದ ಜನರಿಗೆಲ್ಲ ಒಂದು ಉದ್ಯೋಗವನ್ನು ಕಲ್ಪಿಸತಕ್ಕಂಥ ಸಾಮರ್ಥ್ಯ ಅಥವಾ ಆ ಒಂದು ದಕ್ಷತೆ ಈ ನಮ್ಮ ಸರ್ಕಾರಕ್ಕಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವುದರಿಂದ ಈ ವಿಷಯವನ್ನು ನಾನು ಮತ್ತೆ ಒತ್ತಿ ಹೇಳಬೇಕಾಗಿಲ್ಲ. ಮೇಲಾಗಿ ಈ ಹಕ್ಕು ಒಂದು ರಾಜ್ಯಾಂಗ ದತ್ತವಾಗಿ ಬಂದಿರತಕ್ಕದಲ್ಲ. ಹೀಗಿರುವಾಗ ಈ ನಿರುದ್ಯೋಗಿಗಳಿಗೆಲ್ಲ ಭತ್ಯ ಕೊಡಬೇಕೆಂಬುದು ಸಧ್ಯಕ್ಕೆ ಕಾರ್ಯಗತವಾಗತಕ್ಕದ್ದಲ್ಲ ಎಂದು ನನಗನಿಸುತ್ತದೆ. ಈ ದಿವಸ ದೇಶದಲ್ಲಿ ಈ ನಿರುದ್ಯೋಗಿಗಳ ಸಂಖ್ಯೆ ಒಂದು ಸೈನ್ಯ ರೂಪದಲ್ಲಿ ಬೆಳೆಯುತ್ತಿದೆ. ಆದರೂ ನಾವಿಂದು ಯೋಜನಾ ಯುಗದಲ್ಲಿದ್ದೇವೆ! ನಾಳೆ ಒಂದು ವೇಳೆ ಈ ಸೈನ್ಯ ಸರಕಾರದ ಮೇಲೆ ಧಾಳಿ ಮಾಡಿ ಬೀಳತಕ್ಕ ಪ್ರಸಂಗ ಬಂದರೆ ಆಗ ದೇಶದಲ್ಲಿರತಕ್ಕ ಆ ಕೇಂದ್ರ ಸರ್ಕಾರ ಈ ರಾಜ್ಯ ಸರ್ಕಾರಗಳೆಲ್ಲ ಕುಸಿದು ಬಿದ್ದು ಹೋಗುತ್ತವೆ. ಈ ಉದ್ಯೋಗ ಕಲ್ಪಿಸತಕ್ಕ ಕೇಂದ್ರಗಳಲ್ಲಿ ಈ ಜನರನ್ನೇ ರಿಜಿಸ್ಟರ್ ಮಾಡಿಕೊಳ್ಳತಕ್ಕ ಆ ಪಟ್ಟಿಗಳೂ ಕೂಡ ಹನುಮಂತನ ಬಾಲ ಬೆಳೆದ ಹಾಗೆ ಸುಮ್ಮನೆ ಬೆಳೆಯುತ್ತ ಹೋಗುತ್ತಿವೆ. ಕೆಲಸ ಸಿಗುತ್ತದೆಯಲ್ಲ ಎಂಬ ಆಶಾಕಿರಣದಿಂದ ಆ ಕ್ಯೂನಲ್ಲಿ ಹತ್ತು ವರ್ಷಗಳ ಗಟ್ಟಲೆ ಕಾದಿರತಕ್ಕ ನತದೃಷ್ಟರಿರುವ ಸಂದರ್ಭಗಳೂ ಇರಬಹುದು. ಹೀಗೆ ಸತತವಾಗಿ ಕಾದು ನಿಂತಿರತಕ್ಕ ಜನರ ಸಹನೆ, ಶಕ್ತಿ ಅವರಲ್ಲಿರತಕ್ಕ ಆ ಒಂದು ಆತ್ಮ ವಿಶ್ವಾಸ ಉಳಿದಿರುವಾಗಲೇ ಅವರಿಗೊಂದು ಉದ್ಯೋಗವನ್ನು ದೊರಕಿಸಿ ಕೊಡದೆ ಸುಮ್ಮನೆ ಅವರ ಮೂಗಿಗೆ ತುಪ್ಪ ಹಚ್ಚುವ ರೀತಿ ನೀವು ನಿಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿ ನಿಮಗೆ ಉದ್ಯೋಗ ದೊರೆಯುತ್ತೆಂದು ಹೇಳುತ್ತಿರುವುದು ಸರಿಯಿಲ್ಲ. ಒಂದು ವೇಳೆ ಹಾಗೆ ರಿಜಿಸ್ಟರ್ ಮಾಡಿಸಿಕೊಂಡ ಒಂದು ವರ್ಷಕ್ಕೆ-2ವರ್ಷಕ್ಕೆ ತಪ್ಪಿದರೆ 3ವರ್ಷಕ್ಕಾದರೂ ಅವರಿಗೆ ಉದ್ಯೋಗ ದೊರೆಯುತ್ತೆ ಎಂಬ ಗ್ಯಾರಂಟಿ ಇದೆಯೇನು! ಈ ಕೇಂದ್ರಗಳಲ್ಲಿ ಒಂದು ಸರಿಯಾದ ಪಟ್ಟಿ ಕೂಡ ಇಟ್ಟಿಲ್ಲ. ಪ್ರತಿಯೊಂದು ಸಾರ್ತಿಯೂ ಆ ಪಟ್ಟಿಗಳಿಗೆ ಜನರ ಹೆಸರನ್ನು ಸೇರಿಸುತ್ತಲೇ ಇರುತ್ತಾರೆ. ಆದರೆ ಕೆಲಸ ಮಾತ್ರ ಯಾರಿಗೂ ಸಿಕ್ಕುವುದಿಲ್ಲ. ಒಂದು ಜವಾನ ಕೆಲಸದಿಂದ ಹಿಡಿದು ಪ್ರತಿಯೊಂದು ಕೆಲಸಕ್ಕೂ ಆ ಜನರು ಈ ಮಾನ್ಯ ಸಭೆಯ ಸದಸ್ಯರಲ್ಲಿ ಬಂದು ಆ ಯಾತನೆ ಹೇಳಿಕೊಳ್ಳುತ್ತಿದ್ದಾರೆ. ಆದರೆ ನಾವು ಅವರಿಗೆ ಯಾವ ರೀತಿಯಲ್ಲೂ ಸಹಾಯ ಮಾಡುವ ಸ್ಥಿತಿಯಲ್ಲಿಲ್ಲ. ಹೀಗೆ ನಮ್ಮ ರಾಜ್ಯದಲ್ಲೂ ಈ ಒಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಆಫೀಸಿದೆ ಎಂದು ಕೇವಲ ಹೆಸರಿಗೆ ಮಾತ್ರ ಇಟ್ಟುಕೊಂಡಹಾಗೆ ಆಗಿದೆ. ಹೀಗೆ ಆ ಜನರಿಗೊಂದು ಉದ್ಯೋಗ ದೊರಕಿಸಿಕೊಡುತ್ತೇವೆಂಬ ಒಂದು ಆತ್ಮ ವಿಶ್ವಾಸ ಇಲ್ಲದಿರುವಾಗ ಕೇವಲ ಕೆಲವು ಅಂಕೀ ಅಂಶಗಳನ್ನಿಡಲಿಕ್ಕೇ ಇಷ್ಟೊಂದು ದೊಡ್ಡ ಆಫೀಸುಗಳು, ಶಿಬ್ಬಂದಿ ಏತಕ್ಕೆ ಇರಬೇಕು? ಈ ಬರೀ ಲೆಕ್ಕ ಇಡತಕ್ಕ ಕೆಲಸವನ್ನು ಯಾವುದಾದರೂ ಹೋಟಲಿಗೆ ವಹಿಸಿದರೆ ಸರ್ಕಾರಕ್ಕೆ ಇದರಿಂದ ಬಹಳ ಹಣ ಉಳಿತಾಯವಾಗುತ್ತದೆ. ಈ ದಿವಸ ಈ ಇಲಾಖೆ ಕೇವಲ ಒಂದು ನಾಟಕರೂಪದಲ್ಲಿ ಕೆಲಸ ನಡೆಯುತ್ತಿರುವುದರಿಂದ ಬಹಳ ದುಷ್ಪರಿಣಾಮಗಳಾಗುತ್ತಿವೆ. ಈ ಇಲಾಖೆಯಿಂದ ಒಳ್ಳೇ ಕೆಲಸ ಮಾಡಲು ಖಂಡಿತ ಸಾಧ್ಯವಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ.

ಇನ್ನು ಪೆನ್ಷನ್‌ಗಳ ವಿಚಾರ. ಪ್ರಿವಿಪರ್ಸ್ ಕೊಡುವುದನ್ನು ನಿಲ್ಲಿಸಬೇಕೆಂದು ಮಾನ್ಯ ಸದಸ್ಯರೊಬ್ಬರು ಈಗಾಗಲೇ ಹೇಳಿದ್ದಾರೆ. ಅನೇಕ ತರಹ ಪೆನ್ಷನ್‌ಗಳಿವೆ. ಪೆನ್ಷನ್‌ದಾರರ ಬಗ್ಗೆ ಮಾನ್ಯ ಸದಸ್ಯರಾದ ಡಿಮೆಲ್ಲೊ ಅವರು ಒಂದು ಪ್ರಶ್ನೆಯನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನು ಹಿಂದೆಯೇ ವಯಸ್ಸಾದವರಿಗೆಲ್ಲಾ ಮತ್ತು ವೃದ್ಧರಿಗೆ ಪೆನ್ಷನ್ ಕೊಡಬೇಕು ಎಂದು ಹೇಳಿದೆ. ಮಾನ್ಯ ಹಣಕಾಸಿನ ಮಂತ್ರಿಗಳು ಹಣಕಾಸಿನ ತೊಂದರೆಯಿಂದ ಒಪ್ಪುವುದಿಲ್ಲವೆಂದು ಕಾಣುತ್ತದೆ. ಉಳಿತಾಯ ಬಂದರೆ ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ ಅರವತ್ತು ವರ್ಷದವರಿಗೆ ಪೆನ್ಷನ್ ಕೊಡದೇ ಇದ್ದರೂ 70-80 ವರ್ಷವಾಗಿರುವವರಿಗಾದರೂ ಕೊಡಬೇಕು. 80 ವರ್ಷವಾಗಿರುವವರು, ಅಜ್ಜಿ ಅಥವಾ ಅಜ್ಜ ಇವರನ್ನು ನೋಡಿಕೊಳ್ಳಲು ಮಗ, ಅಳಿಯ, ಮೊಮ್ಮಕ್ಕಳು ಯಾರೂ ಇಲ್ಲದೇ ಇದ್ದರೆ ಅಂಥಾವರಿಗೆ ಸಣ್ಣ ಪ್ರಮಾಣದ ಪೆನ್ಷನ್ ಕೊಡುವಂಥ ಪ್ರಯತ್ನ ಮಾಡಿದರೆ ಕಲ್ಯಾಣ ರಾಜ್ಯದ ದಾರಿಯಲ್ಲಿ ಒಂದು ಹೆಜ್ಜೆಯನ್ನಿಟ್ಟಂತಾಗುತ್ತದೆ.

ಪೆನ್ಷನ್ ತೆಗೆದುಕೊಳ್ಳುವವರು ಬಹಳ ಜನ ಇದ್ದಾರೆ. ಅವರ ಬಗ್ಗೆ ನಾನು ಒಂದು ಪ್ರಶ್ನೆ ಕಳಿಸಿದ್ದೆ. ಸರ್ಕಾರದವರು ಈಗ ಕೊಡತಕ್ಕ ಪೆನ್ಷನ್‌ನಲ್ಲಿ ವೃದ್ಧರಿಗೆ ಯಾವ ಪ್ರಯೋಜನವೂ ಸಿಕ್ಕುತ್ತಿಲ್ಲ. ಅವರು ಇಡೀ ತಮ್ಮ ಜೀವನವನ್ನು ಸರ್ಕಾರದಲ್ಲಿ ಜನರಿಗಾಗಿ ಸೇವೆ ಸಲ್ಲಿಸಿರುತ್ತಾರೆ, ಅವರೂ ಸಹ ಇವತ್ತಿನ ಏರಿದ ಬೆಲೆಗಳಲ್ಲಿ ಜೀವನದ ತುಟ್ಟಾಗ್ರತೆಗೆ ತುತ್ತಾಗಿರುವುದರಿಂದ ಅವರಿಗೆ

ಏನಾದರೂ ಸಹಾಯ ಕೊಡಬೇಕು. ಕೆಲಸದಲ್ಲಿರುವ ನೌಕರರಿಗೆ ಕೊಡತಕ್ಕ ವೈದ್ಯಕೀಯ ಸೌಲಭ್ಯ, ಅವರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಸೌಲಭ್ಯ ಮತ್ತು ಎಲ್ಲ ಪೆನ್ಷನ್‌ದಾರರಿಗೂ ತಮ್ಮ ಕಮ್ಯೂಟೇಶನ್‌ನಲ್ಲಿ ಕೆಲವು ಹಣವನ್ನೂ ಹೆಚ್ಚಿಗೆ ಕೊಡತಕ್ಕದ್ದು. ಯಾರು ಯಾರಿಗೆ ಎಷ್ಟು per cent ಕೊಡಬೇಕೆಂಬುದನ್ನು ನಾವು ವಿವರವಾಗಿ ಮಾತನಾಡಬಹುದು. ಅಂತೂ ನಿವೃತ್ತಿ ವೇತನವನ್ನು ಪಡೆಯತಕ್ಕ ಬಹು ಮಂದಿ ನೌಕರರನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕು. ಸರ್ಕಾರದವರು ನಮ್ಮ ಕೈ ಹಿಡಿಯುತ್ತಾರೆ, ಎಂದಿಗೂ ಬಿಡುವುದಿಲ್ಲವೆನ್ನುವ ಭಾವನೆ ಬರುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಪ್ರಿವಿ ಪರ್ಸ್, ರಾಜಕೀಯ ನಿವೃತ್ತಿ ವೇತನಗಳು, ಇವುಗಳ ಬಗ್ಗೆ ವಿವರಗಳಿಗೆ ನಾನು ಹೋಗುವುದಿಲ್ಲ. ಇದನ್ನು ನಾವು ತುರ್ತು ಪರಿಸ್ಥಿತಿಯ ದೃಷ್ಟಿಯಿಂದಲೂ ನೋಡಬೇಕು ಮತ್ತು ಯೋಜನೆಗಳ ಹಣದ ಭಾರದಿಂದಲೂ ನೋಡಬೇಕು. ನಮ್ಮ ದೇಶದ ಜನ ಬಹಳ ಬಡವರಾಗಿರುವುದರಿಂದ ಎಲ್ಲ ದೃಷ್ಟಿಯಲ್ಲಿಯೂ ಸಮಾನತೆಯನ್ನು ಸಾಧಿಸಬೇಕಾದ್ದು ಬಹಳ ಅಗತ್ಯ. ಇದು ಬರೀ ಮಾತಿನಲ್ಲಿ ಆಗಬಾರದು ಕೊಡುವ ಶಕ್ತಿ ಇರುವವರು ಕಂದಾಯ, ತೆರಿಗೆಗಳನ್ನು ಹೆಚ್ಚು ಕೊಡಬೇಕು. ಜೊತೆಗೆ ಹೆಚ್ಚು ಹಣವನ್ನು ಪಡೆಯತಕ್ಕ ಪ್ರಿವಿಪರ್ಸ್ ಮತ್ತು ಕೆಲವು ಪೆನ್ಷನ್‌ಗಳನ್ನು ಪಡೆಯತಕ್ಕವರು ಅದನ್ನು ದೇಶಕ್ಕಾಗಿ ಬಿಟ್ಟು ಕೊಡುವುದಕ್ಕೆ ಮುಂದೆ ಬರಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ ಬೇಡಿಕೆಗಳಲ್ಲಿ employment exchange ವಿಷಯವಾಗಿ ಒಂದೆರಡು ಮಾತನ್ನು ಹೇಳುತ್ತೇನೆ. Employment exchange ಮುಖಾಂತರ ಇದುವರೆಗೂ ಒದಗಿಸುತ್ತಿರುವ ಕೆಲಸಗಳೆಲ್ಲ ಹಂಗಾಮಿಯಾಗಿರುತ್ತವೆ. Employment exchange ನಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸಿ, ಎರಡು-ಮೂರು ವರ್ಷ ಕಾದು, ಕೆಲವರು influence ನಿಂದಲೇ, ಇನ್ನು ಯಾವುದೋ ಮಾರ್ಗದಿಂದಲೋ ಕೆಲಸವನ್ನು ಸಂಪಾದನೆ ಮಾಡಿದರೂ ಸಹ ಅವರು ಖಾಯಂ ಕೆಲಸವಿಲ್ಲದೆ ಹಂಗಾಮಿಯಾಗಿಯೇ ಇದ್ದು ಮತ್ತೆ ಖಾಯಂ ಕೆಲಸಗಳನ್ನು ಹುಡುಕಲೇಬೇಕು. ಇದಲ್ಲದೆ ಕೆಲಸಕ್ಕೆ ಸೇರಲು ವಯಸ್ಸಿನ ಪರಿಮಿತಿ ಇರುವುದರಿಂದ employment exchange ನಲ್ಲಿ ರಿಜಿಸ್ಟರ್ ಮಾಡಿ ಎರಡು-ಮೂರು ವರ್ಷ ಕಾದಿದ್ದು ಅಷ್ಟರೊಳಗೆ ವಯಸ್ಸಿನ ಪರಿಮಿತಿ ಮುಗಿದು ಹೋದ ಪಕ್ಷದಲ್ಲಿ ಯಾವ ಖಾಯಂ ಕೆಲಸಕ್ಕೂ ಸೇರುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ employment exchange ಮುಖಾಂತರ ಒದಗಿಸುವ ಕೆಲಸಗಳನ್ನು ಖಾಯಂ ಆಗಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇವೊತ್ತು employment exchange ಮುಖಾಂತರ ಕೆಲಸಗಳಿಸಿದವರೆಲ್ಲರೂ ಸರ್ಕಾರದ ಎಲ್ಲ ಇಲಾಖೆಗಳಲ್ಲಿಯೂ ಹಂಗಾಮಿಯಾಗಿಯೇ ಉಳಿದಿದ್ದಾರೆ. ಇದರಿಂದ ಇಂಥ ನೌಕರರಿಗೆ ತಾವು ನಿರ್ವಹಿಸತಕ್ಕ ಕಾರ್ಯದಲ್ಲಿ ಉತ್ಸಾಹವಿಲ್ಲದೆ ಯಾವತ್ತಾದರೂ ನಾವು ಮನೆಗೆ ಹೋಗುವವರೆಂಬ ಭಾವನೆಯಿರುತ್ತದೆ. ಆದ್ದರಿಂದ ಹಂಗಾಮಿ ಕೆಲಸ ಕೊಡುವುದನ್ನು ನಿಲ್ಲಿಸಿ ಖಾಯಂ ಕೆಲಸಗಳನ್ನೇ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

Employment exchange ನಲ್ಲಿ ರಿಜಿಸ್ಟರುಮಾಡಿಸಿ 2-3 ವರ್ಷ ಕಾಯುತ್ತಿರುವವರಿಗೆ ಕೆಲಸವಿಲ್ಲದೆ ಒಂದೆರಡು ತಿಂಗಳ ಹಿಂದೆ ರಿಜಿಸ್ಟರ್ ಮಾಡಿಸಿರುವವರಿಗೆ ಕೆಲಸ ಸಿಕ್ಕಿರುವ ಎಷ್ಟೋ ಸಂದರ್ಭಗಳಿವೆ. ಇದರಿಂದ ಮೊದಲನಿಂದಲೂ ಕಾದಿರುವವರಿಗೆ ಅನ್ಯಾಯವಾದ ಹಾಗೆ ಆಗುತ್ತದೆ. ಸರ್ಕಾರ ಒಂದು ಕಾನೂನುಮಾಡಿ employment exchange ಗಳನ್ನು ಜನತೆಗೆ ಅನುಕೂಲ ಮಾಡಿ ಕೊಡಬೇಕೆಂದು ತೆರೆಯಿತು. ಆದರೆ ಅವರು ಬಯಸಿದಂತೆ ಅನುಕೂಲವಾಗುತ್ತಿಲ್ಲವೆಂದು ಹೇಳುತ್ತಿದ್ದೇನೆ. ಸರ್ಕಾರ ಸರಿಯಾದ ಉಸ್ತುವಾರಿಯನ್ನು ಇಟ್ಟುಕೊಳ್ಳದೇ ಇರುವುದರಿಂದ ಈ ತೊಂದರೆಗೆ ಕಾರಣವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಲೆನಾಡಿನಲ್ಲಿ ಪ್ಲಾಂಟೇಷನ್‌ಗಳಿವೆ. ಕಾಫಿ ತೋಟದ ಕೂಲಿಕಾರರು ತುಂಬ ಅನ್ಯಾಯಕ್ಕೆ ಒಳಗಾಗಿದ್ದಾರೆ. ಇವರ ವಿಚಾರದಲ್ಲಿ ಕಾರ್ಮಿಕ ಇಲಾಖೆಯವರು ಬಹಳ ತಾತ್ಸಾರ ತಾಳಿದ್ದಾರೆ. ಕಾಫಿ ತೋಟದ ಮಾಲೀಕರುಗಳು ಒಂದೊಂದು ಸಾರಿಯೂ ಕೂಲಿಕಾರರನ್ನು ಒಟ್ಟೊಟ್ಟಾಗಿ ತಮ್ಮ ತೋಟದಿಂದ ಓಡಿಸುತ್ತಾರೆ ಕಾರ್ಮಿಕ ಇಲಾಖೆಯಿಂದ ಈ ಕೆಲಸಗಾರರಿಗೆ ಕೆಲವು ಸಂದರ್ಭಗಳಲ್ಲಿ ಸರಿಯಾದ ನ್ಯಾಯ ದೊರೆಯುತ್ತಿಲ್ಲ. ಒಂದು ಉದಾಹರಣೆ ಹೇಳಬೇಕಾದರೆ ಒಬ್ಬ ಕಾಫಿ ತೋಟದ ಕೆಲಸಗಾರ ಸುಮಾರು ಮೂರು ವರ್ಷದ ಹಿಂದೆ ಕಾರ್ಮಿಕ ಇಲಾಖೆಗೆ ಒಂದು ಅರ್ಜಿ ಹಾಕಿದ. ಅದು ಇನ್ನೂ ಇತ್ಯರ್ಥವಾಗದೆ ಇದೆ. ಮೂರು ವರ್ಷದವರೆಗೆ ಆ ಕೆಲಸಗಾರನು ಯಾವ

(ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ)

ವಿಧದಲ್ಲಿ ಜೀವನ ಮಾಡಬೇಕು ಎಂಬುದನ್ನು ಸ್ವಲ್ಪ ವಿಚಾರ ಮಾಡಬೇಕು. ಇಂಥ ಅರ್ಜಿಗಳನ್ನು ಬೇಗ ಇತ್ಯರ್ಥ ಮಾಡುವಂತೆ ಸಂಬಂಧಪಟ್ಟವರಿಗೆ ತಿಳಿಸಬೇಕೆಂದು ಹೇಳುತ್ತೇನೆ.

ಸಮಾಜ ಕಲ್ಯಾಣ ಇಲಾಖೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆಯುವ ಕೆಲಸಗಳಿಗಿಂತಲೂ ಅವರ ಸಿಬ್ಬಂದಿಗೇ ಹಣವನ್ನು ಜಾಸ್ತಿಯಾಗಿ ಖರ್ಚು ಮಾಡುತ್ತಿದ್ದಾರೆ. ಆ ಸಿಬ್ಬಂದಿಯಿಂದ ಏನಾದರೂ ಪ್ರಯೋಜನವಾಗುತ್ತಿದೆಯೇ ಎಂದರೆ ಅದೂ ಇಲ್ಲ. ಸಂಸ್ಥಾನದ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ಮಟ್ಟದಲ್ಲಿರುವಂಥ ಸಿಬ್ಬಂದಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಹಾಗೂ ಅವರಲ್ಲಿ ಅನೇಕರಿಗೆ ಏನು ಕೆಲಸ ಮಾಡಬೇಕೆನ್ನುವುದೂ ಗೊತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾಲ್ಲೂಕುಗಳಲ್ಲಿ ಹಿಂದೆ ತಹಸೀಲ್ದಾರರ ಮೇಲ್ವಿಚಾರಣೆಯಲ್ಲಿ ಈ Social Welfare Inspectors ಕೆಲಸ ಮಾಡುತ್ತಿದ್ದರು. ಆಗ ಅವರಿಗೆ ಜಮೀನು ಹಂಚತಕ್ಕ ಮತ್ತು ಇಲಾಖೆಯಿಂದ ಕೊಡತಕ್ಕ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಸಾಕಷ್ಟು ಕೆಲಸವಿತ್ತು. ಈಗ ತಾಲ್ಲೂಕು ಬೋರ್ಡ್‌ಗಳಾದ ಮೇಲೆ ತಾಲ್ಲೂಕು ಬೋರ್ಡಿನ ಅಧೀನದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಹಿಂದೆ ಇದ್ದ ಯಾವ ಕೆಲಸಗಳೂ ಇಲ್ಲ. ಸುಮ್ಮನೆ ಕುಳಿತುಕೊಂಡು ಸಂಬಳ ತೆಗೆದುಕೊಳ್ಳುತ್ತಿದ್ದಾರೆ.

ಸರ್ಕಾರ economic aid ಎಂದು ಕೊಡುತ್ತದೆ ಇದರಲ್ಲಿ ಕೋಳಿ, ಕುರಿ, ಎತ್ತು, ಹಸು ಕೊಡುತ್ತಾರೆ. ಒಂದು ಸಂಸಾರಕ್ಕೆ ಇಷ್ಟು ಕೊಟ್ಟರೆ ಅವರ ಆರ್ಥಿಕ ಪರಿಸ್ಥಿತಿ ಸರಿಹೋಯಿತು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ಸರ್ಕಾರ ಇದನ್ನು ತೀವ್ರವಾಗಿ ಯೋಚನೆ ಮಾಡಬೇಕು.

ಇದರ ಜೊತೆಗೆ ಎಕನಾಮಿಕ್ ಏಡ್ ಎಂದು ಕೊಡುವಾಗ, ಅಲ್ಲಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ, ಹರಿಜನರಿಗೆ ಇದರಲ್ಲಿ ತರಬೇತಿ ಕೊಟ್ಟು ಅವರಿಗೆ ಅಲ್ಲಿ ಕೆಲಸಗಳನ್ನು ಒದಗಿಸಿ ಕೊಡಬೇಕು. ಅಲ್ಲದೆ ಈ ಇಲಾಖೆಯವರು ಹರಿಜನರೇ ಹೆಚ್ಚಾಗಿ ಎಷ್ಟು ಮಂದಿ ವಿದ್ಯಾಭ್ಯಾಸದಲ್ಲಿ ಹಿಂದುಳಿದಿದ್ದಾರೆ ಎನ್ನುವುದನ್ನು ನೋಡಿಕೊಂಡು ಅವರಿಗಾಗಿ ನಮ್ಮ ಸ್ಟೇಟಿನಲ್ಲಿರುವ ಕೈಗಾರಿಕೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ಕೊಡಬಹುದು ಎನ್ನುವುದನ್ನು ಯೋಚನೆ ಮಾಡಿ ಮಾಡಬೇಕು. ಅಲ್ಲದೆ ಭೂಮಿಯ ಹಂಚುವಿಕೆಯ ವಿಚಾರದಲ್ಲಿ ಹರಿಜನರಿಗೇ ಹೆಚ್ಚಿನ ತೊಂದರೆಗಳಾಗುತ್ತಿರುವುದು ಎಲ್ಲರ ಗಮನಕ್ಕೂ ಬಂದಿದೆ. ಇಲಾಖೆಯವರು ಇದರ ಅಂಕಿ ಅಂಶಗಳನ್ನು ತರಿಸಿ ಅದಕ್ಕೆ ಸೂಕ್ತವಾದ ಸಹಾಯವನ್ನೂ ರೆವಿನ್ಯೂ ಇಲಾಖೆಯ ಮೂಲಕ ಹರಿಜನರಿಗೆ ಸಿಗುವಂತೆ ಮಾಡಿ ಸರಿಯಾಗಿ ಭೂಮಿ ಸಿಗುವಂತ ತಕ್ಕ ಏರ್ಪಾಡು ಮಾಡಬೇಕು.

ಈ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಹರಿಜನರಿಗಾಗಿ ಏನು ರಿಸರ್ವೇಷನ್ನು ಇಡಬೇಕೆಂದು ತೀರ್ಮಾನ ಮಾಡಿದ್ದಾರೋ ಅದನ್ನು ಇದುವರೆಗೂ ಕಾರ್ಯಗತ ಮಾಡುವುದರಲ್ಲಿ ಸರಕಾರದವರು ವಿಫಲರಾಗಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದರ ಬಗ್ಗೆ ಒಂದೆರಡು ಮೂರು ವರ್ಷಗಳ ಸ್ಟ್ಯಾಟಿಸ್ಟಿಕ್ಸ್‌ನ್ನು ತೆಗೆದುಕೊಂಡು ನೋಡಿದರೆ, ಈಗ ಶೇಕಡಾ 18 ರಷ್ಟು ಎಂದು ರಿಸರ್ವೇಷನ್ನು ಮಾಡಿದ್ದರೂ ಅದರಂತೆ ಆಗಿಲ್ಲ ಎನ್ನುವುದು ಗೊತ್ತಾಗುತ್ತದೆ ಒಟ್ಟು ಎಲ್ಲಾ ವರ್ಗಗಳನ್ನು ಎಂದರೆ (Class I, II and III) ತೆಗೆದುಕೊಂಡು ನೋಡಿದರೆ,

1960 ನೇ ಇಸ್ವಿಯಲ್ಲಿ	7.71	ಇದೆ.
1961 ನೇ ,,	7.03	,,
1962 ನೇ ,,	8.01	,,

ಇದರಿಂದ ರಿಸರ್ವೇಷನ್ನನ್ನು ಎಷ್ಟು ಮಟ್ಟಿಗೆ ಕಾರ್ಯಗತ ಮಾಡಿದ್ದಾರೆ ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. S. PATIL.—So far as these various Demands are concerned, I will touch upon only two. First, I will touch upon the welfare of the scheduled tribes and other backward classes. On this our Government is to spend Rs. 1,23,60,000 according to the budget estimates. Various amounts are spent every year throughout the country and if we collect all the figures together it may go beyond Rs. 50 to 60 crores up till now

and still there is no appreciable improvement so far as these communities are concerned. Why these communities have remained so backward, the cause must be investigated by Government. Unless we go to the root-cause of the backwardness, there is no use giving some help. It is just like giving some water to a man who is practically dying on the death bed. That will not do. We have to trace the root-cause of the disease; then alone proper treatment will be there. According to me, why these communities have remained backward, the root cause, is our 'Varnashrama Dharma'. The Hindu society has been divided into several classes, communities and castes and that is the root cause why these backward communities have remained backward and the particular community has always stood at the top of the Hindu society. Unless that is done away with, there is no use simply giving one dose or two doses or a glass of water to these communities. But strangely enough, even though our Constitution declares that we are a secular State, our Governors and even Chief Ministers attend the functions organised by the very persons who are to perpetuate this 'Varnashrama Dharma'. These State dignitories attending the religious functions, is really very astonishing. Unless political dignitories mend their ways, I do not think by merely giving some funds for the improvement of these classes, they will come up or rise up to the level of the forward communities. That is why I should like to say that our Ministers, especially the ex-Chief Minister and the present Chief Minister must desist from attending any religious functions or showing any reverence to those who are meant to perpetuate this class of 'Varnasharama Dharma' and then alone there is some hope.

There is another topic which I should like to touch upon and that is, new item 78 A-Expenditure connected with National Emergency. Civil Defence is a new item of expenditure. Here the amount that is mentioned is Rs. 1,60,000. For the whole year you are making a provision only for the emergency relief training. This ought to have been done from the time when we attained freedom. When the freedom was granted to our country, this item ought to have been incorporated in every budget in every State, but they have failed to do that. That is the reason why China has invaded or dared to invade our country. If we had taken steps in proper time, I do not think any Power in the world would have thought of taking away our freedom. But our leaders thought that they were quite safe. I do not know why they were so complacent and that is why our complacency, our unpreparedness gave a chance to the Chinese or anybody. If you are weak, then anybody will come and loot you; if we are strong, nobody will think of it. That s the natural thing which our leaders have failed to understand; now they have taken up this cause. It is quite a negligible thing that they are doing. They must increase this amount and efforts should be made to defend our country in a better way. We are spending, I think, Rs. 200 crores during the coming year. Out of that, not even one per cent is meant for the civil defence. That is really strange. According to reports appearing in the Press and the statements made by our

(SRI V. S. PATIL)

leaders in the Parliament, the danger has not vanished or it has not been diminished; it is still there. That is why very strenuous efforts ought to be made for the defence of our country and for that purpose, some more amount must be provided. I had suggested one thing last time. We must have a Committee for the recruitment to the defence services. I think our Government are rather averse to the suggestion. Once again I should like to suggest to Government to have a proper share for the defence and to take prompt steps to see that our youngsters are recruited to the services for the defence of our country.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಸನ್ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ, ಒಂದೆರಡು ವಿಷಯಗಳನ್ನು ಸರಕಾರದ ಗಮನಕ್ಕೆ ತಂದು ಸಲಹೆ ಮಾಡಬಯಸುತ್ತೇನೆ. ಸೋಷಿಯಲ್ ವೆಲ್‌ಫೇರ್ ಖಾತೆಯು ಹರಿಜನ, ಗಿರಿಜನ ಮತ್ತು ಮಹಿಳೆಯರ ಏಳಿಗೆಗಾಗಿ ಮತ್ತು ಅವರ ಸೌಕರ್ಯಕ್ಕಾಗಿ ಇದೆ ಎಂಬುದು ನಿಜ. ಸರಕಾರದವರು ಹರಿಜನ, ಗಿರಿಜನರ ಉದ್ಧಾರಕ್ಕಾಗಿ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಕೊಡಲು ಯೋಚಿಸಿರುವುದು ಶ್ಲಾಘನೀಯವಾದ ವಿಷಯ. ಹರಿಜನೋದ್ಧಾರ ಮೂಲ ಪುರುಷರಾದ ಮಹಾತ್ಮ ಗಾಂಧೀಜಿಯವರ ಅನುಯಾಯಿಗಳಿಂದ ಕೂಡಿದ ಈ ಕಾಂಗ್ರೆಸ ಸರಕಾರದ ನೆರವಿನಿಂದ ಹರಿಜನೋದ್ಧಾರಕ್ಕೆ ಬೆಂಬಲ ಸಿಗಲು ಕಾರಣವಾಗುವುದೆಂದು ನಾನು ನಿಸ್ಸಂದೇಹವಾಗಿ ಹೇಳಬಯಸುತ್ತೇನೆ.

ಕೋಟಿಗಟ್ಟಲೆ ಹಣವನ್ನು ಹರಿಜನರಿಗಾಗಿ ಮುಡುಪಿಟ್ಟು ಖರ್ಚು ಮಾಡುತ್ತಿದ್ದರೂ ಕೂಡ ಇನ್ನೂ ಹರಿಜನರ ಏಳಿಗೆಯಾಗಿಲ್ಲವೆಂದು ಈ ಸಭೆಯ ಅನೇಕ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಇಷ್ಟು ಹಣ ಸದುಪಯೋಗವಾಗದಿರುವ ಕಾರಣವೇನೆಂಬುದನ್ನು ಸರಕಾರ ಮೊದಲು ಕಂಡು ಹಿಡಿಯಬೇಕು. ಎಲ್ಲಿ ಇದು ದುರ್ವ್ಯಯವಾಗುತ್ತಿದೆ ಎಂಬುದನ್ನು ಕಂಡುಹಿಡಿಯಬೇಕು.

ಹರಿಜನರಿಗೆ ಹಿಂದೆ ವಸತಿ ಸೌಕರ್ಯಕ್ಕಾಗಿ ಬಿಲ್ಡಿಂಗ್ ಗ್ರಾಂಟ್ ಕೊಡುತ್ತಿದ್ದರು. ಈಗ ಅದನ್ನು ತಪ್ಪಿಸಿ ಸೊಸೈಟಿಗಳನ್ನು ಸ್ಥಾಪಿಸಿ ಅದರ ಮೂಲಕ ಸಾಲ ಕೊಡುವುದಾಗಿ ತಿಳಿಸಿದ್ದಾರೆ. ಇದು ಯಾವಾಗ ಕಾರ್ಯರೂಪಕ್ಕೆ ಬರುತ್ತದೆ ಎಂಬುದನ್ನು ತಿಳಿಸಬೇಕು. ಮತ್ತು ಅವರಿಗೆ ಕೊಡುವ ಹಣದಲ್ಲಿ ಗ್ರಾಂಟು ಎಷ್ಟು? ಸಾಲ ಎಷ್ಟು? ಎಂಬುದನ್ನು ತಿಳಿಸಬೇಕು.

ಹರಿಜನರಿಗೆ ವ್ಯವಸಾಯಕ್ಕೆ ಸಾಕಷ್ಟು ಭೂಮಿ ಹಂಚಿಕೆಯಾಗಿಲ್ಲ ಕುರಿ, ಹಸು, ಎತ್ತುಗಳನ್ನು ಸರಿಯಾದ ರೀತಿಯಲ್ಲಿ ಹಂಚಿಕೆಯಾಗುತ್ತಿಲ್ಲ, ಜಮೀನುಳ್ಳವನಿಗೆ ಎತ್ತುಗಳ ಹಂಚಿಕೆಯಾಗಬೇಕು. ಹಸುಗಳನ್ನು ಹಂಚುವಾಗ ವಿಧವೆಯರಾದ ಹೆಂಗಸರಿಗೆ ಕೊಡುವುದು ಉತ್ತಮ ಎಂದು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಮಹಿಳೆಯರ ಏಳಿಗೆಗಾಗಿ ಕೊಟ್ಟಿರುವ ಹಣ ಬಹಳ ಕಡಿಮೆ. ನಮ್ಮ ಮಹಿಳಾ ಸಚಿವೆಯರು ಸಾಮಾದಾನ ಭೇದವನ್ನಾದರೂ ಉಪಯೋಗಿಸಿ ಮಹಿಳೆಯರ ಏಳಿಗೆಗಾಗಿ ದುಡಿಯಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಅರ್ಧಕ್ಕಿಂತ ಹೆಚ್ಚು ಮಹಿಳೆಯರಿರುವ ನಮ್ಮ ದೇಶದಲ್ಲಿ ನಮ್ಮ ಘನ ಸರ್ಕಾರದವರು ಸುದೈವದಿಂದ ಒಬ್ಬ ಮಹಿಳೆಗೆ ಮಂತ್ರಿ ಪದವಿ ಕೊಟ್ಟಿದ್ದಾರೆ. ಈ ಸದುಪಯೋಗವನ್ನು ನಮ್ಮ ಮಹಿಳಾ ಸಚಿವೆಯರು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ಅನೇಕ ಕಲಿತ ಹೆಣ್ಣು ಮಕ್ಕಳು ಕೆಲಸವಿಲ್ಲವೆ ಇದ್ದಾರೆ. ನಿಷ್ಪಕ್ಷಪಾತವಾಗಿ ದಕ್ಷತೆಯಿಂದ ಕೆಲಸ ಮಾಡುವ ಹೆಣ್ಣುಮಕ್ಕಳಿಗೆ ಕೆಲಸ ಒದಗಿಸುವ ಮತ್ತು ಹೆಣ್ಣುಮಕ್ಕಳನ್ನು ಮುಂದೆ ತರುವಂಥಾ ಜವಾಬ್ದಾರಿ ನಮ್ಮ ಮಹಿಳಾ ಸಚಿವೆಯರ ಪಾಲಿಗೆ ದೊರತಿದೆ. ಅದನ್ನು ಅವರು ಉಪಯೋಗಿಸಿಕೊಂಡು ಮಹಿಳೆಯರಿಗಾಗಿ ದುಡಿಯುತ್ತಾರೆಂದು ನಾನು ನಂಬಿದ್ದೇನೆ.

ಸೋಷಿಯಲ್ ವೆಲ್‌ಫೇರ್ ಖಾತೆಯನ್ನು ಮಿಸಲೇನಿಯಸ್‌ನಲ್ಲಿ ಸೇರಿಸಿದ್ದೀರಿ. ಆದರೆ ಮಹಿಳೆಯರು ಆದಿಶಕ್ತಿ ಸ್ವರೂಪರು. ಎಷ್ಟೇ ಹಿಂದೆ ಹಾಕಿದರೂ ನಾವು ಮುಂದೆ ಬರಬಲ್ಲೆವು. ಧಾರಾಕಾರವಾಗಿ ಹರಿಯುವ ನೀರನ್ನು ತಡೆಗಟ್ಟಿದರೆ ವಿದ್ಯುತ್‌ಶಕ್ತಿ ಉತ್ಪತ್ತಿಯಾಗುವಂತೆ ಬೃಹದಾಕಾರವಾಗಿ ಬೆಳೆಯುತ್ತಿರುವ ಮಹಿಳೆಯರ ಏಳಿಗೆಯನ್ನು ತಡೆದಿದ್ದೇ ಆದರೆ ಅದರಿಂದ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯಿಂದ ಅನಾಹುತವಾದೀತು. ಇದನ್ನು ದೂರದೃಷ್ಟಿಯಿಂದ ಯೋಚಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಮತ್ತು ಹರಿಜನ ವಿದ್ಯಾರ್ಥಿಗಳಿಗೆ ಪ್ರೈಮರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಉಚಿತವಾಗಿ ಬಟ್ಟೆ ಮತ್ತು ಪುಸ್ತಕಗಳನ್ನು ಹಂಚುತ್ತಿದ್ದಾರೆ. ಆದರೆ ಶಾಲೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು ಪ್ರತಿಯೊಬ್ಬರಿಗೂ ಈ ಸೌಲಭ್ಯ ದೊರಕುವಂತೆ ಏರ್ಪಾಡು ಮಾಡಬೇಕು. ಕೆಲವರಿಗೆ ಸಿಗುತ್ತದೆ. ಕೆಲವರಿಗೆ ಸಿಗುತ್ತಿಲ್ಲ, ಈ ರೀತಿ ಯಾಗಬಾರದು ಎಂದು ಸಲಹೆ ಮಾಡುತ್ತೇನೆ.

ಇನ್ನು ಹೌಸಿಂಗಬೋರ್ಡಿನ ವಿಚಾರ ಎರಡು ಮಾತು ಹೇಳುತ್ತೇನೆ. ಹೌಸಿಂಗ ಬೋರ್ಡಿನಲ್ಲಿ ಕುಂಭಕೋಣ ನಡೆಯುತ್ತದೆ. ಬಡವರಿಗೆ ದೇಶದ ಆಧಾರಸ್ತಂಭವಾದ ಕಾರ್ಮಿಕರಿಗೆ ಸರಿಯಾಗಿ ನಿವೇಶನಗಳು ದೊರೆಯುತ್ತಿಲ್ಲ. ಹಣವಂತರಿಗೆ ಮಾತ್ರ ಸಿಗುತ್ತದೆ. Influence ಉಪಯೋಗಿಸಿ ದವರಿಗೆ ಮಾತ್ರ ನಿವೇಶನಗಳು ಸಿಗುತ್ತವೆ. ಎಲ್ಲರೂ Influence ಉಪಯೋಗಿಸಲು ಸಾಧ್ಯವಿಲ್ಲ. ಸರಿಯಾದ ರೀತಿಯಲ್ಲಿ ಎಲ್ಲರಿಗೂ ನಿವೇಶನಗಳನ್ನು ಹಂಚುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಸರಕಾರದಿಂದ ಕೈಗಾರಿಕೆಗಾಗಿ ಸಾಲ ರೂಪದಲ್ಲಿ ಹಣ ಪಡೆದು ಕೆಲವರು ದುರುಪಯೋಗ ಪಡಿಸುತ್ತಿದ್ದಾರೆ. ಹಣ ಬಡ್ಡಿ ಕೂಡ ವಾಪಸ್ ಬರುತ್ತಿಲ್ಲ. ಅಂಥವರಿಗೆ ಮತ್ತೆ ಸರಕಾರ ಹಣ ಸಹಾಯ ಮಾಡುತ್ತಿದೆ. ಇಂಥ ಕ್ರಮ ನಿಲ್ಲಿಸಬೇಕು. ಕೊಟ್ಟಿರುವ ಹಣವನ್ನು ಕಡ್ಡಾಯವಾಗಿ ವಸೂಲಿ ಮಾಡಬೇಕು ಎಂದು ತಿಳಿಸುತ್ತೇನೆ.

ಆಮೇಲೆ ಗಿರಿಜನರಿಗಾಗಿ ವಸತಿ ಸೌಕರ್ಯಕ್ಕಾಗಿ ಜಮೀನು ಕೊಡುತ್ತೇವೆಂದು ಹೇಳಿದ್ದಾರೆ. ನಮ್ಮ ತುಮಕೂರು ತಾಲ್ಲೂಕಿನಲ್ಲಿ ಗಿರಿಜನರೆನಿಸುವ ಲಂಬಾಣಿಯವರು ವಡ್ಡರಹಳ್ಳಿ ಎಂಬ ಗ್ರಾಮ ದಲ್ಲಿ ಹೆಚ್ಚಾಗಿದ್ದಾರೆ. ಅವರಿಗೆ ಉಳಲು ಭೂಮಿ ಇಲ್ಲ, ಇರಲು ಮನೆ ಇಲ್ಲ. ಇಂಥ ಜನಾಂಗಕ್ಕೆ ಉಳಲು ಭೂಮಿ ವಾಸಿಸಲು ಮನೆ ಈ ಸೌಕರ್ಯವನ್ನು ಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಅದರ ಮೇಲೆ ಮಾನ್ಯ ಸಚಿವರು ಸರಿಯಾದ ಕ್ರಮ ತೆಗೆದುಕೊಂಡು ಜಾಗ್ರತೆ ಅವರಿಗೆ ಅನುಕೂಲ ಒದಗಿಸಿ ಕೊಡುತ್ತಾರೆಂದು ನಂಬಿದ್ದೇನೆ. ಇಷ್ಟು ಮಾತ್ರ ಹೇಳಿ ನನಗೆ ಮಾತ ನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

†Sri G. V. GOWDA (Palya).—Mr. Speaker, Sir, when the surcharge on motor vehicles tax Bill was adopted by this House, it was hoped that at least Rs. 2 crores more would be realised. Also when the Mysore Motor Vehicles Taxation (Amendment) Bill was adopted in 1962, it was still further hoped that something more would be realised. I am, however, seeing only an increase of a hunred lakhs after the adoption of these two enactments. That shows the realisation has not been made as per the provisions of the Act and that no concrete steps have been taken to realise as much money as possible. Even in respect of the funds that have been realised, I am sorry to state that they are not allotted for the upkeep and maintenance of those roads. Several buses are plying on the roads belonging to the Taluk Boards and Village Panchayats, but those local bodies are not being given any share from the funds realised by way of taxation on vehicles. I, therefore request the Hon'ble the Finance Minister to see that these local bodies are paid their quota so as to enable them to maintain the roads that are under their jurisdiction.

Sri B. D. JATTI.—For the information of the Hon'ble Member, I may say that we are spending not merely the amount that is realised but much more than that on those roads.

Sri G.V. GOWDA.—It may be true that they may be spending so far as the roads owned by the P.W.D. are concerned, but what I am impressing on the Government is that they are not allocating any share to the local bodies from the tax collected from the vehicles plying on their roads. Unless that is done, the local bodies will not be able to maintain these roads.

Sri B. D. JATTI.—The amount that is to be distributed to the local bodies will depend upon the report which we are likely to get within a fortnight or so.

Sri G. V. GOWDA.—Since the Motor Vehicles Tax Act was adopted in 1957 nothing has been done in this direction. If one sees the conditions and the nature of the buses plying on these roads, it is pitiable. In my opinion 25 per cent of the buses deserve to be condemned. I fully agree with my friend Sri Krishna when he says that the administration of the Regional Transport Office is far from satisfactory and that is why they allow all sorts of buses to ply on these routes. This is deterimental to the travelling public because at any time a calamity may take place. So I suggest that the Hon'ble Minister must see that these vehicles are inspected properly and brake certificates are not issued to worthless vehicles. If we see the vehicles in Madras and Andhra they condemn all buses which are worthless according to them. This is a point which the Government should take into consideration.

4-30 P.M.

So far as 26-Micellaneous Departments are concerned there is a decrease in revenue receipts by Rs. 4.5 lakhs and an increase in expenditure by Rs. 6.5 lakhs. No concrete step has been taken to open more number of industrial training centres, social welfare centres. Even schemes like craftsmen training schemes, NCC rifle training schemes, short term auxiliary training scheme, etc., have not been taken up so as to facilitate more number of people to receive this training. I requst the Hon'ble Minister to see that as much money as possible is spent to open these training centres so as to attract the jobless persons and give them training through the help of which they can secure employment. There is a huge problem of unemployment and Government should see that something is done. Every year unemployment is on the increase and so some concrete steps should be taken to create more employment opportunities.

So far as the Mysore Road Transport Department is concerned, I should say it is also not satisfactory. I am one of those who stand for nationalisation of the entire road transport, but when I see the effects of nationalisation in some parts of the State, I am convinced that it is desirable and in the interest of everyone to postpone this nationalisation till all the defects that are found in the working and which are also known to Government are rectified because maximum comfort to the maximum number of people has to be given and that is not being done now. We have not been able to realise 6per cent interest on the capital invested after paying all the taxes and after providing depreciation 50 per cent towards sinking fund and other things. Let the Minister say what is the amount invested by way of capital, what is the amount they have paid towards taxes, what is the amount they have reserved for the sinking fund, what is the amount of profit they have realised.

Sri B. D. JATTI.—Is that demand under consideration now ?

SRI G. V. GOWDA.—I am only incidentally referring to it. After paying all the taxes, we have not been able to secure any profit at all. In such a case is it sensible to invest such a huge amount on this venture without providing for the minimum comforts of the travelling public ?

Then, Sir, I agree with some of my friends when they say that the District Social Welfare Officers are doing nothing. In fact, more delay is being caused on account of the existence of these officers. It is desirable to link the Deputy Commissioner with the Tahsildar or the Block Development Officer. I request the Hon'ble Minister to see the need for the continuance of these officers. I am of opinion that in their place they can open another 20 women and child welfare centres every year if they abolish these posts. In this way 20 more centres could be added every year. That is the only way they could better the conditions of these down-trodden people. We could give them education from the nursery stage. By giving them bullocks or sheep their economic condition will not be made better unless they are first given education and they are made educationally minded. From that point of view the boarding grant paid to the students is too inadequate. We are paying only at the rate of Rs. 15 since the last 15 years. This amount should be enhanced by atleast Rs. 5. I am running 3 hostels and from my experience I could say that every year we have to shell down from our pockets nearly Rs. 3,000 because the Government are not paying establishment charges. Where we are spending Rs. 200, they are paying only Rs. 90 and so unless this boarding grant is enhanced it is not possible for us to run these hostels. So the Government should enhance the boarding grant, open more women and child welfare centres, etc. I am of opinion that Government should stop all the economic aids and set apart the amounts thus saved to provide more training facilities and more schools for these people and then only we can improve their social and economic conditions.

† ಶ್ರೀ ಎಂ. ಎನ್. ಕೃಷ್ಣಸಿಂಗ್ (ಜಗಳೂರು).—ಸ್ವಾಮಿ, ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಸರ್ಕಾರಕ್ಕೆ ಒಂದೆರಡು ವಿಷಯಗಳನ್ನು ತಿಳಿಸಬೇಕೆಂದು ಇಚ್ಛಿಸುತ್ತೇನೆ. ಸಮಾಜಕಲ್ಯಾಣ ಇಲಾಖೆಯವರು ಏನು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆಯೋ ಅದು ನಾನು ತಿಳಿದುಕೊಂಡಿರುವ ಹಾಗೆ ಅತೃಪ್ತಿಕರ ವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಹರಿಜನರು ಮತ್ತು ಗಿರಿಜನರಿಗೆ ಈಗ ಸುಮಾರು 10-12 ವರ್ಷಗಳಿಂದಲೂ ಸರ್ಕಾರದವರು ಮುಫತ್ತಾಗಿ ಮನೆಗಳನ್ನು ಕಟ್ಟಿಸಿ ಕೊಡುತ್ತಿದ್ದರು. ಈಗ ಅದನ್ನು ನಿಲ್ಲಿಸಿ ಅವರಿಗೆ ಸಾಲರೂಪದಲ್ಲಿ ಮನೆಗಳನ್ನು ಕಟ್ಟಿಸಿಕೊಳ್ಳಲು ಹಣವನ್ನು ಕೊಡು ತ್ತೇವೆಂದು ಹೇಳಿ ಅವರಿಗೆ ಸಾಲದ ಹೊರೆಯನ್ನು ಹೊರಿಸುತ್ತಿದ್ದಾರೆ. ಇದು ಬಹಳ ಅಸಮರ್ಪಕ ವಾಗಿದೆ ಆದ್ದರಿಂದ ಇನ್ನೂ 10 ವರ್ಷಗಳ ಕಾಲ ಸರ್ಕಾರದವರು ಹರಿಜನರು ಮತ್ತು ಗಿರಿಜನ ರಿಗೆ ಮನೆಗಳನ್ನು ಮುಫತ್ತಾಗಿ ಕಟ್ಟಿಸಿಕೊಡುವ ಜವಾಬ್ದಾರಿಯನ್ನು ವಹಿಸಿಕೊಂಡು ದೇಶಾದ್ಯಂತ ಇರುವ ಹರಿಜನರು ಮತ್ತು ಗಿರಿಜನರುಗಳಿಗೆಲ್ಲಾ ಸರ್ಕಾರದವರೇ ಮನೆಗಳನ್ನು ಕಟ್ಟಿಸಿಕೊಡಬೇ ಕೆಂದು ನಾನು ತಿಳಿಸಲಿಚ್ಛಿಸುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ ಹರಿಜನ ಮತ್ತು ಗಿರಿಜನರ ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಯಾವ ವಿಧವಾದ ಅನುಕೂಲತೆಗಳೂ ಇಲ್ಲ. ಹರಿಜನರ ಮತ್ತು ಗಿರಿಜನರ ಕಾಲೋನಿಗಳಿಗೆ ಸ್ಕೂಲನ್ನೇನೋ ಸರ್ಕಾರದವರು ಮಂಜೂರು ಮಾಡುತ್ತಾರೆ. ಆದರೆ ಆ ಶಾಲೆಯನ್ನು ನಡೆಸುವುದಕ್ಕೆ ಸರಿಯಾದ ಕಟ್ಟಡಗಳಿಲ್ಲ. ಮಕ್ಕಳು ವಿದ್ಯಾಭ್ಯಾಸ ಮಾಡಲು ಸರಿ ಯಾದ ವ್ಯವಸ್ಥೆಯಿಲ್ಲ. ಶಾಲೆಯನ್ನು ನಡೆಸುವುದಕ್ಕೆ ಕಟ್ಟಡವನ್ನು ಕಟ್ಟಿಸಿಕೊಡಿ ಎಂದು ಸರ್ಕಾರ ದವರನ್ನು ಕೇಳಿದರೆ ಕಾಂಟ್ರಿಬ್ಯೂಷನ್ ಕೊಡ ಬೇಕೆಂದು ಹೇಳುತ್ತಾರೆ. ಕಾಂಟ್ರಿಬ್ಯೂಷನ್

(ಶ್ರೀ ಎಂ. ಎನ್. ಕೃಷ್ಣಸಿಂಗ್)

ಕೊಡುವುದಕ್ಕೆ ಜನಗಳಿಗೆ ಶಕ್ತಿ ಇಲ್ಲ. ಅನೇಕ ಹರಿಜನರ ಮತ್ತು ಗಿರಿಜನರ ಕಾಲೋನಿಗಳಲ್ಲಿ ಈ ರೀತಿ ಆಗಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವ ವಿಧವಾದ ಕಟ್ಟಡಗಳೂ ಇಲ್ಲ. ತಾಂಡಾಗಳಲ್ಲಿ ಮತ್ತು ಮರಗಳ ಕೆಳಗಡೆ ಮಕ್ಕಳ ವಿದ್ಯಾಭ್ಯಾಸ ನಡೆಯುತ್ತಿದೆ. ಕೆಲವರಿಗೆ ವಾಸಮಾಡುವುದಕ್ಕೆ ಮನೆಗಳೂ ಇರುವುದಿಲ್ಲ. ಇಂಥಾ ಒಂದು ಪರಿಸ್ಥಿತಿ ಇರುವಾಗ ಮಕ್ಕಳ ವಿದಾಭ್ಯಾಸ ಯಾವ ರೀತಿ ಮಾರ್ಪಾಡಾಗುತ್ತದೆ? ಇದರ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಈಗ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಸರ್ಕಾರದವರು ಹಾಸ್ಟಲುಗಳನ್ನು ಕಟ್ಟಿಸುತ್ತಿದ್ದಾರೆ. ಆದರೆ ಗಿರಿಜನರಿಗೆ ಯಾವ ಹಾಸ್ಟಲು ಕಟ್ಟಡಗಳೂ ಇಲ್ಲ. ಆದ್ದರಿಂದ ಗಿರಿಜನರ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗಿದೆ. ಈ ಬಗ್ಗೆ ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆಮಾಡಿ ಗಿರಿಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ವಾಗುವಂತೆ ಸರ್ಕಾರದವರು ಹಾಸ್ಟಲುಗಳನ್ನು ಕಟ್ಟಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಆಮೇಲೆ ಹರಿಜನರು ಮತ್ತು ಗಿರಿಜನರಿಗೆ ಮನೆಗಳನ್ನು ಮತ್ತು ಹಾಸ್ಟಲುಗಳನ್ನು ಕಟ್ಟಿಸಿ ಕೊಡಲು ಸರ್ಕಾರದವರು 10 ವರ್ಷಗಳ ಒಂದು ಯೋಜನೆಯನ್ನು ಹಾಕಿಕೊಂಡು ಅವರಿಗೆ ಹಾಸ್ಟಲುಗಳನ್ನು ಮತ್ತು ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ನಾನು ಸರ್ಕಾರದವರನ್ನು ಕೇಳಿ ಕೊಳ್ಳುತ್ತೇನೆ. ಇನ್ನು ಹತ್ತು ವರ್ಷಗಳವರೆಗೂ ಸರ್ಕಾರದವರು ಹೊಸದಾಗಿ ಕಟ್ಟಡಗಳನ್ನು ಕಟ್ಟಿಸುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಜಮೀನು ಹಂಚುವ ಬಗ್ಗೆ ಸುಮಾರು 20 ವರ್ಷ ಗಳಿಂದಲೂ ತಕರಾರು ತಿಚಿತ್ತಿ ಇದೆ. ಜಮೀನು ಯಾರದು, ಯಾರ ವಶದಲ್ಲಿದೆ, ಯಾರಿಗೆ ಕೊಡಬೇಕು ಎನ್ನುವುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿಲ್ಲ.

ಹರಿಜನ ಗಿರಿಜನರಿಗೆ ಗ್ರಾಂಟು ವಗೈರೆ, ಹಂಚಲು ಒಂದು ಅಡ್ವೈಸರಿ ಬಾಡಿಯನ್ನು ತಾಲ್ಲೂಕು ಮಟ್ಟದಲ್ಲಿ ಮಾಡಬೇಕೆಂಬುದು ನನ್ನ ಅಭಿಪ್ರಾಯ. ತಾಲ್ಲೂಕು ಬೋರ್ಡಿನ ಅಂಗ ವಾಗಿ ಇರುವುದನ್ನು ತಪ್ಪಿಸಿ ಎಲ್ಲೆಲ್ಲಿ ಹರಿಜನರು ಗಿರಿಜನರು ಇದ್ದಾರೆಯೋ, ಅಲ್ಲಿ ಅವರ ನೇತೃತ್ವ ದಲ್ಲಿ ಪ್ರತ್ಯೇಕವಾಗಿ ಸಮಿತಿಮಾಡಿ. ಗ್ರಾಂಟ್ ಹಂಚುವ ಏರ್ಪಾಡುಮಾಡಿಸಿ ಕೊಡಬೇಕು.

ಜಗಳೂರು ತಾಲ್ಲೂಕಿನಲ್ಲಿ, ವೆಂಕಟೇಶಪುರ ಮತ್ತು ಅಗಸನ ಹಳ್ಳಿಯಲ್ಲಿ, ಎರಡು ಅಗ್ರಿಕಲ್ ಚರಲ್ ಕಾಲೋನಿಗಳಿವೆ. ಅಲ್ಲಿ 40 ಮನೆಗಳನ್ನು ಕಟ್ಟಬೇಕೆಂದು ಮಾಡಿದ್ದರೂ; 20 ಮನೆ ಸಹ ಆಗಿಲ್ಲ. 8-10 ಮನೆಯವರಿಗೂ ಎತ್ತು ಮುಂತಾದ ಯಾವ ಸೌಲಭ್ಯಗಳನ್ನೂ ಕೊಟ್ಟಿಲ್ಲ. ಕುಡಿ ಯುವ ನೀರಿನ ಸೌಕರ್ಯವೂ ಇಲ್ಲ. ಈ ಕಾಲೋನಿ ನಿಗ ನೋಡಿಕೊಳ್ಳುವವರು ಯಾರೂ ಇಲ್ಲ.

Emplyment Exchange ಅಂತಮಾಡಿದ್ದೀರಿ. ಆದರಲ್ಲಿ ಗಿರಿಜನರಿಗೆ ಬಹಳ ಅವಕಾಶವಿಲ್ಲ. ಏಕೆಂದರೆ ನಾಗಣ್ಣಗೌಡ ಸಮಿತಿಯವರು ಅವರನ್ನು ತುಂಬ ಬ್ಯಾಕ್‌ವರ್ಡ್ ಎಂದು ಹೇಳಿದ್ದಾರೆ ಯಾವುದಾದರೂ ಇಲಾಖೆಯವರು ಅಭ್ಯರ್ಥಿಗಳನ್ನು ಕಳುಹಿಸಿ ಎಂದು ಕೇಳಿದರೆ, ಗಿರಿಜನರ ಮತ್ತು ನಿಮ್ಮ ವರ್ಗದವರ ಹೆಸರನ್ನು ಲಿಸ್ಟಿನಲ್ಲಿ ಸೇರಿಸಿ ಕಳುಹಿಸುತ್ತಾ ಇಲ್ಲ. ಇದರಿಂದ ಗಿರಿಜನರಿಗೆ ಅನ್ಯಾಯವಾಗುತ್ತಿದೆ. ಈ ಅನ್ಯಾಯವಾಗದ ಹಾಗೆ ನೋಡಿಕೊಳ್ಳಬೇಕು.

ನನ್ನ ಧನ್ಯವಾದಗಳನ್ನು ಅಧ್ಯಕ್ಷರಿಗೆ ಅರ್ಪಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ,

Mr. SPEAKER.—There are 15 minutes more and there are three or four more members to speak. Sri Muckannappa will have to finish in 5 minites.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—5 ನಿಮಿಷದಲ್ಲಿ ಆಗುವುದಿಲ್ಲ.

ಅಧ್ಯಕ್ಷರು.—ನಾನು ಏನುಮಾಡಲಿ ? There are 15 minutes left.

Sri C. J. MUCKANNAPPA.—How can I finish in five minutes, 10 ನಿಮಿಷ ಇಲ್ಲದೆ ಹೋದರೆ ಆಗುವುದಿಲ್ಲ.

Mr. SPEAKER.—The member should appreciate my difficulties also.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಕೈಲಿ ಆಗುವುದಿಲ್ಲ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಏನಾಗಿದೆಯೆಂದರೆ ಎಲ್ಲಾ ನ್ಯೂನತೆಗಳನ್ನೂ ಮಾನ್ಯ ಸದಸ್ಯರು ಇದುವರೆಗೆ ಹೇಳಿದ್ದಾರೆ. ಇದರ ಒಟ್ಟು ಹಣಬರಹ ಏನೆಂದರೆ ಬರುಬರುತ್ತಾ ಹದಗೆಡುತ್ತಾ ಇದೆ. ಹದಗೆಡುವ ವೇಗ ನಿಜವಾಗಿಯೂ ಸ್ಪುಟ್‌ನಿಕ್ ವೇಗ ತೆಗೆದುಕೊಳ್ಳುತ್ತಾ ಇದೆ. ಇದು ಒಂದು ಬಾಬಿನಲ್ಲಿಯೇ ಅಲ್ಲ, ಎಲ್ಲಾ ಬಾಬುಗಳಲ್ಲಿಯೂ ಹೀಗೆಯೇ ಆಗುತ್ತಾ ಇದೆ. ಇದು ಬಹಳ ಚೆನ್ನಾಗಿ ಗೊತ್ತಾಗಿದೆ. ಈ ಅವನತಿಗೆ ಕಾರಣವೇನು ? ಇದು ಹೇಗೆ ಆಗುತ್ತಿದೆ ? ಅದಕ್ಕೆ ಪರಿಹಾರಕ್ಕೆ ಎಲ್ಲಿಗೆ ಹೋಗಬೇಕು ? ಅನ್ನುವ ವಿಚಾರಗಳಲ್ಲಿ ಒಂದೆರಡು ಮಾತನ್ನು ಹೇಳ ಬಯಸುತ್ತೇನೆ.

ಎಲ್ಲಾ ವಿಳುವುವಕ್ಕೆ ಮುಂಚೆ ಟ್ರಾನ್ಸ್‌ಪೋರ್ಟ್ ಇಲಾಖೆ ಸ್ವಲ್ಪ ಲಾಭ ಸಂಪಾದಿಸಿದರೂ, ಲಂಚ ಕಡಿಮೆಯಾಗಿಲ್ಲವೆಂದು ಹೇಳಬೇಕು. ಲಂಚಗಿಂಚ ಅಲ್ಲಿ ಕಡಿಮೆ ಮಾಡಬೇಕು.

ಹಿಂದೆ ದೇವಸ್ಥಾನಗಳನ್ನೂ ಸಾರ್ವಜನಿಕರ ಉಪಯೋಗಕ್ಕಾಗಿ ಉಪಯೋಗಿಸುತ್ತಿದ್ದರು. ಪೂರ್ವದಲ್ಲಿ ಅಲ್ಲಿ ಶಾಲೆಗಳನ್ನು ನಡೆಸುತ್ತಾ ಇದ್ದರು. ಈಗಲೂ ದೇವಸ್ಥಾನಗಳನ್ನು ಜೀರ್ಣೋದ್ಧಾರಮಾಡಿ, ಕಿಟಕಿ ದೊಡ್ಡದಾಗಿ ಇಟ್ಟು ಅವನ್ನು ಶಾಲೆಗೆ ಉಪಯೋಗಿಸಬಹುದೆಂದು ಸಲಹೆ ಮಾಡುತ್ತೇನೆ.

ಈ ವಾರ್ತಾ ಇಲಾಖೆಯಲ್ಲಿ (Publicity and Information Departmentನಲ್ಲಿ) ತುರ್ತು ಪರಿಸ್ಥಿತಿ ದೃಷ್ಟಿಯಿಂದ ಆಡಳಿತ ನಡೆಸಬೇಕು. ಗಂಡಾಂತರ ಬಂದಿದೆ ದೇಶಕ್ಕೆ ಎಂದು ಹೇಳುವಾಗ, ಈ ಇಲಾಖೆ ಚಟುವಟಿಕೆ ನೋಡಿದರೆ ಬಹಳ ಶೋಚನೀಯ ವಿಚಾರ. ಸರ್ಕಾರದವರಿಗೆ ಕೂಡ ಇವತ್ತಿನ ದಿವಸ ಈ ಗಂಡಾಂತರದ awareness ಇಲ್ಲ. ಸ್ವಲ್ಪ ದಕ್ಷರಾದವರನ್ನು ಕಳಹಿಸಿ ಪ್ರಸಾರ ಮಾಡಿದರೆ ಒಳ್ಳೆಯದು. ಮೊನ್ನೆ ಈ ಗಂಡಾಂತರ ಪರಿಸ್ಥಿತಿ ಬಗ್ಗೆ ಸರಿಯಾದ ತಿಳುವಳಿಕೆ ಜನರಿಗೆ ಕೊಡಲು ನಾವು ಹೊರಟಾಗ, ನನ್ನ ಜೊತೆಗೆ ಬಂದ ಈ ಇಲಾಖೆಯ ಅಧಿಕಾರಿಗೆ ತುರ್ತು ಪರಿಸ್ಥಿತಿಯ ಅರಿವು ಅಷ್ಟಾಗಿರಲಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಕೊನೆಯದಾಗಿ, ನಾವೆಲ್ಲಾ ಓದಿದಂಥ ಶಾಲೆಯ ಒಬ್ಬ ಮೇಷ್ಟರ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳಬೇಕಾಗಿದೆ. ಅದನ್ನು ಸ್ವಲ್ಪ ವಿಸ್ತಾರವಾಗಿಯೇ ಹೇಳುತ್ತೇನೆ. ನಾನು ಲೋಯರ್ ಸೆಕೆಂಡರಿ ಕ್ಲಾಸಿನಲ್ಲಿ ಓದುತ್ತಿದ್ದಾಗ ಸೀತಾರಾಮಶಾಸ್ತ್ರಿ ಅಂತ ಒಬ್ಬ ಮೇಷ್ಟರು ಇದ್ದರು. ಈ ದಿವಸ ನಾನು ಜೀವನದಲ್ಲಿ ಎಷ್ಟೋ ಪಾಠಗಳನ್ನು ಕಲಿತಿದ್ದರೆ, ಅದರಲ್ಲಿ ಮುಖ್ಯವಾಗಿ ಕಲಿತು ದುದು ಅವರದು ; ಅದೇನೆಂದರೆ fellow human beings ಅನ್ನು ದ್ವೇಷಮಾಡದೆ ಇರುವುದು. ಜೀವನದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿದಿದ್ದಾರೆ. Life is not as bitter as it should be ಎಂದು ಅವರಿಂದ ತಿಳಿದುಕೊಂಡೆ. ಈ ಪರಿವರ್ತನೆ ನನ್ನಲ್ಲಿ ಆಗುವುದಕ್ಕೆ ಮುಖ್ಯ ಕಾರಣವನ್ನು ಹೇಳುತ್ತೇನೆ ಒಂದು ದಿವಸ ಕ್ಲಾಸಿಗೆ ಹೊಗುತ್ತಾ ಇದ್ದೆ. ನಾಲ್ಕು ಏಟುಬಿಟ್ಟು ಬಿಟ್ಟರು......

Mr. SPEAKER.—The Hon'ble Member may Come to the Budget because he has alreday spent three minutes.

ಶ್ರೀ ವಿ. ಎಂ. ದೇವ್.—ಬಹಳ ಕ್ರೌರ್ಯ ಕೆಲವು ವಿಚಾರದಲ್ಲಿ ಅವರಿಗೆ ಪ್ರೇಯರ್ ಆಗುತ್ತಾ ಇತ್ತು. ಚೆನ್ನಾಗಿಯಿತ್ತು. ಅವರಿಗೆ ಬಹಳ ಒಳ್ಳೆಯ ಮನಸ್ಸು. ಮಾನ್ಯರು ದೂರದಿಂದ ನೋಡಿ ಒಂದು ಕೆಲಸಮಾಡಿದರು ; ಜೀವನದಲ್ಲಿ ಕಹಿ ಹೊರಟುಹೋಯಿತು ಬಾಕಿ ಹುಡುಗರು ಈ ಘಟನೆ ಯನ್ನು ಮರೆತ ಹೋದರೂ ನಾನು ಮರೆತುಹೋಗಿಲ್ಲ. ಇವತ್ತಿಗೂ ಜ್ಞಾಪಕ ಬರುತ್ತಿದೆ. ನೋಡುವುದರಲ್ಲಿ ಅವರು ಹೆಚ್ಚುಕಡಿಮೆ ಸ್ವೀಕರರನ್ನು ಹೋಲುತ್ತಾ ಇದ್ದರು ; ಆದರೆ ಇಷ್ಟು ವ್ಯತ್ಯಾಸ ; ಇವರು ಅವರಿಗಿಂತ ದೊಡ್ಡವರು.

ಅಧ್ಯಕ್ಷರು.—ನಾಲ್ಕು ನಾನೂ ಕೊಡಬೇಕೇ ? (ನಗು !)

ಶ್ರೀ ವಿ. ಎಂ. ದೇವ್.—ಅವರ ಮುಖವೆಲ್ಲಾ ಸುಖವಾಗಿತ್ತು. ಇವರ ಎರಡರಷ್ಟು ವಯಸ್ಸಾದ ಹಾಗೆ ಕಾಣುತ್ತಾ ಇದ್ದರು. ಇವರು ಹಸನ್ಮುಖಿಗಳು. 30 ವರ್ಷವಾಗಿದ್ದರೂ ಅವರನ್ನು ಈಗಲೂ ಜ್ಞಾಪಿಸಿಕೊಳ್ಳುತ್ತೇನೆ. ಪ್ರೇಯರು ಷುರುವಾಗಿತ್ತು. ಹೆಡ್‌ಮೇಸ್ಟರ್‌ರು ಡಿಸಿಪ್ಲಿನ್ ಜಾಸ್ತಿ. It is not an ideal state of mind for prayer.

Mr. SPEAKER.—The rest of the speech may be on the Appropriation Bill.

ಶ್ರೀ ವಿ. ಎಂ. ದೇವ್.—ಇನ್ನೂ ಐದುನಿಮಿಷ ಆಗಿಲ್ಲ, ಸ್ವಾಮಿ. ಪಕ್ಕದಲ್ಲಿ ಇನ್ನೊಬ್ಬ ಮೇಷ್ಟರಿದ್ದರು. ಇದ್ದಕ್ಕಿದ್ದಹಾಗೇ ಕುಂಡಿಮೇಲೆ ಸ್ವಲ್ಪ ಜಿಗುಟಬಿಟ್ಟರು. ಹುಡುಗರು ಹಣಗಿಸುವುದನ್ನು ಬಿಟ್ಟುಬಿಟ್ಟರು. ಆದೇ ಹೆಡ್‌ಮಾಸ್ಟರು ಇಲ್ಲಿ ಪೆನ್‌ಶನ್ನಿಗೆ ಬಂದಾಗ ನೋಡಿದರೆ. ಇವರ ಕಡೆ ಶ್ರೀಕಂಠಯವರ ಗಮನ ಸೆಳೆಯುತ್ತೇವೆ ; ಆದರೆ ಜತ್ತಿಯವರು ಕ್ಲಾಸಿಗಲ್ಲ ಎಂದು ಹೇಳುತ್ತಾರೆ.

ಶ್ರೀ ಅಧ್ಯಕ್ಷರು.—ನೀವು ಕರೆದುಕೊಂಡು ಹೋಗಿ, ಬೇಗವಾಡುತ್ತಾರೆ.

ಶ್ರೀ ವಿ. ಎಂ. ದೇವ್.—ಅವರು ಸತ್ತುಹೋಗಿದ್ದಾರೆಯೋ ಏನೋ; ಬರುವುದು ಬಿಟ್ಟು ಬಿಟ್ಟಿದ್ದಾರೆ. ರೈಟಾಗಿ ತೆಗೆದುಕೊಳ್ಳಬಾರದು. ನೀವು ಮೇಷ್ಟರುಗಳಿಗೆ ಪೆನ್‌ಷನ್ ಬೇಗ ಕೊಡ ಬೇಕು. ಅವರ ಹೆಸರು ಕೃಷ್ಣಅಯ್ಯಂಗಾರ್.

ಶ್ರೀ ರೇವಣ್ಣಸಿದ್ದಪ್ಪನವರು ಮಂತ್ರಿಗಳಲ್ಲಿ ಬಹಳ ಜನಕ್ಕೆ ಕೆಲಸವಿಲ್ಲವೆಂದು ಹೇಳಿದ್ದಾರೆ. Idleness is a devil's workshop ಈ ಮಂತ್ರಿಗಳಿಗೆ ಕೆಲಸವಿಲ್ಲವೆಹೋದರೆ ಪೋಲಿಬೀಳುತ್ತಾರೆ. ಈಗ ಪೋಲಿಬೀಳದೆ ಹೋದರೂ ಪೋಲಿಬೀಳುವುದು ಖಂಡಿತ. ನೀವು ಏನು ಮಾಡದೇಹೋದರೂ ಈ ಸಭೆಯಲ್ಲಿ ತಾತ್ವಿಕವಾಗಿ ಯಾರುಯಾರು ಏನು ಮಾತನಾಡುತ್ತಾರೆಯೋ ಅದರ ಒಂದು ಸಮ್ಮರಿ ಮಾಡಿ, ಇಡಿ. ನಾನು ತಮಾಷೆಗೆ ಹೇಳುತ್ತಾ ಇಲ್ಲ. ಏನೂ ಕೆಲಸಮಾಡದೆ ಮಂತ್ರಿಗಳು ತಿರುಗಾಡುತ್ತಾ ಇದ್ದರೆ ನಾನು ಹೇಳಿದ್ದು ಆಗಿಯೇ ಆಗುತ್ತದೆ. ಇಬ್ಬರು ಒಳ್ಳೆಯ ಮಂತ್ರಿಗಳಿ ದ್ದಾರೆ. ಅದಕ್ಕೋಸ್ಕರ ಈ ವಿಷಯದಲ್ಲಿ ಇನ್ನೂ ಸ್ವಲ್ಪ ಹೇಳಬೇಕಾಗಿದೆ.

Mr. SPEAKER.—The idea is fully Comprehended.

ಶ್ರೀ ವಿ. ಎಂ. ದೇವ್.—ನಿಮಗೆ ಗೊತ್ತಾಗುತ್ತದೆ. you are very good. How about others ?

Mr. SPEAKER.—First of all, let the hon'member Convince me.

†ಶ್ರೀ ಎಸ್. ಸುಬ್ಬಯ್ಯನಾಯಕ್ (ಸೂಳ್ಯ).—ಅಧ್ಯಕ್ಷರೇ, ಇವತ್ತಿನ ದಿವಸ 17 ಡಿಮ್ಯಾಂಡು ಗಳಲ್ಲಿ ಎಲ್ಲವನ್ನೂ ಸಮರ್ಥಿಸುತ್ತಾ ಕಾರ್ಮಿಕ ಮತ್ತು ಉದ್ಯಮ ಡಿಮ್ಯಾಂಡಿನ ಮೇಲೆ ಒಂದು ಮಾತನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಈಗ ಸುವರ್ಣ ನಿಯಂತ್ರಣ ಕಂಟ್ರೋಲಿನಿಂದ ದೇಶದಲ್ಲಿ ರುವ ಅಕ್ಕಸಾಲಿಗ ಜನಾಂಗದವರು ಬಹಳ ಕಷ್ಟದಲ್ಲಿ ಸಿಕ್ಕಿದ್ದಾರೆ ಅವರ ಕಷ್ಟವನ್ನು ಅಂತೂ ಹೇಳಲಿಕ್ಕಾಗದು. ಕೃಷಿಗಾಗಿ ಇವರು ಕೊಟ್ಟಂತಹ ಅರ್ಜಿಗಳನ್ನು ಪಾಸೀಲಿಸಿ ದರಖಾಸ್ತು ದಾರರಿಗೆಲ್ಲರಿಗೂ ಭೂಮಿ ಕೊಡಬೇಕು. ಪೇಟೆಯಲ್ಲಿರುವವರಿಗೆ ಯಾವ ರೀತಿ ಉದ್ಯೋಗಗಳನ್ನು ಕಲ್ಪಿಸಿ ಕೊಡುತ್ತೀರೋ ಅದೇ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಈ ಜನಾಂಗದವರಿಗೆ ತಕ್ಕಷ್ಟು ಉದ್ಯೋಗಗಳನ್ನು ಕಲ್ಪಿಸಿ ಕೊಡಬೇಕು. ಅವರ ಮಕ್ಕಳಿಗಾಗಲೀ ಅಥವಾ ಅವರ ಕುಟುಂಬ ಜನಗಳಿಗಾಗಲೀ ಉದ್ಯೋಗಗಳನ್ನು ಕೊಟ್ಟು ಕುಟುಂಬ ಪೋಷಣೆ ಮಾಡುವುದಕ್ಕೆ ಅವ ಕಾಶವನ್ನು ಸರ್ಕಾರದವರು ಈ ಕೂಡಲೇ ಮಾಡಿಕೊಡಬೇಕೆಂದು ನಾನು ಕೇಳುತ್ತೇನೆ.

ಇನ್ನು 39ನೇ ಐಟಂನಲ್ಲಿ ವಿವಿಧ ಸಾಮಾಜಿಕ ಅಭಿವೃದ್ಧಿ ಸಂಘಗಳು ಎಂದು ಕೊಟ್ಟಿದ್ದಾರೆ. ಮೊದಲು ಸೋಷಿಯಲ್ ವೆಲ್‌ಫೇರ್ ಎಂಬ ಐಟಂ ಬಜೆಟ್ಟಿನಲ್ಲಿತ್ತು. ಇದು ಏಕೆ ಬದಲಾವಣೆ ಮಾಡಿದ್ದಾರೋ ಗೊತ್ತಿಲ್ಲ. ಅದರಿಂದ ಏನು ತೊಂದರೆಯೋ ಗೊತ್ತಾಗಲಿಲ್ಲ. ಅದರ ಪ್ರಾಮುಖ್ಯತೆಯೇ ಹೋಯಿತು. ನಿಮ್ನವರ್ಗದಲ್ಲಿ ಹರಿಜನರು ಗಿರಿಜನರು ಎಂಬವರ ಪ್ರಾಮುಖ್ಯತೆಯನ್ನು ಕಳೆದು ಹಾಕಿದ ರೀತಿಯಲ್ಲಿ ಈ ಬಜೆಟ್ಟಿನಲ್ಲಿ ಬದಲಾವಣೆಯಾಗಿದೆ. ಅದರ ಅವಶ್ಯಕತೆ ಅನಿವಾರ್ಯವಾಯಿತೇ ಎಂಬುದನ್ನು ಮನಗಾಣಬೇಕು. ಅಷ್ಟೇ ಗಮನಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಏಕೆಂದರೆ ಮೈಸೂರು ಸಂಸ್ಥಾನದಲ್ಲಿ 15 ಲಕ್ಷ ಗಿರಿಜನರು ಇದ್ದಾರೆಂಬುದಾಗಿ ಮೈಸೂರು ಸರ್ಕಾರದ ವರದಿಯಿಂದ ಗೊತ್ತಾಗಿದೆ. ಶ್ರೀಮಾನ್ ಕಬಾಡಿಯವರು ಹೇಳಿದಂತೆ ಕ್ಲಾಸ್ 1, 2, 3ನೇ ಹುದ್ದೆಗಳು ಅವರಲ್ಲಿ ಬಹಳ ಕಮ್ಮಿಯೆಂದು ಹೇಳಿದರು. ಅವರು ಅಂಕಿ ಸಂಖ್ಯೆ ಗಳಿಂದ ಹೇಳಿದರು. ನಾನು ಹೇಳುವುದಿಷ್ಟೇ ಶೇಕಡ 1 ರಷ್ಟೂ ಸಹ ಇಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕಾರಣ ತಿಳಿಯಲಿಲ್ಲ. ವಿದ್ಯೆಯಲ್ಲಿ ಬಹಳ ಮಟ್ಟಿಗೆ ಹಿಂದುಳಿದಿ ದ್ದಾರೆಂದು ಹೇಳುತ್ತಾರೆ. 3ನೇ ಕ್ಲಾಸ್ ಹುದ್ದೆಗಳಲ್ಲಿ ಕೆಲವು ಪಿ. ಡಬ್ಲ್ಯೂ.ಡಿ.ಯಲ್ಲಿ ಖಾಲಿ ಇದ್ದರೂ ಆ ಹುದ್ದೆಗಳಿಗೆ ಸಾಕಷ್ಟು ಅರ್ಹತೆ ಪಡೆದಿದ್ದರೂ ಅವರಿಗೆ ಆ ಹುದ್ದೆಗಳು ಸಿಕ್ಕದೇ ಇರುವುದರಿಂದ ರಿಟ್ ಹಾಕಲಿಕ್ಕೆ ಹೋಗಿದ್ದಾರೆ, ಅಷ್ಟು ತೊಂದರೆ ತೆಗೆದುಕೊಳ್ಳಲಾಯಿತು. ಸರ್ಕಾರದ ದೋಷ ಈ ಬಗ್ಗೆ ಇಲ್ಲದಿದ್ದರೂ ಅವರೆಗೇನೋ ಬೇರೆ ರೀತಿಯಲ್ಲಿ ತೊಂದರೆಯಾಗಿದೆ. ಇಂತಹ ದಲಿತ ಜನಾಂಗಕ್ಕೆ ಯಾರೂ ಒಂದು ಅಸ್ತಿತ್ವವನ್ನುಂಟುಮಾಡಲಿಕ್ಕೆ ಮುಂದೆ ಬರುವುದನ್ನು ಕಾಣದೇ ಇರು ವುದು ಬಹಳ ವಿಷಾದವಾಗಿದೆ. ಜನರೇನೋ ಇದ್ದಾರೆ. ಆದರೆ ಅವರ ಸ್ಥಿತಿಗತಿಯ ರೀತಿ, ಪ್ರಕಾರ, ಮಟ್ಟ ಯಾರಿಗೂ ತಿಳಿದಿಲ್ಲವೆಂದು ನಾನು ಹೇಳಬೇಕಾಗಿದೆ. ಏಕೆಂದರೆ ಜಿಲ್ಲೆಯ ತಾಲ್ಲೂಕಿನ ಬೋರ್ಡ್ ಪ್ರೆಸಿಡೆಂಟರೇ ಗಿರಿಜನರಾಗಿರುತಾರೆ. ಅಂತಹವರು 3-4 ಸಾವಿರ ಜನರು ಇದ್ದಾರೆ ಅವನ್ನು ನೋಡಿದರೆ ಅನೇಕರು ಆಶ್ಚರ್ಯಪಡುತ್ತಾರೆಂದು ಹೇಳಬಹುದು. ಅಂತಹ ಜನಗಳು ಗುಡ್ಡ ಗುಡುಗಳಲ್ಲಿ ತುಂಬಾ ಇದ್ದಾರೆ. ಪೇಟೆಗಳಲ್ಲಿ ಕಾಣುವುದಿಲ್ಲ. ಅವರ ಅಸ್ತಿತ್ವವನ್ನು ಸರ್ಕಾರ ಮನಗಂಡು ಅವರಿಗೆ ಎಲ್ಲೆಲ್ಲಿ ಸಾಧ್ಯತೆ ಇದೆಯೋ ಅಲ್ಲಲ್ಲಿ ಉದ್ಯೋಗ ಕಲ್ಪಿಸಿಕೊಳ್ಳಲು ಅವಕಾಶ

ಮಾಡಿಕೊಡಬೇಕು. ಅಂತಹವರಿಗೆ ಕೃಷಿಗೆ ಹೆಚ್ಚು ಅವಕಾಶಮಾಡಿ ಕೊಡಬೇಕು. ಅಂತಹವರು ಹೆಚ್ಚಿಗೆ ಗುಡ್ಡಗಾಡುಗಳಲ್ಲಿಯೇ ಬೆಳೆದು ಗಡ್ಡೆ ಗೆಣಸುಗಳನ್ನು ತಿಂದು ಅಲ್ಲಿಯೇ ವಾಸಮಾಡುತ್ತಿರುತ್ತಾರೆ. ಅಂತಹ ಜನರಿಗೆ ಭೂಮಿ ಕೊಡಬೇಕು. ಅವರಿಗೆ ಅರಣ್ಯ ಬದಿಯಲ್ಲಿಯೇ ಇರತಕ್ಕ ಭೂಮಿಯನ್ನು ಲೀಜಿಗಾಗಿ ಕೊಟ್ಟು ಅಲ್ಲಿ ವಾಸವಾಡಿಕೊಂಡಿದ್ದು ಜೀವನ ಮಾಡಿಕೊಳ್ಳುವುದಕ್ಕೆ ಸಾಕಷ್ಟು ಪ್ರೋತ್ಸಾಹ ಕೊಡಬೇಕು. ಅವರ ಆರ್ಥಿಕಸ್ಥಿತಿ ಹೆಚ್ಚಾಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಅರಣ್ಯ ಸಚಿವರು 100 ರೂಪಾಯಿಗಳಷ್ಟು ಮರವನ್ನು ಉಚಿತವಾಗಿ ಕೊಟ್ಟಿದ್ದಾರೆ. ದರಖಾಸ್ತು ಕೊಡುವಾಗ ಮದ್ರಾಸ್ ಸರ್ಕಾರದಲ್ಲಿ ಅದನ್ನು ಎಂದೂ ಪರಬಾರಿ ಮಾಡಬಾರದು ಎಂಬ ಒಂದು ನಿಯಮವಿತ್ತು. ಆದರೂ ಸಾವಿರಾರು ರೂಪಾಯಿಗಳ ಆಸ್ತಿಗಳನ್ನು ಇಟ್ಟುಕೊಂಡಿರುವವರು ಎಷ್ಟೋ ಜಮೀನುಗಳನ್ನು ಈಗಲೂ ಪಡೆಯುತ್ತಿದ್ದಾರೆ. ಅಂತಹವರಿಗೆ ಜಮೀನು ಸಿಕ್ಕಬಾರದು. ನನ್ನ ಅಭಿಪ್ರಾಯ ಈ ಬಗ್ಗೆ ಏನೆಂದರೆ ಕೂಡಲೇ ಇದನ್ನು ತೆಗೆಯಬೇಕು. ಅವರಿಗೆ ಮನೆ, ಎತ್ತು, ಕೋಳಿ, ಕುರಿ ಮುಂತಾದವುಗಳನ್ನು ಕೊಳ್ಳಲು ಹಣ ಕೊಡುವುದಕ್ಕೆ ಬದಲು ಹೆಚ್ಚಿಗೆ ಹಣವನ್ನು ಆ ಜನಗಳ ವಿದ್ಯಾಭಿವೃದ್ಧಿಗೆ ಕೊಡುವುದು ಒಳ್ಳೆಯದು, ಅದು ಬಹಳ ಸಂತೋಷವೆಂದು ನಾನು ಅಭಿಪ್ರಾಯಪಡುತ್ತೇನೆ. ಆಶ್ರಮ ಶಾಲೆ ಮತ್ತು ಸೋಷಿಯಲ್ ಶಾಲೆಗಳಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕು. ಮಿಡಲ್ ಸ್ಕೂಲ್ ಮತ್ತು ಹೈಸ್ಕೂಲುಗಳಲ್ಲಿ ಓದತಕ್ಕ ಅವಕಾಶ ಪ್ರತಿಯೊಂದು ಮಗುವಿಗೂ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕು.

ಇನ್ನೊಂದು ವಿಚಾರ ಲೀಗಲ್ ಏಡ್ ಎಂದು ಬಡ್ಜೆಟ್ಟಿನಲ್ಲಿ ಹಿಂದೆ ಇಡುತ್ತಿದ್ದರು. ಈಗಲೂ ಆ ಐಟಂ ಇದೆ. ಆದರೆ ಇದುವರೆಗೂ ಅದು ಯಾರಿಗೂ ಸಿಕ್ಕಲಿಲ್ಲವೆಂದು ನಾನು ಬಹಳ ಬೇಸರದಿಂದ ಹೇಳಬೇಕಾಗಿದೆ. ಅದರಲ್ಲೇನೋ ಇಂದ್ರಜಾಲ ನಡೆದಿದೆ. ಇಷ್ಟರವರೆಗೂ ಯಾರಿಗೂ ಸಿಗಲಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅದು ಸಿಗುವಂತೆ ಕೊಟ್ಟಿಲ್ಲ. ಮಾನ್ಯ ಸಚಿವರು ಇದಕ್ಕೆ ಗಮನ ಕೊಡಬೇಕು.

ಇನ್ನು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿನಲ್ಲಿರತಕ್ಕ ಒಬ್ಬ ಕಿಚನ್ ಸರ್ವೆಂಟಿಗೆ ಐದು ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ, ಅವರು 30 ವರ್ಷ ಸರ್ವಿಸ್ಸು ಮಾಡಿದ್ದರೂ ಬಡ್ತಿ ಕೊಟ್ಟಿಲ್ಲ. ಬರೀ ಸಂಬಳ ನಿಗದಿ ಮಾಡಿದ್ದಾರೆ. ಕ್ಲಾಸ್ ನಾಲ್ಕನೆಯ ವರ್ಗದವರಿಗೆ 8 ಆಣೆ ಬಡ್ತಿ ಇದೆಯೆಂದು ಹೇಳುವುದಕ್ಕೆ ಅವಕಾಶ ಕೊಡಬೇಕು. ಇನ್ನು ಗಿರಿಜನರಿಗೆ ತೃಪ್ತಿಯಾಗಿ ಶಿಕ್ಷಣ ಕೊಡಬೇಕು. ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಅಮಿಲಿಯರೇಷನ್ ಸಬ್ ಕಮಿಟಿಯೊಂದಿದೆ. ಅದಕ್ಕೆ ಸರ್ಕಾರದವರು ಹೆಚ್ಚಿನ ಸಹಾಯ ಮಾಡಬೇಕು ಅಲ್ಲಿ ಸರ್ಕಾರದ ಬಡ್ಜೆಟ್ಟಿನಲ್ಲಿ ಪಾಸಾದ ಹಣವನ್ನು ಹಂಚುತ್ತಾರೆ. ಅದು ಬಹಳ ಸುಧಾರಣೆಯಾಗಬೇಕಾಗಿದೆ. ಅವರಿಗೆ ಸ್ಥಳೀಯ ವಿಚಾರಗಳನ್ನು ಸೂಚಿಸಬೇಕೆಂಬುದನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಅವು ಯೋಗ್ಯವಾದರೆ ಸರ್ಕಾರದವರು ಮನ್ನಣೆ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಮೊಬೈಲ್ ಹೆಲ್ತ್ ವ್ಯಾನ್ ಬಗ್ಗೆ ಸುಳ್ಳು ಪ್ರಚಾರ ಮಾಡಿದ್ದಾರೆ. 3 ವರ್ಷಗಳಿಂದ ಡಾಕ್ಟರುಗಳೇ ಅಲ್ಲಿಲ್ಲ. ಇದಕ್ಕೂ ಹಿಂದೆ ಡಾಕ್ಟರುಗಳ ಅಭಾವ ಬಹಳ ಜಾಸ್ತಿ. ಈಗ ಅಲ್ಲಿರತಕ್ಕ ಡಾಕ್ಟರುಗಳಿಗೆ ಸಂಬಂಧಪಟ್ಟ ನೌಕರರಿಗೆ ಸ್ಪೆಷಲ್ ಅಲೊಯನ್ಸ್ ಕೊಟ್ಟು ಜನಗಳ ಕಷ್ಟವನ್ನು ಪರಿಹರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The reply will begin now.

Sri MADAPPA GOWDA.—Sir, I rise to a point of order. ಈಗ ಎಲ್ಲಾ ಮಂತ್ರಿಗಳು ಅವರವರ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟು ಈ ಸಭೆಯ ಅನುಮತಿಯನ್ನು ಆ ಬಗ್ಗೆ ತೆಗೆದುಕೊಂಡಿದ್ದಾರೆ. ಆದರೆ ಮುನಿಸಿಪಲ್ ಆಡಳಿತದ ಬಗ್ಗೆ ನಮ್ಮ ಹಂಗು ಇಲ್ಲದೆ ಸಂಬಂಧಪಟ್ಟ ಮಂತ್ರಿಗಳು ಅಧಿಕಾರ ಮಾಡುತ್ತಿದ್ದಾರೆಯೇ? ಅವನ್ನು ಸ್ವಲ್ಪ ತಿಳಿಸಬೇಕು.

Mr. SPEAKER.—Is there any point of order in it ?

ಶ್ರೀ ಗೋಪಾಲ ಸಾಲಿನ್ಸ.—ನಾನು ಷೆಡ್ಯೂಲ್ಡ್ ಕ್ಯಾಸ್ಟ್‌ಪರವಾಗಿ ಇಲ್ಲಿ ಒಬ್ಬ ಸದಸ್ಯನಾಗಿದ್ದೇನೆ. ನನಗೂ ಈ ಸಮಯದಲ್ಲಿ ಮಾತನಾಡಲು ಅವಕಾಶವನ್ನು ಕೊಡಬೇಕು. ಇಲ್ಲದಿದ್ದರೆ ನಾನು walk out ಮಾಡಬೇಕಾಗುತ್ತದೆ.

Mr. SPEAKER.—Please Don't throw threats like that. The Hon'ble nember says that if he is not given a chance to speak, he is going to walk out.

Sri GOPALA SALENNA.—Yes, Sir.

Mr. SPEAKER.—If he throws out threats I will take action against him. It is becoming a very bad habit here. The reply will begin.

Sri C. J. MUCKANNAPPA.—How does it become bad Sir?

Mr. SPEAKER.—I have called upon the Minister to reply.

Sri C. J. MUCKANNAPPA.—Is it not our duty to bring it to your notice, Sir? If I am dissatisfied with the way in which I have been treated, is it not open me to bring it to your notice, Sir?

Mr. SPEAKER.—When I am on my legs, the hon. member resume his seat.

Please resume the seat. The chair will not permit any disturbance If the Hon'ble member wants to go out, he can go out quietly. If he passes remarks reflecting upon the Chair, I will take action. I was very indulgent.

5-00 P.M.

Sri C. J. MUCKANNAPPA.— Before you tell something to the Members of this House, are we not expected to be treated under the Rules of this House? After insulting the Members of this House...........

Mr. SPEAKER.—No; it is an insult to the Chair. Therefore, I request the Hon'ble member not to disturb the House. I call upon the Minister to commence his reply. No Member should get up and interfere.

Sri C. J. MUCKANNAPPA.—Before you ask the Minister, you must hear us; otherwise, what are we here for?

Mr. SPEAKER.— I am telling the Hon'ble Member for the last time. I am on my legs; Let hime resume his seat.

Sri C. J. MUCKANNAPPA.— I respect it and sit down.

Mr. SPEAKER.— I now direct the Hon'ble Member not to get up and disturb after I sit. I have already called upon the Hon'ble Minister to reply. When the Minister replies, no Member should interfere and disturb the House. Otherwise, appropriate action would be taken.

Sri C. J. MUCKANNAPPA.—Please excuse me, Sir. I want to bring to your notice............

Mr. SPEAKER.—I am on my legs; please resume the seat. Now, the Hon'ble member should not make me get up time and again. If he again disturb me, I will have to take action. I warn him; I definitely warn him; I will not permit it.

Sri C. J. MUCKANNAPPA.—Under the rules, I want to bring to your notice.

Mr. SPEAKER.—No. What is this; There should be a limit; I will not permit it; Let the Hon'ble member understand it, I know the rules. Knowing the rules, I am giving direction. If he want, to disturb, let him do it at his risk. I have called upon the Minister to reply. If the Minister yields, I am not responsible.

Sri B. D. JATTI (Minister for Finance).—Mr. Speaker Sir, many Hon'ble Members have taken part in the debate and it is the duty of

the Government to reply to the points raised in the debate. Sir, I am not taking more time of the Hon'ble House, but clarify some of the points.

One of the Hon'ble Members said that His Highness the Maharaja should not receive the Privy Purse. Sir, the question of Privy Purse does not arise at all in this House. The Privy Purse is to be given by the Government of India and it is to be received by His Highness the Maharaja and that point cannot be raised here. Ultimately, it depends on His Highness whether to accept it or not. Secondly, I may inform the House that the present Governor is not accepting any salary. He is not keeping the building of the Government and he is not making use of the Government vehicles. On the contrary, one of the Members says that Privy Purse should not be accepted and it should not be given. It is none of our concern.

Sri S. GOPALA GOWDA.—On a point of clarification. You sai' that he was not accepting any salary...........

Sri B. D. JATTI.—I am not yielding, Sir.

Sri S. GOPALA GOWDA.—What the Minister says is not true.

Mr. SPEAKER.—If he does not yield, I cannot help.

Sri C. J. MUCKANNAPPA.—Sir, clarificati ns were given hitherto. We had the opportunity to elicit information after the reply was over. But, since 4 or 5 days, we have discontinued ; that is our difficulty.

Sri B. D. JATTI —Sir, one of the Hon'ble Members said we were ..t spending more than what we derive from the Motor Vehicle Tax. The income from this item is 5. 21 crores and the expenditure on roads for 63-64 is 7.01 crores. So, it is not correct to say that we are not spending; we are spending much more. As far as the roads to be constructed by the Local Boards are concerned, I replied some time back that Government has appointed a Committee and when we receive the report of that Committee, necessary arrangements would be made for the finances for the works to be undertaken by the Local Boards. Let the Hon'ble Member wait.

One of the Members suggested that the classification of the Social Welfare Department under Miscellaneous is not correct and its stature has been brought down. Sir, the expenditure on the Welfare of Scheduled Tribes and Castes and other Backward classes in booked under a separate minor Head under the major Head 39. This is the classification adopted in all the tates and prescribed by the Controller and Auditor General of India. So far, it was not only a minor Head but it was a sub-Head of the Minor Head. Now we have upgraded it and given it a better status.

Sir, S. M. Krishna wanted a specific reply regarding the number of gold-smiths appointed or employed in some of the factories. I tried to get the correct information but it was not possible for me. I will try to supp y it during the course of three or 4 days. Sir, these are the only points which I wanted to clarify.

Sri D. M. SIDDAIAH.—Sir, Demand No. 36 Major Head says about Privy Purses and Allowances to Indian Rules. The Hon'ble Minister for Finance just now said that Privy Purse did not come under this Demand. May I know the meaning of this Head?

Sri B. D. JATTI.—Sir, there will be certain items to be disbursed.

ಶ್ರೀ ಎಸ್. ಗೋಪಾಲಗೌಡ.—ಮಂತ್ರಿಗಳು ಚರ್ಚೆಮಾಡಬಾರದು ಎಂದು ಹೇಳಿದರು "This does not however, prevent discussion in the Legislature......" ಎಂದಿದೆ. ಇದರಬಗ್ಗೆ ಅನುಮಾನವಿಲ್ಲ, ಚರ್ಚೆಮಾಡಬಹುದು. ಸಂಬಳ ತೆಗೆದುಕೊಳ್ಳುತ್ತಿಲ್ಲ ಎಂದು ಹೇಳುತ್ತೀರಿ. ರಾಜಪ್ರಮುಖರಾಗಿ ಸಂಬಳವೇನೂ ತೆಗೆದುಕೊಳ್ಳುತ್ತಿಲ್ಲ ವೆಬುಂದು ಗೊತ್ತಾಗಿಲ್ಲ. ಇರುವ ನಿಜವಾದ ಸಂಗತಿಯನ್ನು ತಿಳಿಸಬೇಕು. ರಾಜಪ್ರಮುಖರಾಗಿ ಏನಾದರೂ ತೆಗೆದುಕೊಳ್ಳುತ್ತಿರುವರೆ ಅಥವಾ ಗವರ್ನರಾಗಿ ತೆಗೆದುಕೊಳ್ಳುತ್ತಿರುವರೆ ಎಂಬುದನ್ನು ತಿಳಿಸಬೇಕು.

Sri B. D. JATTI.—As Governor, the present Highness, the Maharaja of Mysore, is not getting salary. He does not continue to be Rajpramuksh. It was in the past he was Rajapramukh. Today he continues to be the Highness the Maharaja of Mysore. According to the agreement he entered into with the Government of India, the prive purse is fixed and it is the responsibility of the Government of India.

†ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ ವಸತಿ ಮತ್ತು ಸಾರಿಗೆಶಾಖೆಗಳ ಮಂತ್ರಿಗಳು).—ಸ್ವಾಮಿ, ನನ್ನ ಇಲಾಖೆಗೆ ಸಂಬಂಧಪಟ್ಟಹಾಗೆ ಮಾನ್ಯಸದಸ್ಯರನೇಕರು ಮಾತನಾಡುತ್ತಾ ಕೆಲವು ರಚನಾತ್ಮಕವಾದ ಟೀಕೆಗಳನ್ನು ಮಾಡಿದ್ದಾರೆ. ಇರುವ ಲೋಪದೋಷಗಳ ಬಗ್ಗೆ ವಿಷಯಗಳನ್ನು ತಿಳಿಸಿದ್ದಾರೆ. ಅದಕ್ಕಾಗಿ ಮಾನ್ಯಸದಸ್ಯರೆಲ್ಲರಿಗೂ ಅಭಿನಂದಿಸುತ್ತೇನೆ. ಬಹಳಪ್ರಾಮುಖ್ಯವಾಗಿ ಹೆಚ್ಚುಕಡಮೆ ಎಲ್ಲ ಮಾನ್ಯಸದಸ್ಯರು ಮಾತನಾಡುವ ಕಾಲದಲ್ಲಿ ಕೆಲವು ವಿಷಯಗಳನ್ನು ಎತ್ತಿಹೇಳಿದ್ದಾರೆ, ಅದರಲ್ಲಿಯೂ ಪ್ರಪ್ರಥಮವಾಗಿ ಉದ್ಯೋಗ ವಿನಿಮಯ ಇಲಾಖೆಬಗ್ಗೆ, ದೇಶದಲ್ಲಿರುವ ನಿರುದ್ಯೋಗ ಸಮಸ್ಯೆಯಬಗ್ಗೆ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ನಮ್ಮ ದೇಶದ ನಿರುದ್ಯೋಗ ಸಮಸ್ಯೆಯು ಯಾವಪ್ರಮಾಣದಲ್ಲಿದೆ ಎಂಬ ವಿಚಾರವನ್ನು ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ರಚಿಸುವಾಗ ಕೊಟ್ಟಿರುವ ಹೇಳಿಕೆಯಿಂದ ತಿಳಿಯಬಹುದು ಮೂರನೆಯ ಯೋಜನೆ ಒಂದನೇ ವಾಲ್ಯೂಂ ಎಲ್ಲ ಮಾನ್ಯಸದಸ್ಯರಿಗೂ ಬಹುಶಃ ದೊರೆತಿದೆಯೆಂದು ಭಾವಿಸುತ್ತೇನೆ. ಅದು ಪ್ರತ್ಯೇಕವಾಗಿ ಉದ್ಯೋಗದ ವಿಷಯಕ್ಕೆ ಸಂಬಂಧಪಟ್ಟಂತೆ ಆರನೆಯ ಅಧ್ಯಾಯವಿದೆ. ಅದರಲ್ಲಿ ನಿರುದ್ಯೋಗದ ಸಮಸ್ಯೆಯನ್ನು ಪಂಚವಾರ್ಷಿಕ ಯೋಜನೆಯನ್ನು ತಯಾರುಮಾಡುವಾಗ ಯಾವ ರೀತಿಪರಿಗಣನೆಗೆ ತೆಗೆದುಕೊಂಡು ಯೋಜನೆ ತಯಾರಿಸಿದರು ಎಂಬುದು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಮೊದಲನೆಯ ಪಂಚವಾರ್ಷಿಕ ಯೋಜನೆ ತಯಾರಿಸುವುದಕ್ಕೆ ಪೂರ್ವಭಾವಿಯಾಗಿ ನಮ್ಮ ಸಂಸ್ಥಾನದಲ್ಲಿ ನಿರುದ್ಯೋಗ ಸಮಸ್ಯೆಯಿಂದ ತೊಂದರೆಗೀಡಾಗಿರುವ ಅಥವಾ ಉದ್ಯೋಗವಿಲ್ಲದಿರುವ ಜನರು ಎಷ್ಟಿರಬಹುದು ಎಂದು ಒಂದು ರಫ್ ಎಸ್ಟಿಮೇಟ್ ಮಾಡಲಾಯಿತು, ಅದನ್ನು ಪ್ಲಾನ್‌ನಲ್ಲಿ ಹೇಳಿದೆ. ಅದು ಬಹಳಕರಾರುವಾಕ್ಕು ಎಂದು ಹೇಳುತ್ತಿಲ್ಲ. ಅದರ ಪ್ರಕಾರ ಸುಮಾರು 2 ಲಕ್ಷದ 24 ಸಾವಿರಜನರಿಗೆ ಉದ್ಯೋಗವಿರಲಿಲ್ಲ ಅದರಲ್ಲಿ 15ವರ್ಷಕ್ಕೆ ಮೇಲ್ಪಟ್ಟಿರುವ ಹೆಂಗಸರು ಮತ್ತು ಗಂಡಸರ ಸಂಖ್ಯೆಸೇರಿದೆ. ಅದನ್ನು ಗಮನಿಸಿ ಎರಡನೆಯ ಪಂಚವಾರ್ಷಿಕ ಯೋಜನೆಕಾಲದಲ್ಲಿ ಎಷ್ಟು ಸಂಖ್ಯೆಯ ನಿರುದ್ಯೋಗಿಗಳಿದ್ದಾರೆ, ಎಂದು ಲೆಕ್ಕಹಾಕಿದರು. ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಸುಮಾರು 1956ರಿಂದ 1961ರವರೆಗೆ ನಿರುದ್ಯೋಗಿಗಳಾಗಿರುವ ಸುಮಾರು 5,17,000 ಜನರನ್ನು ಸೇರಿಸಿದರೆ ಸುಮಾರು 7,41,000 ಜನರಿಗೆ ಉದ್ಯೋಗ ಒದಗಿಸಬೇಕಾಗುತ್ತದೆ ಎಂದು ಲೆಕ್ಕಹಾಕಿದರು. ಎರಡನೆಯ ಯೋಜನೆ ಕಾರ್ಯಗತ ಮಾಡುವುದರಿಂದ ಎಷ್ಟು ಮುಂದಿಗೆ ಉದ್ಯೋಗ ಸಿಕ್ಕಬಹುದು ಎಂದು ಲೆಕ್ಕಾಚಾರಮಾಡಿ ಸುಮಾರು 4,10,000 ಜನರಿಗೆ ದೊರೆಯಲು ಸಾಧ್ಯವೆಂದು ಗೊತ್ತುಮಾಡಿದರು, ಎರಡನೆಯ ಯೋಜನೆಯ ಅಂತ್ಯಕ್ಕೆ ಸುಮಾರು 3,31,000 ಜನರು ನಿರುದ್ಯೋಗಿಗಳು ಉಳಿಯುವರು. ಮೂರನೆಯ ಯೋಜನೆಯಲ್ಲಿ 9,39,000 ಜನರಿಗೆ ಉದ್ಯೋಗ ಕಲ್ಪಿಸಬೇಕು. ಅಂದರೆ ಒಟ್ಟು 1,270,000 ಜನರಿಗೆ ಸಂಸ್ಥಾನದಲ್ಲಿ ಮೂರನೆಯಯೋಜನೆಯ ಅಂತ್ಯಕ್ಕೆ ಉದ್ಯೋಗ ಕಲ್ಪಿಸಬೇಕು, ಈ ಲೆಕ್ಕಾಚಾರ ಮಾನ್ಯಸಭೆಯ ಮುಂದಿಡುವಾಗ ಈ ಸಮಸ್ಯೆ ಎಷ್ಟು ಬೃಹದಾಕಾರವಾಗಿದೆಯೆಂಬುದನ್ನು ಅರಿಕೆಮಾಡುತ್ತಿದ್ದೇನೆ ಇದರಲ್ಲಿ ಉದ್ಯೋಗ ಕಲ್ಪಿಸುವುದಕ್ಕೆ ಕನ್ಸ್ಟ್ರಕ್ಷನ್ ಎಂಪ್ಲಾಯ್‌ಮೆಂಟ್ ಮತ್ತು ಕಂಟಿನ್ಯೂಯಿಂಗ್ ಎಂಪ್ಲಾ

ಮೆಂಟ್ ಎಂದು ಎರಡು ಭಾಗಮಾಡಿದ್ದಾರೆ. ತಾತ್ಕಾಲಿಕವಾಗಿ ದೊರೆಯುವ ಉದ್ಯೋಗಗಳು ದೊಡ್ಡ ದೊಡ್ಡ ಜಲಾಶಯಗಳು ಮತ್ತು ಕೆರೆಗಳನ್ನು ಕಟ್ಟುವುದು, ರಸ್ತೆನಿರ್ಮಾಣ, ಕಟ್ಟಡಗಳ ನಿರ್ಮಾಣ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಿದೆ. ಇದು ಕನ್ಸ್ಟ್ರಕ್ಷನ್ ಎಂಪ್ಲಾಯ್‌ಮೆಂಟ್ ಸರ್ಕಾರದಲ್ಲಿ ಅಥವಾ ಕಾರ್ಖಾನೆಗಳು ಮುಂತಾದುವುಗಳಿಗೆ ಸಂಬಂಧಪಟ್ಟ ಉದ್ಯಮಗಳಲ್ಲಿರುವುದು ಕಂಟಿನ್ಯೂಯಿಂಗ್ ಎಂಪ್ಲಾಯ್‌ಮೆಂಟ್. ಮೂರನೆಯ ಯೋಜನೆಯಲ್ಲಿ ಸುಮಾರು 4,57,000 ಜನರಿಗೆಉದ್ಯೋಗ ಕಲ್ಪಿಸುವುದಕ್ಕೆ ಸಾಧ್ಯವಿದೆ, ಉಳಿಯುವ ಜನರಿಗೇನು ಮಾಡಬೇಕೆಂಬುದು ಒಂದು ಸಮಸ್ಯೆಯಾಗಿದೆ. ಖಾಸಗೀ ವಲಯದಲ್ಲಿ ಸಂಸ್ಥೆಗಳಲ್ಲಿ, ಸಂಘಗಳಲ್ಲಿ, ವ್ಯವಸಾಯದಲ್ಲಿ ಎಷ್ಟು ಜನರಿಗೆ ಉದ್ಯೋಗ ಸಿಕ್ಕಬಹುದೆಂಬುದನ್ನು ನಾನು ಹೇಳಿದಲೆಕ್ಕದಲ್ಲಿ ಸೇರಿಸಿಲ್ಲ. ಇದನ್ನೆಲ್ಲ ಗಮನಿಸಿದರೆ ಹೆಚ್ಚು ಜನರಿಗೆ ಕೆಲಸ ದೊರೆಯಬಹುದು ಹಾಗೆಸಿಕ್ಕಿದರೂ ಲಕ್ಷಾಂತರ ಜನರು ಕೆಲಸವಿಲ್ಲದೆ ಉಳಿಯುತ್ತಾರೆ. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಆದರೆ ಈ ಸಮಸ್ಯೆಯನ್ನು ಇಂಡಿಯಾದೇಶದಲ್ಲಿ ಏಕಕಾಲದಲ್ಲಿ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ ಎಂಬಮಾತನ್ನು ಒಪ್ಪುತೀರೆಂದು ಭಾವಿಸುತ್ತೇನೆ.

ಈ ಸಮಸ್ಯೆ ಬಹಳ ಜಟಿಲವಾದದ್ದು ಮತ್ತು ಬಗೆಹರಿಸಿದ ಹಾಗೆಲ್ಲಾ ಬೆಳೆದುಕೊಂಡು ಹೋಗತಕ್ಕ ಸಮಸ್ಯೆ. ಜನಸಂಖ್ಯೆ ಬೆಳೆದ ಹಾಗೆಲ್ಲಾ ನಿರುದ್ಯೋಗ ಸಮಸ್ಯೆಯೂ ಕೂಡ ಅದರ ಜೊತೆಯಲ್ಲೇ ಬೆಳೆದು ಬರುತ್ತಾ ಇದೆ. ಒಂದು, ಎರಡು, ಪ್ಲಾನುಗಳಾಗಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಈಗ ನಾವಿದ್ದೇವೆ ಇದನ್ನು ಸಂಪೂರ್ಣವಾಗಿ ಬಗೆಹರಿಸುತ್ತೇವೆ ಎಂದು ಹೇಳತಕ್ಕ ಸಾಹಸ, ಸಾಧ್ಯವಿಲ್ಲದ ಮಾತು. ದೇಶದಲ್ಲಿ ನಮ್ಮ ಆರ್ಥಿಕ ಸ್ಥಿತಿ ಬೆಳೆದ ಹಾಗೆಲ್ಲಾ, ಹೆಚ್ಚು ಹೆಚ್ಚು ಖರ್ಚು ಆದಹಾಗೆಲ್ಲಾ, ಹೆಚ್ಚು ಹೆಚ್ಚು ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ ಹಾಗೆಲ್ಲಾ, ಸರ್ಕಾರ ದುಡ್ಡು ಕೊಟ್ಟು ಖಾಸಗೀ ಸಂಸ್ಥೆಗಳ ಮುಖೇನ ಖರ್ಚುಮಾಡಿದ ಹಾಗೆಲ್ಲಾ ಉದ್ಯೋಗ ಸಮಸ್ಯೆಯೂ ಕೂಡ ಬಗೆಹರಿಯುತ್ತಾ ಬರುತ್ತಿದೆ. ಏಕ ಕಾಲಕ್ಕೆ ಬಗೆಹರಿಯುವುದಿಲ್ಲ. ಇದು ಒಂದರ ಜೊತೆಗೆ ಇನ್ನೊಂದು ಹೋಗತಕ್ಕ ಸಮಸ್ಯೆಯಾದ್ದರಿಂದ ಒಂದೇ ಕಾಲಕ್ಕೆ ತೀರ್ಮಾನವಾಗುತ್ತದೆ ಎಂಬ ವಿಚಾರ ಇಲ್ಲ. ಯಾವ ಪಾಶ್ಚಾತ್ಯ ದೇಶಗಳಲ್ಲಾಗಲೀ, ಇತರ ದೇಶಗಳಲ್ಲಾಗಲೀ ನಿರುದ್ಯೋಗ ಸಮಸ್ಯೆ ಇಲ್ಲವೆಂದಲ್ಲ ತಾವು ತಿಳಿದಿಲ್ಲ. ಯಾವುದೇ ಮುಂದುವರಿದ ದೇಶದಲ್ಲಿ ಕೂಡ, ಎಷ್ಟೇ ಐಶ್ವರ್ಯ ಹೆಚ್ಚಾಗಿದ್ದರೂ, ಎಷ್ಟೇ ಕೈಗಾರಿಕೋದ್ಯಮಗಳಲ್ಲಿ ಮುಂದುವರಿದಿದ್ದರೂ ಸಹ ಅಂಥಾ ದೇಶಗಳಲ್ಲಿ ಆಗಿಂದಾಗ್ಯೆ ನಿರುದ್ಯೋಗ ಸಮಸ್ಯೆ ಬರುತ್ತಾ ಇರುತ್ತದೆ. ನಮ್ಮ ದೇಶದಲ್ಲಿ ಹೆಚ್ಚು ಬೃಹದಾಕಾರವಾಗಿ ಕಾಣುತ್ತಾ ಇದೆ, ನಮಗೆ. ಆದ್ದರಿಂದ ನಾವು ಹಾಕತಕ್ಕ ಯೋಜನೆಗಳಿಗೆ ಎಷ್ಟು ದುಡ್ಡನ್ನು ಖರ್ಚುಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯ ಇದೆ ಅಷ್ಟು ಪ್ರಮಾಣದಲ್ಲಿ ಮಾತ್ರ ಇದು ಬಗೆಹರಿಯುತ್ತಾ ಹೋಗಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೇಂದ್ರ ಸರ್ಕಾರದವರು ಸ್ಥಾಪನೆ ಮಾಡಿರುವ ಕೈಗಾರಿಕೆಗಳಲ್ಲಿ ನಮ್ಮವರ ಪ್ರಾತಿನಿಧ್ಯ ಕಡಮೆಯಾಗಿದೆ ಎಂದು ಹೇಳುತ್ತಾರೆ. ಮೈಸೂರು ದೇಶದಲ್ಲಿ ಸ್ಥಾಪನೆಯಾಗಿರುವ ಆ ಕೈಗಾರಿಕೆಗಳಲ್ಲಿ ಆಂಧ್ರದವರು, ಕೇರಳದವರು, ನಮ್ಮವರು ಎಷ್ಟು ಜನ ಇದ್ದಾರೆ ಎಂಬ ಅಂಕಿ ಅಂಶ ಸಂಗ್ರಹಮಾಡಿದ್ದೀರಾ!

ಶ್ರೀ ಡಿ. ದೇವರಾಜ ಅರಸ್.—ಶ್ರೀಮಾನ್ ರೇವಣ್ಣಸಿದ್ದಪ್ಪನವರು ಹೇಳತಕ್ಕ ಮಾತು ಆಗಿಂದಾಗ್ಯೆ ಈ ಮಾನ್ಯ ಸಭೆಯಲ್ಲಿ ಪ್ರಸ್ತಾಪವಾಗಿದೆ. ಅದಕ್ಕೆ ಸೂಕ್ತ ಉತ್ತರ ಕೂಡ ಸರ್ಕಾರದಿಂದ ದೊರೆತಿದೆ. ತಾವು ಹೇಳುವ ಹಾಗೆ ನಮ್ಮ ದೇಶದಲ್ಲಿರತಕ್ಕ ಆ ಕಾರ್ಖಾನೆಗಳಲ್ಲಿ ನಮ್ಮ ಜನರಿಗೆ ಹೆಚ್ಚು ಕೆಲಸ ದೊರೆಯುವಂತಾಗಬೇಕೆಂಬ ಮಾತು ಒಪ್ಪಿದ್ದೇನೆ. ಆದರೆ ಹೆಚ್ಚು ಪ್ರಮಾಣದಲ್ಲಿ ಯಾವರೀತಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದರೆ ಇಂಡಿಯಾ ಸರ್ಕಾರದವರೊಡನೆ ವ್ಯವಹರಿಸಿ ಅವರ ಮುಖಾಂತರ ಸ್ಥಾಪನೆಯಾಗಿರತಕ್ಕ ಆ ಕೈಗಾರಿಕೆಗಳಲ್ಲಿ ನಮ್ಮ ಜನರನ್ನು ಹೆಚ್ಚಿಗೆ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುತ್ತಾ ಇದ್ದೇವೆ, ಎಂಬ ವಿಷಯವನ್ನು ತಮ್ಮ ಮುಂದೆ ಇಡುತ್ತಾ ಇದ್ದೇನೆ.

ಎರಡನೆಯದಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಕೆಲಸ ಮಾಡುತ್ತಾ ಇದೆ. ಅದರ ಮುಖೇನ ಕೈಗಾರಿಕೆಗಳಲ್ಲಿ ಯಾವಕಾಲದಲ್ಲಿ ಬೇಕೋ ಆ ಕಾಲದಲ್ಲಿ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಆ ಕಾಲದಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಅವರನ್ನು ಒತ್ತಾಯಪಡಿಸಿ ಅಲ್ಲಿಂದ ಜನರ ಪಟ್ಟಿಯನ್ನು ತರಿಸಿಕೊಂಡು ಇವರಿಗೇ ಕೊಡಬೇಕೆಂದು ಹೇಳಿ ಕಾನೂನು ರೀತ್ಯಾ ಅವರ ಮೇಲೆ ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ. ಆದರೆ persuation ಅಂತ ಏನು ಹೇಳುತ್ತೇವೆ ಆ ರೀತಿ ಅವರನ್ನು ಕೇಳಿಕೊಂಡು ಇಂಡಿಯಾ ಸರ್ಕಾರದ ಮುಖೇನ ಸ್ವಲ್ಪಮಟ್ಟಿಗೆ ನಮ್ಮ ಜನರನ್ನು ಹೆಚ್ಚಿನ ಪ್ರಮಾಣದಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವಂತೆ ಮಾಡಲು ಪ್ರಯತ್ನ ನಡೆಯುತ್ತಾ ಇದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ವಿಷಯದಲ್ಲಿ ಶ್ರೀಮಾನ್ ಗೋಪಾಲಗೌಡರು ಒಂದು

(ಶ್ರೀ ಡಿ. ದೇವರಾಜ ಅರಸ್)

ಮಾತನ್ನು ತಿಳಿಸಿದರು ಏನೆಂದರೆ, ಎಕ್ಸ್‌ಛೇಂಜ್ ಎಂದರೆ ಬರೀ ಲೆಕ್ಕ ಇಟ್ಟುಕೊಳ್ಳುವುದಕ್ಕೆ ಇರುವ ಸಂಸ್ಥೆಯಾಗಿದೆ, ಆ ರೀತಿ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ ಅದು ವ್ಯಸನಕರವಾದದ್ದು ಎಂದು. ನಾನು ಇದ್ದ ವಿಚಾರ ಏನಿದೆ ಎಂಬುದನ್ನು ಇದ್ದದ್ದು ಇದ್ದ ಹಾಗೆ ತಿಳಿಸುತ್ತಾ ಇದ್ದೇನೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಇರುವುದು ಎಲ್ಲ ಜನರಿಗೂ ಉದ್ಯೋಗ ಕಲ್ಪಿಸುವುದಕ್ಕೆ ಎಂದರೆ ಅದು ತಪ್ಪಾಗುತ್ತದೆ. ಕಾನೂನು ಇರುವುದನ್ನು ಕೂಡ ಈ ಸಭೆಯ ಗಮನಕ್ಕೆ ತರುತ್ತಾ ಇದ್ದೇನೆ. 1959 ರ ಕಾನೂನಿನ ಪ್ರಕಾರ ಯಾವುದೇ ಒಂದು ಸಂಸ್ಥೆ ಸರ್ಕಾರ ಆಗಲೀ ಅಥವಾ ಖಾಸಗೀ ಸಂಸ್ಥೆಯಾಗಲೀ ನೋಟಿಫೈ ಮಾಡಬೇಕು ಎಂದಾಗ ಕಡ್ಡಾಯವಾಗಿ ಮಾಡಬೇಕು ಎಂಬುದನ್ನು ಹೇಳಿದ್ದಾರೆ. ನೋಟಿಫೈ ಮಾಡಿದಾಕ್ಷಣಕ್ಕೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಹೆಸರು ಹಾಕಿಸಿರುವ ನಿರುದ್ಯೋಗಿ ಜನರಿಗೇ ಅವರು ಕೆಲಸ ಕೊಡಬೇಕು, ಅವರನ್ನೇ ಸೇರಿಸಿಕೊಳ್ಳಬೇಕು ಎಂದು ಕಡ್ಡಾಯ ಮಾಡತಕ್ಕ ಯಾವ ಕಲಮೂ ಆ ಕಾನೂನಿನಲ್ಲಿ ಇಲ್ಲ. ಅದರೂ ನಾವು ಸರ್ಕಾರದಲ್ಲಿ ಯಾವ ವೇಕೆನ್ಸಿಗೆ ತಾತ್ಕಾಲಿಕವಾಗಿ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ನೇಮಕ ಮಾಡಿಕೊಳ್ಳುತ್ತಾ ಇದ್ದೇವೆ ಅದಕ್ಕೆ ಸರ್ಕಾರದವರು ಕಡ್ಡಾಯವಾಗಿ ಸಂಬಧಪಟ್ಟ ಇಲಾಖೆಗಳಿಗೆ ಒಂದು ಆರ್ಡರ್ ಹೊರಡಿಸಿ ನೋಟಿಫೈ ಮಾಡುವುದರ ಜೊತೆಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮುಖೇನ ಜನರ ಹೆಸರನ್ನು ತರಿಸಿಕೊಂಡು ಅವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ನೇಮಕ ಮಾಡಬೇಕು. ಆ ರೀತಿಯಾಗಿ ಮಾಡದಿದ್ದರೆ ತಕ್ಸೀರಾಗುತ್ತದೆ ಎಂಬ ಆಜ್ಞೆ ಜಾರಿಮಾಡಿದ್ದೇವೆ. ಈ ರೀತಿ ಒಂದು ಹೆಜ್ಜೆ ಮುಂದೆ ಹೋಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಹಕಾರಿಯಾಗಲಿ, ಅಲ್ಲಿ ರಿಜಿಸ್ಟರ್ ಮಾಡಿಸಿದಂಥಾವರಿಗೆ ಅವಕಾಶ ದೊರೆಯಲಿ ಎಂಬ ಉದ್ದೇಶದಿಂದ ಅದನ್ನು ಮಾಡಿದ್ದೇವೆ. ಈಗ ತಮಗೆ ಅರ್ಥವಾಗುತ್ತದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಎಂದರ ಜನರಿಗೆ ಉದ್ಯೋಗವನ್ನು ಒದಗಿಸುವುದಕ್ಕೆ ಇರತಕ್ಕ ಸಂಸ್ಥೆ ಅಲ್ಲ ಎನ್ನುವುದು. ಹೌದು ಇದರಲ್ಲಿ ನಮ್ಮ ದೇಶದಲ್ಲಿರತಕ್ಕ ಈ ನಿರುದ್ಯೋಗ ಸಮಸ್ಯೆಯನ್ನು ತಿಳಿಯಬೇಕಾದರೆ ಯಾರಿಗೋ ಒಬ್ಬರಿಗೆ ಇದನ್ನು ಒಪ್ಪಿಸಿ ರಿಜಿಸ್ಟರುಗಳನ್ನಿಟ್ಟು ಬಂದವರ ಹೆಸರು ಗುರುತುಮಾಡಿಕೊಳ್ಳಿ ಎಂದರೆ ಸಾಧ್ಯವಾಗುತ್ತಿತ್ತೇ? ಎಂಬುದನ್ನು ಶ್ರೀಮಾನ್ ಗೋಪಾಲಗೌಡರು ಯೋಚನೆ ಮಾಡಬೇಕು. ಎಲ್ಲರೂ ಹೋಗಿ ರಿಜಿಸ್ಟರ್ ಮಾಡಿಸಿಕೊಳ್ಳುವುದಕ್ಕೆ ಇಷ್ಟ ಪಡುವುದಿಲ್ಲ. ಅದರಿಂದ ಸರಿಯಾದ ಲೆಕ್ಕಾಚಾರ ಸಿಕ್ಕುತ್ತಾ ಇರಲಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಪ್ರತಿಯೊಂದು ಊರಿನಲ್ಲೂ ಇವತ್ತಿನ ದಿವಸ ಪೋಸ್ಟ್ ಆಫೀಸು ಇದೆ. ರಿಜಿಸ್ಟರ್ ಇಟ್ಟು ಒಂದಾಣೆ ಸ್ಟ್ಯಾಂಪ್ ಹಚ್ಚಿ ಉದ್ಯೋಗ ಇಲ್ಲ ಎಂದು ಬರೆಸಬೇಕು ಎಂದರೆ ಬರೆಸಿಕೊಡಬಹುದು ಅಷ್ಟೆ.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳಿದಷ್ಟು ಸುಲಭವಾಗಿದ್ದಿದ್ದರೆ, ಇಂಟರ್‌ನ್ಯಾಷನಲ್ ಲೇಬರ್ ಕಾನ್‌ಫರೆನ್ಸ್‌ನಲ್ಲಿ ತೀರ್ಮಾನವಾಗಿರತಕ್ಕ ಠರಾವನ್ನು ಅನುಸರಿಸಿ ಅದರಂತೆ ಕೆಲವು ಲೇಬರ್‌ಗೆ ಸಂಬಂಧಪಟ್ಟ ಹಾಗೆ ಕಾನೂನು ಆಗುತ್ತಾ ಇವೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಯಾವರೀತಿ ಕೆಲಸ ಮಾಡಬೇಕೆಂಬುದೂ ಕೂಡ ಅದರಲ್ಲಿ ಇದೆ. ಅದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆ ಪ್ರಕಾರ ರಿಜಿಸ್ಟರ್ ಇಟ್ಟರೆ ತಾವು ಹೇಳುವಂತೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತಾ ಇದ್ದೇನೆ.

ಶ್ರೀಮಾನ್ ಸಿದ್ದಯ್ಯನವರು ಮತ್ತು ಕೆಲವು ಸ್ನೇಹಿತರು ಎಕ್ಸ್‌ಛೇಂಜಸ್ ಹೆಚ್ಚು ಮಾಡಬೇಕೆಂಬ ವಿಚಾರ ಪ್ರಸ್ತಾಪ ಮಾಡಿದರು. ಈಗಿರತಕ್ಕದ್ದು ಪ್ರತಿ ಜಿಲ್ಲಾ ಹೆಡ್ ಕ್ವಾರ್ಟರ್ಸ್‌ನಲ್ಲೂ ಇದೆ. ಒಟ್ಟು 19 ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ಗಳಿವೆ. ಮತ್ತೆ ಸಬ್‌ಡಿವಿಜನ್ ಮಾಡಬೇಕೆಂದರೆ, ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರುವ ರೀತಿಯಲ್ಲಿ ಇಷ್ಟಿಷ್ಟು ಜನಸಂಖ್ಯೆಗೆ ಇಷ್ಟಿಷ್ಟು ಎಕ್ಸ್‌ಛೇಂಜಸ್ ಇರಬೇಕೆಂದು ಗೊತ್ತುಮಾಡಿದ್ದೇವೆ. ಒಂದುವೇಳೆ ಈ ನಿರುದ್ಯೋಗ ಸಮಸ್ಯೆಯ ರೂಪುರೇಖೆಗಳನ್ನು ಆಧಾರವಾಗಿಟ್ಟುಕೊಂಡು ಹೆಚ್ಚಿಸಬೇಕೆಂದರೆ ಒಟ್ಟಿನಲ್ಲಿ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡೋಣ. ಸಧ್ಯದಲ್ಲಿರತಕ್ಕ 19 ಸಂಖ್ಯೆ ಏನಿದೆ ಇದರಿಂದಲೇ ಸಾಕಾದಷ್ಟು ಕೆಲಸ ಆಗುತ್ತಾ ಇದೆ. ಎಕ್ಸ್‌ಛೇಂಜಸ್ ಇಲ್ಲದೇ ತಮ್ಮ ಹೆಸರನ್ನೂ ರಿಜಿಸ್ಟರ್ ಮಾಡುವುದಕ್ಕೆ ಆಗುತ್ತಿಲ್ಲ. ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಕೆಲವರು ಹೇಳಿದ್ದೇನೆಂದರೆ ರಿಜಿಸ್ಟರ್ ಮಾಡಿಸುವುದಕ್ಕೆ ಬಹಳ ವರ್ಷವಾಗುತ್ತಿದೆ ಎಂದು ಒಂದೊಂದುಸಾರಿ ಸುಮಾರು ನೂರಾರು ಜನರು ಹೋದಾಗ ನಿಧಾನವಾದೀತೇ ಹೊರತು ವರ್ಷಗಟ್ಟಲೆ ರಿಜಿಸ್ಟ್ರೇಷನ್‌ಗೆ ಕಾಯಬೇಕಾದ ಪ್ರಮೇಯ ಬಂದಿಲ್ಲ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಒಂದುಸಾರಿ ರಿಜಿಸ್ಟ್ರೇಷನ್ ಮಾಡಿದಂಥ ವ್ಯಕ್ತಿಗೆ ವರ್ಷ, ಎರಡು ವರ್ಷ, ಮೂರು ವರ್ಷವಾದರೂ ಕೆಲಸ ಸಿಕ್ಕದೇ ಇರತಕ್ಕ ಸಂದರ್ಭ ಇರಬಹುದು ಇದರಲ್ಲಿ ಎರಡು ವಿಚಾರಗಳಿವೆ. ಒಂದು ಮಾನ್ಯ ಸದಸ್ಯರು ಹೇಳುವಾಗ ಏನು ಹೇಳಿದರು ಎಂದರೆ,

ಜನರು ರಿಜಿಸ್ಟರ್ ಮಾಡಿದಮೇಲೆ ಯಾರ ಹೆಸರು ಕೊನೆಯಲ್ಲಿ ರಿಜಿಸ್ಟರ್ ಆಗಿರುತ್ತದೆಯೋ ಅವರಿಗೆ ಮುಂಚಿತವಾಗಿ ರಿಜಿಸ್ಟರ್ ಮಾಡಿದವರಿಗಿಂತ ಮೊದಲು, ಮೋಸ ಆಗುವ ರೀತಿಯಲ್ಲಿ, ತಮ್ಮ ಯಾವುದೋ ಒಂದು ಪ್ರಭಾವವನ್ನು ಬೀರಿ ಅಥವಾ ಇನ್ಫ್ಲುಯೆನ್ಸ್ ಉಳ್ಳವರಾದ ರಾಜಕಾರಣಿಗಳ ಮುಖೇನ ಅಥವಾ ಗೊತ್ತಿರತಕ್ಕ ಜನಗಳ ಮುಖೇನ ಪ್ರಭಾವ ಬೀರಿ ಮುಂಚಿತವಾಗಿ ತಮಗೆ ಕೆಲಸ ಸಿಕ್ಕುವ ರೀತಿಯಲ್ಲಿ ಮಾಡಿಕೊಳ್ಳುತ್ತಾರೆ ಎಂದರು. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಅದಕ್ಕೆ ಅಧಿಕಾರಿಗಳು ಕೆಲವರು ಸಹಾಯ ಮಾಡುತ್ತಾರೆ ಎಂಬ ವಿಚಾರ ಮಾನ್ಯ ಸದಸ್ಯರು ಹೇಳಿದ್ದಾರೆ.

ನನಗೂ ಅಲ್ಲಲ್ಲೇ ಕೆಲವು ಕಡೆ ಈ ರೀತಿ ಆಗಿದೆ ಎಂಬ ದೂರುಗಳು ಬಂದಿದ್ದವು. ಅಂಥ ಒಂದೆರಡು ದೂರುಗಳನ್ನು ವಿಚಾರ ಮಾಡಿ ಅಲ್ಲಿ ತಪ್ಪಾಗಿದ್ದಂಥ ಒಂದೆರಡು ವಿಷಯಗಳನ್ನು ಸರಿಯಾಗಿ ತಿದ್ದಿಸಿದ್ದೇನೆ. ಇನ್ನು ಒಂದೆರಡು ದೂರುಗಳನ್ನು ಕೆಲವು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದರು. ಪರಿಶೀಲನೆ ಮಾಡಿ ನೋಡಿದರಲ್ಲಿ ಆ ಸದಸ್ಯರು ಆ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ದೂರನ್ನು ತಂದಿರುತ್ತಾರೆಂತ ಗೊತ್ತಾಯಿತು-ಆ ರೀತಿ ಪರಿಶೀಲನೆಯಿಂದ ಗೊತ್ತಾಯಿತು. ಹೀಗೆ ಯಾವುದಾದರೂ ಸಂದರ್ಭದಲ್ಲಿ ಮೋಸಕೃತ್ಯ ನಡೆದಿದೆಯೆಂದು ಮಾನ್ಯ ಸದಸ್ಯರುಗಳು ನನ್ನ ಗಮನಕ್ಕೆ ತಂದರೆ ಅವರು ಅಂಥ ತಪ್ಪನ್ನೇ ಮಾಡಿದ್ದಾರೆಂದು ಕಂಡುಬಂದರೆ ಆ ಸಂಬಧಪಟ್ಟ ಅಧಿಕಾರಿಗಳಿಗೆ ಶಿಕ್ಷೆ ಮಾಡಿ ಅಂಥವರನ್ನು ಪುಟ್‌ಅಪ್ ಮಾಡೋಣ.

5-30 P.M.

ಇನ್ನು ಕೆಲವು ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆಂದರೆ ಕೆಲವು ಹೆಸರುಗಳನ್ನು ರಿಜಿಸ್ಟರ್ ಮಾಡಿ ಎಷ್ಟೋ ವರ್ಷಗಳಾದರೂ ಅವರಿಗೆ ಈ ಉದ್ಯೋಗ ದೊರೆಯುವುದು ತಡವಾಗುತ್ತಿದ್ದರೆ ಇನ್ನು ಕೆಲವರಿಗೆ ರಿಜಿಸ್ಟರ್ ಮಾಡಿಸಿಕೊಂಡ ಕೆಲವೇ ದಿನಗಳಲ್ಲಿ ಉದ್ಯೋಗ ದೊರೆತಿರುತ್ತವೆ ಎಂತ ಹೇಳಿದ್ದಾರೆ. ಇನ್ನು ಕೆಲವರು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಆಫೀಸುಗಳಲ್ಲಿ ಈ ಕ್ಯಾಂಡಿಡೇಟುಗಳು ಹೆಸರನ್ನು ರಿಜಿಸ್ಟರ್ ಮಾಡಿಸಲು ಬಹಳ ತಡವಾಗುತ್ತಿದೆ. ಅದಕ್ಕೆ ಇನ್ನು ಹೆಚ್ಚು ಅಧಿಕಾರಿಗಳನ್ನು ನೇಮಿಸಬೇಕೆಂದು ಹೇಳಿದ್ದಾರೆ. ಈ ದಿವಸ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಆಫೀಸುಗಳಲ್ಲಿ ರಿಜಿಸ್ಟರ್ ಮಾಡಿಕೊಳ್ಳುತ್ತಿರುವ ಕ್ರಮ ಈ ದಿವಸ ನೂರು ಜನ ರಿಜಿಸ್ಟ್ರೇಷನ್‌ಗೆ ಬಂದರೆ ಅವರನ್ನು ಸೀರಿಯಲ್ ಆಗಿ ಒಂದು, ಎರಡು, ಮೂರು ಎಂತ ರಿಜಿಸ್ಟರ್ ಮಾಡಿ ಅನಂತರ ಎರಡನೇ ಹೆಸರನ್ನು ರಿಜಿಸ್ಟರ್ ಮಾಡಲು ಬರತಕ್ಕವರಿಗೆ ಮತ್ತೆ ಹೊಸದಾಗಿ ಒಂದು, ಎರಡು ಎಂತ ಸೀರಿಯಲ್ ನಂಬರುಗಳನ್ನು ಹಾಕುತ್ತಿಲ್ಲ, ಹೀಗೆ ಮಾಡುವುದಿಲ್ಲ. ಅಲ್ಲಿರತಕ್ಕ ಪದ್ಧತಿ ಹೇಗಿದೆ ಎಂದರೆ-ಈ ಜಾಬುಗಳನ್ನೆಲ್ಲಾ ಕ್ಲರಿಕಲ್, ಟೆಕ್ನಿಕಲ್ ಎಂತ ಕ್ಯಾಟಿಗರೈಜ್ ಮಾಡುತ್ತಾರೆ. ಆದರೆ ಜನಗಳು ಅವರ ಹೆಸರನ್ನು ಈ ಕಛೇರಿಯಲ್ಲಿ ರಿಜಿಸ್ಟರ್ ಮಾಡಿಸಿದರೆ ಅವರಿಗೆ ಉದ್ಯೋಗ ದೊರೆತೇ ದೊರೆಯುತ್ತೆ ಎಂಬ ಗ್ಯಾರಂಟಿಯನ್ನೇನೂ ಅವರು ಕೊಡುವುದಿಲ್ಲ. ಆದರೆ ಹೀಗೆ ಜಾಬುಗಳನ್ನು ಕ್ಯಾಟಿಗರೈಜ್ ಮಾಡಿ ಆಯಾಯಾ ಜಾಬಿಗೆ ಹೆಸರುಗಳನ್ನು ರಿಜಿಸ್ಟರ್ ಮಾಡಲಾಗುತ್ತಿದೆ. ಕ್ಲರಿಕಲ್ ಕೇಡರಿಗೆ ಹೋಗಬೇಕೆಂದು ಹೆಸರನ್ನು ರಿಜಿಸ್ಟರು ಮಾಡಿಸಿರತಕ್ಕ ಒಬ್ಬ ವ್ಯಕ್ತಿಗೆ ಕೆಲಸಗಳು ಖಾಲಿ ಬೀಳದೆ ಸ್ವಲ್ಪ ತಡವಾಗಬಹುದು. ಟೆಕ್ನಿಕಲ್ ಟೈಪ್ ಜಾಬಿಗೆ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಂಡಿದ್ದವನಿಗೆ ಬೇಗ ಛಾನ್ಸ್ ದೊರೆಯಬಹುದು. ಆದರೆ ಕ್ಲರಿಕಲ್ ಕೇಡರಿನಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಂಡಿರತಕ್ಕ ವ್ಯಕ್ತಿ ಬಹು ದಿನಗಳಿಂದ ಕೆಲಸವಿಲ್ಲದೆ ಇದ್ದಾನೆಂದು ಅತನನ್ನು ಯಾವುದೋ ಒಂದು ಫೋರ್‌ಮ್ಯಾನ್ ಕೆಲಸಕ್ಕೆ ಹಾಕಲು ಸಾಧ್ಯವಿಲ್ಲ. ವಿಚಾರ ಹೀಗಿದ್ದರೂ ಸರಿಯಾಗಿ ತಿಳಿದುಕೊಳ್ಳದೆ ಕೆಲವರು ನನ್ನಲ್ಲಿಗೆ ಬಂದು ನೋಡಿ ನಮ್ಮ ಹುಡುಗನು ಹೆಸರನ್ನು ರಿಜಿಸ್ಟರ್ ಮಾಡಿಸಿ ಇಲ್ಲಿಗೆ ಮೂರು ವರ್ಷಗಳಾಯಿತು. ಆದರೂ ಕೆಲಸ ಸಿಕ್ಕಿಲ್ಲ. ಆದರೆ ನಮ್ಮ ಮನೆ ಪಕ್ಕದ ಹುಡುಗನೊಬ್ಬ ಇನ್ನೂ ಮೊನ್ನೆ ತಾನೆ ರಿಜಿಸ್ಟರ್ ಮಾಡಿಸಿಕೊಂಡ. ಆದರೆ ಆತನಿಗಾಗಲೇ ಕೆಲಸ ಸಿಕ್ಕಿದೆ ಎಂದು ದೂರನ್ನು ತಂದಿದ್ದ ಸಂದರ್ಭಗಳೂ ಕೆಲವಿವೆ. ಆದರೆ ಒಂದೊಂದು ಕ್ಯಾಟಿಗರಿಯಲ್ಲಿ ಬೇಗ ಕೆಲಸ ಸಿಗುತ್ತೆ, ಒಂದೊಂದರಲ್ಲಿ ಸ್ವಲ್ಪ ತಡವಾಗುತ್ತೆ. ಹೀಗೆ ಹೆಚ್ಚು ಕಡಮೆ ಆಗುತ್ತದೆ. ಇದು ಅನಿವಾರ್ಯ.

ಶ್ರೀ ಡಿ. ಎಂ. ಸಿದ್ದಯ್ಯ.—ಅನೇಕ ಇಲಾಖೆಗಳು ಅವುಗಳಲ್ಲಿ ಎಷ್ಟೆಷ್ಟು ವೇಕೆನ್ಸಿ ಖಾಲಿ ಬೀಳುತ್ತೆಂಬುದನ್ನು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಆಫೀಸಿಗೆ ತಿಳಿಸಿದರೆ ಆಗ ಈ ಆಫೀಸಿನವರು ಅಲ್ಲಿಗೆ ಇವರಲ್ಲಿ ರಿಜಿಸ್ಟರ್ ಮಾಡಿಸಿರತಕ್ಕ ಹೆಸರನ್ನು ಕಳುಹಿಸುತ್ತಾರೆ. ಆದರೆ ಹಾಗೆ ವೇಕೆನ್ಸಿಗಳು ಖಾಲಿಯಿದ್ದಾಗ್ಯೂ ಆ ಇಲಾಖೆಗಳವರು ಅನೇಕ ದಿನಗಳವರೆಗೂ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿಗೆ ಆ ವಿಚಾರವನ್ನೇ ತಿಳಿಸುತ್ತಿಲ್ಲ. ಅವರು ತಿಳಿಸುವತನಕ ಇವರು ಹೆಸರುಗಳನ್ನು ಅಲ್ಲಿಗೆ ಕಳುಹಿಸುವುದಿಲ್ಲ. ಈ ರೀತಿ ತೊಂದರೆ ಆಗುತ್ತಿದ್ದರೆ ಇದನ್ನು ಹೇಗೆ ಸಾಲ್ವ್ ಮಾಡುತ್ತೀರಿ?

ಶ್ರೀ ಡಿ. ದೇವರಾಜ ಅರಸ್.—ಕಾನೂನು ಪ್ರಕಾರ ಪ್ರತಿಯೊಂದು ಇಲಾಖೆಯ ಮೊಖ್ತೇಸರರೂ ಕಡ್ಡಾಯವಾಗಿ ಖಾಲಿ ಬೀಳತಕ್ಕ ವೇಕೆನ್ಸಿಗಳನ್ನು ನೋಟಿಫೈ ಮಾಡಬೇಕು; ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ರಿಜಿಸ್ಟರಾಗಿರತಕ್ಕ ಯಾರ ಯಾರ ಹೆಸರನ್ನು ಅಲ್ಲಿಂದ ಕಳುಹಿಸುತ್ತಾರೆಯೋ ಅವರನ್ನೇ ಆ ಖಾಲಿ ಬಿದ್ದಿರತಕ್ಕ ಸ್ಥಾನದಲ್ಲಿ ಭರ್ತಿ ಮಾಡಿಕೊಳ್ಳಬೇಕು ಎಂತ ನಾವು ತಿಳಿಸಿದ್ದೇವೆ. ಹೀಗಿರುವಾಗ ಆ ಇಲಾಖೆಗಳವರು ಅವರವರ ಇಲಾಖೆಗಳಲ್ಲಿ ಖಾಲಿ ಬಿದ್ದಿರತಕ್ಕ ಸ್ಥಾನಗಳೆಷ್ಟು ಎಂಬುದನ್ನು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿಗೆ ಕಳುಹಿಸಲೇಬೇಕಾಗುತ್ತದೆ. ಆದರೆ ಇದೇ ಸಂದರ್ಭದಲ್ಲಿ ನಾನು ಮತ್ತೊಂದು ವಿಷಯವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ ಅದೇನೆಂದರೆ ಶ್ರೀ ಸಿದ್ದಯ್ಯನವರೂ ಮತ್ತು ಶ್ರೀ ಲಕ್ಷ್ಮಯ್ಯನವರೂ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ಈಗ ಯಾರ್ಯಾರು ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಂಡಿರುತ್ತಾರೋ ಅವರಿಗೆಲ್ಲ ಖಾಯಂ ಕೆಲಸಗಳು ದೊರೆಯುವ ಹಾಗೊಂದು ಏರ್ಪಾಡನ್ನು ಮಾಡುವುದು ಒಳ್ಳೆಯದಲ್ಲವೇ ಎಂತ ಕೇಳಿದ್ದಾರೆ, ಆದರೆ ಈ ವಿಚಾರದಲ್ಲಿ ಬೇರೆ ರಾಜ್ಯಗಳಲ್ಲಿ ಯಾವ ರೀತಿ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಆದರೆ ಇದೇನೋ ಒಂದು ಒಳ್ಳೆಯ ಸಲಹೆಯೇ. ಈ ವಿಷಯದಲ್ಲಿ ಅನೇಕ ವಿಚಾರಗಳನ್ನು ಪರ್ಯಾಲೋಚನೆ ಮಾಡಿ ತೀರ್ಮಾನ ಮಾಡಬೇಕಾಗಿದೆ. ಅಲ್ಲದೆ ಈಗ ಈ ನೌಕರಿಗಳನ್ನೇ ವಿಲೇವಾರಿ ಮಾಡಲು P.S.C. ಎಂತ ಒಂದು ಏಜೆನ್ಸಿ ಇದೆ. 150 ರೂಪಾಯಿಗಳಿಗೆ ಕೆಳಗಿರತಕ್ಕ ಹುದ್ದೆಗಳನ್ನು ವಿಲೇವಾರಿ ಮಾಡಲು ಈ ಕೆಲಸವನ್ನು ಈಗ ಡಿವಿಜನಲ್ ಕಮಿಷನರುಗಳಿಗೆ ಕೊಟ್ಟಿದ್ದೇವೆ. ಇವುಗಳಿಗೆಲ್ಲ ಒಂದಕ್ಕೊಂದಕ್ಕೆ ಹೀಗೆ ಈ ಸಂಬಂಧವನ್ನೇ ಕಲ್ಪಿಸಬೇಕು ಎಂಬುದನ್ನು ನೋಡಿ ಕಾನೂನು ಪ್ರಕಾರ ಯಾವ ಅಡಚಣೆಯೂ ಬಾರದಂತೆ ಈ ಕೆಲಸವನ್ನು ಮಾಡಬೇಕಾಗಿರುತ್ತದೆ. ಈ ವಿಚಾರವನ್ನು ನಾನಿನ್ನೂ ಪರೀಕ್ಷೆ ಮಾಡಿಸಿ ಜನರಿಗೆ ಇದರಿಂದ ಹೆಚ್ಚಿನ ರೀತಿಯಲ್ಲಿ ಉತ್ತಮ ರೀತಿಯಲ್ಲಿ ಸಹಾಯಕಾರಿಯಾಗುವುದಾಗಿ ಕಂಡು ಬಂದರೆ ಇದನ್ನೂ ಸಹ ಮಾಡೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಒಬ್ಬನು ಒಂದು ಜಿಲ್ಲೆಯಲ್ಲಿ ತನ್ನ ಹೆಸರನ್ನು ರಿಜಿಸ್ಟರ್ ಮಾಡಿಸಿರುತ್ತಾನೆ. ಆದರೆ ಆ ಜಿಲ್ಲೆಯಲ್ಲಿ ಆತನು ರಿಜಿಸ್ಟರ್ ಮಾಡಿಸಿಕೊಂಡಿರತಕ್ಕ ಕೆಲಸಗಳು ಖಾಲಿ ಇಲ್ಲದೆ ಇದ್ದು ಅದೇ ಕೆಲಸಗಳು ಬೆಂಗಳೂರು ಜಿಲ್ಲೆಯಲ್ಲಿ ಖಾಲಿ ಇದ್ದರೆ ಆತನ ಹೆಸರನ್ನು ಆ ಜಿಲ್ಲೆಯಿಂದ ಬೆಂಗಳೂರು ಜಿಲ್ಲೆಗೆ ವರ್ಗಾಯಿಸಲು ಸಾಧ್ಯವಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಈ ಉದ್ಯೋಗ ವಿನಿಮಯ ಸಂಸ್ಥೆಗೆ ಯಾವ ಉದ್ಯೋಗವನ್ನೂ ಕಲ್ಪಿಸಲು ಶಕ್ತಿಯಿಲ್ಲ. ಇದನ್ನು ಏಕೆ......

ಶ್ರೀ ಡಿ. ದೇವರಾಜ ಅರಸ್.—ನಾನಾಗಲೇ ಆ ವಿಚಾರಗಳಿಗೆಲ್ಲ ಉತ್ತರ ಹೇಳಿದ್ದೇನೆ, ಈಗ ವಿಶ್ವಕರ್ಮರ ವಿಚಾರದಲ್ಲಿ ಅವರಿಗೆ ನಿರುದ್ಯೋಗ ಪ್ರಾಪ್ತಿಯಾಗಿದೆ ಎಂದು ಅನೇಕರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಇವರಿಗೆ ಯಾವ ರೀತಿ ಸಹಾಯ ನೀಡಿದೆ ಎಂದು ಅವರು ಕೇಳಿದ್ದಾರೆ. ಕೆಲವು......

Sri B. NANJAPPA (Cubbonpet).—You have told us that a person who has registered for a particular trade about two years back did not get the interview card, and in a different trade a person who has registered later may get a chance earlier. Some boys who have registered about three months back, for the same trade, have got the interview cards earlier than those registered long back – why ?

Sri D. DEVARAJ URS.—If the Hon'ble Member gives any particular instance where such a thing has happened, I will look into it. But, if he makes a general statement, I am sorry, I cannot accept it.

ಈಗ ನಾನು ಈ ವಿಶ್ವಕರ್ಮದ ಜಿಲ್ಲಾವಾರು ವಿವರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಲ್ಲಿಯತನಕ ಬೆಂಗಳೂರು ಜಿಲ್ಲೆಯಲ್ಲಿ ಎಂಪ್ಲಾಯ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಿಕೊಂಡಿರತಕ್ಕ ವಿಶ್ವಕರ್ಮರ ಸಂಖ್ಯೆ 963 ; ಬೆಳಗಾಂ ಜಿಲ್ಲೆಯಲ್ಲಿ-ಯಾರೂ ಇಲ್ಲ; ಬಳ್ಳಾರಿ ಜಿಲ್ಲೆಯಲ್ಲಿ 52 ಜನ; ಭದ್ರಾವತಿಯಲ್ಲಿ- 2 ; ಬಿಜಾಪುರ ಜಿಲ್ಲೆಯಲ್ಲಿ-12 ; ಬೀದರ್ ಜಿಲ್ಲೆಯಲ್ಲಿ-ಯಾರೂಇಲ್ಲ; ಚಿಕ್ಕಮಗಳೂರು ಜಿಲ್ಲೆಯಲ್ಲಿ-ಒಬ್ಬರು ; ಹಾಸನ ಜಿಲ್ಲೆಯಲ್ಲಿ-ಯಾರೂ ಇಲ್ಲ; ದಾವಣಗೆರೆಯಲ್ಲಿ-ಇಬ್ಬರು ; ಗುಲ್ಬರ್ಗ ಜಿಲ್ಲೆಯಲ್ಲಿ-204 ; ಹುಬ್ಬಳ್ಳಿಯಲ್ಲಿ-9 ; ಕೆ. ಜಿ. ಎಫ್‌ನಲ್ಲಿ-102 ; ಕಾರ್ವಾರ್ ಜಿಲ್ಲೆಯಲ್ಲಿ-73 ; ಮಂಗಳೂರಿನಲ್ಲಿ-ಯಾರೂ ಇಲ್ಲ; ಮೈಸೂರು ಜಿಲ್ಲೆಯಲ್ಲಿ-483 ; ಮಂಡ್ಯದಲ್ಲಿ-ಒಂದು ; ಮಡಕೇರಿಯಲ್ಲಿ-4 ; ರಾಯಚೂರು ಜಿಲ್ಲೆಯಲ್ಲಿ-2 ; ತುಮಕೂರಿನಲ್ಲಿ-4. ಹೀಗೆ ಒಟ್ಟು

1914 ಜನರು ಅವರ ಹೆಸರನ್ನು ರಿಜಿಷ್ಟರ್ ಮಾಡಿಸಿದ್ದಾರೆ. ಆದರೆ ಅಷ್ಟೆಲ್ಲಾ ಇಷ್ಟೇ ಜನರೇ ಈ ವಿಶ್ವಕರ್ಮರು ಇರುವುದು ಎಂತ ನಾನೀಗ ಹೇಳಲಿಲ್ಲ. ಈಗ ನಾವು ಇವರಿಗೆಲ್ಲ ಅಂದರೆ ರಿಜಿಷ್ಟರ್ ಮಾಡಿಸಿಕೊಂಡಿರತಕ್ಕವರಿಗೆ ಯಾವ ರೀತಿ ಉದ್ಯೋಗಗಳನ್ನು ಕಲ್ಪಿಸಬೇಕು ಎಂಬುದು ಮೊದಲನೆ ವಿಚಾರ. ಆದರೆ ಈ ದಿವಸ ಆಡಳಿತ ವರ್ಗದವರಲ್ಲಿ ಈ ವಿಶ್ವಕರ್ಮ ಜನಾಂಗಕ್ಕೆ ಸಂಬಂಧಪಟ್ಟ ಅಂಕೀ ಅಂಶಗಳು ಸರ್ಕಾರದವರ ಮುಂದೆ ಇಲ್ಲ ಎಂದು ಹೇಳಬೇಕಾಗಿದೆ.

ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಕೊಟ್ಟು ಸಾಧ್ಯವಾದಷ್ಟು ಎಷ್ಟು ಜನ ಅಕ್ಕಸಾಲಿಗರಿಗೆ gold control order ನಿಂದ ನಿರುದ್ಯೋಗ ಸಮಸ್ಯೆಯುಂಟಾಗಿದೆ, ಎಷ್ಟು ಜನಗಳಿಗೆ ತೊಂದರೆಯಾಗಿದೆ ಎನ್ನುವ ಕೆಲವು ಅಂಕಿಅಂಶಗಳನ್ನು ಸಂಗ್ರಹನೆ ಸರ್ಕಾರದ ಮುಂದೆ ವರದಿ ತರಬೇಕೆಂದು ತಿಳಿಸಿದ್ದೇವೆ. ತಕ್ಷಣದಲ್ಲಿಯೇ ಅದು ದೊರೆಯಲಿದೆ. ಸದ್ಯಕ್ಕೆ employment exchange ನಲ್ಲಿ ದೊರೆತಿರುವ ಅಂಕಿಅಂಶಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇವರಿಗೆಲ್ಲ ಹೇಗೆ ಉದ್ಯೋಗ ಕಲ್ಪಿಸಬೇಕು ಎನ್ನುವುದು ಸ್ವಲ್ಪ ಕಠಿಣವಾದ ವಿಚಾರ, ಅನೇಕ ಎಡರು ತೊಡರುಗಳಿಂದ ಕೂಡಿದೆ. ಕಾನೂನು ರೀತಿಯಲ್ಲಿ ನಿರುದ್ಯೋಗಿಯಾಗಿರುವ ಒಬ್ಬ ಅಕ್ಕಸಾಲಿಗನಿಗೆ ವಯಸ್ಸು ಹೆಚ್ಚಾಗಿರಬಹುದು. ಆವಾಗ ಏನು ಮಾಡಬೇಕು ? ಆಗ ಯಾವುದಾದರೂ ಉದ್ಯೋಗಕ್ಕೆ, ಸ್ವಂತವಾಗಿ ಯಾವುದಾದರೂ craft, rural artisans ಕೈ ಕಸಬು, ಇಂಥದನ್ನು ಕೈಕೊಂಡರೆ ಸರ್ಕಾರ ಸಾಲದ ರೂಪದಲ್ಲಿ ಅಂಥವರಿಗೆ ಸಹಾಯ ಮಾಡಬಹುದು. ಕಾರ್ಖಾನೆಗಳಲ್ಲಿ ಉದ್ಯೋಗ ಸಿಕ್ಕಬೇಕು ಎಂದರೆ ಅದಕ್ಕೆ ಕಾನೂನಿನ ನಿಬಂಧನೆ ಇರುತ್ತದೆ. ಅವಿದ್ಯಾವಂತರಾದರೆ, ಗೊತ್ತಾದ ವಯಸ್ಸಿಗಿಂತ ಹೆಚ್ಚು ವಯಸ್ಸಾಗಿದ್ದರೆ ಕೆಲಸ ಕೊಡುವುದಕ್ಕಾಗುವುದಿಲ್ಲ. ಇವೆಲ್ಲ ಎಡರು ತೊಡರುಗಳಿವೆ. ಅವನಿಗೆ ಬೇರೆ ಯಾವುದೂ ಕಸಬು ಬಾರದೆ ಹೋದರೆ ಎರಡು ಮೂರು ವಿಧದಲ್ಲಿ ಸರ್ಕಾರ ಸಹಾಯ ಮಾಡುವುದಕ್ಕೆ ಸಾಧ್ಯವಿದೆ. Apprenticeship Act ಎಂದು ಈ ವರ್ಷದ ಜನವರಿ ತಿಂಗಳಿಂದ ನಮ್ಮ ದೇಶದಲ್ಲಿ ಜಾರಿಗೆ ಬಂದಿದೆ. ಆ ಕಾನೂನು ಪ್ರಕಾರ ನಾವು ನಮ್ಮ ದೇಶದಲ್ಲಿರತಕ್ಕ ಸರ್ಕಾರಿ ಮತ್ತು ಖಾಸಗಿ ಉದ್ಯಮಗಳಲ್ಲಿ ಸುಮಾರು 1,200 ಜನರನ್ನು ಮೂರು ವರ್ಷಗಳ ಅವಧಿಯಲ್ಲಿ apprentice ಆಗಿ ತೆಗೆದುಕೊಂಡು ಅವರಿಗೆ ಕಾರ್ಮಿಗಾರಿಕೆಯನ್ನು ಕಲಿಸಬೇಕು ಆಗ ಉದ್ಯೋಗ ತಾನಾಗಿಯೇ ಸಿಕ್ಕುತ್ತದೆ. ಅದರಲ್ಲಿ ಅಕ್ಕಸಾಲಿಗರಿಗೆ, ಮತ್ತು ಅವರ ಮನೆತನದಲ್ಲಿರತಕ್ಕ ಯಾರಿಗಾದರೂ ಈ ರೀತಿಯಾದ ಕೆಲಸ ದೊರಕಿಸುವುದಕೆ ಪ್ರಯತ್ನ ಮಾಡಬಹುದು. ಅವನ್ನು ಕೂಡ ಮಾಡೋಣ.

ಶ್ರೀ ಎಸ್. ಗೋಪಾಲ ಗೌಡ.—ಅದೆಲ್ಲ ಮಾಡುವ ತನಕ ಕಾಲ ಹಿಡಿಯುತ್ತದೆ. ಅವರು ಸಧ್ಯದಲ್ಲ ಉಪವಾಸವಿಲ್ಲದ ಹಾಗೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಈಗ ನಾನು ಈ ಸಭೆಯ ಮುಖಾಂತರ ಅರಿಕೆ ಮಾಡುವುದೆಂದರೆ, ಸರ್ಕಾರದ ಮುಂದೆ ಒಂದು ಸಂದರ್ಭದಲ್ಲಿ ಒಂದು ಸಾವಿರ ಅರ್ಜಿಗಳನ್ನು ಕೊಟ್ಟರು. ಅವುಗಳನ್ನು ಒಂದು ಕಾರ್ಖಾನೆಗೆ ಕಳಿಸಿಕೊಟ್ಟೆವು. ಅವರು ಎಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಂಡರು ಎಂಬುದು ಗೊತ್ತಿಲ್ಲ. ನಿಜವಾಗಿ ತೊಂದರೆಯಿರುವವರಿಗೆ ತಕ್ಷಣ ಏನುಮಾಡಬಹುದು ಎಂದರೆ ಅಂಥವರು ಮುಂದೆ ಬಂದರೆ ಸಾಲ ಕೊಡಬಹುದು. ಸಾಲವನ್ನು ಕೊಡುವಾಗಲೂ ಬಡ್ಡಿಯಿಲ್ಲದೆ 200 ರೂಪಾಯಿ, 300 ರೂಪಾಯಿ, 400 ರೂಪಾಯಿ ಸಾಲ ಕೊಡಬೇಕು ಎಂದರೆ ಆ ರೀತಿ ಮಾಡಲು ಸರ್ಕಾರದವರಿಗೆ ಸಾಧ್ಯವಾಗುತ್ತದೆ. ಆ ರೀತಿ ಮಾಡೋಣ. ಅದರಲ್ಲಿ ಒಂದು ವಿಷಯವೆಂದರೆ genuine ಆಗಿ ನಿರುದ್ಯೋಗಿಗಳಾಗಿರಬೇಕು, gold control ಆರ್ಡರಿನಿಂದ ತೊಂದರೆಯಾಗಿರಬೇಕು. ಅಂಥ ಸಂದರ್ಭಗಳಲ್ಲಿ ನಾನೂ ಒಬ್ಬ ಅಕ್ಕಸಾಲಿಗ ಎಂದು ಉಪಯೋಗ ಪಡೆಯುವುದಕ್ಕೆ ಜನ ಮುಂದೆ ಬರುತ್ತಾರೆ. ಅದು ತಮಗೆಲ್ಲ ಗೊತ್ತಿದೆ. ಇದಕ್ಕೆಲ್ಲ ನೋಡಿ ಕೊಡಬೇಕಾಗುತ್ತದೆ. ಎಷ್ಟೇ ಆತುರವಾಗಿ ಸಹಾಯ ಮಾಡಬೇಕು ಎಂದರೂ ಕೂಡ ಸರ್ಕಾರ ನೇರವಾಗಿ ಅರ್ಜಿ ಹಾಕಿದವರಿಗೆಲ್ಲ ಸಾಲ ಕೊಡಬೇಕು ಎಂದು ತಾವು ಯಾರೂ ಹೇಳಲಾರಿರಿ. ನಿಜವಾಗಿ ತೊಂದರೆ ಇದ್ದು ಮುಂದೆ ಬಂದರೆ, genuine cases ಎಂದು ಗೊತ್ತಾದರೆ ಆ ರೀತಿ ಸಹಾಯ ಮಾಡಬಹುದು, ಸಾಲ ಕೊಡಬಹುದು. ಕಾರ್ಖಾನೆಗಳಲ್ಲಿ ಕೆಲಸ ಕೊಡಿಸುವುದಕ್ಕೆ ಈಗಾಗಲೇ ಇಂಡಿಯಾ ಸರ್ಕಾರದೊಂದಿಗೆ ನಾವು ಪತ್ರವ್ಯವಹಾರ ಮಾಡುತ್ತಿದ್ದೇವೆ. ಇಂಡಿಯಾ ಸರ್ಕಾರಕ್ಕೆ ಸಂಬಂಧಪಟ್ಟಂಥ ದೊಡ್ಡದೊಡ್ಡ ಕಾರ್ಖಾನೆಗಳಲ್ಲಿ ಅಕ್ಕಸಾಲಿಗ ನಿರುದ್ಯೋಗಸ್ಥರಿಗೆ, ಉದ್ಯೋಗ ಕೊಡಲು ಅರ್ಹತೆಯುಳ್ಳವರಾಗಿದ್ದರೆ, non-skilled labourers ಆಗಿ, apprentices ಆಗಿ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಬಹುಶಃ ಇಂಡಿಯಾ ಸರ್ಕಾರದಿಂದ ತಕ್ಷಣದಲ್ಲಿಯೇ, ನಮಗೆ ಅನುಕೂಲವಾಗುವ ರೀತಿಯಲ್ಲಿ ಆಯಾ ಕಾರ್ಖಾನೆಗಳಿಗೆ ತಿಳಿಸಬಹುದೆಂದು ನಾನು ಭಾವಿಸಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದುವರೆಗೆ ಯಾರನ್ನಾದರೂ ತೆಗೆದುಕೊಂಡಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಯಾರನ್ನು ತೆಗೆದುಕೊಂಡಿದ್ದಾರೆ, ಏನು ಎನ್ನುವ ಕರಾರು ವಾಕ್ಯಾದ ವಿವರಗಳು ನನ್ನಲ್ಲಿಲ್ಲ. ನೂರಾರು ಜನಗಳಿಗೆ ಕೆಲಸ ಕೊಟ್ಟಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಆಗಲೇ ಅಪ್ಪಣೆ ಕೊಡಿಸಿದ ಹಾಗೆ ಅಂಕಿಅಂಶಗಳನ್ನು ತರಿಸಿಕೊಡುತ್ತೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪನವರು ಮಾತನಾಡಲು ಎದ್ದುನಿಂತರು.)

Mr. SPEAKER.—Please read rule 287.

ಶ್ರೀ ಡಿ. ದೇವರಾಜ ಅರಸ್.—ಅಕ್ಕಸಾಲಿಗರ ನಿರುದ್ಯೋಗವನ್ನು ಬಗೆಹರಿಸುವುದಕ್ಕೆ ಸರ್ಕಾರ ಎಲ್ಲ ವಿಧದಲ್ಲಿಯೂ ಪ್ರಯತ್ನ ಮಾಡುತ್ತಿದ್ದೇವೆಂದು ಅರಿಕೆ ಮಾಡುತ್ತೇನೆ, ಸ್ವಾಮಿ.

Sri GANJI VEERAPPA.—It is not necessary to relax the rules, giving exemption in the matter of age limit or remove other restrictions ? Otherwise, it will not be possible to employ the people.

ಶ್ರೀ ಡಿ. ದೇವರಾಜ ಅರಸ್.—ನಾನು ಮೊದಲೇ ಅರಿಕೆ ಮಾಡಿದ ಹಾಗೆ rules relax ಮಾಡಬೇಕಾಗಿ ಬಂದರೆ ಮಾಡೋಣ. ಮೈಸೂರು ಸರ್ಕಾರಕ್ಕೆ ಸಂಬಂಧಪಟ್ಟಹಾಗೆ ಯಾವ ಯಾವುದನ್ನು relax ಮಾಡುವುದಕ್ಕೆ ಅಧಿಕಾರವಿದೆಯೋ ಅದರಂತೆ ಮಾಡಿ age limit relax ಮಾಡೋಣ. ಎರಡನೆಯದಾಗಿ employment exchange ಕೇಂದ್ರಸರ್ಕಾರದ ಕಾನೂನಿಗೆ ಒಳಪಟ್ಟಿದೆ. ಇದರ ಬಗ್ಗೆ ಇಂಡಿಯಾ ಸರ್ಕಾರದೊಡನೆ ವ್ಯವಹಾರ ನಡೆಸುತ್ತಿದ್ದೇವೆ ಮತ್ತು ಡೆಲ್ಲಿಯಲ್ಲಿರುವ Director of National Employment ಇವರಿಗೂ ಬರೆದಿದೆ. ಅದೆಲ್ಲ ಅವರ ಮುಖಾಂತರವಾಗಿಯೇ ನಡೆಯಬೇಕಾಗಿದೆ. ಅದನ್ನೂ ತಕ್ಷಣದಲ್ಲಿಯೇ ಮಾಡಿಸೋಣ.

ಟ್ರಾನ್ಸ್‌ಪೋರ್ಟ್ ಬಗ್ಗೆ ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ತಿಳಿಸಿದ್ದಾರೆ......

(Interruption from C. J. Muckannappa)

Mr. SPEAKER.—Did the Hon'ble Member read the rule ?

Sri C. J. MUCKANNAPPA.—The Rule is :

"A member desiring to make any observations on any matter before the Assembly shall speak from his place, shall rise when he speaks and shall address the Speaker : "

Mr. SPEAKER.—Is he making an observation or not ?

Sri C. J. MUCKANNAPPA.—It is not an observation ; it is only an interjection.

Mr. SPEAKER.—It is an observation.

Sri C. J. MUCKANNAPPA.—If I make an observation on a particular matter, then only it amounts to an observation.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈ ದಿವಸದ ಬೇಡಿಕೆಗಳಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಹಾಗೆ ಕೆಲವು ಮಾತುಗಳನ್ನಾಡಿದ್ದಾರೆ. ನೇರವಾಗಿ ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಬೇಡಿಕೆಯಲ್ಲದೆ ಹೋದರೂ ಕಲವು ಟೀಕೆಗಳು ಬಂದಿವೆ. ಆ ಪ್ರಯುಕ್ತ ನಾನು ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಮೊದಲನೆಯದಾಗಿ ರಾಷ್ಟ್ರೀಕರಣದ ಬಗ್ಗೆ ಕೆಲವು ಮಾನ್ಯ ಸ್ನೇಹಿತರು ಹೇಳಿದರು : ಸರ್ಕಾರದ ಧೋರಣೆ ಅನುಮಾನವಾಗಿದೆ. ಮೊದಲು ಯಾವ ತರಹದಲ್ಲಿ ಹೋಗಬೇಕೆಂದಿದ್ದರೋ ಆ ರೀತಿ ಹೋಗುವುದಕ್ಕೆ ಪ್ರಯತ್ನಗಳು ನಡೆಯುತ್ತಿಲ್ಲವೆಂದೂ, ಇನ್ನೂ ಕೆಲವು ಮಾನ್ಯ ಸದಸ್ಯರು ಇಡೀ ಸಂಸ್ಥಾನದಮಳೆ ಮೂರನೆಯ ಯೋಜನೆಯೊಳಗಾಗಿ ರಾಷ್ಟ್ರೀಕರಣ ಮಾಡಬೇಕು ಎನ್ನುವ ಯೋಜನೆಯನ್ನಿಟ್ಟುಕೊಂಡಿದ್ದರು. ಈಗ ಇರತಕ್ಕ ಸನ್ನಿವೇಶದಲ್ಲಿ, ಅದರಲ್ಲಿಯೂ ಹೊಸದಾಗಿ ರಾಷ್ಟ್ರೀಕರಣ ಮಾಡತಕ್ಕ ಪ್ರದೇಶದಲ್ಲಿ ಚೆನ್ನಾಗಿ ಕೆಲಸ ಮಾಡುವ ರೀತಿ ಅದನ್ನು consolidate ಮಾಡಿ ಮುಂದುವರಿಯುವುದು ಒಳ್ಳೆಯದು ಎಂದು ಎರಡು ಸಲಹೆಗಳನ್ನು ಸಭೆಯ ಮುಂದೆ ತಿಳಿಸಿ

ದ್ದಾರೆ. ಅದರಲ್ಲಿ ಬಳ್ಳಾರಿಗೆ ಸಂಬಂಧಪಟ್ಟ ಹಾಗೆ ಕೆಲವರು ಪ್ರಸ್ತಾಪ ಮಾಡಿದರು. ಅದರ ವಿಷಯ ಮುಖ್ಯಮಂತ್ರಿಗಳ ಮುಂದೆ ಒಂದು ತೀರ್ಮಾನಕ್ಕಾಗಿ ಇರುವ ಪ್ರಯುಕ್ತ ನಾನು ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದನ್ನು ಹೇಳತಕ್ಕದ್ದು ಕಾನೂನಿಗೆ ವಿರುದ್ಧವಾಗುತ್ತದೆ. ಅವರು quasi-judiciary bodyಯಾದ್ದರಿಂದ ಅದರ ವಿಚಾರವಾಗಿ ತೀರ್ಮಾನ ಕೊಡುವವರೆಗೂ ನಾನು ಹೆಚ್ಚಾಗಿ ಪ್ರಸ್ತಾಪ ಮಾಡುವುದಿಲ್ಲ. ಆದರೆ ನಮ್ಮ ಉದ್ದೇಶ ಏನಿದೆ ಏನಿಲ್ಲ ಎನ್ನುವುದನ್ನು ಮಾನ ಸಭೆಯ ಸದಸ್ಯರು ಇಲ್ಲಿಯವರೆಗೆ ನಡೆದಿರತಕ್ಕ ನಡವಳಿಕೆಗಳನ್ನು ತಿಳಿದುಕೊಂಡಿದ್ದ ಪಕ್ಷದಲ್ಲಿ ಅವರಿಗೆ ನಮ್ಮ ಕಾರಣ ಏನಿದೆ ಎನ್ನುವುದು ತಿಳಿಯುತ್ತಿತ್ತು. ಈಗ ಶ್ರೀಮಾನ್ ರೇವಣ ಸಿದ್ದಪ್ಪನವರ್ ಇಲ್ಲಿಲ್ಲ. ಅವರು ಈ ಪ್ರಶ್ನೆಯನ್ನು ಎತ್ತಿದ್ದರು.

Sri S. M. KRISHNA.—You made an observation that it was pending before the Chief Minister. What is the matter that is pending before the Chief Minister ? Is that with reference to nationalisation in respect of this district or the other district ?

Sri D. DEVARAJ URS.— With reference to Bellary District.

ಶ್ರೀ ಡಿ. ದೇವರಾಜ ಅರಸ್.—ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ನಾವು ಈಗಾಗಲೇ ನ್ಯಾಷನಲೈಸು ಮಾಡಬೇಕೆಂದು ಹೇಳಿ ಕಾರ್ಪೊರೇಷನ್ನು ಸ್ಕೀಮ್ಸ್‌ಗಳನ್ನು ನೋಟಿಫೈ ಮಾಡದ್ದಾಯ್ತು. ಹಾಗೆ ನೋಟಿಫೈ ಮಾಡಿದ ಸ್ಕೀಮುಗಳನ್ನು ಚೀಫ್ ಮಿನಿಸ್ಟರವರು hear ಮಾಡಬೇಕು ಮತ್ತು ಅದರ ಬಗ್ಗೆ ತೀರ್ಮಾನ ಕೊಡಬೇಕು ಎಂದು ಕೊಟ್ಟ ಮೇಲೆ ಇದು ಹೈಕೋರ್ಟಿಗೆ ಹೋಗಿ ಇದನ್ನು ಅಲ್ಲಿ quash ಮಾಡಿದ್ದಾರೆ. ಇದನ್ನೆಲ್ಲಾ ಮಾನ್ಯ ಸದಸ್ಯರು ತಿಳಿದು ಏಕೆ ಮಾಡಲಿಲ್ಲ ಎಂದರೆ ಏನು ಹೇಳುವುದು ಈಗಲೂ ಇದು ಚೀಫ್ ಮಿನಿಸ್ಟರ್ ಮುಂದಿರುವುದರಿಂದ ನಾನು ಇದರ ಬಗ್ಗೆ ಇನ್ನೇನೂ ಹೇಳುವುದಕ್ಕೆ ಬರುವುದಿಲ್ಲ.

Sri G. V. GOWDA.— As Minister in charge of Transport, has he not pressed for nationalisation ? He says it is not desirable to make any statement in that respect ?

Sri D. DEVARAJ URS.— I am saying in respect of Bellary District only.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಹೈಕೋರ್ಟಿನಲ್ಲಿ ಕ್ವಾಷ್ ಆಯಿತು, ಚೀಫ್ ಮಿನಿಸ್ಟರವರ ಮುಂದಿದೆ ಈ ಸ್ಕೀಮು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇದರಲ್ಲೇನು ದೋಷ ದೋಷಗಳಿದ್ದುವೋ ಅವನ್ನು ಸರಿಪಡಿಸಲು ನಿಮ್ಮ ಕೈಯಲ್ಲಾಗಲಿಲ್ಲ; ಹೀಗೆ ನಿಮ್ಮ inability ತೋರಿಸುವುದು ಸರಿಯಾಗಿಲ್ಲ ಎಂದು ತೋರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನನ್ನ inability ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡು ಹೇಳುತ್ತಿದ್ದಾರೆ. ಯಾವುದೇ ಸ್ಕೀಮನ್ನು ತಯಾರು ಮಾಡಿದರೂ ಅದು ಚೀಫ್ ಮಿನಿಸ್ಟರವರ ಮುಂದೆ ಬರುವುದಕ್ಕೆ ಮುನ್ನ ನೋಟಿಫೈ ಆಗಿ ಅವರ ತೀರ್ಮಾನಕ್ಕಾಗಿ ಬರುತ್ತದೆ. ಆ ರೀತಿ ಸುಪ್ರೀಂ ಕೋರ್ಟಿನಲ್ಲಿ ಜಡ್ಜ್‌ಮೆಂಟು ಆಗಿರುವುದರಿಂದ, ಆ ಪ್ರಕಾರ ಸ್ಕೀಮುಗಳು ತಯಾರಾಗಿ, ನೋಟಿಫೈ ಆಗಿ ಚೀಫ್ ಮಿನಿಸ್ಟರವರ ತೀರ್ಮಾನಕ್ಕಾಗಿ ಮೊದಲು ಹೋಗಿತ್ತು. ಆ ತೀರ್ಮಾನದ ಮೇಲೆ ಈ ಕೇಸು ಹೈಕೋರ್ಟಿಗೆ ಹೋಗಿ quash ಆಯಿತು. ಈಗ ಪುನಃ ನೋಟಿಫೈ ಆಗಿ ತೀರ್ಮಾನಕ್ಕಾಗಿ ಚೀಫ್ ಮಿನಿಸ್ಟರವರ ಮುಂದಿದೆ. ಇದರ ತೀರ್ಮಾನ ಹೇಗಾಗುತ್ತದೆ ಅದರ ಮೇಲೆ ಮುಂದುವರಿಯಬೇಕಾಗಿದೆ.

Sri G. V. GOWDA.— Have you pressed your claims before the Chief Minister ?

Sri D. DEVARAJ URS.— I may tell for the information of the Hon'ble Member that we have pressed our claims. ಮತ್ತು ಸಂಸ್ಥಾನದ ಎಲ್ಲಾ ಕಡೆಯೂ ಬಸ್ಸುಗಳನ್ನು ನ್ಯಾಷನಲೈಸು ಮಾಡುವ ವಿಚಾರದಲ್ಲಿ ಹೇಳುವಾಗ ಒಂದು ಮಾತು ತಿಳಿಸಬೇಕಾಗಿದೆ. ಈಗಿನ ದೇಶದ ತುರ್ತುಪರಿಸ್ಥಿತಿಯಲ್ಲಿ ಈ ವಿಷಯವನ್ನು ಪುನರಾಲೋಚನೆ ಮಾಡಬೇಕಾದ ಸಂದರ್ಭ ಬಂದಿದೆ.

Sri S. M. KRISHNA.—Will it apply to Bellary District ?

Sri D. DEVARAJ URS.—I am referring to nationalisation in general. ಪರಿಸ್ಥಿತಿ ಉತ್ತಮವಾಗಿದೆ. ಮೂರನೆ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಮೈಸೂರು ಸಂಸ್ಥಾನದಲ್ಲಿ ಎಲ್ಲಾ ಕಡೆಯಲ್ಲಿಯೂ ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಬೇಕು ಎನ್ನುವ ಗುರಿಯನ್ನು ಇಟ್ಟುಕೊಂಡಿದ್ದೇನೋ ನಿಜ. ಆದರೆ ಈಗ ಇರತಕ್ಕ ಪರಿಸ್ಥಿತಿಯನ್ನು ನೋಡಿ ಇದನ್ನು ವಿಸ್ತರಣೆ ಮಾಡಬೇಕಾದರೆ ಸ್ವಲ್ಪ ಯೋಚನೆ ಮಾಡಿ ನಾವು ಹೆಜ್ಜೆ ಇಡಬೇಕಾಗಿದೆ. ನಮಗೆ ಇದಕ್ಕಾಗಿ ಎಷ್ಟೋ ಬಸ್ಸುಗಳು ಸಿಗಬೇಕು. ಎಲ್ಲಾ ಕಡೆಗಳಲ್ಲಿಯೂ ಡಿಫೆನ್ಸ್ ಪರ್ಪಸಸ್ ಗೋಸ್ಕರ ಹೆಚ್ಚು ಪ್ರಮಾಣದಲ್ಲಿ chatiesಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳು ಸಿಗುತ್ತದೆಯೇ ನೋಡಬೇಕು. ಅಲ್ಲದೆ ದೊಡ್ಡ ಪ್ರಮಾಣದಲ್ಲಿ ಬಸ್ಸುಗಳ ಸ್ಪೇರು ಪಾರ್ಟುಗಳು ಸಿಗುತ್ತಿಲ್ಲ. ಈ ಸ್ಪೇರ್ ಪಾರ್ಟ್ಸುಗಳದ್ದೇ ಒಂದು ಬಹು ದೊಡ್ಡ ಸಮಸ್ಯೆಯಾಗಿದೆ ಈ ಎರಡು ಸಮಸ್ಯೆಗಳ ಜೊತೆಗೆ ಟೈರುಗಳ ವಿಚಾರವೂ ಕೂಡ ಬರುತ್ತದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇಂಡಿಯಾ ಸರಕಾರದವರು ನ್ಯಾಷನಲೈಸು ಮಾಡುವಾಗ ಎಲ್ಲ ಸಂಸ್ಥಾನಗಳಿಗೂ ಒಂದು ಸೂಚನೆ ಕೊಟ್ಟು ರಾಷ್ಟ್ರೀಕರಣ ಮಾಡುವ ವಿಚಾರದಲ್ಲಿ ಸ್ವಲ್ಪ ನಿಧಾನವಾಗಿ ಹೆಜ್ಜೆ ಇಡಬೇಕೆಂದು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕಾರ್ಪೊರೇಷನ್ನಿನವರು ಕೂಡ ಯಾವ ರೀತಿ ಹೋಗಿ ಇದನ್ನು ಯೋಚನೆ ಮಾಡಬೇಕು ಎನ್ನುವುದನ್ನು ಹೇಳಬೇಕಾಗಿ ಬರುತ್ತದೆ.

ಶ್ರೀ ಪಿ. ಎಂ. ದೇವ್.—ನೀವು ಇಲ್ಲಿ ಒಂದೇ ಮಾತಿನಲ್ಲಿ ಹೇಳುತ್ತೀರಿ. ಬಸ್ಸುಗಳು ಕೆಪಾಸಿಟಿಯ ಪ್ರಕಾರ ಕೆಲಸ ಮಾಡುತ್ತಿಲ್ಲ. ಅದರಿಂದಾಗಿ ಬಸ್ಸುಗಳಿಗಾಗಿ ಎಷ್ಟು ಹಣ ಒದಗಿಸುತ್ತಿದ್ದರೂ ಕೂಡ ಅದರಿಂದ ಪೂರ್ಣ ಪ್ರಯೋಜನ ಪಡೆಯುತ್ತಿಲ್ಲ, ನಾವು ಎಷ್ಟು ಸಲ ಹೇಳಿದರೂ ಏನೂ ಪ್ರಯೋಜನವಾಗುತ್ತಿಲ್ಲ.

Sri S. RAJAGOPAL.—While the private operators have not enhanced the fares, why is it that Government alone have enhanced the fares ?

Sri D. DEVARAJ URS.—Hon'ble Member has not properly understood the difficulties of the private owners. Recently the private operators passed a resolution that in view of the present difficulty and the enhancement of the rate of taxes the fares should be enhanced. This difficulty is there for every body.

ಇನ್ನೊಂದು ವಿಚಾರವನ್ನು ರಾಷ್ಟ್ರೀಕರಣ ಮಾಡುವಾಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ರಾಷ್ಟ್ರೀಕರಣದಿಂದ ಎಷ್ಟು ಉಪಯೋಗವಾಗಿದೆ ಎನ್ನುವುದನ್ನು ನಾವು ಒತ್ತಿ ಒತ್ತಿ ಹೇಳಬೇಕಾಗಿದೆ ಎಂದು ಹೇಳಿದರು. ಆದರೂ ನಾವು ಈಗಾಗಲೇ ರಾಷ್ಟ್ರೀಕರಣ ಮಾಡಿರತಕ್ಕ ಭಾಗಗಳಲ್ಲಿ ಯಾವ ಒಂದು ಉತ್ತಮ ಮಟ್ಟದಲ್ಲಿ ಬಸ್ಸುಗಳನ್ನು ನಡೆಸಬೇಕೆಂದು ಗುರಿ ಇಟ್ಟುಕೊಂಡಿದ್ದೆವೋ ಆ ಪ್ರಮಾಣದಲ್ಲಿ ಮಾಡಲು ಹೋದರೆ ನಷ್ಟವಾದೀತು ಎಂದು ಈ ದೃಷ್ಟಿಯನ್ನಿಟ್ಟುಕೊಂಡು ಸ್ವಲ್ಪ ನಿಧಾನವಾಗಿ ಹೋಗಬೇಕೆಂದಿದ್ದೇವೆ ಎನ್ನುವ ವಿಚಾರವನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ.

Mr. SPEAKER.—Under rule 164 (2) on the last day of the allotted days, at five o'clock, or at the hour fixed for the termination of the day's meeting, the Speaker shall forthwith put every question necessary to dispose of all the outstanding matters in connection with the demands for grants." I will have to put the demands at 7 o'clock and it may intervene with the reply of the other Ministers. I am just bringing this to the notice of the Minister because at a later stage it may not be possible to rectify the position.

Sri C. J. MUCKANNAPPA.—At the pleasure of House you may extend it by one hour.

Mr. SPEAKER.—I have read that rule and I have also read another rule which provides for my discretion and I am saying this after reading all the three rules.

ಶ್ರೀ ಡಿ. ದೇವರಾಜ ಅರಸ್.—ಕಂಡಕ್ಟರುಗಳು ಹಣ ಕದಿಯತಕ್ಕ ವಿಚಾರದಲ್ಲಿ ಮಾನ್ಯ ಸದಸರು ಕಲವರು ಟೀಕೆ ಮಾಡಿದ್ದಾರೆ. ಹಿಂದೆ ಒಂದು ಸಾರಿ ಈ ವಿಚಾರವನ್ನು ನಾನು ಸಭೆಯ ಗಮನಕ್ಕೆ ತಂದಿದ್ದೆ ಮತ್ತು ತಕ್ಕ ಮಟ್ಟಿಗೆ ಪಿಲ್‌ಫರೇಜು ಇದೆ ಎನ್ನುವುದನ್ನು ಹೇಳಿದ್ದೆ. ನಾನೇನೂ ಅದನ್ನು ಮುಚ್ಚುತ್ತಿಲ್ಲ. ಆದರೆ ಇತ್ತೀಚೆಗೆ ನಾವು ಕಾರ್ಪೊರೇಷನ್ನು ಮಾಡಿಕೊಂಡು ಸಾಕಷ್ಟು ಪ್ರಯೋಜನವನ್ನು ಪಡೆಯುತ್ತಿದ್ದೇವೆ ಮತ್ತು ಪಿಲ್‌ಫರೇಜು ಕಡಿಮೆ ಮಾಡಿದ್ದಾರೆ. ಇದರ ಪರಿಣಾಮವಾಗಿ ಹಳೆಯ ಮೈಸೂರಿನ ಭಾಗದಲ್ಲಿ ಮೈಸೂರಿನ ಡಿವಿಜನ್ನು ಮತ್ತು ಹಾಸನ ಡಿವಿಜನ್ನಿನಲ್ಲಿ ಮತ್ತು ಬೆಂಗಳೂರು ಡಿವಿಜನ್ನಿನಲ್ಲಿ ಹಿಂದೆ ಇದ್ದುದಕ್ಕಿಂತ ಈಗಿನ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ಹಿಂದೆ ಆಗ ನಮಗೆ ನಷ್ಟವಾಗುತ್ತಿದ್ದುದು ಈಗ ಲಾಭ ಬರುತ್ತಿದೆ. ಮೂರು ಭಾಗದಲ್ಲಿ ನಮಗೆ ಒಂದು ಭಾಗದಲ್ಲಿ ಮಾತ್ರ ಕಷ್ಟವಾಗುತ್ತಿದೆ ಇದನ್ನು ಹೋಗಲಾಡಿಸುವುದಕ್ಕೆ ಇನ್ನೂ ಸಾಧ್ಯವಾಗಲಿಲ್ಲ. ಅಲ್ಲದೆ ತಕ್ಷಣ ಹೋಗಲಾಡಿಸುವುದಕ್ಕೂ ಸಾಧ್ಯವಿಲ್ಲ. ಬಿ. ಟಿ. ಎಸ್. ಡಿಕೋರ್ಟ್ ಕಾರ್ಪೊರೇಷನ್ನು ಭಾಗವಾಗಿ ಡಿವಿಜನ್ನು ಎಂದು ಸ್ಥಾಪನೆ ಮಾಡಿದ ಮೇಲೆ ಸಿಟಿ ಬಸ್ಸುಗಳು ಏನು ಓಡಾಡುತ್ತವೆ ಅದಕ್ಕೆ ಸಂಬಂಧಪಟ್ಟ ಎಲ್ಲ ಅಧಿಕಾರ ಮತ್ತು ನಷ್ಟವನ್ನು ಸಂಪೂರ್ಣವಾಗಿ ಹೋಗಲಾಡಿಸುವುದಕ್ಕೆ ಕೆಲವು inherent difficultiesಗಳಿವೆ. ಇದನ್ನೆಲ್ಲ conslete ಆಗಿ solve ಮಾಡದೆ ಎಲ್ಲ ನಷ್ಟವನ್ನೂ ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲ. ಇದರ ಜೊತೆಗೆ ಎಲ್ಲೆಲ್ಲಿ ಸಿಟಿ ಬಸ್ಸುಗಳು ಬೇರೆ ಎಲ್ಲಾ ಇತರ ಸ್ಟೇಟುಗಳಲ್ಲಿ ಓಡಾಡುತ್ತವೆ. ಅಲ್ಲಿ ಯಾವ ರೀತಿಯಾಗಿದೆ ಎನ್ನುವುದನ್ನು ನೋಡಬೇಕಾಗಿದೆ.

ಇದೇ ರೀತಿಯಾಗಿ ಬೊಂಬಾಯಿ ಕಲಕತ್ತಾದಲ್ಲಿ ಒಂದು ಒಂದುವರೆ ಕೋಟಿ ರೂಪಾಯಿ ನಷ್ಟ ಹೊಂದಿದ್ದಾರೆ. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಸಿಟಿ ಬಸ್ ಸರ್ವಿಸ್ ಇರುವ ಕಡೆ ಈ ಸಮಸ್ಯೆ ಇದ್ದೇ ಇದೆ. ನಮ್ಮಲ್ಲಿ ಅದರಲ್ಲೂ ವಿಶೇಷ ತೊಂದರೆಗಳಿವೆ. ಬೆಂಗಳೂರು ನಗರ ಬಹಳ ದೊಡ್ಡದಾಗಿ ದಿನೇ ದಿನೇ ಬೆಳೆಯುತ್ತಾ ಇದೆ. ಒಂದು ದಿವಸಕ್ಕೆ ಹನ್ನೆರಡು ಗಂಟೆ ಕಾಲದಲ್ಲಿ ಬಸ್ಸುಗಳಲ್ಲಿ ಜನರು ಬರುವುದಿಲ್ಲ. ಪೀಕ್ ಅವರ್ ಅವಧಿಯಲ್ಲಿ ಅಷ್ಟೇ ಒಂದು ಕಡೆಯಿಂದ ಮತ್ತೊಂದು ಕಡೆ ಸಾವಿರಾರು ಜನರು ಬಸ್‌ನಲ್ಲಿ ಬರುತ್ತಾರೆ. ಉಳಿದ ಕಾಲದಲ್ಲಿ 3-4 ಜನರು ಬಸ್ಸಿನಲ್ಲಿ ಬರುತ್ತಾರೆ. ಬೆಂಗಳೂರು ನಗರ ಈಗತಾನೆ ಬೆಳೆಯುತ್ತಿದೆ. ಐದಾರು ಮೈಲಿ ಅಂತರದಲ್ಲಿ ಹೊಸ ಹೊಸ ಬಡಾವಣೆಗಳು ಬೆಳೆಯುತ್ತಿವೆ. ಇಂಥ ಬಡಾವಣೆಗಳಲ್ಲಿ ಪ್ರಯಾಣಿಕರು ಇಲ್ಲದೇ ಇದ್ದರೂ ಸಹ 5-10 ಮೈಲಿ ಬಸ್ಸು ಹೋಗಿ ಬರಬೇಕಾಗುತ್ತದೆ. ಬೊಂಬಾಯಿಯಲ್ಲಿ ಎಲ್ಲಾ ಭಾಗದಲ್ಲಿಯೂ ಸಾಕಷ್ಟು ಜನ ಬಸ್ಸುಗಳಲ್ಲಿ ತುಂಬುತ್ತಾರೆ. ಇಲ್ಲಿ ಅಂಥ ಪರಿಸ್ಥಿತಿಯಿಲ್ಲ. ಕೆಲವು ಕಡೆ ಪ್ರಯಾಣಿಕರ ಸಂಖ್ಯೆ ಹೆಚ್ಚು ಕಡಿಮೆಯಾಗುತ್ತದೆ. ಪೀಕ್ ಅವರ್ಸ್‌ನಲ್ಲಿ ಮಾತ್ರ ಜಾಸ್ತಿ ಜನ ಬರುತ್ತಾರೆ. ಬೇರೆ ಕಾಲದಲ್ಲಿ ಜನ ಬರುವುದಿಲ್ಲ. 250-270 ಸಿಟಿ ಬಸ್‌ಗಳು ಹೊರಡತಕ್ಕಂಥಾದ್ದು ಎಲ್ಲಾ ಒಂದು ಕಡೆ ಕೇಂದ್ರೀಕೃತವಾಗಿದೆ. ಅದೇ ರೀತಿ ರಾತ್ರಿ ಕಾಲದಲ್ಲಿ ವಾಪಸ್ ಬರತಕ್ಕಂಥ ಸಿಟಿ ಬಸ್ಸುಗಳು ಹತ್ತಾರು ಮೈಲಿ ದೂರದಿಂದ ಸೆಂಟ್ರಲ್ ಡಿಪೋಕ್ಕೆ ಬಂದು ತಲಪಬೇಕಾಗುತ್ತದೆ. ಇಂಥ ದೊಡ್ಡ ಪಟ್ಟಣದಲ್ಲಿ ಪ್ರತಿಯೊಂದು ಬಸ್ಸಿಗೆ ಪ್ರತಿದಿನ ಹತ್ತಾರು ಮೈಲಿ ಡೆಡ್ ಮೈಲೇಜ್ ಆಗುವುದರಿಂದ ಒಟ್ಟಿಗೆ ಎರಡು ಮೂರು ಸಾವಿರ ಡೆಡ್ ಮೈಲೇಜ್ ದಿನಾಲು ಆಗುತ್ತದೆ. ಇದರಿಂದ ವಿಶೇಷ ನಷ್ಟವಾಗುತ್ತಿದೆ. ಇದನ್ನು ತಪ್ಪಿಸಲು ಮುಖ್ಯ ಮುಖ್ಯ ಸ್ಥಳಗಳಲ್ಲಿ ಬೆಂಗಳೂರು ನಗರದಲ್ಲಿ ಡೀಪೋಗಳನ್ನು ಹೊಸದಾಗಿ ತೆರೆಯಬೇಕಾಗಿದೆ. ಇದಕ್ಕಾಗಿಯೇ ಧರ್ಮಾಂಬುದಿ ಕೆರೆಯ ಪ್ರದೇಶದಲ್ಲಿ ಒಂದು ಡಿಪೋ ಮಾಡಲು ನಿರ್ಧಾರ ಮಾಡಲಾಗಿದೆ. ಈ ಸ್ಥಳ ಕಾರ್ಪೊರೇಷನ್ನಿನವರು ಕೊಟ್ಟಿದ್ದಾರೆ. ಇಲ್ಲಿ ಒಂದು ಡಿಪೋ ಮಾಡಿದರೆ ಸಿಟಿ ಬಸ್ಸುಗಳನ್ನು ನಿಲ್ಲಿಸುವುದಕ್ಕೂ ಹೊರಗಡೆ ಹೋಗತಕ್ಕಂಥ ಬಸ್ಸುಗಳನ್ನು ನಿಲ್ಲಿಸುವುದಕ್ಕೂ ಬಹಳ ಅನುಕೂಲ ಮತ್ತು ಸಹಾಯಕವಾಗುತ್ತದೆ. ಈ ರೀತಿ ಅಲ್ಲಲ್ಲಿ ಡಿಪೋ ಮಾಡುವುದರಿಂದ ಈಗ ಆಗತಕ್ಕ ನಷ್ಟ ಕಡಿಮೆ ಮಾಡಲು ಸಾಧ್ಯವಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

6 P.M.

ಪಿಲ್ಫರೇಜ್ ನಿಲ್ಲಿಸುವ ಮುಖ್ಯ ಸುಧಾರಣೆಯಾಗಬೇಕಾಗಿದೆ. ಪಿಲ್ಫರೇಜ್ ನಿಲ್ಲಿಸುವುದು ಬಹಳ ಕಷ್ಟ. ನಾನಾ ರೀತಿಯಲ್ಲಿ ಪ್ರಯತ್ನ ಮಾಡಲಾಗುತ್ತಿದೆ. ಇದಕ್ಕೆ ಜನರ ನೈತಿಕ ಮಟ್ಟ ಹೆಚ್ಚಾಗಬೇಕು. ಸಾವಿರಾರು ಜನ ಕಂಡಕ್ಟರ್ಸ್ ಡಿಸ್‌ಮಿಸ್ ಮಾಡಿದರೆ ಅಷ್ಟು ಪ್ರಯೋಜನವಾಗುವುದಿಲ್ಲ. ಜನರಲ್ಲಿ ಪ್ರಾಮಾಣಿಕತೆ ಬೆಳೆಯಬೇಕು. ಸರಿಯಾಗಿ ದುಡ್ಡು ಕೊಟ್ಟು ಟಿಕೇಟ್ ತೆಗೆದುಕೊಳ್ಳಬೇಕು. ರಷಿಯಾ, ಯೂರೋಪ್ ದೇಶಗಳಿಗೆ ಹೋಗಿ ನೋಡಿಕೊಂಡು ಬಂದಿರುವ ಒಬ್ಬ ವ್ಯಕ್ತಿ ಕೊಟ್ಟಿರುವ ಹೇಳಿಕೆ ನಾನು ಪೇಪರ್‌ನಲ್ಲಿ ನೋಡಿದ್ದೇನೆ. ಅಲ್ಲಿ ಪಿಲ್ಫರೇಜ್ ಇಲ್ಲವಂತೆ. ಬಸ್ಸುಗಳಲ್ಲಿ ಕಂಡಕ್ಟರ್ ಇರುವದಿಲ್ಲ. ಡ್ರೈವರ್ ಮಾತ್ರ ಇದ್ದು ಬಸ್ ನಡೆಸುತ್ತಾನೆ. ಪ್ರಯಾಣಿಕರು ಬಸ್ಸುಗಳಲ್ಲಿ

(ಶ್ರೀ ಸಿ. ಡಿ. ದೇವರಾಜ ಅರಸ್)

ಬಂದು ಅಲ್ಲಿ ಇಟ್ಟಿರುವ ಒಂದು ಮೆಷಿನ್‌ನಲ್ಲಿ ಸರಿಯಾದ ಹಣ ಹಾಕಿ ತಮಗೆ ಬೇಕಾದ ಟಿಕೆಟ್‌ನ್ನು ತೆಗೆದುಕೊಳ್ಳುತ್ತಾರೆ. ಜನ ಇಷ್ಟು ಪ್ರಮಾಣಿಕರಾಗಿದ್ದಾರೆ. ಅದೇ ರೀತಿಯಾಗಿ ನಮ್ಮ ದೇಶದಲ್ಲಿ ಅಂಥ ಪ್ರಾಮಾಣಿಕತೆ ಬರಬೇಕಾದರೆ ಬಹಳ ಕಾಲಬೇಕು. ಕೆಲವು ಕಡೆ 2 ರಿಂದ 5 ಪರ್ಸೆಂಟು ಕೆಲವು ಕಡೆ 10-15 ಪರ್ಸೆಂಟು ಪಿಲ್ಫರೇಜ್ ಇದೆ. ಒಂದೇ ರೀತಿಯಾಗಿ ಇಲ್ಲ. ಈಗ ಟಿಕೆಟ್ ಕೊಡುವ ವಿಧಾನದಲ್ಲಿ ಬದಲಾವಣೆ ಮಾಡಿ ಅದನ್ನು ಎಲ್ಲಕಡೆ ಜಾರಿಗೆ ತಂದರೆ ಫಿಲ್ಫರೇಜ್ ಕಡಿಮೆಮಾಡಲು ಸಾಧ್ಯವಿದೆ. ಅದಕ್ಕಾಗಿ ಪ್ರಯತ್ನವಾಡುತ್ತೇವೆ. ಬಸ್ಸುಗಳು ಹೊರಡುವ ಸ್ಥಳದಲ್ಲಿಯೇ ಮೊದಲು ಪ್ರಯಾಣಿಕರಿಗೆ ಟಿಕೆಟ್ ಕೊಟ್ಟುಬಿಡುವ ವಿಧಾನ ಜಾರಿಗೆ ತರಲು ಪ್ರಯತ್ನಮಾಡಲಾಗುತ್ತಿದೆ. ಹಿಂದಕ್ಕೆ window booking ಎಂದು ಈ ಪದ್ಧತಿ ಜಾರಿಯಲ್ಲಿದ್ದಿತು. ಪ್ರಯಾಣಿಕರು ಬಸ್ಸು ಹತ್ತುವಾಗಲೇ ಟಿಕೆಟ್‌ನ್ನು ಕೊಟ್ಟುಬಿಟ್ಟರೆ, ಒಂದು ಭಾಗದ ದುಡ್ಡು ಕಾರ್ಪೊರೇಷನ್ನಿಗೆ ನೇರವಾಗಿ ಬರುತ್ತದೆ. ಯಾವ ರೀತಿ ಈ ವ್ಯವಸ್ಥೆ ಕೆಲಸಮಾಡುತ್ತದೆ ನೋಡಬೇಕಾಗಿದೆ. ಇದರಲ್ಲಿರುವ ಲೋಪ ದೋಷಗಳನ್ನು ಕಂಡುಹಿಡಿದು ಸರಿಪಡಿಸಿ, ಇತರ ಭಾಗಗಳಲ್ಲಿಯೂ ಈ ವಿಧಾನವನ್ನು ಜಾರಿಗೆತರಲು ಪ್ರಯತ್ನಮಾಡಲಾಗುವುದು. ಮುಖ್ಯ ಮುಖ್ಯ ಕೇಂದ್ರಗಳಲ್ಲಿ ವಿಂಡೋ ಬುಕ್ಕಿಂಗ್ ಆದರೆ ಪಿಲ್ಫರೇಜ್ ಕಡಿಮೆಯಾಗಬಹುದೆಂದು ನಿರೀಕ್ಷಣೆಯಿದೆ. ಈಗ ಒಂದೆರಡು ಕಡೆ ಪ್ರಾರಂಭ ಮಾಡಿದ ಸ್ಥಳದಲ್ಲಿ ಅನುಭವದಿಂದ ಆಶಾದಾಯಕವಾಗಿ ಕಾಣುತ್ತಿದೆ. ಆದ್ದರಿಂದ ಇದನ್ನು ಮುಂದುವರಿಸಬೇಕೆಂದಿದ್ದೇವೆ. ಇನ್ನೂ ಹೆಚ್ಚು ಫಲಕಾರಿಯಾಗುವ ರೀತಿಯಲ್ಲಿ, ಜನ ಸಾಮಾನ್ಯರಿಗೆ ಸಮಾಧಾನಕರವಾಗಿ ತೃಪ್ತಿಕರವಾಗಿ ನಡೆಯುವ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಇದಕ್ಕಾಗಿ ನಾವು ಮಾಡುವ ಸರ್ವ ಪ್ರಯತ್ನಕ್ಕೆಮಾನ್ಯ ಸದಸ್ಯರೂ ಸಹ ಸಹಕಾರ ಮಾಡುತ್ತಾರೆಂದು ಮಾನ್ಯ ಸಭೆಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಲೇಬರ್ ಡಿಪಾರ್ಟ್‌ಮೆಂಟ್ ವಿಚಾರದಲ್ಲಿ 40-45 ಕಟ್ ಮೋಷನ್ಸ್ ಬಂದಿವೆ. ಎಲ್ಲ ಕಟ್ ಮೋಷನ್ಸ್‌ಗಳಿಗೆ ಜವಾಬು ಕೊಡುವುದು ಕಷ್ಟ. ಕೆಲವು ಮುಖ್ಯ ವಿಷಯಗಳನ್ನು ಶ್ರೀಮಾನ್ ರಾಜಗೋಪಾಲ ಅವರು ಹೇಳಿರುವುದಕ್ಕೆ ಜವಾಬು ಕೊಡುತ್ತೇನೆ. ಇನ್ನು ಬಾಕಿ ವಿಷಯಗಳಿಗೆ ಜವಾಬು ಕೊಡುವುದು ಸಾಧ್ಯವಿಲ್ಲದೇ ಇದ್ದರೂ ಕೂಡ ಅವುಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಏನು ತೊಂದರೆಯಿದೆಯೋ ಅದನ್ನು ನಿವಾರಣೆಮಾಡಲು ಪ್ರಯತ್ನಮಾಡುತ್ತೇವೆ. ಕೋಲಾರ ಇಂಡಸ್ಟ್ರಿಯಲ್ ಟ್ರೇನಿಂಗ್ ಸೆಂಟರ್ ಸೆಲೆಕ್ಷನ್ ಕಮಿಟಿ ಆಗಲಿ, ಲೇಬರ್ ಅಡ್ವೈಜರಿ ಕಮಿಟಿಯಾಗಲಿ ಇಂಥ ಕಮಿಟಿ ನೇಮಕ ಮಾಡುವದರಲ್ಲಿ ಲೇಬರ್ ಸಂಸ್ಥೆಯ ಸದಸ್ಯರಿಗೆ ಸ್ಥಾನ ಕೊಟ್ಟಿಲ್ಲ ಎಂದು ಅವರು ಹೇಳಿದರು. ಅಂಥಾದ್ದೇನಾದರೂ ಕೈತಪ್ಪಿ ಹೋಗಿದ್ದರೆ ಮತ್ತೊಂದು ಸಾರಿ ನ್ಯಾಯವಾಗಿ ಇದ್ದರೆ ಅಂಥ ಸದಸ್ಯರನ್ನು ನೇಮಕ ಮಾಡೋಣ. ಸ್ಟೇಟ್ ಲೆವೆಲ್ಲಿನಲ್ಲಿ ಇರತಕ್ಕಂಥ ಕಮಿಟಿಯಾಗಲಿ ಪ್ಲಾಂಟೇಷನ್ ಲೇಬರ್ ಬಗ್ಗೆ ಇರತಕ್ಕ ಕಮಿಟಿಯಾಗಲಿ ಅದರಲ್ಲಿ I N T U C, A I T U C ಪ್ರತಿನಿಧಿಗಳು ಇದ್ದಾರೆ. ಹಿಂದ್ ಮಜದೂರು ಸಂಘದ ಸದಸ್ಯರೂ ಇದ್ದಾರೆ. ಲೇಬರ್ ರೆಪ್ರೆ-ಜೆಂಟೇಷನ್ ವಿಚಾರದಲ್ಲಿ ಎಲ್ಲ ಮುಖ್ಯ ಮುಖ್ಯ ಸಂಸ್ಥೆಗಳ ಪ್ರತಿನಿಧಿಗಳಿಗೆ ಮಾನ್ಯತೆ ಕೊಡುತ್ತಾ ಇದ್ದೇವೆ ಎಂದು ಸಭೆಯ ಗಮನಕ್ಕೆ ತರುತ್ತೇನೆ.

E S I Scheme ದಾಂಡೇಲಿ ವಿಚಾರದಲ್ಲಿ ಒಂದು ಪ್ರಕರಣವನ್ನು ಶ್ರೀಮಾನ್ ರಾಜ ಗೋಪಾಲ್ ಅವರು ಪ್ರಸ್ತಾಪ ಮಾಡಿದ್ದಾರೆ. ಹುಬ್ಬಳಿಯಲ್ಲಿ ಡಾಕ್ಟರರು ಆ ವ್ಯಕ್ತಿಗೆ ಪ್ರಾಣವಿರುವ ವರೆಗೆ ಕೈಮೀರಿ ಪ್ರಯತ್ನಪಟ್ಟಿದ್ದಾರೆ. ಡಾಕ್ಟರರ ಕೈ ಮೀರಿದನಂತರ ಆ ವ್ಯಕ್ತಿ ಪ್ರಾಣ ಬಿಟ್ಟಿದ್ದಾನೆ. ಎಲ್ಲ ವಿವರಗಳು ಈಗ ನನ್ನ ಹತ್ತಿರವಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ. ಹುಬ್ಬಳ್ಳಿಯಲ್ಲಿ ಆ ವ್ಯಕ್ತಿಗೆ ಚಿಕಿತ್ಸೆನಡೆಸಿದ ಆಸ್ಪತ್ರೆ ESI ಆಸ್ಪತ್ರೆಯಲ್ಲ ಎಂದು ಸಭೆಯ ಗಮನಕ್ಕೆ ತರುತ್ತೇನೆ.

ಇನ್ನು ಇ. ಎಸ್. ಐ. ಕಾರ್ಪೊರೇಷನ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ನಾನು ಕ್ಯಾಷ್ಯೂ ಇಂಡಸ್ಟ್ರೀಸ್ ಬಗ್ಗೆ ಒಂದು ಸಲಹೆ ಹೇಳುತ್ತಿದ್ದೆ. ಅದನ್ನು non-seasonal ಎಂದು ಸರ್ಕಾರದಿಂದ ಡಿಕ್ಲೇರ್ ಮಾಡಬೇಕು ಎಂದು ಆಗಿಂದಾಗ್ಗೆ ಈ ಸಭೆಯ ಮುಂದೆ ಹೇಳುತ್ತಿದ್ದೇನೆ. ಅದರ ಬಗ್ಗೆ ವಿಷಯಗಳ ವಾಸ್ತವಾಂಶವನ್ನು ತಿಳಿಸಿ ಅವುಗಳ ವಿಚಾರವಾಗಿ ಏನುಮಾಡಬೇಕೆಂಬುದನ್ನು ಈ ಮಾನ್ಯ ಸಭೆಯ ಗಮನಕ್ಕೆ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆಗ ಮಾನ್ಯ ಸದಸ್ಯರೆಲ್ಲರೂ ತೃಪ್ತರಾಗುತ್ತಾರೆಂದು ನಾನಾ ನಂಬಿದ್ದೇನೆ. ಇ. ಎಸ್. ಐ. ಸ್ಕೀಂ ಪ್ರಕಾರ ಎಷ್ಟೋ ಇಂಡಸ್ಟ್ರೀಸ್ ಡಿಸ್‌ಪ್ಯೂಟ್ಸ್ ಆಕ್ಟ್‌ಗಳಿವೆ. ನಾನು ದೇಶಗಳ ಆಕ್ಟ್‌ಗಳೂ ಸಹ ಇವೆ. ಇದನ್ನು ಕಾನೂನಿನ ದೃಷ್ಟಿಯಿಂದ ನೋಡುವುದಾದರೆ ಸರ್ಕಾರದವರು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟನ್ನು ಜಾರಿಗೆ ತಂದು ಅದರ ಪ್ರಕಾರ ಎಲ್ಲಾ ಕೈಗಾರಿಕೆಗಳು ಇದ್ದರೆ ಆಗ ಅವನ್ನು non-seasonal ಎಂದು ಹೇಳಿ ಒಂದು

ನೋಟಿಫಿಕೇಷನ್ ಮಾಡತಕ್ಕದ್ದು, ಅದಕ್ಕೆ ಕಾನೂನು ಭದ್ರತೆ ಇದೆಯೇ ಎನ್ನುವುದನ್ನು ಯೋಚನೆ ಮಾಡಿದರೆ ಅದು ಅನುಮಾನಾಸ್ಪದವಾಗಿದೆ. ಆದರೆ ಇಡೀ ಕೈಗಾರಿಕೆಗಳನ್ನೆಲ್ಲಾ ನಾನ್-ಸೀಜನಲ್ಲಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ಇಂಡಿವಿಜುಯಲ್ಲಾಗಿ ಕೈಗಾರಿಕಾ ಸಂಸ್ಥೆಗಳಲ್ಲಿ ಆ ರೀತಿ dispute ಬಂದರೆ ಇದು ಸೀಜನಲ್ಲೋ ಅಥವಾ ಅನ್‌ಸೀಜನಲ್ಲೋ ಎಂಬುದನ್ನು ಸರ್ಕಾರದವರು ತೀರ್ಮಾನ ಮಾಡಬಹುದು. ಸೀ ಜನಲ್ ಅಲ್ಲವೆಂತಲೂ ತೀರ್ಮಾನ ಮಾಡಬಹುದು. ಈ ವರ್ಷ ಕ್ಯಾಪಿಟಲ್ ಎಷ್ಟರಮಟ್ಟಿಗೆ ವರ್ಕ್ ಮಾಡುವುದಕ್ಕೆ ಸಾಧ್ಯ ವಿದೆಯೆಂಬುದನ್ನು ನೋಡಿ ತೀರ್ಮಾನ ಕೊಡಬೇಕಾದುದು ಇದೆ. ಈಗ ನಾವು ಮಾಡಿರುವ ಇ. ಎಸ್. ಐ. ಸ್ಕೀಂ ಎಲ್ಲಾ ಕಡೆಯೂ ಅಪ್ಲೈ ಮಾಡಬೇಕಾಗಿದೆ. ಅದನ್ನು ವಿಚಾರ ಮಾಡಲೂ ಬೇಕಾಗಿದೆ. ಇ. ಎಸ್. ಐ. ಸ್ಕೀಂ ಆಕ್ಟ್ ಪ್ರಕಾರ ಕೆಲವು ಫ್ಯಾಕ್ಟರಿಗಳಿಗೆ ವಿನಾಯಿತಿ ಕೊಟ್ಟು ಬಂದಿದ್ದೇವೆ. ಈ ಸಾರಿ ಬೇರೆ ಕಡೆ ಕೊಡಬೇಕೆಂದು ಹೇಳಿದ್ದೇವೆ. ಈ ಸ್ಕೀಮನ್ನು ಮಂಗಳೂರಿನ ಫ್ಯಾಕ್ಟರಿಗಳಿಗೆ ಅಪ್ಲೈ ಮಾಡಬೇಕೆಂದು ಹೇಳಿದ್ದೇವೆ. ಆದರೆ ಈಗಲೂ ವಿನಾಯಿತಿ ಮಾತ್ರ ಕೊಟ್ಟಿಲ್ಲ. ಇಲ್ಲಿ ಇದು ಆಟೊಮ್ಯಾಟಿಕ್ ಆಗಿ ಅಪ್ಲೈ ಆಗುತ್ತದೆ. ಯಾವು ಯಾವುದಕ್ಕೆ ಯಾವ ರೀತಿ ಅಪ್ಲೈ ಆಗುತ್ತದೆಂಬುದನ್ನು ಇಂಡಿವಿಜುಯಲ್ ಫ್ಯಾಕ್ಟರೀಸ್ ಬಂದಾಗ ನೋಡೋಣ. ಬಹುಶಃ ಈ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇದರ ಮೇಲೆ ಹೆಚ್ಚಿನ ಜಿಜ್ಞಾಸೆ ಬೇಕಿಲ್ಲ. ಇನ್ನು ಮುಂದೆ ಈ ರೀತಿಯಾದ ಸಾಗಾಣಿಕೆ ವಿನಾಯಿತಿಯನ್ನು ಕೊಡುತ್ತಾ ಇರುವುದನ್ನು ಕೂಡಲೇ ನಿಲ್ಲಿಸಬೇಕು ಎಂಬುದಾಗಿ ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಈಗ ಡಾಕ್ಟರುಗಳ ಪಾಸಿಟಿ ಇತ್ಯಾದಿ ಕಾರಣವೆಂದು ಕೆಲವರು ಹೇಳಿದರು. ಆದರೆ ಇತ್ತೀಚೆಗೆ ಹೆಚ್ಚು ಡಾಕ್ಟರುಗಳು ದೊರೆಯುವ ಸನ್ನಿವೇಶ ಇರುವ ಕಾರಣ ಈ ಇ. ಎಸ್. ಐ. ಆಕ್ಟ್ ಪ್ರಕಾರ ಮಂಗಳೂರಿನಲ್ಲಿರತಕ್ಕ ವರ್ಕರ್ಸ್‌ಗೆ ಆ ಒಂದು ಸ್ಕೀಮನ್ನು ಅಪ್ಲೈ ಮಾಡುವುದಕ್ಕೆ ಅವಕಾಶ ಮಾಡಿಕೊಡೋಣ. ಇನ್ನೂ ಅನೇಕ ವಿಷಯಗಳಿವೆ. ಕಾಲಾವಕಾಶವಿಲ್ಲ ಇತರೇ ಮಾನ್ಯ ಮಂತ್ರಿಗಳು ಬೇರೆ ಮಾತನಾಡುವವರು ಇದ್ದಾರೆ. ಅನೇಕ ಸದಸ್ಯರು ಬೇಕಾದಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಮೊದಲೇ ತಿಳಿಸಿದಹಾಗೆ ಎಲ್ಲಕ್ಕೂ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಬಿಡಿ ಬಿಡಿಯಾಗಿ ಏನೇನು ಹೇಳಿದ್ದಾರೋ ಅವೆಲ್ಲಕ್ಕೂ ಸರ್ಕಾರದವರು ಗಮನಕೊಡುತ್ತಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ ಮತ್ತು ಅದಕ್ಕೆ ತಕ್ಕ ಪರಿಹಾರ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇವೆ. ಒಟ್ಟಿನಲ್ಲಿ ಇನ್ನು ಲೇಬರ್ ಡಿಪಾರ್ಟ್‌ಮೆಂಟನ್ನು ಮುಂದೆ ಚೆನ್ನಾಗಿ ಅಭಿವೃದ್ಧಿ ಮಾಡಬೇಕು ಎಂಬುವುದಾದರೆ ಸುಮಾರು 5 ಲಕ್ಷ ವರ್ಕರ್ಸ್‌ಗಳು ಎಂಬ ಒಂದು ಲೆಖ್ಖ ನಮ್ಮ ಮುಂದೆ ಇದೆ. ಇದರಲ್ಲಿ ವ್ಯವಸಾಯದಲ್ಲಿ ಸೇರಿರತಕ್ಕ ಲೇಬರರ್ಸ್ ಪೂರ್ತಿ ಇನ್ನೂ ಸೇರಿಸಿಲ್ಲ. ಇದರಲ್ಲಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರು ಮತ್ತು ಪ್ಲಾಂಟೇಷನ್‌ಗಳಲ್ಲಿ ಕೆಲಸ ಮಾಡುವವರು, ಲೇಬರರ್ಸ್ ಮಾತ್ರ ಸೇರಿದೆ. ಈ ಐದು ಲಕ್ಷ ಜನರ ಮೇಲ್ವಿಚಾರಣೆ, ಜೊತೆಗೆ 2 ಸಾವಿರ ಚಿಲ್ಲರೆ ಕೈಗಾರಿಕೆ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಕೆಲವಾರು ಕಾಯಿದೆಗಳನ್ನು ಅಪ್ಲೈ ಮಾಡಬೇಕಾಗಿದೆ. ಅಗ್ರಿಕಲ್ಚರಲ್ ಲೇಬರರ್ಸ್ ಅರ್ಜಿಗಳು ದೇಶಾದ್ಯಂತ ಎಲ್ಲಾ ಕಡೆಯೂ ಇವೆ. ಇಷ್ಟೆಲ್ಲವನ್ನು ನೋಡಬೇಕಾದ ಜವಾಬ್ದಾರಿ ಈ ಲೇಬರ್ ಡಿಪಾರ್ಟ್‌ಮೆಂಟಿಗೆ ಇದೆ. ಈಗಿನ ಸನ್ನಿವೇಶ ವೇಸಿದೆ, ಅನೇಕ ಮಾನ್ಯ ಸದಸ್ಯರು ಸಂದರ್ಭಾನುಸಾರವಾಗಿ ಏನು ತಿಳಿಸಿದ್ದಾರೆಯೋ ಅದು ಒಂದು ಭಾಗ ದೊಡ್ಡದಾಗಿ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತಾ ಇದೆ ಸುಮಾರು 25 ಕಾನೂನುಗಳನ್ನು ಜಾರಿಯಲ್ಲಿ ಕೊಡುವ ಜವಾಬ್ದಾರಿಯನ್ನು ಹೊತ್ತಿದೆ. ದೇಶದಲ್ಲಿರತಕ್ಕ ಎಲ್ಲಾ ಎಂಪ್ಲಾಯ್‌ಮೆಂಟಿನ ಲೇಬರರ್ಸ್ ಏನು ಇದ್ದಾರೆ ಅವರೆಲ್ಲರ ಯೋಗಕ್ಷೇಮವನ್ನು ನೋಡುವ ಒಂದು ದೊಡ್ಡ ಜವಾಬ್ದಾರಿಯನ್ನು ಹೊತ್ತಿರಬೇಕಾದರೆ ಈ ಇಲಾಖೆ ಸಾಕಷ್ಟು ಪ್ರಮಾಣದಲ್ಲಿ ಬೆಳೆಯಬೇಕಾದುದು ಅತ್ಯಗತ್ಯವಾಗಿದೆ. ಅನೇಕ ಸಂದರ್ಭಗಳಲ್ಲಿ ಫ್ಯಾಕ್ಟರಿಗಳ ಆಡಳಿತವನ್ನು ನೋಡಿ ಪರಿಶೀಲನೆ ಮಾಡುವುದಕ್ಕಾಗಿ Chief Inspector of factoriesನ್ನು ಹುಡುಕುವುದಕ್ಕೇ ಒಂದು ಕಷ್ಟವಾಗಿದೆ. ಈಗ ಈ ಇಲಾಖೆಗೆ ಇಂಡಿಯಾ ಸರ್ಕಾರದಿಂದ ಒಬ್ಬ ಅಧಿಕಾರಿಯನ್ನು ಕಳುಹಿಸಿದ್ದಾರೆ. ನಮ್ಮ sanctioned strength ನಷ್ಟು ಜನ ದೊರಕಿಲ್ಲ. ಸುಮಾರು 8 ಜನರ ಸ್ಥಾನ ಹಾಗೆಯೇ ಖಾಲಿ ಇದೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ಸುಮಾರು 100 ಜನರನ್ನು ಈ ಹುದ್ದೆಗೋಸ್ಕರ ಕಳುಹಿಸುತ್ತೇವೆ ಎಂಬುದಾಗಿ ಹೇಳಿ ಮೊನ್ನೆ ಮೊನ್ನೆ ಅರ್ಜಿಗಳನ್ನು ಕರೆದಿದ್ದಾರೆ. ಕೇವಲ ಐದು ಜನಗಳೂ ಸಹ ಸಿಗಲಿಲ್ಲ. ಈ ಇಲಾಖೆಯಲ್ಲಿ ಟೆಕ್ನಿಕಲ್ ಕೆಲಸ ಮಾಡಬೇಕಾಗಿರುವುದರಿಂದ ಇಂತಹ ಟೆಕ್ನಿಕಲ್ ಕೆಲಸದಲ್ಲಿ ಚೆನ್ನಾಗಿ ತರಪೇತಾಗಿರುವ ಟೆಕ್ನಿಷಿಯನ್ನೇ ಬೇಕು. ಅವರ ಅಭಾವ ಬಹಳ ಮಟ್ಟಿಗೆ ಇರುವುದರಿಂದ ಈ ಇಲಾಖೆ ಸಾಕಷ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಒಂದು ಅಡಚಣೆಯಾಗಿ ಉಳಿದಿದೆ. ಈ ಎಲ್ಲಾ ಅಡಚಣೆಗಳು ನಿವಾರಣೆಯಾದರೆ ಈ ಇಲಾಖೆ ಮೂಲಕ ಏನೊಂದು ಜವಾಬ್ದಾರಿಯನ್ನು ಹೊತ್ತಿದ್ದೇವೋ ಆ ಜವಾಬ್ದಾರಿ ಕೆಲಸಗಳನ್ನೆಲ್ಲಾ ಅಚ್ಚುಮೆಚ್ಚಾಗಿ ಮಾಡ

(ಶ್ರೀ ಸಿ. ಡಿ. ದೇವರಾಜ ಅರಸ್)

ಬಹುದು. ಅದರಲ್ಲೂ ಹೆಚ್ಚಿಗೆ ಕಾರ್ಮಿಕರಿಗೆ ಒದಗಿಸಬೇಕಾದ ಸೌಲಭ್ಯಗಳು, ಅವರ ಯೋಗಕ್ಷೇಮ, ಅವರಿಗೆ ದೊರೆಯಬೇಕಾದ ವಿದ್ಯಾ ಸೌಕರ್ಯ ಇದೆಲ್ಲವನ್ನು ಕೊಡಲು ಈಗ ತಾನೇ ಹೊಸದಾಗಿ ಕೆಲವು ಯೋಜನೆಗಳು ಬರುತ್ತಾ ಇವೆ. ಈ ದೇಶದಲ್ಲಿ ಅವರಿಗೆ ಎಲ್ಲ ಸೌಕರ್ಯಗಳು ದೊರೆಯಬೇಕಾದರೆ ಅವರು ತಮ್ಮ ಹಕ್ಕು ಬಾಧ್ಯತೆಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು ನಡೆಯಬೇಕಾಗಿದೆ. ಅದಕ್ಕಾಗಿ ಕೆಲವು ಕಾಲ ಬೇಕಾಗುತ್ತದೆ. ನನ್ನ ಅನುಭವದಲ್ಲಿ ಹೇಳುವುದಾದರೆ ನಮ್ಮ ದೇಶದ ಕಾರ್ಮಿಕರಿಗೆ ತಮ್ಮ ಹಕ್ಕು ಬಾಧ್ಯತೆಗಳೇನೆಂಬುದನ್ನು ತಿಳಿಯುವುದೇ ಕಷ್ಟವಾಗಿದೆ. ಅನೇಕ ಸಂದರ್ಭಗಳಲ್ಲಿ ವ್ಯವಸಾಯವನ್ನೇ ಅರಿಯದ ಜನರು ಕಾರ್ಮಿಕ ಮುಖಂಡರಾಗಿ ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕ ಮುಖಂಡರಾಗಿದ್ದುಕೊಂಡು ಕಾರ್ಮಿಕರ ಹಕ್ಕು ಬಾಧ್ಯತೆಗಳನ್ನು ಸ್ಥಿರಪಡಿಸತಕ್ಕವರ ಸಂಖ್ಯೆಯಂತೂ ಇತ್ತೀಚೆಗೆ ಬಹಳ ಕಡಿಮೆಯಾಗಿದೆ. ಈ ದೃಷ್ಟಿಯನ್ನೆಲ್ಲಾ ವಿಚಾರ ಮಾಡಿ ನೋಡಿದರೆ ಈಗತಾನೇ ಅನೇಕರು ಹೊಸದಾಗಿ ಮುಂದೆ ಹೆಜ್ಜೆ ಇಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಈ ಇಲಾಖೆ ಬರುಬರುತ್ತಾ ತೃಪ್ತಿಕರವಾಗಿ ಕೆಲಸ ಮಾಡುವುದರಲ್ಲಿ ಯಾವ ಅನುಮಾನವೂ ಇಲ್ಲವೆಂದು ನಾನು ಹೇಳುತ್ತೇನೆ. ಅದಕ್ಕಾಗಿಯೇ ಸರ್ಕಾರ ಸರ್ವವಿಧದಲ್ಲಿಯೂ ಪ್ರಯತ್ನ ಮಾಡುತ್ತಿದೆ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಮುಂದಿರುವ ಈ ಬೇಡಿಕೆಯನ್ನು ದಯಮಾಡಿ ಒಪ್ಪಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಯಶೋಧರ ದಾಸಪ್ಪ (ಸಮಾಜ ಶಾಖೆಯ ಕಲ್ಯಾಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಈ ಸೋಷಿಯಲ್ ವೆಲ್‌ಫೇರ್ ಖಾತೆಯ ವಿಚಾರವಾಗಿ ಇಲ್ಲಿ ಮಾನ್ಯಸದಸ್ಯರುಗಳು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಆ ಖಾತೆಯಲ್ಲಿರತಕ್ಕಂಥ ಲೋಪದೋಷಗಳನ್ನು ಕೂಡ ಮನಬಿಚ್ಚಿ ಈ ಇಲಾಖೆ ಪ್ರಸಿದ್ಧವಾಗಬೇಕು ಅನ್ನತಕ್ಕಂಥ ಹಿತಚಿಂತನೆಯಿಂದ ಸಲಹೆಗಳನ್ನು ಕೊಟ್ಟಿದ್ದಾರೆಂದು ತಿಳಿದುಕೊಂಡಿದ್ದೇನೆ.

ಈಗ ಈ ಖಾತೆಯಲ್ಲಿ ಅನೇಕ ಪ್ರಶ್ನೆಗಳ ಮುಖೇನ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಕೂಡ ಮಾನ್ಯ ಸದಸ್ಯರು ಪ್ರಯತ್ನ ಪಟ್ಟಿದ್ದಾರೆ. ಈ ಸೋಷಿಯಲ್ ವೆಲ್‌ಫೇರ್‌ನಲ್ಲಿ ನಮಗೆ ಈ ಮೂರನೇ ಪ್ಲಾನಿನಲ್ಲಿ ಸುಮಾರು 440 ಲಕ್ಷ ರೂಪಾಯಿಯನ್ನು ಮಂಜೂರು ಮಾಡಿದ್ದಾರೆ. ಸಲ ತುರ್ತು ಪರಿಸ್ಥಿತಿಯಿಂದ 50 ಲಕ್ಷ ರೂಪಾಯಿ ಕೊಟ್ಟಿರುವಾಗ, ಅನೇಕರಿಗೆ ಹಣ ಕಡಿಮೆಯಾಗಿದೆ, ನಮ್ಮ ಕೆಲಸ ಕಾರ್ಯಗಳು ಕುಂಠಿತವಾಗುತ್ತವೆ ಎಂಬ ಸಂಶಯ ಬಂದಿದೆ. ಈ ಸೋಷಿಯಲ್ ವೆಲ್‌ಫೇರಿಗೆ ಉಪಯೋಗಿಸತಕ್ಕಂಥ ಹಣ ಸಾಮಾನ್ಯವಾಗಿ ಹರಿಜನರಿಗೆ, ಮಹಿಳೆಯರಿಗೆ, [illegible]ರಿಗೆ ಇದ್ದು, ಅವರ ಇನ್ನೂ ಹೆಚ್ಚು ಸೌಲಭ್ಯಕ್ಕೋಸ್ಕರ ಕೊಟ್ಟಿದ್ದಾರೆಯೇ ವಿನ, ಕೇವಲ [illegible] ರೂಪಾಯಿಯಲ್ಲಿ ಇಷ್ಟು ಲಕ್ಷ ಜನ ಹೆಣ್ಣು ಮಕ್ಕಳ, ಹರಿಜನ, ಗಿರಿಜನರ ಒಂದು ಸುಧಾರಣೆ[illegible]ತ್ತದೆಂದು ನಾವು ಎಂದಿಗೂ ತಿಳಿಯಬಾರದು. ಒಂದು ವೇಳೆ ನಾವು ಖರ್ಚು ಮಾಡತಕ್ಕಂಥ ಸರಿಯಾದ ರೀತಿಯಲ್ಲಿ ವಿನಿಯೋಗವಾಗಿ, ಜನರಿಗೆ ಅದರಲ್ಲಿ ನಂಬಿಕೆ ಬಂದರೆ. ಸರ್ಕಾರಕ್ಕೂ ಕ. ತಾವು ಖರ್ಚು ಮಾಡುತ್ತಾ ಇರುವಂಥ ಹಣ ನೇರವಾಗಿ ಯಾರಿಗೋಸ್ಕರ ಖರ್ಚು ಮಾಡುತ್ತಿದೆಯೋ, ಅವರ ಉದ್ಧಾರವಾಗುತ್ತಿದೆ ಎಂಬ ನಂಬಿಕೆ ಬಂದರೆ, ಕೇಂದ್ರ ಸರ್ಕಾರದವರಿಗೂ ಕೂಡ ನಮ್ಮ ಕೆಲಸವನ್ನು ಅವರಿಗೆ ಚೆನ್ನಾಗಿ ಮನವರಿಕೆಯಾಗುವ ರೀತಿಯಲ್ಲಿ ನಾವು ತೋರಿಸಿದ್ದೇ ಆದರೆ ಇದಕ್ಕಿಂತ ಇಮ್ಮಡಿಯಾದಷ್ಟು ಹಣ ದೊರೆತು, ಈ ಗಿರಿಜನರ ಮೇಲ್ಮೆಯನ್ನು ಸಾಧಿಸುವುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ.

ಈ ಇಲಾಖೆಯ ಜವಾಬ್ದಾರಿ ವಹಿಸಿಕೊಂಡ ಕೂಡಲೆ, ಹೋದ ವರ್ಷ ಮಾರ್ಚಿ 15, 1962 ರಲ್ಲಿ ಸುಮಾರು 5⅓ ಲಕ್ಷ ರೂಪಾಯಿ ಲ್ಯಾಪ್ಸ್ ಆಗುವುದನ್ನು ತಪ್ಪಿಸಿ ಅದನ್ನು ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಮುಖಾಂತರ ಹಂಚಲಾಯಿತು. ಈ ನಮ್ಮ ಇಲಾಖೆಯ ವಿಷಯದಲ್ಲಿ, ಇವತ್ತೇ ಅಲ್ಲದೆ ಹಿಂದಿನಿಂದಲೂ, ಅನೇಕ ಟೀಕೆಗಳಾಗಿ, ಅನೇಕ ದೋಷಗಳನ್ನು ಮಾನ್ಯ ಸದಸ್ಯರು ಇಲ್ಲಿಯೂ ಹೊರಗಡೆಯೂ ಹೇಳಿದುದನ್ನು ತಿಳಿದೇ, ಮೊದಲು ನಮ್ಮ ಇಲಾಖೆಯ ಆಫೀಸು ಏನಿದೆ ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನ ಮಾಡಿದೆವು. ಒಬ್ಬ I. A. S. ಆಫೀಸರನ್ನು ಡೈರೆಕ್ಟರಾಗಿ ನೇಮಿಸಿ, ಒಳ್ಳೆಯ ಅಕೌಂಟೆಂಟ್ ಒಬ್ಬರನ್ನು ನೇಮಿಸಿ, ಸುಮಾರು 48 ಲಕ್ಷ ರೂಪಾಯಿಗಳಷ್ಟು ಎ. ಸಿ. ಬಿಲ್ಲುಗಳು ನಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟನ್ನು ತೃಪ್ತಿಪಡಿಸದೆ ತೊಂದರೆಗೆ ಬಂದ ಸಂದರ್ಭದಲ್ಲಿ ಅದನ್ನು ಸರಿಪಡಿಸಿ ಈಗ ಅದನ್ನು ಸುಮಾರು 18 ಲಕ್ಷಕ್ಕೆ ಇಳಿಸಲಾಗಿದೆ.

ಇಷ್ಟೇ ಅಲ್ಲದೆ, ಈ ಸರ್ಕಾರಿ ಕೆಲಸಕಾರ್ಯಗಳಲ್ಲಿ ನೇಮಿಸುವುದರಲ್ಲಿ ಹರಿಜನ, ಗಿರಿಜನರಿಗೆ ಕೊಡಬೇಕಾದಂಥದು ಕೇವಲ 18 ಪರ್ಸೆಂಟ್ ಇರುತ್ತದೆ. ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಸರಿಯಾದ ರೀತಿಯಲ್ಲಿ ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಕೆಲಸ ಕಾರ್ಯಗಳನ್ನು ಒದಗಿಸದೆ ಇರುವುದರಿಂದ

ಅದನ್ನು ಸರಿಪಡಿಸುವುದಕ್ಕೋಸ್ಕರ 'ಬೀರಪ್ಪ ಕಮಿಟಿಯವರು' ಏನು ರೆಕಮೆಂಡೇಶನ್ಸ್ ಮಾಡಿದ್ದಾರೆಯೋ ಅವುಗಳನ್ನು ಇನ್ನೂ ಕಾರ್ಯಗತ ಮಾಡಿಲ್ಲವೆಂದು ಹೇಳಿ ಶ್ರೀ ರಾಜಗೋಪಾಲ್ ಅವರು ಅನೇಕ ಕಟ್ ಮೋಷನ್‌ಗಳನ್ನು ಆ ವಿಷಯದಲ್ಲಿ ಕಳುಹಿಸಿದ್ದಾರೆ. ಇದಕ್ಕೆ ಈಗಾಗಲೇ ಒಂದು ಸಬ್ ಕಮಿಟಿ ನೇಮಿಸಿ ಇದನ್ನು ಕೂಲಂಕಷವಾಗಿ ಯೋಚನೆ ಮಾಡಿ, ಪರಿಶೀಲಿಸಿ, ಎಲ್ಲ ಇಲಾಖೆಯಲ್ಲಿಯೂ ಕೂಡ ಸರಿಯಾದ ರೀತಿಯಲ್ಲಿ ಹರಿಜನ, ಗಿರಿಜನರಿಗೆ ಪ್ರಾಧಾನ್ಯತೆ ದೊರೆಯಬೇಕೆಂಬ ಸಲಹೆಯನ್ನು ಕೊಟ್ಟು ಪ್ರಯತ್ನಿಸುತ್ತಿದೆ. ಸರಿಯಾದ ರೀತಿಯಲ್ಲಿರತಕ್ಕಂಥ ವಿದ್ಯಾವಂತರು, ತಜ್ಞರು ಅವರಲ್ಲಿ ಇದ್ದರೆ ಅವರಿಗೇ ಕೊಡಬೇಕೆಂದು ಹೇಳಿದೆ. ಇನ್ನು ಮುಂದೆ ಈ ಬಗ್ಗೆ ಬಹಳ ಚುರುಕಿನಿಂದ ಕೆಲಸ ನಡೆಯುವ ಭರವಸೆ ಇದೆ.

ಬೀರಪ್ಪ ಕಮಿಟಿಯವರ 22 ರೆಕಮಂಡೇಷನ್ನುಗಳಲ್ಲಿ ಸುಮಾರು ಐದನ್ನು ಈಗಾಗಲೇ ಕಾರ್ಯಗತಮಾಡಿದ್ದೇವೆ. ಇಷ್ಟೇ ಅಲ್ಲದೆ ಎಲ್ಲಾ ಜಿಲ್ಲೆಗಳಲ್ಲಿಯೂ ಯಾವ ರೀತಿ ಕೆಲಸ ನಡೆಯುತ್ತಾ ಇದೆ, ಎಲ್ಲೆಲ್ಲಿ ಲೋಪದೋಷಗಳಿವೆ ಅನ್ನುವುದನ್ನು ನಮ್ಮ ಗಮನಕ್ಕೆ ತರುವುದಕ್ಕೋಸ್ಕರ ಒಬ್ಬ ಎವಾಲ್ಯುಯೇಷನ್ ಆಫೀಸರನ್ನು ನೇಮಿಸಲಾಗಿದೆ.

ಇಷ್ಟೇ ಅಲ್ಲದೆ ಈ ಹರಿಜನ, ಗಿರಿಜನರ, ಡಿನೋಟಿಫೈಡ್ ಟ್ರೈಬ್ಸ್‌ನ ಸುಧಾರಣೆಯನ್ನು ಜೊತೆಗೆ ಸೇರಿಸಿ, ಅವರಿಗೆ ಕೊಟ್ಟ ಹಣದಿಂದ ಕೆಲಸ ಸರಿಯಾಗಿ ಮುಂದುವರಿಯದೆ ಇದ್ದುದರಿಂದ, denotified (nomadic) Scheduled Tribes ಮತ್ತು Scheduled Castes ಈ ಮೂರು ಜನರ ಕ್ಷೇಮ ಸಾಧನೆಗೆ State level ಕಮಿಟಿಗಳನ್ನು ನಿರ್ಮಾಣ ಮಾಡಿ, ಅಲ್ಲಿ ಈ ಸಭೆಯ ಮಾನ್ಯ ಸದಸ್ಯರುಗಳೂ ಸಾರ್ವಜನಿಕ ಮುಖಂಡರುಗಳು ಮತ್ತು ಅನೇಕರನ್ನು ನೇಮಿಸಿ, ಅವರು ಎಲ್ಲಾ ವಿಚಾರಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಏನೇನು ಸಲಹೆಗಳನ್ನು ಕೊಡುತ್ತಾರೆಯೋ, ಅವುಗಳನ್ನು ...ಸಿಕೊಳ್ಳುತ್ತೇವೆ. ಇಷ್ಟೇ ಅಲ್ಲದೆ. ನಾಲ್ಕು ಸಬ್ ಕಮಿಟಿಗಳನ್ನು ಕೂಡ ಇದರಲ್ಲಿ ಮಾಡಿದೆ. ಈ ...ಟಿಗಳು ಅವರ ವಿದ್ಯಾಭ್ಯಾಸ, ಅವರನ್ನು ಕೆಲಸಕಾರ್ಯಗಳಿಗೆ ಸೇರಿಸುವುದು, ಅವರ economic ...fit ಮತ್ತು ಅಸ್ಪೃಶ್ಯತೆ ಈ ಅಂಶಗಳಲ್ಲಿ ಅವರನ್ನು ಹೇಗೆ ಸುಧಾರಿಸಬಹುದು ಎಂಬುದನ್ನು ...ಶೀಲಿಸಲು ನೇಮಿತವಾಗಿವೆ.

ಹಾಗೇನೇ ಹಣವನ್ನು ಕೂಡ ಒಬ್ಬೊಬ್ಬರಿಗೂ ಅವರವರ ಪ್ರಜಾಸಂಖ್ಯೆಗೆ ಅನುಗುಣವಾಗಿ ಹಂಚಿ ಅದನ್ನು ಸರಿಯಾದ ರೀತಿಯಲ್ಲಿ ಅವರಿಗೆ ಖರ್ಚು ಮಾಡುವುದಕ್ಕೋಸ್ಕರ ಪ್ರಯತ್ನ ಪಡಲಾಯಿತು. ಹೆಚ್ಚಿಗೆ ಈಗ ಇಲ್ಲಿ ಹೌಸಿಂಗ್ ಸ್ಕೀಮ್ ವಿಚಾರವಾಗಿ ಬಹಳ ಜನರು ಮಾತನಾಡಿದರು. 400 ರೂಪಾಯಿ ಸಬ್‌ಸಿಡಿ ಕೊಡುವುದು ಎಂದು ಹಿಂದೆ ಮಾಡಿತ್ತು. ಮೊದಲನೇ ಪ್ಲಾನಿನಲ್ಲಿ ಸುಮಾರು 85 ಲಕ್ಷ ಮನೆಗಳನ್ನು ಕಟ್ಟಿಸುವುದಕ್ಕೋಸ್ಕರ ಹಣ ಕೊಡಲಾಯಿತು. ಎರಡನೇ ಪ್ಲಾನಿನಲ್ಲಿ 139 ಲಕ್ಷ ಮನೆಗಳನ್ನು ಕಟ್ಟಿಸುವುದಕ್ಕೆ ಕೊಟ್ಟು, 26 ಸಾವಿರ ಮನೆಗಳನ್ನು ಕಟ್ಟಿತ್ತು. ಆದರೆ 1961-62 ರಲ್ಲಿ ಈ ಮನೆಗೆ ಸಬ್‌ಸಿಡಿ ಏನು ಕೊಡುತ್ತಾ ಇದ್ದೇವೋ ಅದನ್ನು ತಾವೆಲ್ಲರೂ ಟೀಕೆ ಮಾಡಿದಿರಿ. ಈ ಮನೆ ಹಣ 200 ರೂಪಾಯಿ ಕೊಡುತ್ತಿದ್ದುದರಲ್ಲಿ 20 ರೂಪಾಯಿ ಅವರ ಕೈಗೆ ಸೇರುತ್ತಿಲ್ಲ, ಹೀಗೆ ಹಣ ದುರುಪಯೋಗವಾಗುತ್ತಿದೆ, ಸರಿಯಾದ ಸಾಮಾನುಗಳು ದೊರೆಯದೆ ತೊಂದರೆಯಾಗಿದೆ. ಎಂದು ಈ ಹಣವನ್ನು ಅವರ ವಿದ್ಯಾಭ್ಯಾಸಕ್ಕೋಸ್ಕರ ಖರ್ಚು ಮಾಡಿದರೆ, ಅವರು ವಿದ್ಯಾವಂತರಾದರೆ, ಅವರವರ ಶಕ್ತ್ಯಾನುಸಾರ ಅವರೇ ಸುಧಾರಣೆ ಮಾಡಿಕೊಳ್ಳಬಲ್ಲರು ಅಂತ ಹೇಳಿ, ಹಿಂದಿದ್ದ ಮಂತ್ರಿವರ್ಯರ , ಈ ಮನೆಗಳಿಗೆ ಕೊಡತಕ್ಕಂಥ ಹಣವನ್ನು ನಿಲ್ಲಿಸಿ, ಹಾಸ್ಟಲುಗಳನ್ನು ಕಟ್ಟಿಸಬೇಕು, ಅವರ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ನಿಶ್ಚಯ ಮಾಡಿ, ಮೂರನೇ ಪ್ಲಾನಿನಲ್ಲಿ ಮನೆಗೆ ಕೊಡತಕ್ಕಂಥ ಸಬ್‌ಸಿಡಿಯನ್ನು ನಿಲ್ಲಿಸಲಾಯಿತು ಆದರೂ ಕೂಡ unfinished houses ಎಷ್ಟಿದೆಯೆಂದು ಲೆಕ್ಕ ತರಿಸಿದ್ದರಲ್ಲಿ, 18 ಲಕ್ಷ ರೂಪಾಯಿನಷ್ಟು ಕೊಟ್ಟರೆ ಎಲ್ಲಾ ಮನೆಗಳನ್ನು ಪೂರ್ತಿ ಮಾಡಬಹುದು ಎಂದು 1961—62 ರಲ್ಲಿ ಹೇಳಿದ್ದರ ಮೇಲೆ, ಎಲ್ಲಾ ಡೆಪ್ಯುಟಿ ಕಮಿಷನರುಗಳಿಂದಲೂ ಲೆಕ್ಕ ತರಿಸಿಕೊಂಡು 18 ಲಕ್ಷ ರೂಪಾಯಿನಷ್ಟು ಒದಗಿಸಲಾಯಿತು. ಈ 18 ಲಕ್ಷ ರೂಪಾಯಿ ಕೊಟ್ಟರೂ ಕೂಡ, ಇವತ್ತು ಪುನಃ unfinished houses ಅಂತ ಹೇಳಿ ಲೆಕ್ಕ ತರಿಸಿದರೆ, 13 ಲಕ್ಷ ರೂಪಾಯಿ ಬೇಕು ಅಂತ ಮತ್ತೆ ಡಿಮ್ಯಾಂಡ್ ಬಂದಿದೆ. ಹೀಗಿರುವಾಗ ಈ ಮೂರನೇ ಪ್ಲಾನಿನಲ್ಲಿ ಅನೇಕರು ಸರ್ಕಾರ ಹಣ ಕೊಡುತ್ತದೆಂದು ಗೋಡೆಗಳನ್ನು ಕಟ್ಟಿಕೊಂಡು ನಿಂತಿರಬಹುದು. ಕೆಲವರಿಗೆ ಮಾತು ಕೊಟ್ಟಿರಬಹುದು. ಹೀಗೆ ನಿರಂತರವಾಗಿ ಹತ್ತಾರು ಲಕ್ಷ ರೂಪಾಯಿ ಬೇಕೆಂದರೆ, ಅದನ್ನು ತರಬೇಕಾದರೆ ತೊಂದರೆಯಾಗುತ್ತದೆ. ಈಗ ತಾನೆ ತಾವೆಲ್ಲರೂ ಅವರಿಗೆ ತೊಂದರೆಯಾಗುತ್ತದೆ ಅಂದ ಮೇಲೆ, ಮನೆ ಸಬ್‌ಸಿಡಿಗಿಂತಲೂ, ಕೊನೆಪಕ್ಷ ಜನಗಳಿಗೆ ಮನೆಗೋಸ್ಕರ ಸ್ವಲ್ಪ ಜಾಗವನ್ನು ಕೊಡಿಸಿ, ಈಗ ತಾತ್ಕಾಲಿಕವಾಗಿ ಒಂದು ಗುಡಿಸಿಲಾದರೂ ಹಾಕಿಕೊಂಡಿದ್ದರೆ ಮುಂದೆ ಮನೆ ಕಟ್ಟುವುದಕ್ಕೆ ಅವಕಾಶವಿರುತ್ತದೆಂದು 4½ ಲಕ್ಷ ರೂಪಾಯಿಯನ್ನು ಈ ಕೆಲಸಕ್ಕೋಸ್ಕರ ಕೊಟ್ಟಿದೆ.

(ಶ್ರೀಮತಿ ಯಶೋಧರ ದಾಸಪ್ಪ)

6 ಲಕ್ಷ ರೂಪಾಯಿಗಳು ಮನೆಯ ಬಾಬ್ತು ಉಳಿದಿದೆ. ಅದನ್ನು ಅನ್‌ಕಂಪ್ಲೀಟೆಡ್ ಮನೆಗಳಿಗೆ ಕೊಡುವುದೇ ಅಥವಾ ಸೈಟುಗಳನ್ನು ಕೊಡುವುದಕ್ಕೋಸ್ಕರ ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಕೊಡುವುದೇ ಎಂಬುದನ್ನು ಯೋಚನೆ ಮಾಡಿ ಕೊನೆಗೆ ಅವರಿಗೆ ಸೈಟುಗಳನ್ನು ಕೊಡುವುದಕ್ಕೋಸ್ಕರ ಲ್ಯಾಂಡ್ ಅಕ್ವಿಜಿನ್‌ಗೆ ಕೊಡೋಣ ಎಂದು ತೀರ್ಮಾನ ಮಾಡಿದ್ದೇವೆ. ಆ ರೀತಿ ಹರಿಜನರಿಗೆ ಸೈಟುಗಳನ್ನು ಕೊಟ್ಟು ಮನೆ ಕಟ್ಟಿಕೊಳ್ಳುವುದಕ್ಕೆ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್ ಮುಖೇನ ಸಾಲಗಳನ್ನು ಕೊಡಿಸಿದರೆ ಮಧ್ಯೆ ಹಣವು ಸಹ ದುರುಪಯೋಗವಾಗುವದಿಲ್ಲ. ಸರ್ಕಾರದವರು ಅವರಿಗೆ ಮನೆ ಕಟ್ಟಿಸಿಕೊಳ್ಳಲು ಕೊಡತಕ್ಕಂಥ 400 ರೂಪಾಯಿಗಳು ಸಾಕಾಗುವುದಿಲ್ಲ. ಆದ್ದರಿಂದ ಕೋ-ಆಪರೇಟೀವ್ ಸೊಸೈಟಿಯ ಮುಖಾಂತರ ಅವರಿಗೆ ಸಾಲವನ್ನು ಕೊಡಿಸಿದರೆ ಸ್ವಲ್ಪ ಹೆಚ್ಚಿನ ಹಣವನ್ನು ಅವರಿಗೆ ಕೊಡಿಸಬಹುದು ಸ್ವಲ್ಪ ಹೆಚ್ಚಿನ ಹಣ ಸಾಲ ಸಿಕ್ಕಿದರೆ ಅವರು ಮನೆಯನ್ನು ಸ್ವಲ್ಪ ಚೆನ್ನಾಗಿ ಕಟ್ಟಿಸಿಕೊಳ್ಳಬಹುದು ಮತ್ತು ಕೋ-ಆಪರೇಟೀವ್ ಸೊಸೈಟಿಗಳ ಮುಖಾಂತರ ಸಾಲವನ್ನು ತೆಗೆದುಕೊಳ್ಳುವುದಾದರೆ ಆಗ ಆ ಮನೆಯನ್ನು ಸೊಸೈಟಿಗೆ ಆಧಾರ ಮಾಡಿಕೊಡುತ್ತಾರೆ. ಅದರ ದೆಶೆಯಿಂದ ಅವರು ಮನೆಯನ್ನು ಯಾರಿಗೂ ಪರಭಾರೆ ಮಾಡುವುದಕ್ಕೂ ಅವಕಾಶವಿರುವುದಿಲ್ಲ, ಅವರಿಗೆ ವಾಸಮಾಡುವುದಕ್ಕೆ ಒಂದು ಮನೆಯನ್ನು ಸರ್ಕಾರದವರು ಒದಗಿಸಿಕೊಟ್ಟ ಹಾಗಾಗುತ್ತದೆ ಎಂದು ಯೋಚನೆ ಮಾಡಿ ಈ ರೀತಿ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನವರು, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಎಲ್ಲರೂ ಸೇರಿ ಈ ಒಂದು ತೀರ್ಮಾನಕ್ಕೆ ಬಂದಿದ್ದೇವೆ.

6–30 P. M.

ಹರಿಜನರ ಕಾಲೋನಿಗಳನ್ನು ತೆರೆಯತಕ್ಕ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಕೆಲ ವಿಷಯಗಳನ್ನು ಹೇಳಿದ್ದಾರೆ. ಕಾಲೋನಿಗಳನ್ನು ತೆರೆಯುವುದರಿಂದ ಅನೇಕ ಹರಿಜನರಿಗೆ ಕೂಲವಾಗಿದೆ ಎಂಬುದು ನಮಗೆ ಅನುಭವ ಆಗಿದೆ. ಕಾಲೋನಿಗಳನ್ನು ತೆಗೆಯುವುದಕ್ಕೋಸ್ಕರ ಕೇಂದ್ರ ಸರ್ಕಾರದವರು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 45 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರು. ಆದ್ದರಿಂದ ನಮ್ಮ ರಾಜ್ಯ ಸರ್ಕಾರದವರು ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ 112 ಕಾಲೋನಿಗಳನ್ನು ನಮ್ಮ ರಾಜ್ಯದಲ್ಲಿ ತೆರೆದಿದ್ದಾರೆ.

ಎಲ್ಲಿ ಬೇಕೋ ಅಲ್ಲಿ ಜಮೀನು ಮತ್ತು ಇತರೆ ಸೌಲಭ್ಯಗಳು ಇವುಗಳನ್ನೆಲ್ಲಾ ನೋಡಿ ಅದರ ಬಗ್ಗೆ ಸಾರ್ವಜನಿಕ ಮುಖಂಡರ ಅಭಿಪ್ರಾಯವನ್ನೂ ಪಡೆದು ಕಾಲೋನಿಗಳನ್ನು ಮಾಡುತ್ತಿದ್ದೇವೆ. ಈಗ ಅರ್ಧಂಬರ್ಧ ಆಗಿರತಕ್ಕ ಕಾಲೋನಿಗಳೇನಿವೆ ಅಲ್ಲಿ ಭಾವಿ ಇದ್ದರೆ ಮನೆಯಿಲ್ಲ, ಮನೆಯಿದ್ದರೆ ಜನ ಇಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಆದರೆ ಆ ರೀತಿ ಎಲ್ಲಾ ಕಡೆಯೂ ಆಗಿಲ್ಲ. ಎಲ್ಲೋ ಕೆಲವು ಕಡೆ ಆ ರೀತಿ ಆಗಿರಬಹುದು. ಅನೇಕ ಕಾಲೋನಿಗಳಿಗೆ ಭಾವಿ, ಕಮ್ಯುನಿಟಿ ಹಾಲು, ಸೋಷಿಯಲ್ ವೆಲ್‌ಫೇರ್ ಸೆಂಟರು ಇವುಗಳನ್ನೆಲ್ಲಾ ಕೊಟ್ಟಿದ್ದೇವೆ. ಅವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಎಲ್ಲೋ ನಾಲ್ಕೈದು ಕಾಲೋನಿಗಳಲ್ಲಿ ಹಣ ದುರುಪಯೋಗವಾಗಿ ಜನಗಳು ತೊಂದರೆಗೆ ಗುರಿಯಾಗಿರಬಹುದು. ಕಾಲೋನಿಗಳನ್ನು ಮಾಡಿ ಜನರಿಗೆ ಜಮೀನು ಕೊಟ್ಟು ಎತ್ತುಗಳನ್ನು ಮತ್ತು ವ್ಯವಸಾಯದ ಸಲಕರಣೆಗಳನ್ನು ಕೊಟ್ಟರೆ ಅವರು ಚೆನ್ನಾಗಿ ಜೀವನ ಮಾಡಿಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆ ಎನ್ನುವ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಈ ಕಾಲೋನಿಗಳನ್ನು ಕಟ್ಟುವುದಕ್ಕೆ ಸಹಾಯ ಮಾಡುವುದನ್ನು ನಿಲ್ಲಿಸಿದ್ದರೂ ಕೂಡ ನಮ್ಮ ರಾಜ್ಯ ಸರ್ಕಾರದವರು ಅದನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈಗಾಗಲೇ ಆ ಬಗ್ಗೆ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 16 ಹೊಸ ಕಾಲೋನಿಗಳನ್ನು ತೆರೆಯಲಾಗಿದೆ. ಈಗ ಅರ್ಧಂಬರ್ಧ ಆಗಿರತಕ್ಕ ಕಮ್ಯುನಿಟಿ ಹಾಲುಗಳು, ಹಾಸ್ಟಲುಗಳು, ಭಾವಿಗಳು ಮತ್ತು ಮನೆಗಳು ಇವುಗಳನ್ನೆಲ್ಲಾ ಪೂರ್ತಿ ಮಾಡಬೇಕಾದರೆ 18-20 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಹೊಸದಾಗಿ ಕಟ್ಟುತ್ತಾ ಹೋದರೆ ಅದು ಸರಿ ಹೋಗುವುದಿಲ್ಲ ಈಗ ಅರ್ಧಂಬರ್ಧ ಆಗಿರತಕ್ಕವುಗಳಿಗೆ ಇದುವರೆಗೆ ಖರ್ಚು ಮಾಡಿರತಕ್ಕ ಹಣ ನಷ್ಟವಾಗುತ್ತದೆ. ಆದ್ದರಿಂದ ಅದನ್ನು ಸರಿಪಡಿಸಿಕೊಂಡು, ಅದನ್ನು ಪೂರ್ತಿ ಮಾಡಿ ಮುಂದೆ ಹೊಸದಾಗಿ ಶುರು ಮಾಡೋಣ ಎಂದು ತೀರ್ಮಾನ ಮಾಡಿದ್ದೇವೆ. ನಾವು ಇಷ್ಟೆಲ್ಲಾ ಮಾಡಿದ್ದರೂ ಸಹ ಈ ಜನಗಳಿಗೆ ಏನೊಂದು ಮನೋಭಾವನೆ ಬಂದಿದೆಯೆಂದರೆ ಈ ಮಂತ್ರಿ ಮಂಡಲ ಬಂದ ಮೇಲೆ ಯಾವ ಕೆಲಸ ಕಾರ್ಯಗಳೂ ಆಗುತ್ತಿಲ್ಲ. ಇದರಿಂದ ಬಹಳ ತೊಂದರೆಯಾಗಿದೆ. ಹರಿಜನರ ವಿಷಯದಲ್ಲಿ ಇವರಿಗೆ ಕನಿಕರ ಇದೆಯೋ ಇಲ್ಲವೋ ಎನ್ನುವ ಸಂಶಯ ಕೆಲವರಿಗೆ ಬಂದಿದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್

ಮೆಂಟಿನಲ್ಲಿ ಮೊದಲಿನಿಂದ ಕೊನೆಯವರೆವಿಗೂ ಹರಿಜನರನ್ನೇ ನೇಮಿಸಿದರೂ ಕೂಡ ಹಣ ಸರಿಯಾದ ರೀತಿಯಲ್ಲಿ ವಿನಿಯೋಗವಾಗದೆ ಹೋದರೆ ಯಾರೇ ಇದ್ದರೂ ಏನೂ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಜನಗಳಲ್ಲಿಯೂ ಸಣ್ಣ ಮನುಷ್ಯನಿಂದ ಹಿಡಿದು ದೊಡ್ಡ ಮನುಷ್ಯರವರೆಗೂ ಮಧ್ಯೆ ಹಣವನ್ನು ನುಂಗಿ ಹಾಕತಕ್ಕ ಒಂದು ಸಂಪ್ರದಾಯ ನಡೆದುಕೊಂಡು ಬಂದಿದೆ. ಆದರೆ ಹರಿಜನರು ಆ ರೀತಿ ಮಾಡುತ್ತಾರೆಂದು ನಾನು ಹೇಳುವುದಿಲ್ಲ, ಎಲ್ಲಾ ಕಡೆಯೂ ಸಮಾಜದಲ್ಲಿ ಕೆಲವು ಲೋಪ ದೋಷಗಳಿವೆ. ವಿದ್ಯಾವಂತರು, ಶ್ರೀಮಂತರು, ಸುಸಂಸ್ಕೃತರು ಬಡವರನ್ನು ಮತ್ತು ಅಜ್ಞಾನಿಗಳನ್ನೂ ಶೋಷಣೆ ಮಾಡತಕ್ಕದ್ದು ಹೊಸದೇನೂ ಅಲ್ಲ. ಇದನ್ನು ನಾನು ಕಂಡು ಮತ್ತು ಅನುಭವಿಸಿರುವುದರಿಂದ ಇದು ನನಗೇನೂ ಹೊಸದಾಗಿ ಕಾಣುತ್ತಾ ಇಲ್ಲ.

ಹೆಣ್ಣು ಮಕ್ಕಳು ಹೊರಗೆ ಬಂದು ಸಮಾಜ ಕಲ್ಯಾಣದ ಕೆಲಸವನ್ನು ಮಾಡುವಾಗ, ಹರಿಜನರು ಮತ್ತು ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಕಲ್ಯಾಣ ಕಾರ್ಯಗಳನ್ನು ಮಾಡುತ್ತಿರುವಾಗ ಅದರಲ್ಲಿ ಏನಾದರೂ ಕೆಲವು ಸಣ್ಣ ಪುಟ್ಟ ದೋಷಗಳು ಕಂಡು ಬಂದರೆ ಅವುಗಳನ್ನೇ ಅದ್ಭುತ ಮಾಡಿ ಬೃಹದಾಕಾರವಾಗಿ ಮಾಡಿ ಅದನ್ನು ತೋರಿಸಿ ಟೀಕೆ ಮಾಡುವುದು ಸರಿಯಲ್ಲ.

ಶ್ರೀ ಕೆ. ವಿ. ರೇವಣ್ಣ ಸಿದ್ದಪ್ಪ.—ಹಾಗಾದರೆ ಏನೂ ಹೇಳುವುದು ಬೇಡ ಎಂದು ತಮ್ಮ ಅಭಿಪ್ರಾಯವೇ ?

ಶ್ರೀಮತಿ ಯಶೋಧರ ದಾಸಪ್ಪ.—ಮಾನ್ಯ ಸದಸ್ಯರಾದ ಶ್ರೀ ರೇವಣ್ಣ ಸಿದ್ದಪ್ಪನವರು ಬಹಳ ಅನುಭವಿಗಳು ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಸಂತೋಷ. ನಾನು ಈಗ ಒಂದೆರಡು ವರ್ಷಗಳಿಂದ ಇಲ್ಲಿ ಮಂತ್ರಿಯಾಗಿ ಕೆಲಸ ಮಾಡುತ್ತಿದ್ದರೂ ಕೂಡ ನಾನು ಅನೇಕ ವರ್ಷ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಮಾಡಿ ಅನುಭವ ಇರುವುದರಿಂದ ಸರ್ಕಾರದವರು ಖರ್ಚು ಮಾಡತಕ್ಕ ಹಣ ಯಾವ ಯಾವ ರೀತಿ ವಿಲೇವಾರಿಯಾಗುತ್ತದೆ ಎಂಬುದನ್ನು ನಾನು ಬಲ್ಲೆ. ಅದಕ್ಕೋಸ್ಕರವೇ ನಾನು ಹಣವನ್ನು ಮಂಜೂರು ಮಾಡುವುದರಲ್ಲಿ ಸ್ವಲ್ಪ ಮಟ್ಟಿಗೆ ಬಿಗಿ ಹಿಡಿದಿದ್ದೇನೆ ಇದರಲ್ಲಿ ಏನೂ ಅನುಮಾನವಿಲ್ಲ, ಹಣವನ್ನು ಮಂಜೂರು ಮಾಡುವಾಗ 10 ಸಲ ಯೋಚನೆ ಮಾಡಿ ಹಣವನ್ನು ಕೊಡುತ್ತೇನೆ. ಆ ವಿಷಯದಲ್ಲಿ ನನಗೆ ಚೆನ್ನಾಗಿ ಅನುಭವ ಇದೆ. ಅದರಲ್ಲಿರತಕ್ಕ ಕೆಲವು ಲೋಪ ದೋಷಗಳನ್ನು ಸರಿಪಡಿಸದೇ ಹೋದರೆ ಸರಿಯಾದ ರೀತಿಯಲ್ಲಿ ಹಣ ವಿನಿಯೋಗವಾಗುವುದಿಲ್ಲವೆಂದು ಆ ಲೋಪ ದೋಷಗಳನ್ನು ಸರಿಪಡಿಸಲು ಪ್ರಯತ್ನ ಮಾಡುತ್ತಿದ್ದೇವೆ, ಜವಾಬ್ದಾರಿಯುತವಾದ ಸ್ಥಾನದಲ್ಲಿ ಕುಳಿತುಕೊಂಡಿರತಕ್ಕ ಅಧಿಕಾರಿಗಳು ಸಾರ್ವಜನಿಕರ ಹಣವನ್ನು ಸದುಪಯೋಗ ಮಾಡದೇ ಹೋದರೆ ಅವರೆಲ್ಲರೂ ಪಾಪಕ್ಕೆ ಗುರಿಯಾಗುತ್ತಾರೆಂಬುದನ್ನು ಮರೆಯಬಾರದು.

ಕೆಲವು ಮಾನ್ಯ ಸದಸ್ಯರು ಸೋಷಿಯಲ್ ವೆಲ್‌ಫೇರ್ ಬೋರ್ಡನ್ನು ಮುಚ್ಚಬೇಕು ಆ ಶಾಖೆಯಲ್ಲಿ ಬರೀ ಜೀಪುಗಳು ಮಾತ್ರ ಓಡುತ್ತಿವೆ ಸರಿಯಾಗಿ ಯಾವ ಕಾರ್ಯಗಳು ಆಗುತ್ತಿಲ್ಲ ಎಂದು ಟೀಕೆ ಮಾಡಿದರು. ಆ ರೀತಿ ಟೀಕೆ ಟಿಪ್ಪಣಿಗಳನ್ನು ಮಾಡತಕ್ಕದ್ದು ಸರಿಯಲ್ಲ, ಹೆಣ್ಣು ಮಕ್ಕಳು ಸಮಾಜ ಸೇವೆಯನ್ನು ಮಾಡುತ್ತೇವೆಂದು ಹೊರಗೆ ಬಂದಾಗ ಲೋಪದೋಷಗಳು ಇಲ್ಲದೇ ಇಲ್ಲ ಅದು ಸಮಾಜದಲ್ಲಿರತಕ್ಕ ರೋಗವೇ ವಿನಾ, ಸಮಾಜ ಕಲ್ಯಾಣ ಶಾಖೆಯಲ್ಲಿ ಬಂದಿರತಕ್ಕ ರೋಗವಲ್ಲ ಆ ರೋಗವನ್ನು ನಿವಾರಣೆ ಮಾಡುವುದಕ್ಕೋಸ್ಕರ ಕಲ್ಯಾಣ ಕೇಂದ್ರಗಳು ಸರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಸ್ವಲ್ಪ ಯೋಚನೆ ಮಾಡಿ ದೋಷಗಳು ಎಲ್ಲಿವೆ ಎಂಬುದನ್ನು ತಿಳಿದುಕೊಳ್ಳಬೇಕು. ಹೆಣ್ಣು ಮಕ್ಕಳು ಅವರ ಒಂದು ಅಭಿವೃದ್ಧಿಗೆ ಅವರ ಒಂದು ಮೇಲ್ಮೆಗೆ ದುಡಿಯಬೇಕು, ಅವರು ಪರಾವಲಂಬಿಗಳಾಗದೆ ಕಷ್ಟಕಾರ್ಪಣ್ಯಗಳಿಗೆ ಸಿಕ್ಕದೆ, ಸ್ವತಂತ್ರವಾಗಿ, ಸ್ವಾವಲಂಬಿಗಳಾಗಿ ಅವರು ಪವಿತ್ರವಾದ ಜೀವನವನ್ನು ನಡೆಸಬೇಕು,10 ಜನಗಳಿಗೆ ಉಪಕಾರವನ್ನು ಮಾಡಬೇಕು ಎನ್ನುವ ಒಂದು ದೃಷ್ಟಿಯಿಂದ ಸಮಾಜ ಕಲ್ಯಾಣ ಸಂಘಗಳನ್ನು, ಸಂಸ್ಥೆಗಳನ್ನು ನಾವು ಸ್ಥಾಪನೆ ಮಾಡಿದ್ದೇವೆಯೇ ಹೊರತು ಅವರೆಲ್ಲಾ ಜೀಪುಗಳಲ್ಲಿ ತಿರುಗಿ ಹಣವನ್ನು ದುರುಪಯೋಗ ಮಾಡಲಿ, ಅವರ ಒಂದು ಚಟಗಳನ್ನು ತೀರಿಸಿಕೊಳ್ಳುವುದಕ್ಕೆ ಅವರು ಈ ಕಲ್ಯಾಣ ಕೇಂದ್ರಗಳಿಗೆ ಬರಬೇಕಾದ್ದಿಲ್ಲ. ಸಮಾಜ ಸೇವೆಯನ್ನು ಮಾಡುವುದಕ್ಕೆ ಹೊರಗಡೆ ಬರತಕ್ಕ ಹೆಣ್ಣು ಮಕ್ಕಳು ಕೆಡುತ್ತಾರೆ ಎಂದು ಹೇಳುವುದು ಸರಿಯಲ್ಲ ಕೆಡತಕ್ಕವರು ಮನೆಯಲ್ಲಿದ್ದರೂ ಕೆಡುತ್ತಾರೆ, ಹೊರಗಡೆ ಬಂದರೂ ಕೆಡುತ್ತಾರೆ.

ಮಾನ್ಯ ಸದಸ್ಯರಾದ ಶ್ರೀ ಭಾಸ್ಕರ ಶೆಟ್ಟಿಯವರು ಹೇಳಿದರು ''ನಾನು ಮಂಗಳೂರಿಗೆ ಹೋಗಿದ್ದಾಗ ಅಲ್ಲಿನ ಹೆಣ್ಣು ಮಕ್ಕಳು ನಮ್ಮ ಬೆಂಗಳೂರಿಗೆ ಬರುವುದಾದರೆ ಅವರಿಗೆ ಉದ್ಯೋಗವನ್ನು ಕೊಡಿಸುತ್ತೇನೆ ಮತ್ತು ಮದುವೆಯಾಗುವುದಕ್ಕೆ ಗಂಡುಗಳನ್ನು ಕೊಡಿಸುತ್ತೇನೆ ಎಂದು ಹೇಳಿ ಬಂದೆ ಎಂದು'' ನಾನು ಮಂಗಳೂರಿಗೆ ಹೋಗಿದ್ದಾಗ ಅಲ್ಲಿರತಕ್ಕ ಹೆಣ್ಣು ಮಕ್ಕಳ ತಂದೆ ತಾಯಿಗಳನ್ನು ನೋಡಿ ನನಗೆ ಸ್ವಲ್ಪ ಕನಿಕರ ಬಂತು. ಅವರು ಹೆಣ್ಣು ಮಕ್ಕಳ ಮದುವೆಯನ್ನು

(ಶ್ರೀಮತಿ ಯಶೋಧರ ದಾಸಪ್ಪ)

ಮಾಡಿಕೊಡಬೇಕಾದರೆ ವರದಕ್ಷಿಣೆಯನ್ನು ಕೊಡಬೇಕು. ಅವರ ಕಷ್ಟ ಹೇಳತೀರದು. ಅದಕ್ಕೋಸ್ಕರ ನಾನು ಅವರಿಗೆ ಹೇಳಿದೆ ನಮ್ಮ ಊರಿನಲ್ಲಿ ಮದುವೆ ಮಾಡಿ ಕೊಡಲು ಯೋಗ್ಯರಾದ ಗಂಡುಗಳು ಬೇಕಾದಷ್ಟು ಇವೆ ಎಂದು ನಾನು ಹೇಳಿದೆ. ಮಂಗಳೂರಿನಲ್ಲಿ ಬಿ. ಎ. ಪಾಸ್ ಮಾಡಿರುವ ಗಂಡಿಗೆ 5 ಸಾವಿರ ರೂಪಾಯಿ ವರದಕ್ಷಿಣೆ ಕೊಡಬೇಕು. ಡಾಕ್ಟರ್ ಆಗಿದ್ದರೆ 15 ಸಾವಿರ ರೂಪಾಯಿಗಳನ್ನು ಕೊಡಬೇಕು. ಇಂಜಿನಿಯರ್ ಆಗಿದ್ದರೆ 25 ಸಾವಿರ ರೂಪಾಯಿ ವರದಕ್ಷಿಣೆ ಕೊಡಬೇಕು. ಐ. ಎ. ಎಸ್. ಆಫೀಸರು ಆಗಿದ್ದರೆ 50 ಸಾವಿರ ರೂಪಾಯಿಗಳ ವರದಕ್ಷಿಣೆಯನ್ನು ಕೊಡಬೇಕೆಂದು ನಿಗದಿಯಾಗಿದೆ. ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ ಚೆನ್ನಾಗಿ ಸಾಕಿ ಸಲಹಿ ಅವರಿಗೆ ಮದುವೆ ಮಾಡಿ ಕಳುಹಿಸಬೇಕಾದರೆ ತಂದೆ ತಾಯಿಗಳು ಇಷ್ಟೊಂದು ಸುಂಕವನ್ನು ಕೊಡಬೇಕೆಂದರೆ ಅವರು ಎಲ್ಲಿಂದ ತರಬೇಕು, ಎಷ್ಟು ಕಷ್ಟವಿದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ.
ಅಲ್ಲಿಗೆ ನಾನು ಹೋದಾಗ, ಆ ಕಷ್ಟವನ್ನು ಕೇಳಿ ಮನಸ್ಸು ಕರಗಿ, ಅಲ್ಲಿ ಸಮಾಜದಲ್ಲಿರತಕ್ಕ ಲೋಪ ದೋಷಗಳನ್ನು ಖಂಡನೆ ಮಾಡಿ 'ನಿಮಗೆ ಇಲ್ಲಿ ಇಂಥ ತೊಂದರೆಗಳಿದ್ದರೆ ಬೆಂಗಳೂರಿಗೆ ಬನ್ನಿ, ಸಮಾಜ ಕಲ್ಯಾಣ ಶಾಖೆಯಲ್ಲಿ ಸೇವೆ ಮಾಡಿ, ಬೇಕಾದರೆ ನಿಮಗೆ ಯೋಗ್ಯರಾದ ಜೊತೆಗಾರರನ್ನು ಹುಡುಕಿ ಕೊಡುತ್ತೇವೆ' ಎಂದು ಹೇಳಿದೆ. ಅದರಲ್ಲಿ ತಪ್ಪೇನು ? (ನಗು!)

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಾದರೆ, ಇನ್ನೊಂದು ಸಾರಿ ಅಲ್ಲಿಗೆ ಹೋದಾಗ ಅವರುಗಳ ಒಂದು ಪಟ್ಟಿಯನ್ನು ತೆಗೆದುಕೊಂಡು ಬನ್ನಿ. (ನಗು!)

ಶ್ರೀಮತಿ ಯಶೋಧರ ದಾಸಪ್ಪ.—ಆದರ್ಶವಾದ ಪಟ್ಟಿಯನ್ನು ನೀವೂ ಕೊಡಬೇಕು. ಹಾಗಿಲ್ಲದಿದ್ದರೆ ಮೊದಲೇ ಅಲ್ಲಿ ಕಷ್ಟದಲ್ಲಿರುವ ಹೆಣ್ಣುಮಕ್ಕಳನ್ನು ತಂದು ಇಲ್ಲಿಯೂ ಕಷ್ಟದಲ್ಲಿ ಸಿಕ್ಕಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ.

ಸೋಷಿಯಲ್ ವೆಲ್‌ಫೇರ್ ಬೋರ್ಡ್ ಎನ್ನುವ ಸಂಸ್ಥೆ 1953 ರಲ್ಲಿ ಕೇಂದ್ರದಲ್ಲಿ ಪ್ರಾರಂಭವಾಗಿ 1954 ರಲ್ಲಿ ಇಲ್ಲಿಯೂ ಪ್ರಾರಂಭವಾಯಿತು. ಇಲ್ಲಿ ಇದಕ್ಕೆ ನಮ್ಮ ಸರ್ಕಾರ ಕೇವಲ ಎರಡು ಲಕ್ಷ ರೂಪಾಯಿ ಕೊಡುತ್ತಾರೆ; ಆದರೆ ಕೇಂದ್ರದಿಂದ ಇಪ್ಪತ್ತೇಳು ಇಪ್ಪತ್ತೆಂಟು ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ನಾನು ಹೆಚ್ಚು ಹಣವನ್ನು ಕೇಳುವವಳಲ್ಲ. ಇರುವ ಹಣವನ್ನು ಸರಿಯಾಗಿ ವಿನಿಯೋಗ ಮಾಡಿದರೆ ಹೆಚ್ಚು ಹಣ ತಾನೇ ಬರುತ್ತದೆಂಬ ನಂಬಿಕೆ ನನಗಿದೆ. ಕೆಲಸವನ್ನು ಸರಿಯಾಗಿ ಮಾಡಿದರೆ ಕೊಡುತ್ತಾರೆ. ಈಗ 25-30 ವರ್ಷ ವಯಸ್ಸಿನ ಹೆಣ್ಣುಮಕ್ಕಳಿಗೆ Condensed course ಎಂಬ ಶಿಕ್ಷಣವಿದೆ. Socio-economic programme ಎಂದಿದೆ. ಎಸ್.ಎಸ್.ಎಲ್.ಸಿ. ಓದಿಸುವುದಕ್ಕೆ ಮತ್ತು ಕೈಗಾರಿಕೆಗಳನ್ನು ಕಲತು ಸ್ವತಂತ್ರವಾಗಿ ಜೀವನ ಮಾಡಿಕೊಳ್ಳಲೆಂಬ ಉದ್ದೇಶದಿಂದ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುತ್ತಿದ್ದಾರೆ. ಮುಖ್ಯ ಸೇವಿಕೆಯರು, ಗ್ರಾಮ ಸೇವಿಕೆಯರು ಎಂದಿದ್ದಾರೆ, ಅವರಿಗೆ ಶಿಕ್ಷಣ ಕೊಡುತ್ತಾರೆ. ಹಳ್ಳಿಗಾಡಿನಲ್ಲಿ ಕೆಲಸ ಮಾಡುವುದಕ್ಕೆ ಬರುತ್ತೇವೆನ್ನುವ ಹೆಣ್ಣುಮಕ್ಕಳಿಗೆ ತರಬೇತು ಕೊಡುತ್ತಾರೆ. ಇದಲ್ಲದೆ urban pilot scheme ಎಂದಿದೆ. ಇದಕ್ಕಾಗಿ ವರ್ಷಕ್ಕೆ ಸುಮಾರು ಎರಡು ಲಕ್ಷ ರೂಪಾಯಿ ಕೊಡುತ್ತಿದ್ದೇವೆ.

ಜೀಪುಗಳಲ್ಲಿ ಓಡಾಡುತ್ತಾರೆಂದು ಕೆಲವರು ಹೇಳಿದ್ದಾರೆ. ಹೆಣ್ಣುಮಕ್ಕಳು ಹಳ್ಳಿಗಾಡಿನಲ್ಲಿ, ಬಿಸಿಲು ಮಳೆಯಲ್ಲಿ ಹಳ್ಳಿಯಿಂದ ಹಳ್ಳಿಗೆ ಹೋಗಿ ಕೆಲಸ ಮಾಡುತ್ತಾರೆ. ತಿಂಗಳಿಗೊಂದು ಸಾರಿಯಾದರೂ ಅಲ್ಲಿ ಹೋಗಿ ಅವರ ಯೋಗಕ್ಷೇಮವನ್ನು ವಿಚಾರಿಸದೇ ಇದ್ದರೆ ಹೇಗೆ ? ಎನ್. ಇ. ಎಸ್. ನಲ್ಲಿ ಜೀಪುಗಳಿವೆ, ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಸಂಬಂಧಪಟ್ಟ ಹರಿಜನರ ಅಭಿವೃದ್ಧಿ ಯೋಜನೆಯ ಕೇಂದ್ರಗಳಿಗೆ ಜೀಪ್‌ಗಳನ್ನು ಕೊಡುತ್ತೇವೆ. ಇವರು ಗುಡ್ಡ ಕಾಡುಗಳ ಜನರಲ್ಲಿ ಹೋಗಿ ಕೆಲಸ ಮಾಡಬೇಕಾಗುತ್ತದೆ. ಬಿಳಿಗಿರಿ ರಂಗನ ಬೆಟ್ಟದ ಮೇಲೆ ಜೀಪ್‌ನಲ್ಲಿ ಹೋಗಿ ಕೆಲಸ ಮಾಡುತ್ತಾರೆ. ಹೀಗೆ ಅಗತ್ಯವಾಗಿ ಮಾಡಬೇಕಾದ ಕೆಲಸಗಳಿಗೆ ಜೀಪ್ ಉಪಯೋಗಿಸಬೇಕಾಗುತ್ತದೆ, ಆದರೆ ದುರುಪಯೋಗ ಮಾಡಬಾರದೆಂದು ಒಪ್ಪುತ್ತೇನೆ. ಹಾಗೆ ಮಾಡುವುದಿಲ್ಲ. ಸಾರ್ವಜನಿಕ ಹಣವನ್ನು ದುರ್ವ್ಯಯ ಮಾಡಬಾರದು. ಆದರೆ ಜೀಪುಗಳನ್ನು ಕೊಡಬಾರದೆಂದು ಹೇಳಿದರೆ ಹೇಗೆ ? ಹೆಣ್ಣುಮಕ್ಕಳು ಕಾಡು ಪ್ರದೇಶಗಳಲ್ಲಿ, ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡಬೇಕಾದರೆ ಅವರ ಕಷ್ಟ ಅವರ ತಂದೆ ತಾಯಿಗಳಿಗೆ ಗೊತ್ತಾಗುತ್ತದೆ. ಅನೇಕ ಹೆಣ್ಣುಮಕ್ಕಳು ಈ ಕೆಲಸಕ್ಕೆ ಬರುತ್ತಾರೆ. ಅವರನ್ನು ಈ ಸಭೆಯಲ್ಲಿ ಟೀಕೆ ಮಾಡುತ್ತೇವೆ. ಅನೇಕ ಸೊಸೈಟಿಗಳಲ್ಲಿಯೂ ಕ್ಲಬ್‌ಗಳಲ್ಲಿಯೂ ಹೆಣ್ಣುಮಕ್ಕಳೇ ಹೆಣ್ಣುಮಕ್ಕಳನ್ನು ಟೀಕೆ ಮಾಡುತ್ತಾರೆ. ಇವರಲ್ಲಿ ಬಾಲವಿಧವೆಯರು, ಅವಿವಾಹಿತ ಹೆಣ್ಣುಮಕ್ಕಳು ಇರುತ್ತಾರೆ. ಕಷ್ಟದಲ್ಲಿರುವ ಮಧ್ಯಮ ವರ್ಗದ ಸಂಸಾರಗಳಲ್ಲಿರುವ ಈ ಹೆಣ್ಣುಮಕ್ಕಳು ಸಂಪಾದನೆ ಮಾಡದಿದ್ದರೆ ಜೀವನ ಸಾಗಿಸುವುದು ಕಷ್ಟ. ಇಂಥ ಹೆಣ್ಣುಮಕ್ಕಳು ಗೌರವದಿಂದ ಕೆಲಸ ಮಾಡಿ ಜನರಿಗೂ ದೇಶಕ್ಕೂ ಸೇವೆ ಮಾಡುತ್ತೇವೆಂದರೆ, ಅವರಿಗೆ ವಿದ್ಯಾಭ್ಯಾಸ, ಶಿಕ್ಷಣ ಕೊಟ್ಟು ಅವರಿಂದ

ಸಮಾಜಕ್ಕೆ ಸೇವೆ ತೆಗೆದುಕೊಳ್ಳುವ ಬದಲು ಮೊದಲೇ ಜೀವನದಲ್ಲಿ ನೋಂದಿರುವ ಈ ಹೆಣ್ಣುಮಕ್ಕಳನ್ನು ಟೀಕೆ ಮಾಡಿದರೆ, ಅವರ ಮನಸ್ಸಿನಮೇಲೆ ಯಾವ ರೀತಿ ಪರಿಣಾಮವಾಗುತ್ತದೆ ಎಂಬುದನ್ನು ದಯೆ ಯಿಟ್ಟು ಯೋಚನೆ ಮಾಡಬೇಕು. ಹರಿಜನರು, ಗಿರಿಜನರು, ಹೆಣ್ಣುಮಕ್ಕಳು, ಬಡತನದಲ್ಲಿ, ಅವಿದ್ಯೆಯಲ್ಲಿ ನೊಂದು, ಸಮಾಜದ ನಾಗರಿಕ ಜನರ ದುರಾಕ್ರಮಣಕ್ಕೊಳಗಾಗಿರುವವರಿಗೆ ಖರ್ಚು ಮಾಡತಕ್ಕ ಹಣದ ವಿಚಾರದಲ್ಲಾಗಲೀ, ಅವರಿಗೆ ಹೇಳತಕ್ಕ ಒಳ್ಳೆಯ ಮಾತಿನ ವಿಷಯದಲ್ಲಾಗಲೀ, ಅವರಲ್ಲಿ ತಪ್ಪಿದ್ದರೆ ಅದನ್ನು ತಿದ್ದಿ ಸರಿಯಾದ ಸಲಹೆಯನ್ನು ಕೊಡುವುದರಲ್ಲಾಗಲೀ ಸರಿಯಾಗಿ ನಡೆದುಕೊಳ್ಳುವ ಒತ್ತಾಯ ವಿರಬೇಕು ಹೃದಯ ವೈಶಾಲ್ಯವಿರಬೇಕು. ಅದು ಈ ಸಮಾಜ ಕಲ್ಯಾಣ ಇಲಾಖೆಯಲ್ಲಿರಬೇಕು, ಸಾರ್ವಜನಿಕರಲ್ಲಿಯೂ ಇರಬೇಕು. ಮಹಾತ್ಮಾ ಗಾಂಧಿಯವರ ಹತ್ತಿರ ಇಂಥ ಸಮಾಜ ಸೇವಾಕಾರ್ಯ ಮಾಡುವಾಗ ಅವರು ಒಂದು ಮಾತನ್ನು ಹೇಳುತ್ತಿದ್ದರು. ಸುಮಾರು ಶೇಕಡ 90 ರಷ್ಟು ಹೃದಯವಿದ್ದು 10 ರಷ್ಟು ಬುದ್ಧಿ ಅಥವಾ ಮೇಧಾಶಕ್ತಿಯಿದ್ದರೂ ಸಾಕು ನನ್ನಲ್ಲಿ ಕೆಲಸ ಮಾಡುವವರಿಗೆ' ಎಂದು ಹೇಳುತ್ತಿದ್ದರು. ಸಮಾಜ ಸುಧಾರಣೆ, ಸಮಾಜ ಕಲ್ಯಾಣ ಕಾರ್ಯವನ್ನು ಮಾಡುವವರಿಗೆ ಹೃದಯ ವೈಶಾಲ್ಯವಿರಬೇಕು. ಬುದ್ಧಿ, ತರ್ಕ ಇವುಗಳ ಮೇಲೆಯೇ ಯೋಚನೆ ಮಾಡಿದರೆ ಯಾವ ಸಮಾಜವನ್ನೂ ಸುಧಾರಿಸುವುದಕ್ಕಾಗುವುದಿಲ್ಲ. ಅದರಲ್ಲಿಯೂ ಪೂರ್ವ ಕಾಲದಲ್ಲಿ, ನಮ್ಮ ಕಾಲದಲ್ಲಿ ಹೆಣ್ಣುಮಕ್ಕಳು ಸ್ಕೂಲಿಗೆ ಹೋಗುವುದೇ ಕಷ್ಟವಾಗಿದ್ದಾಗ ನಮ್ಮ ತಂದೆ ತಾಯಿಗಳು ನಾಲ್ಕು ಅಕ್ಷರ ಕಲಿಸಿದ್ದರಿಂದ ಈ ಸ್ಥಾನಕ್ಕೆ ಬರುವುದಕ್ಕವಕಾಶವಾಯಿತು. ಇನ್ನು ಮುಂದೆ ಅಷ್ಟು ಕಷ್ಟವಾಗುವುದಿಲ್ಲ. ಹೆಣ್ಣುಮಕ್ಕಳು ವಿದ್ಯಾವತಿಯರಾಗುತ್ತಿದ್ದಾರೆ. ಸಮಾಜದಲ್ಲಿ ತಾಯಿ ಮುಂದೆ ಬಂದರೆ ಮಕ್ಕಳನ್ನು ಸಮಾಜವನ್ನೂ ದೇಶವನ್ನು ಮುಂದೆ ತರುತ್ತಾರೆ. ಇದಕ್ಕೆ ಇನ್ನೂ ಪ್ರಯತ್ನ ಮಾಡಬೇಕು. ಆದುದರಿಂದ ಹೆಣ್ಣುಮಕ್ಕಳು ಅವರ ಕಲ್ಯಾಣವನ್ನು ಅವರೇ ಮಾಡಿಕೊಳ್ಳಲು ಸಮಾಜ ಕಲ್ಯಾಣ ಕೆಲಸವನ್ನು ನಡೆಸುತ್ತಿರುವಾಗ, ಅದರಲ್ಲೇನಾದರೂ ಸಣ್ಣ ಪುಟ್ಟ ತಪ್ಪುಗಳಿದ್ದರೆ ಅದನ್ನು ಟೀಕೆ ಮಾಡಿ, ತಿದ್ದುಕೊಳ್ಳುತ್ತೇವೆ. ಅದನ್ನು ಬಿಟ್ಟು ಆ ಇಲಾಖೆಯನ್ನೇ ಮುಚ್ಚಿ ಎಂದು ಹೇಳಿದರೆ, ಇದನ್ನು ಯಾರೂ ಒಪ್ಪಲಾರರು.

ಮಾನ್ಯ ಸದಸ್ಯರು ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಖೋತಾ ನಿರ್ಣಯಗಳನ್ನು ಕಳುಹಿಸಿದ್ದಾರೆ. ಈಗ ಸಮಯವಿಲ್ಲದಿರುವುದರಿಂದ ಅವುಗಳಿಗೆಲ್ಲ ಉತ್ತರಗಳನ್ನು ಸಭೆಯಲ್ಲಿ ಹೇಳಲು ಅವಕಾಶವಿಲ್ಲ. ಉತ್ತರಗಳನ್ನು ಟೈಪ್ ಮಾಡಿಸಿ ಕೊಡುತ್ತೇನೆ. ಈ ಇಲಾಖೆಯಿಂದ ಏನೇನು ಕೆಲಸವಾಗಿದೆ ಎನ್ನುವ ಬಗ್ಗೆ ಒಂದು ವರದಿಯನ್ನೂ ಅಧ್ಯಕ್ಷರ ಒಪ್ಪಿಗೆ ಪಡೆದು ಮಾನ್ಯ ಸದಸ್ಯರ ಅವಗಾಹನೆಗೆ ಕೊಡುತ್ತೇನೆ. ಅವರಿಗೆ ಎಲ್ಲ ವಿಷಯಗಳನ್ನೂ ತಿಳಿಸಬೇಕು. ಈಗ ಐದುವರೆ ಲಕ್ಷ ರೂಪಾಯಿ ಖರ್ಚು ಮಾಡಿ ಎರಡು ದೊಡ್ಡ ಕಟ್ಟಡಗಳನ್ನು ಖರೀದಿ ಮಾಡಿದ್ದೇವೆ. ಹರಿಜನರ ಹಾಸ್ಟೆಲಗಾಗಿ. ಐ. ಎ. ಎಸ್., ಐ. ಪಿ. ಎಸ್. ಗೆ ಶಿಕ್ಷಣ ಕೊಡಲು ಐದು ಲಕ್ಷ ರೂಪಾಯಿ ಕೊಟ್ಟು ಕೇಂದ್ರ ಸರ್ಕಾರ ಒಂದು ಬ್ಲಾಕ್ ಕಟ್ಟಿದ್ದಾರೆ, ಗಿರಿಜನರಿಗಾಗಿ. ಯಾವುದನ್ನು ಕೇಳಿದರೂ ಕೇಂದ್ರ ಸರ್ಕಾರ ಕೊಡುವುದಿಲ್ಲವೆಂದು ಹೇಳುವುದಿಲ್ಲ. ಆದರೆ ನಮ್ಮ ಲೆಕ್ಕ ಪತ್ರ, ಕೆಲಸ, ಮಾಹಿತಿ ಸರಿಯಾಗಿ ಹೋದರೆ ಈ ಕೆಲಸಕ್ಕೆ ಸಂಪೂರ್ಣ ಬೆಂಬಲವನ್ನು ಅವರು ಕೊಡುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಇಷ್ಟೇ ಹಣವಿದೆ, ಇನ್ನು ಬರುವುದಿಲ್ಲ ಎಂದು ಯೋಚಿಸಿ ಮಾಡುವುದು ಬೇಡ. ಕೆಲಸ ಸರಿಯಾಗಿ ನಡೆದರೆ ಇನ್ನೂ ಹೆಚ್ಚು ಹಣವನ್ನು ಉಪಯೋಗ ಮಾಡಬಹುದು. ಶ್ರೀಮಾನ್ ರಾಜಗೋಪಾಲ್ ಅವರು ಹೇಳಿದ ಹಾಗೆ, ಕೆ. ಜಿ. ಎಫ್. ನಲ್ಲಿ ಒಂದು ಟ್ರೈನಿಂಗ್ ಸೆಂಟರ್ ಇದೆ. ಜಿಲ್ಲೆಗೊಂದು ಹಾಸ್ಟೆಲ್ ಕೊಟ್ಟಿದ್ದೇವೆ. ಹೋಬಳಿ ಹೋಬಳಿಗೂ, ಹಳ್ಳಿ ಹಳ್ಳಿಗಳಿಗೂ ವೆಲ್ ಕೊಡಬೇಕೆಂಬ ಇಚ್ಛೆ ಇದೆ. ಹಳ್ಳಿಗಳಿಗೆ ಹೆಚ್ಚಿನ ಗಮನ ಕೊಡಬೇಕೆಂಬುದರಲ್ಲಿ ಸಂಪೂರ್ಣ ನಂಬಿಕೆ ಇರುವವಳು ನಾನು. ಈಗ ಸೋಷಿಯಲ್ ವೆಲ್‌ಫೇರ್ ಬೋರ್ಡಿನ ಹಣ ಉಳಿದಿದೆ. ಅಧ್ಯಕ್ಷರಲ್ಲಿ ಮಾತನಾಡಿ ಬಂದಿದ್ದೇನೆ. ನಿಮ್ಮ ನಿಯಮಗಳನ್ನು ಸಡಿಲ ಮಾಡಬೇಕು. ಹಳ್ಳಿಗಳಿಗೆ ಹೆಚ್ಚು ಹಣವನ್ನು ತೆಗೆದುಕೊಂಡು ಹೋಗುವುದಕ್ಕೆ ಅನುಮತಿ ಕೊಡಿ ಎಂದು ಕೇಳಿದ್ದೇನೆ. ಹಳ್ಳಿಗಳಲ್ಲಿ ಹೆಣ್ಣುಮಕ್ಕಳಿಗೆ ಉದ್ಯೋಗ ಮತ್ತು ಶಿಕ್ಷಣಗಳನ್ನು ಹೆಚ್ಚು ಹೆಚ್ಚಾಗಿ ಕೊಡಲು ಯೋಚಿಸಿದ್ದೇವೆ. ಅಲ್ಲದೆ ಹೆಣ್ಣುಮಕ್ಕಳಿಗೆ ಕೆಲಸಕ್ಕೆ ಸೇರಲು ಗೊತ್ತು ಮಾಡಿರುವ ವಯಸ್ಸಿನ ಪರಿಮಿತಿಯನ್ನು ಸಹ ಸಡಿಲಗೊಳಿಸಿ ಅವರು ಹಲವು ಬಗೆಯ ಕೆಲಸಗಳಿಗೆ ಸೇರಲು ಅನುಕೂಲ ಮಾಡಿಕೊಡುವುದಕ್ಕಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳಿಗೆ ಸಂಬಂಧಪಟ್ಟ ನಿಯಮಗಳನ್ನು ತಿದ್ದುಪಡಿ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಹೆಚ್ಚು ವಯಸ್ಸಾಗಿರುವವರನ್ನು ಹೊರಗೆ ಕಳುಹಿಸಿ, ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳನ್ನು ಇಲ್ಲಿಯೇ ಹತ್ತಿರ ಇಟ್ಟುಕೊಂಡು ಕೆಲಸ ಮಾಡಿಸಬಹುದು. ಯಾವ ಯಾವ ರೀತಿ ಸುಧಾರಿಸಿ ಕೆಲಸ ಮಾಡಬಹುದೋ ಆ ರೀತಿ ಮಾಡಿದರೆ ಅನುಕೂಲವಾಗುತ್ತದೆ. ರಿಸೆಪ್ಷನ್ ಸೆಂಟರುಗಳು, ರಿಮ್ಯಾಂಡ್ ಹೋಮುಗಳು, ರೆಸ್ಕ್ಯೂ ಹೋಮ್‌ಗಳು ಮುಂತಾದುವನ್ನು ಏರ್ಪಾಡು ಮಾಡಿದ್ದೇವೆ. ಇವೆಲ್ಲ ಕ್ರಮಗಳಿಂದ ಹೆಣ್ಣುಮಕ್ಕಳಿಗೆ ತಮ್ಮ ಸ್ಥಿತಿಯನ್ನು ಸುಧಾರಿಸಲು ಶಕ್ತಿ ಬರುತ್ತದೆ. ಕೆಲವು ಕಾರ್ಯಗಳಿಗೆ ಸಣ್ಣ ವಯಸ್ಸಿನ ಮಕ್ಕಳು

(ಶ್ರೀಮತಿ ಯಶೋಧರ ದಾಸಪ್ಪ)

ಹೋದರೆ, ಅವರಿಂದ ನಿರ್ವಹಿಸಲು ಸಾಧ್ಯವಿರುವುದಿಲ್ಲ. ಅಂಥ ಜಾಗಗಳಿಗೆ ವಯಸ್ಸಾಗಿ ಅನುಭವ ಪಡೆದಿರುವ ಹೆಣ್ಣುಮಕ್ಕಳನ್ನು ಹಾಕಬಹುದು. ಅವರಿಗೆ ಪೆನ್ಷನ್ ಇಲ್ಲದಿದ್ದರೂ ಚಿಂತೆಯಿಲ್ಲ, ಸರ್ವಿಸ್ ಇಲ್ಲದಿದ್ದರೂ ಚಿಂತೆಯಿಲ್ಲ. ಐದಾರು ವರ್ಷ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ಅಥವಾ ಬೇರೆ ರೀತಿ ತೆಗೆದುಕೊಂಡು ದೇಶಸೇವೆ ಮಾಡಲು ಮುಂದೆಬರುವ ವಿದ್ಯಾವಂತರಾದ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಕೊಡಬೇಕು, ಈ ಪರ್ವಕಾಲದಲ್ಲಿ ಸಮಾಜ ಸುಧಾರಣೆ ಆಗುವವರೆಗೆ ಲೋಪದೋಷಗಳನ್ನು ಸರಿಪಡಿಸಲು ಕಾನೂನುಗಳನ್ನು ಕೂಡ ಸ್ವಲ್ಪ ಬದಲಾಯಿಸಿ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು ಎಂದಿದ್ದೇವೆ. ಈಗ ಹರಿಜನರ ಮಕ್ಕಳಿಗೆ 33 ವರ್ಷ ವಯಸ್ಸಿನವರೆಗೆ ಕೆಲಸಕ್ಕೆ ಸೇರಲು ಅವಕಾಶ ಮಾಡಿರುವಂತೆ ಇತರ ಹೆಣ್ಣು ಮಕ್ಕಳಿಗೂ ಸಹ ವಯಸ್ಸಿನ ಪರಿಮಿತಿಯನ್ನು ಹೆಚ್ಚಿಸಿ ಅನುಭವವಿರುವವರನ್ನು ಹಾಸ್ಟೆಲುಗಳಲ್ಲಿ ಮೇಟ್ರನ್ ಆಗಿ ನೇಮಿಸುವುದು, ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ನೇಮಿಸುವುದು ಮುಂತಾದ ರೀತಿಯಲ್ಲಿ ಅವರ ಸಹಾಯ ಪಡೆದು ಅವರಿಗೆ ಉತ್ತೇಜನ ನೀಡಬೇಕೆಂದಿದ್ದೇವೆ. ಅವರಿಗೆ ಅದಕ್ಕೆ ಶಿಕ್ಷಣ ಕೊಡಬೇಕು, ಆಕ್ಯುಪೇಷನರ್ ಇನ್ಸ್ಟಿಟ್ಯೂಟ್ ಮತ್ತು ಪಾಲಿಟೆಕ್ನಿಕ್ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ಸೌಕರ್ಯ ಕಲ್ಪಿಸಬೇಕು ಎಂಬ ಅಭಿಲಾಷೆಯಿದೆ. ಗೌರಿಬಿದನೂರಿನಲ್ಲಿ ಒಂದು ಲಕ್ಷ ರೂಪಾಯಿ ಬೆಲೆಬಾಳುವ ಮನೆಯನ್ನು ದಾನವಾಗಿ ಕೊಡುತ್ತಿದ್ದಾರೆ ಎಂದು ಲಕ್ಷ್ಮೀಪತಿ ಯವರು ಹೇಳಿದರು. ಹಾಗೆ ಸಹಾಯ ದೊರೆತರೆ ಇನ್ನೂ ಅನುಕೂಲವಾಗುತ್ತದೆ. ಸಂಘ ಸಂಸ್ಥೆ ಗಳನ್ನು ರಿಜಿಸ್ಟರ್‌ಮಾಡಿ ಅವುಗಳ ಮೂಲಕವೂ ಕೆಲಸಮಾಡಲು ಹೆಚ್ಚು ಪ್ರೋತ್ಸಾಹ ಕೊಟ್ಟು ಹರಿಜನರ ಮತ್ತು ಗಿರಿಜನರ ಅಭಿವೃದ್ಧಿ ಮಾಡಬೇಕು, ಹೆಣ್ಣು ಮಕ್ಕಳಿಗೆ ತರಬೇತು ಮಾಡಿ ಅವರ ಸಹಾಯ ಪಡೆದು ತನ್ಮೂಲಕ ಅವರಿಗೂ ಅನುಕೂಲ ಮಾಡಬೇಕು ಎಂಬ ಅಭಿಲಾಷೆಯಿದೆ.

ಸೋಷಿಯಲ್ ವೆಲ್‌ಫೇರ್ ಇಲಾಖೆಯನ್ನು ತೆಗೆಯಿರಿ, ಅದು ಬೇಕಾಗಿಲ್ಲ ಎಂದು ಕೆಲವರು ಹೇಳಿದರು. ಆ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ಎಲ್ಲರೂ ತಪ್ಪು ಮಾಡುತ್ತಾರೆ. ತಪ್ಪಿತಸ್ಥರನ್ನು ಸರಿಯಾದ ದಾರಿಗೆ ತರಬೇಕಾದ್ದು ನಮ್ಮ ಕರ್ತವ್ಯ. ಹಾಗೆ ಮಾಡದೆ ಸಮಾಜ ಕಲ್ಯಾಣ ಇಲಾಖೆಯನ್ನೇ ತೆಗೆಯುವುದು ಸರಿಯಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಬೇಕಾದಾಗ ಮಾಡೋಣ. ನನ್ನ ಗಮನಕ್ಕೂ ಕೆಲವು ಲೋಪದೋಷಗಳಿರುವುದು ಬಂದಿದೆ. ಮಾನ್ಯ ಸದಸ್ಯರೂ ಹೇಳಿದ್ದಾರೆ. ತಪ್ಪಿಗಾಗಿ ಕೆಲವರನ್ನು ವರ್ಗಮಾಡುವುದು, ರಿವರ್ಟ್ ಮಾಡುವುದು ಅಥವಾ ಬೇರೆ ವಿಧದಲ್ಲಿ ಶಿಕ್ಷಿಸಿದಾಗ ಮಾನ್ಯ ಸದಸ್ಯರಾಗಲಿ ಅಥವಾ ಬೇರೆಯವರಾಗಲಿ ನನ್ನ ಹತ್ತಿರ ಬಂದು ಯಾರೂ ಶಿಫಾರ್ಸು ಮಾಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ಶಿಕ್ಷೆ ಮಾಡಿದಾಗ ಕೆಲವು ಮುಖಂಡರು ಮಧ್ಯೆ ಪ್ರವೇಶಮಾಡುವುದುಂಟು. ಹಾಗೆ ಮಾಡಿ ಶಿಕ್ಷೆಯನ್ನು ರದ್ದು ಮಾಡಿಸಿದರೆ ಪುನಃ ತಪ್ಪುಮಾಡುತ್ತಾರೆ. ಯಾರೂ ಹಾಗೆ ಪ್ರವೇಶಮಾಡಬಾರದು. ಹತ್ತು ತಪ್ಪು ಮಾಡು ವವರೆಗೆ ಶಿಕ್ಷಿಸಬಾರದು. ಅನಂತರ ಮತ್ತೆ ಮಾಡಿದರೆ ಸರಿಯಾದ ರೀತಿಯಲ್ಲಿ ಶಿಕ್ಷೆ ಮಾಡ ಬೇಕೆಂದಿದ್ದೇವೆ. ಅಂಥ ಸಮಯದಲ್ಲಿ ಸಹಕಾರ ಮಾಡುತ್ತೀರೆಂದು ನಂಬಿದ್ದೇನೆ.

ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಇನ್ನೂ ಕೆಲವು ವಿಚಾರಗಳನ್ನು ನಾನು ಗುರುತು ಮಾಡಿ ಕೊಂಡಿದ್ದೇನೆ. ಈಗ ಅವುಗಳಿಗೆ ಉತ್ತರ ಕೊಡಲು ಕಾಲಾವಕಾಶವಿಲ್ಲದ್ದರಿಂದ ಅವುಗಳಿಗೆ ಉತ್ತರ ವನ್ನು ಟೈಪ್ ಮಾಡಿಸಿಕೊಡುತ್ತೇನೆ. ಸಮಾಜ ಕಲ್ಯಾಣ ಇಲಾಖೆ ವಿಚಾರದಲ್ಲಿ ತಮ್ಮೆಲ್ಲರ ಸಹಾನು ಭೂತಿ ಮತ್ತು ಉತ್ತೇಜನ ಅವಶ್ಯಕ.

ಶ್ರೀ ಜೆ. ಎಲ್. ಕಬಾಡಿ (ಬಾರ್ಸ್ಲೋರ್).—ಅಕ್ವಿಜಿಷನ್ ವಿಚಾರ ಹೇಳಲಿಲ್ಲ.

ಶ್ರೀಮತಿ ಯಶೋಧರದಾಸಪ್ಪ.—ನಾನು ಯಾವ ಫೈಲನ್ನೂ ಕೂಡ ನಿಧಾನ ಮಾಡುತ್ತಿಲ್ಲ, ಬೇಗ ಕಳುಹಿಸುತ್ತಿದ್ದೇನೆ. ಆದರೆ ಆ ಇಲಾಖೆಯ ಅಭಿಪ್ರಾಯ ಪಡೆಯುವುದು ಅವಶ್ಯಕವೆಂದು ಕಂಡಾಗ ಅದಕ್ಕಾಗಿ ಮಾತ್ರ ಕೆಲವು ಸಂದರ್ಭಗಳಲ್ಲಿ ನಿಧಾನವಾಗಿರಬಹುದು. ಇಷ್ಟು ಹೇಳಿ ಮಾನ್ಯ ಸದಸ್ಯರು ಸಮಾಜ ಕಲ್ಯಾಣ ಖಾತೆಯ ಬೇಡಿಕೆಯನ್ನು ಮಂಜೂರು ಮಾಡುತ್ತೀರೆಂದು ನಂಬಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri D. DEVARAJ URS.—With your permission, I should like to give explanation to what was said with regard to the man who died in the hospital. The name of the man is B. C. Lingappa from Dandeli. It is not known if he was an employee in Dandeli. He was admitted to hospital at 5 p.m. on 2-3-1963; he died in hospital at 6 p.m. on 11-3-1963. The relatives were not present in the hospital; they were informed of

the death on the morning of 12-3-1963. The relatives came and removed the body from the hospital on 13-3-63. The disease from which he was suffering is called 'Carpilo Monola'—some heart disease. At the time of the admission, the symptoms of the disease were described by the patient as follows: "Loss of weight. Loose motions. Cough extirpation for one year".

Sri C. J. MUCKANNAPPA.—No remarks were made about the functioning of the S. T. A. and R. T. A. under 'Taxes on Vehicles'.

Mr. SPEAKER.—I will tell the House that so far as clarification is concerned, I have had some discussions which were not concluded. I should like to consult a few other members and try to revive it, if possible.

†Sri R. M. PATIL (Minister for Home).—As regards the Motor Vehicles Taxation Act in respect of the compensation to the local bodies, eight districts have been given compensation and that too on a temporary basis or *ad hoc* basis. The question of payment of compensation to the remaining 11 districts is under consideration and for that, a provision of Rs. 25 lakhs has been made in this budget. This is in respect of compensation to the local bodies.

As regards revenue, I had spoken sufficiently in the month of December at the time of the amendment of the Bill. Therefore, there is nothing to clarify ; there is nothing ambiguous and I think my Hon'ble friends will agree with me so far as this Demand is concerned.

Sri C. J. MUCKANNAPPA.—About the use of rickety buses......

Mr. SPEAKER.—Rickety buses should not be permitted or licensed.

The question is :

"That the respective sums not exceeding the amounts shown in the list of Demands circulated to members be granted to defray the charges which will come in course of payment during the financial year for the period ending 31st day of March 1964, in respect of Demands Nos. 4, 14, 15, 16, 26, 27, 34, 35, 36, 37, 39, 40, 41, 41A, 52, 53 and 54."

The motion was adopted.

[*As directed by the Speaker, the motion for Demands for grant which were adopted by the House, are reproduced below*] :—

DEMAND NO. 4.—MOTOR VEHICLES ACTS—ADMINISTRATION.

11. Taxes on Vehicles.

"That a sum not exceeding Rs. 16,63,000 be granted to the Government to defray the charges which will come in course of payment during the financial year for the period ending 31st day of March 1964, in respect of 'Taxes on Vehicles'."

DEMAND NO. 14.—SUPPLIES AND DISPOSALS.

25. *Supplies and Disposals.*

"That a sum not exceeding Rs. 33,23,000 be granted to the Government to defray the charges which will come in course of payment during the financial year for the period ending 31st day of March 1964, in respect of 'Supplies and Disposals'."

DEMAND NO. 15.—MISCELLANEOUS DEPARTMENTS.

26. *Miscellaneous Departments.*

"That a sum not exceeding Rs. 73,19,900 be granted to the Government to defray the charges which will come in course of payment during the financial year for the period ending 31st day of March 1964, in respect of 'Miscellaneous Departments'."

DEMAND NO. 16.—SCIENTIFIC DEPARTMENTS.

27. *Scientific Departments.*

"That a sum not exceeding Rs. 16,17,000 be granted to the Government to defray the charges which will come in course of payment during the financial year for the period ending 31st day of March 1964, in respect of 'Scientific Departments'."

DEMAND NO. 26.—LABOUR AND EMPLOYMENT.

38. *Labour and Employment.*

"That a sum not exceedings Rs. 92,34,100 be granted to the Government to defray the charges which will come in course of payment during the financial year for the period ending 31st day of March 1964, in respect of 'Labour and Employment'."

DEMAND NO. 27.—MISCELLANEOUS SOCIAL AND DEVELOPMENTAL ORGANISATIONS.

39. *Miscellaneous Social and Developmental Organisations.*

"That a sum not exceeding Rs. 1,67,20,900 be granted to the Government to defray the charges which will come in course of payment during the financial year for the period ending 31st day of March 1964, in respect of 'Miscellaneous Social and Developmental Organisations'."

DEMAND NO. 34.—PENSIONS AND OTHER RETIREMENT BENEFITS.

65. *Pensions and other Retirement Benefits.*

"That a sum not exceeding Rs. 2,07,19,000 be granted to the Government to defray the charges which will come in course of payment during the financial year for the period ending 31st day of March 1964, in respect of 'Pensions and other Retirement Benefits'."

DEMAND NO. 35.—TERRITORIAL AND POLITICAL PENSIONS.

66. *Territorial and Political Pensions.*

"That a sum not exceeding Rs. 1,80,000 be granted to the Government to defray the charges which will come in course of payment during the financial year for the period ending 31st day of March 1964, in respect of 'Territorial and Political Pensions'."

DEMAND NO. 36.—PRIVY PURSES AND ALLOWANCES.

67. *Privy Purses and Allowances of Indian Rulers.*

"That a sum not exceeding Rs. 32,000 be granted to the Government to defray the charges which will come in course of payment during the financial year for the period ending 31st day of March 1964, in respect of 'Privy Purses and Allowances of Indian Rulers'."

DEMAND NO. 37.—STATIONERY AND PRINTING

68. *Stationery Printing*

"That a sum not exceeding Rs. 91,76,000 be granted to the Government to defray the charges which will come in course of payment during the financial year for the period ending 31st day of March 1964, in respect of 'Stationery and Printing'."

DEMAND NO. 39.—MISCELLANEOUS.

71. *Miscellaneous.*

" That a sum not exceeding Rs. 3,27,50,000 be granted to the Government to defray the charges which will come in course of payment during the financial year for the period ending 31st day of March 1964, in respect of ' Miscellaneous '."

DEMAND NO. 40.—COMMUTATION OF PENSIONS.

72. *Commutation of Pensions.*

"That a sum not exceeding Rs. 3,79,000 be granted to the Government to defray the charges which will come in course of payment during the financial year for the period ending 31st day of March 1964, in respect of 'Commutation of Pensions".'

DEMAND NO. 41.—MISCELLANEOUS CONTRIBUTIONS AND ASSIGNMENTS.

76. *Other Miscellaneous Contributions and Assignments.*

" That a sum not exceeding Rs. 66,32,000 be granted to the Government to defray the charges which will come in course of payment during the financial year for the period ending 31st day of March 1964, in respect of ' Other Miscellaneous Contributions and Assignments '."

DEMAND NO. 41-A.—NATIONAL EMERGENCY—CIVIL DEFENCE.

78-*A*. *Expenditure connected with National Emergency, 1962.*

" That a sum not exceeding Rs. 1,60,000 be granted to the Government to defray the charges which will come in course of payment during the financial year for the period ending 31st day of March 1964, in respect of ' National Emergency-Civil Defence '."

DEMAND NO. 52.—COMMUTED VALUE OF PENSIONS.

120. *Payments of Commuted Value of Pensions.*

" That a sum not exceeding Rs. 3,79,000 be granted to the Government to defray the charges which will come in course of payment during the financial year for the period ending 31st day of March 1964, in respect of ' Payments of Commuted Value of Pensions '."

DEMAND NO. 53.—CAPITAL OUTLAY ON SCHEMES OF GOVERNMENT TRADING.

124. *Capital Outlay on Schemes of Government Trading.*

" That a sum not exceeding Rs. 54,73,000 be granted to the Government to defray the charges which will come in course of payment during the financial year for the period ending 31st day of March 1964, in respect of ' Capital Outlay on Schemes of Government Trading '."

DEMAND NO. 54.—ADVANCES AND LOANS.

Q. Loans and Advances by the State Governments.

" That a sum not exceeding Rs. 10,52,26,000 be granted to the Government to defray the charges which will come in course of payment during the financial year for the period ending 31st day of March 1964, in respect of ' Loans and Advances by the State Governments '."

Mr. SPEAKER.—The House will now rise to meet again to-morrow at One O' clock.

The House adjourned at Seven of the Clock to meet again at One of the Clock on Friday, the 29th March 1963.

WJ 434—GPB—900+10—9-9-1963